ಹುಬ್ಬಳ್ಳಿ

ಭಾನುವಾರ, 5 ಏಪ್ರಿಲ್ 2026

ಸಂಪುಟ 16, ಸಂಚಿಕೆ 11, ಪುಟಗಳು 12

■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ

₹5

RNI No.KARKAN/2011/64413

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬಾಬ್ ಜಲಸಂಧಿ ಬಂದ್?

• ಪುಟ ೨

ಕಿರುಸುದ್ದಿ

ಇಂದು ಅಧಿವೇಶನ

•**ಹುಬ್ಬಳ್ಳಿ:** ಕರ್ನಾಟಕ ಮಂದಿರ ಮಹಾ ಸಂಘ ಹಾಗೂ ಹಿಂದೂ ಜನಜಾಗೃತಿ ಸಮಿತಿ ಸಹಯೋಗದಲ್ಲಿ ಏ.5ರಂದು ಬೆಳಗ್ಗೆ 10 ಗಂಟೆಗೆ ಇಲ್ಲಿಯ ಹೊಸೂರ ಉತ್ತರ ಕನ್ನಡ ವೈಶ್ಯ ಸಮಾಜ ಶಂಕರ ಸದನ ಮಂಗಲ ಕಾರ್ಯಾಲಯದಲ್ಲಿ ಜಿಲ್ಲಾ ಮಟ್ಟದ ಅಧಿವೇಶನ ಹಮ್ಮಿಕೊಳ್ಳಲಾಗಿದೆ. ಅಧಿವೇಶನದಲ್ಲಿ ದೇವಸ್ಥಾನ, ಸಂಸ್ಕೃತಿ, ಹಿಂದುತ್ವದ ಕುರಿತು ಜಾಗೃತಿ ಮೂಡಿಸಲಾಗುತ್ತದೆ. ಈಗಾಗಲೇ ಕರ್ನಾಟಕದಲ್ಲಿನ ಸರಕಾರಿಗೊಳಿಂದ ದೇವಸ್ಥಾನಗಳ ಕೋಟ್ಯಾಂತರ ರೂಪಾಯಿಗಳ ಭ್ರಷ್ಟಾಚಾರ ಬಯಲಿಗೆ ಎಳೆದು ದೇವಸ್ಥಾನ ಲೂಟಿ ತಡೆಯಲಾಗಿದೆ. ಹಿಂದೂ ಧಾರ್ಮಿಕ ಹಾಗೂ ಧರ್ಮದಾಯ ದತ್ತಿ ತಿದ್ದುಪಡಿ ಕಾಯ್ದೆಗೆ ತೀವ್ರ ವಿರೋಧ ವ್ಯಕ್ತಪಡಿಸಲಾಗಿದೆ. ದತ್ತಿ ಇಲಾಖೆಯಿಂದ ಕಾಣೆಯಾದ 4170 ದೇವಸ್ಥಾನಗಳ ರಕ್ಷಣೆಗಾಗಿ ಹೋರಾಟ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಭರತನಾಟ್ಯ ರಂಗ ಪ್ರವೇಶ ಇಂದು

•**ಹುಬ್ಬಳ್ಳಿ:** ಶಿರಸಿ ನಾಟ್ಯಾಂಜಲಿ ನೃತ್ಯ ಕಲಾ ಕೇಂದ್ರದ ವಿದ್ಯಾರ್ಥಿನಿ ಶ್ರಾವ್ಯಾ ಬಗಾಡೆ ಅವರ ಭರತನಾಟ್ಯ ರಂಗ ಪ್ರವೇಶ ಸಮಾರಂಭ ದೇಶಪಾಂಡೆ ನಗರದ ಸವಾಯಿ ಗಂಧರ್ವ ಕಲಾ ಮಂದಿರದಲ್ಲಿ ಏ.5ರಂದು ಸಂಜೆ 4 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಕೇಂದ್ರದ ಅಧ್ಯಕ್ಷ ಪ್ರದೀಪ್ ಭಟ್ಟ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರಾವ್ಯಾ ಬಗಾಡೆ ನಗರದ ಸಿವಿಲ್ ಎಂಜಿನಿಯರ್ ಸುಭಾಸ ಹಾಗೂ ಪಾರ್ವತಿ ದಂಪತಿ ಪುತ್ರಿಯಾಗಿದ್ದು, 9 ವರ್ಷದಿಂದ ಭರತನಾಟ್ಯ ಕಲಿಯುತ್ತಿದ್ದಾರೆ. ಶ್ರಾವ್ಯಾ ಪರಿವರ್ತನ ಗುರುಕುಲ ಹೆರಿಟೇಜ್ ಶಾಲೆಯಲ್ಲಿ 9 ನೇ ತರಗತಿಯಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ನೃತ್ಯ ಗುರು ಡಾ. ಸಹನಾ ಭಟ್ಟ ಅವರಿಗೆ ಗುರುವಂದನೆ ಸಲ್ಲಿಸಲಾಗುವುದು. ಪರಿವರ್ತನ ಗುರುಕುಲ ಹೆರಿಟೇಜ್ ಶಾಲೆಯ ಪ್ರಾಂಶುಪಾಲರಾದ ರಾಜಶೇಖರ ಹಿರೇಮಠ, ದೀಪಕ ಹಿರೇಮಠ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಬಳಿಕ ಪ್ರದೀಪ ಭಟ್ಟ ರಚನೆಯ ಕೈಶಿಕೀ ನೃತ್ಯ ರೂಪಕ ಮೂಡಿಬರಲಿದೆ ಎಂದರು. ವಿದ್ಯಾರ್ಥಿನಿ ಶ್ರಾವ್ಯಾ, ನೃತ್ಯಪತಿ, ಸುಭಾಷ್ ಬಗಾಡೆ ಇದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹ

•**ಹುಬ್ಬಳ್ಳಿ:** ಸೇವಾ ನೇಮಕಾತಿ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಒಂದು ತಿಂಗಳಿನಿಂದ ಹೋರಾಟ ಮಾಡುತ್ತಿದ್ದರೂ ಸರ್ಕಾರ ಸಂದಿಸುತ್ತಿಲ್ಲ. ಸರ್ಕಾರ ಏ.5 ರೊಳಗೆ ನಮ್ಮ ಬೇಡಿಕೆ ಸ್ಪಂದಿಸದಿದ್ದರೆ ಏ.10 ರಂದು ಸರ್ವೇಯರ್ (ಭೂಮಾಪಕರ) ದಿನಾಚರಣೆ ಇದ್ದು ಅಂದು ಕರಾಳ ದಿನವನ್ನಾಗಿ ಆಚರಣೆ ಮಾಡಲಾಗುವುದು. ಜೊತೆಗೆ ನಮ್ಮ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಪರವಾನಗಿ ಭೂಮಾಪಕರ ಸಂಘದ ನಿರ್ದೇಶಕ ಹಟ್ಟಿ ಬಿ.ಆರ್. ಎಚ್ಚರಿಕೆ ನೀಡಿದರು. ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾನ ವೇತನ ಮತ್ತು ಸೇವಾ ರೂಪದೀಕರಣ ತೀಸಬೇಕು. ಹಿರಿಯ ಭೂಮಾಪಕರಿಗೆ ಭಡ್ತಿ ನೀಡಬೇಕು. ಹೊಸ ನೇಮಕಾತಿ ತಾತ್ಕಾಲಿಕವಾಗಿ ನಿಲ್ಲಿಸಬೇಕು. ಪರವಾನಗಿ ಭೂಮಾಪಕರ ಮೇಲೆ ನಡೆಯುವ ದೌರ್ಜನ್ಯ, ದಬ್ಬಾಳಿಕೆ ನಿಲ್ಲಬೇಕು, ನಮಗೆ ಕನಿಷ್ಠ 55 ಸಾವಿರ ರೂ. ವೇತನ ನಿಗದಿ ಮಾಡಬೇಕು ಎಂದು ಆಗ್ರಹಿಸಿದರು. ಕಳೆದ ಹಲವಾರು ವರ್ಷಗಳಿಂದ ಪರವಾನಗಿ ಭೂಮಾಪಕರಿಂದು ರಾಜ್ಯದಾದ್ಯಂತ ಸುಮಾರು 6000ಕ್ಕೂ ಹೆಚ್ಚು ಜನರು ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ, ಪರವಾನಗಿ ಭೂಮಾಪಕರಿಗೆ ಒಂದೇ ಒಂದು ಸೌಲಭ್ಯಗಳಿಲ್ಲ. ಸರ್ಕಾರಿ ಭೂಮಾಪಕರು ಮಾಡುವ ಎಲ್ಲ ಕಾರ್ಯಗಳನ್ನು ಸಹ ನಾವುಗಳು ಮಾಡುತ್ತೇವೆ. ಆದರೆ, ಸರ್ಕಾರ ನಮ್ಮತ್ತ ಗಮನ ಹರಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ರವೀಂದ್ರ ಕೋರೆ, ಪ್ರವೀಣ ಹೆಗಡೆ, ಸೂರಜ್ ತೆಲಗೇರಿ, ಶಿಲ್ಪಾ ಟಿ.ಎಸ್, ಡಿ.ಕೆ. ಶಿವಣ್ಣವರ ಇದ್ದರು.

ವೀರೇಶಗೆ ಪಿಎಚ್‌ಡಿ



•**ಧಾರವಾಡ:** ಸಂಶೋಧನಾ ವಿದ್ಯಾರ್ಥಿ ವೀರೇಶ ಗದಿಗೇಯ್ಯ ಹಿರೇಮಠ ಅವರು ಮಂಡಿಸಿದ ಸಿಂಥೆಸಿಸ್ ಆ್ಯಂಡ್ ಕ್ಯಾರಕ್ಟರೈಜೇಶನ್ ಆಫ್ ರೇರ್ ಅರ್ಥಡೊಪ್ಡ್ ಫೆರೈಟ್ ನ್ಯಾನೊಪಾರ್ಟಿಕಲ್ಸ್ ಫಾರ್ ಸೆನ್ಸರ್ ಅಪ್ಲಿಕೇಶನ್ಸ್ ಸಂಶೋಧನಾ ಪ್ರೌಢಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ಪ್ರದಾನಿಸಿದೆ. ಇವರಿಗೆ ಪ್ರಾಧ್ಯಾಪಕ ಡಾ. ಜಿ.ಎಚ್. ಮಳಿಮಠ ಮಾರ್ಗದರ್ಶಕರಾಗಿದ್ದರು.

ರಾಜು ನರೇಗಲ್‌ಗೆ ಪಿಎಚ್‌ಡಿ



•**ಧಾರವಾಡ:** ಸಂಶೋಧನಾ ವಿದ್ಯಾರ್ಥಿ ರಾಜು ನರೇಗಲ್ ಮಂಡಿಸಿದ ಸವದತ್ತಿ ಪರಿಸರ ಹಾಗೂ ಯಲ್ಲಮ್ಮ: ಚಾರಿತ್ರಿಕ ಅಧ್ಯಯನ ವಿಷಯದ ಸಂಶೋಧನಾ ಪ್ರೌಢ ಪ್ರಬಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ. ಇವರಿಗೆ ಪ್ರಾಧ್ಯಾಪಕ ಎಚ್.ಈ.ಬಸವರಾಜಪ್ಪ ಮಾರ್ಗದರ್ಶಕರಾಗಿದ್ದರು.

ಆನ್‌ಲೈನ್ ಸೇವೆ ಅಲಭ್ಯ

•**ಹುಬ್ಬಳ್ಳಿ:** ಗ್ರಾಮೀಣ ಪ್ರದೇಶದ Non-RAPDRP ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ತುರ್ತು ನಿರ್ವಹಣೆ ಕಾರ್ಯದ ನಿಮಿತ್ತ ಎರಡು ದಿನಗಳ ವರೆಗೆ ಹೆಸ್ಕಾಂನ ಆನ್‌ಲೈನ್ ಸೇವೆಗಳು ತಾತ್ಕಾಲಿಕವಾಗಿ ಲಭ್ಯವಿರುವುದಿಲ್ಲ. ಹೆಸ್ಕಾಂ ವ್ಯಾಪ್ತಿಯ ಏಳು ಜಿಲ್ಲೆಗಳಾದ ಧಾರವಾಡ, ಉತ್ತರ ಕನ್ನಡ, ಬೆಳಗಾವಿ, ಹಾವೇರಿ, ಗದಗ , ವಿಜಯಪುರ ಹಾಗೂ ಬಾಗಲಕೋಟೆಯ ಗ್ರಾಮೀಣ ಪ್ರದೇಶಗಳಲ್ಲಿ ಮುಂದಿನ ಎರಡು ದಿನಗಳು ವರೆಗೆ (ಏ.6 ಹಾಗೂ 7) ಆನ್‌ಲೈನ್ ಸೇವೆಗಳು ಲಭ್ಯವಿರುವುದಿಲ್ಲ ಎಂದು ಹೆಸ್ಕಾಂನ ಅಧೀಕ್ಷಕ ಎಂಜಿನಿಯರ್ (ಐಟಿ ಮತ್ತು ಎಂ.ಟಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಲಘಟಗಿ: ತಾಲೂಕಿನ ಹಿರೇಹೊನ್ನಿಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ರಥೋತ್ಸವ ವಿಜೃಂಭಣೆಯಿಂದ ಜರುಗಿತು. ಬೆಳಗ್ಗೆ ಬಸವೇಶ್ವರರರಿಗೆ ಮಹಾಪೂಜೆ ಸಲ್ಲಿಸಲಾಯಿತು. ಗ್ರಾಮದ ರಾಜಬೀದಿಗಳಲ್ಲಿ ಸುಮಂಗಲಿಯರಿಂದ ಕುಂಭಮೇಳದ ಮೆರವಣಿಗೆ ನಡೆಯಿತು. ಸಂಜೆ ಬಸವೇಶ್ವರ ಮಹಾರಥೋತ್ಸವ ಜರುಗಿತು. ಬಸವೇಶ್ವರ ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಹಿರೇಹೊನಿಹಳ್ಳಿ ಗ್ರಾಮಸ್ಥರು ವಿವಿಧ ಭಾಗಗಳ ಅಪಾರ ಪ್ರಮಾಣದ ಭಕ್ತರು ಆಗಮಿಸಿದ್ದರು.

ಜನರ ವಿಶ್ವಾಸಕ್ಕೆ ತೀವ್ರ ಧಕ್ಕೆ: ವೆಂಕಟೇಶ್ ಕಾಟವೆ



•**ಹುಬ್ಬಳ್ಳಿ:** ಹುಬ್ಬಳ್ಳಿಯಲ್ಲಿ ಕೇರಳ ಸ್ಟೋರಿ ಮಾದರಿಯಲ್ಲಿ ನಡೆದ ಲವ್ ಜಿಹಾದ ಪ್ರಕರಣದ ವಿಚಾರದಲ್ಲಿ ರಾಜ್ಯ ಗೃಹ ಸಚಿವ ಜಿ. ಪರಮೇಶ್ವರ್ ಅವರು ತೋರಿಸಿರುವ ಮೌನ ಜನರ ವಿಶ್ವಾಸಕ್ಕೆ ತೀವ್ರ ಧಕ್ಕೆ ಉಂಟುಮಾಡಿದೆ ಎಂದು ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ವೆಂಕಟೇಶ್ ಕಾಟವೆ ಆರೋಪಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಇಂತಹ ಸೂಕ್ಷ್ಮ ಹಾಗೂ ಸಂವೇದನಾಶೀಲ ವಿಷಯದ ಬಗ್ಗೆ ಗೃಹ ಸಚಿವರು ಸ್ಪಷ್ಟನೆ ನೀಡದೇ ತೆರಳಿರುವುದು ಸರ್ಕಾರದ ನಿಲುವಿನ ಬಗ್ಗೆ ಗಂಭೀರ ಅನುಮಾನಗಳನ್ನು ಹುಟ್ಟಿಸುತ್ತಿದೆ. ಲವ್ ಜಿಹಾದ ಪ್ರಕರಣದ ಕುರಿತು ಮೊನ್ನೆ ಪ್ರತಿಕ್ರಿಯೆ ನೀಡುವುದಾಗಿ ಹೇಳಿದ ಸಚಿವರು, ನಿನ್ನೆ ಮಾಧ್ಯಮದವರ ಪ್ರಶ್ನೆಗಳನ್ನು ತಪ್ಪಿಸಿಕೊಂಡು ಮೌನ ವಹಿಸಿರುವುದು ರಾಜಕೀಯ ಹೊಣೆಗಾರಿಕೆಗೆ ವಿರುದ್ಧವಾಗಿದೆ. ಇದು ಕೇವಲ ಒಂದು ಘಟನೆಯಲ್ಲ, ಸಮಾಜದ ಶಾಂತಿ ಹಾಗೂ ಸಾಮರಸ್ಯಕ್ಕೆ ಸಂಬಂಧಿಸಿದ ವಿಷಯವಾಗಿದೆ. ರಾಜ್ಯ ಕಾಂಗ್ರೆಸ್ ಸರ್ಕಾರವು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಪಾರದರ್ಶಕ ತನಿಖೆ ನಡೆಸಬೇಕು. ಲವ್ ಜಿಹಾದನಲ್ಲಿ ಭಾಗಿಯಾದ ಸಮೀರ್ ಮುಲ್ಲಾ ಹಾಗೂ ಆತನ ಸಹಚರರಿಗೆ ಕಠಿಣ ಕ್ರಮ ಕೈಗೊಂಡು, ಜನರಿಗೆ ಸ್ಪಷ್ಟ ಮಾಹಿತಿ ನೀಡಬೇಕು. ಹಿಂದೂ ಯುವತಿಯರ ಸುರಕ್ಷತೆ, ನ್ಯಾಯ ಹಾಗೂ ಸತ್ಯದ ಪರವಾಗಿ ನಮ್ಮ ಹೋರಾಟ ಮುಂದುವರಿಯುತ್ತದೆ. ಕಾಂಗ್ರೆಸ್ ಸರ್ಕಾರವು ತಕ್ಷಣ ಸ್ಪಷ್ಟನೆ ನೀಡಬೇಕು. ಇಲ್ಲವಾದಲ್ಲಿ ಜನರ ವಿಶ್ವಾಸವನ್ನು ಕಳೆದುಕೊಂಡ ಸರ್ಕಾರಕ್ಕೆ, ಪ್ರಜಾಪ್ರಭುತ್ವದ ಪಾಠವನ್ನು ಜನರೇ ಕಲಿಸುವ ದಿನ ದೂರದಲ್ಲಿಲ್ಲ ಎಂದಿದ್ದಾರೆ.



ಕಲಘಟಗಿ: ಹನುಮ ಜಯಂತಿ ಪ್ರಯುಕ್ತ ಪಟ್ಟಣದ ನ್ಯಾಯಾಲಯದ ಆವರಣದಲ್ಲಿರುವ ಶ್ರೀ ಶಕ್ತಿ ಆಂಜನೇಯ ದೇವರಿಗೆ ಕುಂಕುಮಪೂಜೆ, ವಿಶೇಷ ಅಲಂಕಾರ ಸೇವೆ ನೆರವೇರಿಸಲಾಯಿತು. ಆಗಮಿಸಿದ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ವಕೀಲರ ಸಂಘದ ಸರ್ವ ಸದಸ್ಯರು ಭಕ್ತಿಭಾವದಿಂದ ಪೂಜಾ ಕಾರ್ಯಗಳಲ್ಲಿ ಪಾಲ್ಗೊಂಡು ಶ್ರೀ ಶಕ್ತಿ ಆಂಜನೇಯ ದೇವರ ದರ್ಶನ ಪಡೆದರು.

ಭಜನಾ ಸಂಸ್ಕೃತಿ ಉಳಿಸಿ, ಬೆಳೆಸಿ



•**ಹುಬ್ಬಳ್ಳಿ:** ಪರಮಾತ್ಮನನ್ನು ಒಲೈಸಿಕೊಳ್ಳಲು, ಶಾಂತಿ–ನೆಮ್ಮದಿ ಪಡೆಯಲು ಪೂರ್ವಜರಿಗೆ ಭಜನೆ ಉತ್ತಮ ಮಾರ್ಗವಾಗಿತ್ತು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ, ಶ್ರೀ ಸಿದ್ಧಾರೂಢ ಮಠದ ಮುಖ್ಯ ಆಡಳಿತಾಧಿಕಾರಿ ಬಿ.ಎಸ್. ಭಾರತಿ ಹೇಳಿದರು.

ಇಲ್ಲಿನ ಸಿದ್ಧಾರೂಢ ಸ್ವಾಮಿಯವರ ಮಠದಲ್ಲಿ ಸದ್ಗುರು ಸಿದ್ಧಾರೂಢರ 191ನೇ ಜಯಂತ್ಯುತ್ಸವದ ಅಂಗವಾಗಿ ಮಾ.29 ರಿಂದ ಏ.3ರವರೆಗೆ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಭಜನಾ ಸ್ಪರ್ಧೆಯ ಸಮಾರೋಪ ಹಾಗೂ ಬಹುಮಾನ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಅವರು, ಭಜನಾ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ಕಾರ್ಯವನ್ನು ಪ್ರತಿಯೊಬ್ಬರೂ ಮಾಡಬೇಕು ಎಂದರು.

ಶ್ರೀ ಸಿದ್ಧಾರೂಢ ಮಠದ ಭಕ್ತರ ಮೇಲ್ಮನೆ ಸಭಾಧ್ಯಕ್ಷ ಡಿ.ಆರ್. ಪಾಟೀಲ ಮಾತನಾಡಿ, ಮೊದಲು ಹಳ್ಳಿಗಳಲ್ಲಿ ನಡೆಯುವ ಉತ್ಸವ, ಹಬ್ಬ ಹಾಗೂ ಇತರ ಕಾರ್ಯಕ್ರಮಗಳಲ್ಲಿ ಭಜನೆ ಮಾಡುವುದು ಸಂಪ್ರದಾಯವಾಗಿತ್ತು. ಆದರೆ ಇಂದಿನ ದಿನಗಳಲ್ಲಿ ಆ ಸಂಪ್ರದಾಯವೇ ಇಲ್ಲದಂತಾಗಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಅಣ್ಣಿಗೇರಿ ದಾಸೋಹ ಮಠದ ಸದ್ಗುರು ಶಿವಕುಮಾರ ಸ್ವಾಮೀಜಿ ಮಾತನಾಡಿದರು. ರಾಜ್ಯ ಮಟ್ಟದ ಭಜನಾ ಸ್ಪರ್ಧೆ ಅಧ್ಯಕ್ಷ ಶಾಮಾನಂದ ಪೂಜೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸ್ಪರ್ಧೆಯಲ್ಲಿ 25 ಜಿಲ್ಲೆಗಳ 200ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು.

ಗೋಕಾಕನ ಆತ್ಮಾನಂದಸ್ವಾಮೀಜಿ, ಶ್ರೀ ಮಠದ ಟ್ರಸ್ಟ್ ಕಮಿಟಿ ಚೇರ್ಮನ್ ಬಾಳು ಮಗಜಿಕೊಂಡಿ, ವೈಸ್ ಚೇರ್ಮನ್ ಗೀತಾ ಕಲಬುರ್ಗಿ, ಗೌರವ ಕಾರ್ಯದರ್ಶಿ ವಿನಾಯಕ ಘೋಡಕೆ, ಧರ್ಮದರ್ಶಿಗಳಾದ ಚನ್ನವೀರ ಮುಂಗುರವಾಡಿ, ಬಸವರಾಜ ಕಲ್ಯಾಣಶೆಟ್ಟರ, ಉದಯಕುಮಾರ ನಾಯಕ, ಶ್ರೀಮಠದ ಮ್ಯಾನೇಜರ್ ಈರಣ್ಣ ತುಪ್ಪದ ಹಾಗೂ ಇತರರಿದ್ದರು.

ರಾಜ್ಯಮಟ್ಟದ ಸ್ಪರ್ಧೆಯ ಪ್ರಶಸ್ತಿ ವಿಜೇತರು

ಪ್ರಥಮ ಬಹುಮಾನವನ್ನು ಗೋಕಾಕ ತಾಲೂಕು ಶಿವಪೂರದ ಶ್ರೀ ನಿರುಪಾಧೀಶ್ವರ ಭಜನಾ ಮಂಡಳಿ, ಹುಬ್ಬಳ್ಳಿ ತಾಲೂಕಿನ ನೂಲ್ವಿ ಗ್ರಾಮದ ಶ್ರೀ ಮರಿಯಮ್ಮ ಕರಿಯಮ್ಮ ಭಜನಾ ಮಂಡಳಿ, ಗೋಕಾಕನ ಶ್ರೀ ಸಿದ್ಧಾರೂಢ ಭಜನಾ ಮಂಡಳಿ, ರಾಯಬಾಗ ತಾಲೂಕು ಹಿಡಕಲ್ಲನ ಶ್ರೀ ಸಂಗಮೇಶ್ವರ ಭಜನಾ ಮಂಡಳಿ (ಬಾಲಕಿಯರು) ಪಡೆದುಕೊಂಡಿವೆ. ಮಹಿಳಾ ಪುರಸ್ಕಾರವನ್ನು ಶಿರಸಿ ತಾಲೂಕು ಕಳವೆ ಗ್ರಾಮದ ಶ್ರೀ ಕನಕಾಂಬ ಭಜನಾ ಮಂಡಳಿ ತನ್ನದಾಗಿಸಿಕೊಂಡಿದೆ. ಬಾಲಕಿಯರ–ಬಾಲಕರ ಪುರಸ್ಕಾರವನ್ನು ಹುಬ್ಬಳ್ಳಿ ವಿದ್ಯಾನಗರದ ಶ್ರೀ ಸದ್ಗುರು ಸಂಗೀತ ವಿದ್ಯಾಲಯ ಹಾಗೂ ಗೋಕಾಕನ ಶ್ರೀ ಸಿದ್ಧಾರೂಢ ಮಹಿಳಾ ಭಜನಾ ತಂಡ ಪಡೆದುಕೊಂಡಿವೆ. ಉತ್ತಮ ಗಾಯಕ–ಗಾಯಕಿ ಪುರಸ್ಕಾರವನ್ನು ಬೂದಿಹಾಳದ ಶ್ರೀ ಸಿದ್ದರಾಮೇಶ್ವರ ಭಜನಾ ಮಂಡಳಿಯ ದಾದಾಸಾಬ್ ಸೈಯದ್ ಅಲಿ ಹಾಗೂ ಜಮಖಂಡಿ ತಾಲೂಕು ಕೊಣ್ಣೂರಿನ ಶ್ರೀ ಮಲ್ಲಿಕಾರ್ಜುನ ಭಜನಾ ಮಂಡಳಿಯ ಅಬಾಯವ್ವ ಹಡಪದ ಪಡೆದುಕೊಂಡಿದ್ದಾರೆ. ಉತ್ತಮ ಹಾರ್ಮೋನಿಯಂ ಪುರಸ್ಕಾರವನ್ನು ಜಮಖಂಡಿ ತಾಲೂಕು ಚಿಕ್ಕಲಕಿ ಗ್ರಾಮದ ಶ್ರೀ ರಾಮಾವಧೂತ ಭಜನಾ ಮಂಡಳಿಯ ಗೋವಿಂದ ಗೋವಿ ಮಾಸ್ತರ ಹಾಗೂ ಬಾಗಲಕೋಟೆ ತಾಲೂಕಿನ ಮುಗಳೊಳ್ಳಿ ಗ್ರಾಮದ ಶ್ರೀ ಚನ್ನಬಸವೇಶ್ವರ ಭಜನಾ ಮಂಡಳಿಯ ಶೇಖರಯ್ಯ ಕುಂದರಗಿಮಠ ತಮ್ಮದಾಗಿಸಿಕೊಂಡಿದ್ದಾರೆ. ರಾಯಬಾಗ ತಾಲೂಕು ಹಾರೂಗೇರಿಯ ಶ್ರೀ ಚನ್ನವೃಷಭೇಂದ್ರ ಭಜನಾ ಮಂಡಳಿಯ ಮುತ್ತಪ್ಪ ಯಂಕಂಚಿ ಹಾಗೂ ಜಮಖಂಡಿ ತಾಲೂಕು ಬಿದರಿ ಗ್ರಾಮದ ಶ್ರೀ ಕುಮಾರೇಶ್ವರ ಭಜನಾ ಮಂಡಳಿಯ ಕರಿಯಪ್ಪ ಮೇಲಿಮನಿ ಅವರು ಉತ್ತಮ ತಾಳ ಪುರಸ್ಕಾರವನ್ನು ಮತ್ತು ಕಲಘಟಗಿ ತಾಲೂಕು ಕುರವಿನಕೊಪ್ಪದ ಶ್ರೀ ಸಿದ್ಧಾರೂಢ ಭಜನಾ ಮಂಡಳಿಯ ಗದಿಗೆಪ್ಪ ಹುಬ್ಬಳ್ಳಿ ಹಾಗೂ ತಿಪಟೂರ ತಾಲೂಕು ಹರಗುಪ್ಪೆ ಗ್ರಾಮದ ಶ್ರೀ ದುರ್ಗಾಂಬ ಭಜನಾ ಮಂಡಳಿ ಉತ್ತಮ ಡಗ್ಗಾ ಪುರಸ್ಕಾರ ಪಡೆದುಕೊಂಡಿವೆ. ಮುಧೋಳ ತಾಲೂಕು ರಂಜಣಗಿಯ ಶ್ರೀ ಬಸವೇಶ್ವರ ಭಜನಾ ಮಂಡಳಿಯ ಚೌಕಪ್ಪ ಹಾದಿಮನಿ ಹಾಗೂ ಜಮಖಂಡಿ ತಾಲೂಕು ಲಿಂಗಸೂರನ ಶ್ರೀ ಶಿವಪುತ್ರ ಅವಧೂತ ಭಜನಾ ಮಂಡಳಿಯ ಕರಿಯಪ್ಪ ಗಣಿ ಅವರು ಉತ್ತಮ ತಬಲಾ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ಉತ್ತಮ ದಮಡಿ ಪುರಸ್ಕಾರವನ್ನು ಬೀಳಗಿ ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಶ್ರೀ ಸಂಗಮೇಶ್ವರ ಭಜನಾ ಮಂಡಳಿ ಹಾಗೂ ಬಾಗಲಕೋಟೆ ತಾಲೂಕು ಭೈರಮಟ್ಟಿಯ ಶ್ರೀ ಬಸವೇಶ್ವರ ಭಜನಾ ಮಂಡಳಿಯ ರಂಗಪ್ಪ ಹುನಕುಂಟಿ ಪಡೆದುಕೊಂಡಿದ್ದಾರೆ. ತಲಾ ಐದು ತಂಡಗಳು ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದುಕೊಂಡಿವೆ. 13 ತಂಡಗಳು ಸಮಾಧಾನಕರ ಪ್ರಶಸ್ತಿಗೆ ತೃಪ್ತಿಪಟ್ಟವು.

ಅಂಬೇಡ್ಕರ್ ಸರ್ಕಲ್ ನಿರ್ಮಾಣ ಮಾಡಲು ಆಗ್ರಹ

•**ಅಣ್ಣಿಗೇರಿ:** ತಾಲೂಕಿನಲ್ಲಿ ನಿರಂತರ 20 ವರ್ಷದಿಂದ ಹೋರಾಟ ಮಾಡುತ್ತಿದ್ದರೂ ಅಧಿಕಾರಿಗಳು ಮೀನಾ ಮೀಷ ತೋರುತಿದ್ದಾರೆ. ಈ ಬಾರಿ ಅಂಬೇಡ್ಕರ್ ಸರ್ಕಲ್ ಆಗುವ ವರೆಗೂ ಜಯಂತಿ ಆಚರಣೆ ಮಾಡುವುದಿಲ್ಲ ಎಂದು ಸ್ಥಳೀಯ ದಲಿತ ಪರ ಸಂಘಟನೆ ಮುಖಂಡರು ಪಟ್ಟು ಹಿಡಿದಿದ್ದಾರೆ.

ಏ.14ರಂದು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ಏಪ್ರಿಲ್ 5 ರಂದು ಆಚರಿಸುವ ಹಸಿರು ಸೇನೆ ಹರಿಕಾರರು ಡಾ. ಬಾಬು ಜಗಜೀವನ್ ರಾಮ್ ಜಯಂತಿ ಪ್ರಯುಕ್ತ ತಾಲೂಕು ಆಡಳಿತ ಕಚೇರಿಯಲ್ಲಿ ಹಮ್ಮಿ ಕೊಂಡ ಪೂರ್ವಭಾವಿ ಸಭೆಯಲ್ಲಿ ದಲಿತ ಮುಖಂಡರು ಆಚರಣೆ ಮಾಡುವುದಿಲ್ಲ ಎಂದು ಅಧಿಕಾರಿಗಳ ಮುಂದೆ ಖಡಕ್ ಆಗಿ ಹೇಳಿದರು.

ಇತ್ತೀಚಿಗೆ ನಗರದ ಅಂಬಿಗೇರಿ ಕ್ರಾಸ್ ಬಳಿ ಸರ್ಕಲ್ ಮಾಡಲು ಜಾಗ ಕೂಡ ಗುರುತು ಮಾಡಿದ್ದಾರೆ. ಇಂದಿನ ವರೆಗೂ ಅನುಷ್ಠಾನ ಆಗುತ್ತಿಲ್ಲ, ಕೇವಲ ಹಾರಿಕೆ ಉತ್ತರ ನೀಡುತ್ತಿದ್ದಾರೆ. ಆದರೆ ಈ ಬಾರಿ ಗುರುತು ಪಡಿಸಿದ ಜಾಗದಲ್ಲಿ ಅಂಬೇಡ್ಕರ್ ಸರ್ಕಲ್ ಮಾಡದಿದ್ದರೆ ಹೋರಾಟ ಕೈಗೊಳ್ಳಬೇಕಾಗುತ್ತದೆ. ಅಂಬೇಡ್ಕರ್ ಸರ್ಕಲ್ ಆಗುವವರೆಗೂ ಜಯಂತಿಯನ್ನು ಆಚರಣೆ ಮಾವುದಿಲ್ಲ ಎಂದರು.

ಅಧಿಕಾರಿಗಳು ತಮ್ಮ ಬೇಡಿಕೆ ಜಿಲ್ಲಾ ಹಂತದಲ್ಲಿ ಕಳಿಸಲಾಗುವುದು. ಅಲ್ಲಿಂದ ಅನುಮೋದನೆ ಬಂದ ಕೂಡಲೇ ಸರ್ಕಲ್ ಕಾಮಗಾರಿ ಪ್ರಾರಂಭವಾಗುವುದು ಮೊದಲು ಜಯಂತಿ ಆಚರಣೆ ಮಾಡಲು ಅವಕಾಶ ಕೊಡಿ ಎಂದು ತಹಶೀಲ್ದಾರ್ ಮಂಜುನಾಥ್ ದಾಸಪ್ಪ ನವರ್ ಸಂಘಟಿತರಿಗೆ ಮನವರಿಕೆ ಮಾಡಲು ಪ್ರಯತ್ನಿಸಿದರು. ಆದರೆ ಪಟ್ಟು ಹಿಡದ ಕಾರಣ ಸಾಧ್ಯವಾಗಲಿಲ್ಲ. ಈ ಸಂದರ್ಭದಲ್ಲಿ ದಲಿತ ಮುಖಂಡರಾದ ಯೋಗೇಶ ಛಲವಾದಿ, ಕುಮಾರ ಸೈದಾಪುರ, ಬಿ.ಟಿ. ಶಾಂತರಾಜ, ಧರ್ಮಣ್ಣ ಹರಣಿ ಶಿಖಾರಿ, ಯಲ್ಲಪ್ಪ ಮಾದರ್, ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಶೋಭಾ ಹಿರೇಮಠ, ಪುರಸಭೆ ಮುಖ್ಯಾಧಿಕಾರಿ ವೈ.ಜಿ. ಗದ್ದಿಗೌಡ್ರು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಮತ್ತು ತಾಲೂಕಿನ ಎಲ್ಲ ದಲಿತ ಪರ ಸಂಘಟನೆ ಮುಖಂಡರು ಉಪಸ್ಥಿತರಿದ್ದರು.

> ಅಂಬೇಡ್ಕರ್ ಸರ್ಕಲ್ ಕುರಿತು ಎಂಟು ದಿನ ಗಡವು ನೀಡಲಾಗಿದೆ. ಬೇಡಿಕೆ ಈಡೇರದಿದ್ದರೆ ಹೋರಾಟ ಮಾಡುತ್ತೇವೆ.
> ■ **ಕುಮಾರ್ ಸೈದಾಪುರ,** ದಲಿತ ಮುಖಂಡ





ಹುಬ್ಬಳ್ಳಿ: ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರು ಬಾಗಲಕೋಟ ಚುನಾವಣಾ ಪ್ರಚಾರಕ್ಕೆ ತೆರಳುವ ಮಾರ್ಗ ಮಧ್ಯದಲ್ಲಿ ನಗರದ ಖಾಸಗಿ ಹೋಟೆಲ್‌ನಲ್ಲಿ ಮಹಾನಗರ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ವಸಂತ ನಾಡಜೋಶಿ ಅವರ ನೇತೃತ್ವದಲ್ಲಿ ಸ್ವಾಗತಿಸಲಾಯಿತು. ಸಂಸದ ಜಗದೀಶ ಶೆಟ್ಟರ, ಮಾಜಿ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ, ಮಾಜಿ ಶಾಸಕ ಅಶೋಕ ಕಾಟವೆ, ಲಿಂಗರಾಜ ಪಾಟೀಲ್, ತೊಟಪ್ಪ ನೀಡಗುಂದಿ, ಮಲ್ಲಿಕಾರ್ಜುನ ಸಾವಕಾರ, ನಾಗೇಶ ಕಲಬುರ್ಗಿ, ಸಂಕಲ್ಪ ಶೆಟ್ಟರ, ಪ್ರವೀಣ ಹುರಳಿ ಡಾ–ರವೀಂದ್ರ ಯಲಕಾನ, ಸುಭಾಸ ಅಥಣಿ, ರಾಜು ಕೋರ್ಯಾಣಮಠ, ಆನಂದ ಮದರಿ ಉಪಸ್ಥಿತರಿದ್ದರು.



ಹುಬ್ಬಳ್ಳಿ: ರಾಷ್ಟ್ರವ್ಯಾಪ್ತಿ ಪ್ರಸಿದ್ಧ ಸದ್ಗುರು ಸಿದ್ಧಾರೂಢರ ಹಾಗೂ ಮೌನಯೋಗಿ ಸದ್ಗುರು ಗುರುನಾಥರೂಢ ಟ್ರಸ್ಟ್‌ನ ಮಠದ ನೂತನ ಅಧ್ಯಕ್ಷ ಬಾಳು ಮಗಜಕೊಂಡಿ ಹಾಗೂ ಉಪಾಧ್ಯಕ್ಷೆ ಗೀತಾ ಕಲಬುರ್ಗಿ ಹಾಗೂ ಕಾರ್ಯದರ್ಶಿ ವಿನಾಯಕ ಘೋಡಕೆ ಅವರಿಗೆ ರಾಷ್ಟ್ರೋತ್ಥಾನ ರಕ್ತ ಕೇಂದ್ರ ಹುಬ್ಬಳ್ಳಿ ವತಿಯಿಂದ ಸನ್ಮಾನಿಸಯಿತು. ದತ್ತಮೂರ್ತಿ ಕುಲಕರ್ಣಿ, ಶ್ರೀಧರ್ ಜೋಶಿ , ವಿನೋದ ಪಟವಾ, ನವೀನ್ ಚಿಕ್ಕಮಠ, ಸಿದ್ದು ಅಂಗಡಿ, ವೈಭವ ಕಟ್ಟಿ, ಸುಮನ, ದ್ಯಾಮಣ್ಣ ಕುಮಾರ ಉಪಸ್ಥಿತರಿದ್ದರು.

ಭಗವಾನ್ ಮಹಾವೀರರ ತತ್ವ ಸರ್ವರೂ ಮೈಗೂಡಿಸಿಕೊಳ್ಳಲಿ: ಡಾ.ಅರುಣಕುಮಾರ



•**ಧಾರವಾಡ:** ಮನುಷ್ಯ ಕೋಪ ನಿಯಂತ್ರಣಕ್ಕೆ ಸಂಯಮ ತತ್ವ ಜೈನ ಧರ್ಮ ತಿಳಿಸಿಕೊಟ್ಟಿದೆ. ಭಗವಾನ್ ಮಹಾವೀರರ ತತ್ವಗಳು ಮೈಗೂಡಿಸಿಕೊಳ್ಳಬೇಕು ಎಂದು ಡಿಮಾನ್ಸ್ ನಿರ್ದೇಶಕ ಡಾ.ಅರುಣಕುಮಾರ ಸಿ. ಹೇಳಿದರು.

ಧಾರವಾಡ ಜೈನ್ ಮಿಲನ್ ನಗರದ ಡಿಮಾನ್ಸ್ ಹೊಸ ಆಡಿಟೋರಿಯಂದಲ್ಲಿ ಭಗವಾನ್ ಮಹಾವೀರರ ಜಯಂತಿ ಅಂಗವಾಗಿ ಹಮ್ಮಿಕೊಂಡ ರೋಗಿಗಳಿಗೆ ಹೊದಿಕೆ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ವ್ಯಕ್ತಿಯ ಮನಸ್ಸು ಯುದ್ಧಭೂಮಿ ಇದ್ದಂತೆ. ಒಂದು ಮಾತಿನಿಂದ ಜಗತ್ತನ್ನು ಒಡೆದು ಹಾಕಬಹುದು. ಹೀಗಾಗಿ ಬೇರೆಯವರ ಮನಸ್ಸಿಗೆ ನೋವು ಉಂಟು ಮಾಡದಂತೆ ಮಾತನಾಡಬೇಕು ಎಂದರು.

ಡಿಮಾನ್ಸ್ ಮುಖ್ಯ ಆಡಳಿತಾಧಿಕಾರಿ ಮೇಜರ್ ಸಿದ್ದಲಿಂಗಯ್ಯ ಹಿರೇಮಠ ಮಾತನಾಡಿ, ಭಾರತದ ಧರ್ಮಗಳು ಜಗತ್ತಿಗೆ ಮೌನವೀಯ ಮೌಲ್ಯಗಳನ್ನು ತಿಳಿಸಿದೆ. ದಯೆ, ದಾನ, ಅಹಿಂಸೆ ತತ್ವ ಅಳವಡಿಸಿಕೊಳ್ಳಲು ಹೇಳಿದರು.

ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಮಾತನಾಡಿ, ಜೈನಧರ್ಮವು ಅಹಿಂಸಾ ಪ್ರಧಾನ ಧರ್ಮ. ಅದು ಪ್ರಸ್ತುತ ನಡೆಯುವ ಜಾಗತಿಕ ಅಶಾಂತಿಗೆ ಪರಿಹಾರವಾಗಿದೆ ಎಂದರು.

ಅರಿಹಂತ ಪ್ರಸಾದ, ರತ್ನಾಕರ ಹೋಳಗಿ, ರಾಘವೇಂದ್ರ ನಾಯಕ, ಮೋಹನಕುಮಾರ್ ಗೋಗಿ, ಅಶೋಕ ಬಾಳಿಕಾಯಿ, ಡಾ.ಸೂರಜ್ ಜೈನ್, ಅಶೋಖ ರೋಖಡೆ, ಕೆ.ಜಿ.ರಪಾಟಿ ಅನೇಕರು ಇದ್ದರು. ಸೋನಾಲಿ ಗೋಗಿ ಪ್ರಾರ್ಥಿಸಿದರು. ಐಟಿಐ ಕಾಲೇಜಿನ ಪ್ರಾಚಾರ್ಯ ಮಹಾವೀರ ಉಪಾಧ್ಯೆ ಸ್ವಾಗತಿಸಿದರು. ಪ್ರಾಚಾರ್ಯ ಡಾ. ಬಿ.ಎನ್.ಭಾವಿ ನಿರೂಪಿಸಿದರು. ಡಾ.ಜಿನ್ನಪ್ಪ ಕುಂದಗೋಳ ವಂದಿಸದಿರು.

ವಿಶ್ವಕರ್ಮ ನಿಗಮಕ್ಕೆ 50 ಕೋಟಿ ರೂ. ಅನುದಾನ: ಪಿ. ಸುಜ್ಞಾನ ಮೂರ್ತಿ

•**ಹುಬ್ಬಳ್ಳಿ:** ರಾಜ್ಯದಲ್ಲಿ ಹಿಂದುಳಿದ ವರ್ಗಗಳ 2– ಎ ಗುಂಪಿನ ಸಮುದಾಯಗಳ ಜನಸಂಖ್ಯೆಯಲ್ಲಿ ವಿಶ್ವಕರ್ಮ ಸಮುದಾಯ ಎರಡನೇ ಸ್ಥಾನದಲ್ಲಿದ್ದು , ಸರ್ಕಾರ ಈ ವರ್ಷ ವಿಶ್ವಕರ್ಮ ನಿಗಮಕ್ಕೆ 50 ಕೋಟಿ ರೂ.ಗಳ ಅನುದಾನವನ್ನು ನೀಡಿದೆ ಎಂದು ರಾಜ್ಯ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ. ಸುಜ್ಞಾನ ಮೂರ್ತಿ ತಿಳಿಸಿದರು.

ನವನಗರದ ಇಲ್ಲಿಯ ಪಂಚಾಕ್ಷರಿ ನಗರದ ಶ್ರೀ ಕಾಳಿಕಾ ದೇವಸ್ಥಾನದ ಎರಡನೇ ವರ್ಷದ ವರ್ಧಂತಿ ಉತ್ಸವದ ಅಂಗವಾಗಿ ಏರ್ಪಡಿಸಿದ್ದ ಧಾರ್ಮಿಕ ಸಭೆಯಲ್ಲಿ ಮಾತನಾಡಿದರು. ವರ್ಧಂತಿ ಉತ್ಸವಕ್ಕೆ ಚಾಲನೆ ನೀಡಿದ ಮಾಜಿ ಮಹಾಪೌರ ರಾಮಣ್ಣ ಬಡಿಗೇರ ಮಾತನಾಡಿ, ಹುಬ್ಬಳ್ಳಿ ಧಾರವಾಡ ಅವಳಿ ನಗರಗಳಲ್ಲಿ ಸಮುದಾಯದ ನಿವೇಶನ ಹಾಗೂ ಕಟ್ಟಡ ಕಾಮಗಾರಿಗಳಿಗೆ ಶಾಸಕರ ನಿಧಿ ಹಾಗೂ ಸರ್ಕಾರದಿಂದ ಈ ವರ್ಷ ತಕ್ಕಮಟ್ಟಿನ ಅನುದಾನ ಲಭ್ಯವಾಗಿದ್ದು, ಸಮಾಜಕ್ಕೆ ಇನ್ನೂ ಹೆಚ್ಚಿನ ಪ್ರಮಾಣದ ಅನುದಾನ ಅಗತ್ಯವಿದೆ. ಅನುದಾನ ದೊರಕಿಸುವಲ್ಲಿ ನಿಗಮದ ಅಧ್ಯಕ್ಷರು ನೆರವಾಗಬೇಕು ಎಂದರು. ಧಾರವಾಡ ಜಿಲ್ಲಾ ಜನಜಾಗೃತಿ ವೇದಿಕೆಯ ಅಧ್ಯಕ್ಷ ವಸಂತ ಅರ್ಕಾಚಾರ ಮಾತನಾಡಿ, ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ನವನಗರದ ಕಾಳಿಕಾ ದೇವಸ್ಥಾನದ ಸಮುದಾಯ ಭವನಕ್ಕೆ 3.5 ಲಕ್ಷ ರೂ.ಗಳ ಅನುದಾನವನ್ನು ನೀಡಿದೆ ಎಂದರು. ಸಾನ್ನಿಧ್ಯ ವಹಿಸಿದ್ದ ಶಿರೋಳದ ಜಗದ್ಗುರು ಶ್ರೀ ಯಚ್ಚರ ಸ್ವಾಮಿಗಳ ಸಂಸ್ಥಾನ ಗವಿಮಠದ ಅಭಿನವ ಯಚ್ಚರ ಸ್ವಾಮೀಜಿ ಆಶೀರ್ವಚನ ನೀಡಿದರು. ಪಾಲಿಕೆಯ ಸದಸ್ಯ ಚಂದ್ರಶೇಖರ ಮನಗುಂಡಿ, ಸುನಿತಾ ಮಾಳವದಕರ ಹಾಗೂ ನಿವೃತ್ತ ವೈದ್ಯಾಧಿಕಾರಿ ಪದ್ಮಾವತಿ ಪತ್ತಾರ ಮಾತನಾಡಿದರು. ವಿಶ್ವಕರ್ಮ ವಿಕಾಸ ಸಮಿತಿ ಟ್ರಸ್ಟಿನ ಅಧ್ಯಕ್ಷ ಸಿ.ಪಿ. ಮಾಯಾಚಾರಿ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಗೈದವರನ್ನು ಸನ್ಮಾನಿಸಲಾಯಿತು.



ಜನಗಣತಿಯಿಂದ ಬಲಿಷ್ಠ ರಾಷ್ಟ್ರ ನಿರ್ಮಾಣ



•**ನವಲಗುಂದ:** ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕಾಗಿ ಜನಗಣತಿ ಒಂದು ಪ್ರಮುಖ ಹೆಜ್ಜೆಯಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಶರಣು ಪೂಜಾರ ಹೇಳಿದರು.

ಅವರು ಶನಿವಾರ ನಗರದ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ಭಾರತ ಜನಗಣತಿ 2027ರ ಮನೆಪಟ್ಟಿ ಕಾರ್ಯಾಚರಣೆಯ ಮೇಲ್ವಿಚಾರಕರು ಹಾಗೂ ಗಣತಿದಾರರಿಗೆ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಇಂದಿನಿಂದ 3 ಮೂರು ದಿನಗಳವರೆಗೆ ತರಬೇತಿ ನಡೆಯಲಿದೆ. ಡಿಜಿಟಲ್ ತರಬೇತಿ, ಅವಧಿ, ಮನೆಪಟ್ಟಿ, ಸ್ವಯಂ–ಗಣತಿ, ಡೇಟಾ ಭದ್ರತೆ, ಮೊಬೈಲ್ ಆಪ್/ಟ್ಯಾಬ್ಲೆಟ್ ಬಳಸಿ ಮನೆಗಳನ್ನು ಜಿಯೋ–ಟ್ಯಾಗ್ ಮಾಡುವುದು. ಪ್ರಶ್ನಾವಳಿಗಳನ್ನು ಭರ್ತಿ ಮಾಡುವ ವಿಧಾನ (ಮನೆ ಗುಣಮಟ್ಟ, ಆಸ್ತಿ ವಿವರಗಳು). ಸೂಪರ್‌ವೈಸರ್‌ಗಳು ಡೇಟಾವನ್ನು ಸೂಕ್ತ ಸಮಯದಲ್ಲಿ ಟ್ರ್ಯಾಕ್ ಮಾಡುವುದು, ಗಣತಿದಾರರು ಮತ್ತು ಮೇಲ್ವಿಚಾರಕರು ತಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಗೆ ಬರುವ ಎಸ್‌ಎಂಎಸ್ ಮೂಲಕ ತರಬೇತಿಯ ಸ್ಥಳ ಮತ್ತು ದಿನಾಂಕದ ವಿವರಗಳನ್ನು ಪಡೆಯುತ್ತಾರೆ. ಹಾಗಾಗಿ ಜನಗಣತಿ 2027ರ ಮನೆಪಟ್ಟಿ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿಕೊಡುತ್ತಾರೆ ಎಂದು ಆಶಿಸುತ್ತೇನೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ದೀಪಕ್ ಕುಲಕರ್ಣಿ, ಕ್ಷೇತ್ರ ತರಬೇತುದಾರರಾದ ಶ್ರೀಧರ್ ಲೋನಕರ್, ಎನ್.ವಿ. ಕುರವತ್ತಿಮಠ, ಪುರಸಭೆ ಸಿಬ್ಬಂದಿ ಆರ್.ಎನ್. ವಿಶ್ವಜ್ಞ, ಎನ್.ಡಿ.ಜೋರಂ, ಎ.ಎ.ನಾಸಿಪುಡಿ ಹಾಗೂ ಮೇಲ್ವಿಚಾರಕರು ಮತ್ತು ಗಣತಿದಾರರು ಉಪಸ್ಥಿತರಿದ್ದರು.

ಸಾರ್ವಜನಿಕ ಅಹವಾಲು ಸಭೆ: ಜಿಲ್ಲಾಧಿಕಾರಿಗೆ 25 ಅರ್ಜಿ ಸಲ್ಲಿಕೆ

•**ಕುಂದಗೋಳ:** ಸಾರ್ವಜನಿಕ ಅಹವಾಲು ಸಭೆಗೆ ಜಿಲ್ಲಾಧಿಕಾರಿ ಸ್ನೇಹಲ್ ಆರ್. 2 ಗಂಟೆ ತಡವಾಗಿ ಆಗಮಿಸಿ ತಹಶೀಲ್ದಾರ್ ಕೊಠಡಿಯಲ್ಲಿ ಅಹವಾಲನ್ನು ಸ್ವೀಕರಿಸುತ್ತಿರುವುದನ್ನು ಖಂಡಿಸಿ ರೈತರು, ವಿವಿಧ ಸಂಘಟನೆಗಳು ಕಚೇರಿ ಮುಂಭಾಗದಲ್ಲಿ ಪ್ರತಿಭಟಿಸಿದ ಘಟನೆ ಶನಿವಾರ ಜರುಗಿದೆ.

ನೂತನ ಜಿಲ್ಲಾಧಿಕಾರಿಗಳು ಕುಂದಗೋಳಕ್ಕೆ ಪ್ರಥಮ ಬಾರಿಗೆ ಬೆಳಗ್ಗೆ 11ಕ್ಕೆ ಅಹವಾಲು ಸ್ವೀಕಾರ ಸಭೆ ನಿಗದಿಸಲಾಗಿತ್ತು. ಅನೇಕ ರೈತರು ಹಾಗೂ ವಿವಿಧ ಸಂಘಟನೆಗಳು ಮತ್ತು ಸಾರ್ವಜನಿಕರು ಕಚೇರಿಯ ಸಭಾಭವನದಲ್ಲಿ ಕಾಯಿತ್ತಿರುವಾಗ ಜಿಲ್ಲಾಧಿಕಾರಿಗಳು ತಡವಾಗಿ ಆಗಮಿಸಿ ತಹಶೀಲ್ದಾರ್ ಕೊಠಡಿಯಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿದ್ದು, ನಮಗೆ ಅಗೌರವ ತೋರುತ್ತಿದ್ದೀರಿ ಎಂದು ಆರೋಪಿಸಿ ಪ್ರತಿಭಟನೆ ಆರಂಭಿಸಿ ಜಿಲ್ಲಾಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು. ತಹಶೀಲ್ದಾರ್ ರಾಜು ಮಾವರಕರ ಪ್ರತಿಭಟನೆ ನಿಲ್ಲಿಸಿ ಒಳಗೆ ಬರುವಂತೆ ಮನವಿ ಮಾಡಿದರು ಕೂಡಾ ಜಿಲ್ಲಾಧಿಕಾರಿಗಳನ್ನು ಇಲ್ಲೇ ಕರಿಸುವಂತೆ ಪಟ್ಟು ಹಿಡಿದ ಪರಿಣಾಮ ಜಿಲ್ಲಾಧಿಕಾರಿ ಆಗಮಿಸಿ ವಿವಿಧ ಸಂಘಟನೆಗಳು ತಮ್ಮ ಮನವಿ ಸಲ್ಲಿಸಿದರು. ವಿವಿಧ ರೈತ ಸಂಘಟನೆಗಳು, ಜಿಲ್ಲಾಧಿಕಾರಿಗಳಿಗೆ ಸನ್ಮಾನಿಸಿದರು. ತಹಶೀಲ್ದಾರ್ ರಾಜು ಮಾವರಕರ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು. ಮುಖಂಡರಾದ ಬಸವರಾಜ ಯೋಗಪ್ಪನವರ, ದೇವಪ್ಪ ಇಚ್ಚಂಗಿ, ಚಂದ್ರಶೇಖರ ಕಟಗಿ, ಶಕ್ರಪ್ಪ ಕಮ್ಮಾರ, ರಾಜು ಮಲ್ಲಿಗವಾಡ, ನಿರ್ಮಲಾ ಹನಸಿಯವರ ಅನೇಕರಿದ್ದರು.



ಸೂಕ್ತ ಪರಿಹಾರ

ಅಹವಾಲು ಸ್ವೀಕರಿಸಿದಾಗ 25 ಅರ್ಜಿಗಳು ಬಂದಿದ್ದು, ಅಲ್ಲದೆ ಮೌಖಿಕವಾಗಿ ಸಮಸ್ಯೆ ಕುರಿತು ಗಮನಕ್ಕೆ ತಂದಿದ್ದು ಅಧಿಕಾರಿಗಳ ಸಭೆ ನಡೆಸಿ ಸೂಕ್ತ ಪರಿಹಾರ ನೀಡುವುದಾಗಿ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಭರವಸೆ ನೀಡಿದರು.

- ತಾಲೂಕಿನಲ್ಲಿ ಜೆಜೆಎಂ ಕಾಮಗಾರಿಯು ಸಂಪೂರ್ಣ ಕಳಪೆ ಮಟ್ಟದ್ದಾಗಿದ್ದು ಕಾಮಗಾರಿ ಮುಗಿದು 2 ವರ್ಷವಾದರು ಕೂಡಾ ಕಾರ್ಯನಿರ್ವಹಿಸುತ್ತಿಲ್ಲ, ಈ ಕುರಿತು ಸಮಗ್ರ ತನಿಖೆ ಮಾಡುವಂತೆ ಒತ್ತಾಯಿಸಿದ ತಾಲೂಕು ಜೆಡಿಎಸ್ ಅಧ್ಯಕ್ಷ ಶಂಕರಗೌಡ ದೊಡಮನಿ
- ಬೆಣ್ಣಿಹಳ್ಳ ಪ್ರವಾಹದಿಂದ ಸಾಕಷ್ಟು ಹಾನಿಯಾಗುತ್ತಿದ್ದು ಶಾಶ್ವತ ಪರಿಹಾರ ಸೇರಿದಂತೆ ವಿವಿಧ ಬೇಡಿಕೆಗೆ ಮನವಿ ಸಲ್ಲಿಸಿದ ರತ್ನ ಭಾರತ ರೈತ ಸಮಾಜದ ರಾಷ್ಟ್ರೀಯ ಉಪಾಧ್ಯಕ್ಷ ಹೇಮನಗೌಡ ಬಸನಗೌಡ್ರ
- ಬೆಂಬಲ ಬೆಲೆಯಡಿ ಖರೀದಿ ಕೇಂದ್ರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ, ರೈತರ ಹೊಲದ ರಸ್ತೆ ಸುಧಾರಣೆ ಮಾಡುವಂತೆ ರೈತ ಹೋರಾಟಗಾರ್ತಿ ಮಾಣಿಕ್ಯ ಚಿಲ್ಲೂರ ಆಗ್ರಹ
- ತಹಶೀಲ್ದಾರ್ ಕಚೇರಿಯಲ್ಲಿ ಏಜೆಂಟರ ಹಾವಳಿ ಹೆಚ್ಚಾಗಿದ್ದು, ಇದನ್ನು ತಡಗಟ್ಟಬೇಕೆಂದು ಹೇಳಿದ ಕರವೇ ಅಧ್ಯಕ್ಷ ಕಲ್ಲಪ್ಪ ಹರಕುಣಿ

ಹಾಜರಾತಿ ಹೆಚ್ಚಲು ವಿನೂತನ ಪ್ರಯೋಗ



•**ಉಪ್ಪಿನಬೆಟಗೇರಿ:** ಸರ್ಕಾರಿ ಶಾಲೆಗಳೆಂದರೆ ಮೂಗು ಮುರಿಯುವವರೇ ಹೆಚ್ಚು. ಇತ್ತೀಚಿನ ದಿನಗಳಲ್ಲಿ ಮಕ್ಕಳು ಸರ್ಕಾರಿ ಶಾಲೆಗಳತ್ತ ಮುಖ ಮಾಡದೇ ಇರುವುದರಿಂದ ಸರ್ಕಾರ ಅನೇಕ ಶಾಲೆಗಳನ್ನು ಮುಚ್ಚುವ ಹಂತಕ್ಕೆ ತಲುಪಿದೆ. ಹೀಗಾಗಿ ಮಕ್ಕಳ ಹಾಜರಾತಿ ಸಂಖ್ಯೆ ಹೆಚ್ಚಳ ಮಾಡುವ ಉದ್ದೇಶದಿಂದ ಶನಿವಾರ ಉಪ್ಪಿನಬೆಟಗೇರಿ ಗ್ರಾಮದ ಸರ್ಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆಯ ಶಿಕ್ಷಕರು ವಿನೂತನ ಕಾರ್ಯಕ್ರಮ ರೂಪಿಸಿ ಸಾರ್ವಜನಿಕರಲ್ಲಿ ಸರ್ಕಾರಿ ಶಾಲೆಯ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಿದರು.

ಮಕ್ಕಳಿಗೆ ಉಚಿತ ಬಿಸಿಯೂಟ, ಉಚಿತ ಸಮವಸ್ತ್ರ, ಪೌಷ್ಟಿಕ ಆಹಾರ, ಶೂ ಭಾಗ್ಯ, ಉಚಿತ ಪಠ್ಯ ವಿತರಣೆ, ಹಾಲು, ಮೊಟ್ಟೆ, ನುರಿತ ಶಿಕ್ಷಕ ವೃಂದ ಎಲ್ಲ ಸರ್ಕಾರಿ ಶಾಲಾ ಮಕ್ಕಳಿಗೆ ಸಿಗುತ್ತಿರುವ ಸೌಲಭ್ಯಗಳು. ಸಾರ್ವಜನಿಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸಲು ಹಿಂದೇಟು ಹಾಕುತ್ತಾರೆ. ಈ ಎಲ್ಲ ಸೌಲಭ್ಯಗಳ ಕರಪತ್ರವನ್ನು ಸಿದ್ಧಪಡಿಸಿರುವ ಈ ಸರ್ಕಾರಿ ಶಾಲೆಯ ಶಿಕ್ಷಕರು ಗ್ರಾಮದ ತುಂಬ ಮಕ್ಕಳೊಂದು ಪ್ರಭಾತಪೇರಿ ಹೋಗಿ ಕರಪತ್ರಗಳನ್ನು ಮನೆ ಮನೆಗೆ ಹಂಚಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸುವಂತೆ ಸಾರ್ವಜನಿಕರಲ್ಲಿ ಮನವರಿಕೆ ಮಾಡಿದ್ದಾರೆ. ಇದೇ ಮೊದಲ ಬಾರಿಗೆ ಸರ್ಕಾರಿ ಶಾಲೆಯೊಂದು, ಶಾಲೆಯಲ್ಲಿ ಸಿಗುವ ಸೌಲಭ್ಯಗಳ ಕರಪತ್ರ ಹಂಚಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವಂತೆ ವಿನಂತಿಸಿದೆ.

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಭಾನುವಾರ, 5 ಏಪ್ರಿಲ್ 2026
ಸಂಪುಟ 16, ಸಂಚಿಕೆ 11, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital



ಲಡಾಖ್: ಗಗನಯಾತ್ರಿಗಳ ಮಾನಸಿಕ, ದೈಹಿಕ ಪರೀಕ್ಷೆ

|೦೨

ಸಂಕಷ್ಟ ನಡುವೆಯೂ ಭಾರತ ದೃಢ: ಜೈಶಂಕರ್

|೦೨



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ವಿಶಾಖೆ

ದಿನದ ಮಾತು

ಶ್ರದ್ಧೆ ಮತ್ತು ಭಕ್ತಿಯಿಲ್ಲದ ಕೆಲಸವು ಸುವಾಸನೆಯಿಲ್ಲದ ಕೃತಕ ಹೂವಿನಂತೆ.
▲ಸ್ವಾಮಿ ಚಿನ್ಮಯಾನಂದ

ಪರಿಚಯದ ಪರಿಪರಿಯ ಕಿರಿಕಿರಿಗಳು

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

10 ಕೋಟಿ ಮನೆ ತಲುಪಿದ ಆರೆಸ್ಸೆಸ್

• **ಹೊಸದಿಲ್ಲಿ:** ಸಮಾಜದಲ್ಲಿ ಗುರುತು ಆಧಾರಿತ ಭೇದಗಳನ್ನು ಉಂಟುಮಾಡುವ ಯತ್ನಗಳ ನಡುವೆಯೂ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ದೇಶದಲ್ಲಿ ರಾಷ್ಟ್ರೀಯ ಚೇತನವನ್ನು ಜಾಗೃತಿಗೊಳಿಸುವಲ್ಲಿ ಹಾಗೂ ವಿಸ್ತರಿಸುವಲ್ಲಿ ಮಹತ್ತರ ಸಾಧನೆ ಮಾಡಿದೆ ಎಂದು ಸಂಘದೊಂದಿಗೆ ಸಂಬಂಧಿತ ವಾರಪತ್ರಿಕೆ ಆರ್ಗನೈಸರ್ ತನ್ನ ಸಂಪಾದಕೀಯದಲ್ಲಿ ಪ್ರಶಂಸಿಸಿದೆ.

• ಪುಟ ೨

ಜಾಗತಿಕ ಯುದ್ಧ ಮಧ್ಯೆ ಭಾರತದ ಸುಗಮ ಹಾದಿ

• ಪುಟ ೨

ರಕ್ಷಣಾ ರಫ್ತು ದಾಖಲೆ ಮಟ್ಟದ ಏರಿಕೆ

• ಪುಟ ೨

ಇರಾನ್‌ನೊಂದಿಗೆ ಪಾವತಿ ಸಮಸ್ಯೆ ಇಲ್ಲ: ಕೇಂದ್ರ

• ಪುಟ ೨

ಎಟಿಎಸ್‌ನಿಂದ ನಾಲ್ವರು ಉಗ್ರರ ಸೆರೆ

• ಪುಟ ೨

ಅಫ್ಘಾನಿಸ್ತಾನದಲ್ಲಿ 5.8 ತೀವ್ರತೆ ಭೂಕಂಪ: 8 ಸಾವು

• ಪುಟ ೨

ಸಾವಿರ ಕೆಜಿ ತೂಕದ ದೇಸಿ ವೈಮಾನಿಕ ಬಾಂಬ್ ಅಭಿವೃದ್ಧಿ

• ಪುಟ ೨

ಫಲಿತಾಂಶ ರಾಜ್ಯಕ್ಕೆ ದಿಕ್ಸೂಚಿ: ಸುನೀಲ್‌ಕುಮಾರ್

• ಪುಟ ೮

ಕಾಂಗ್ರೆಸ್‌ಗೆ ದೊಡ್ಡ ಅಂತರದ ಗೆಲುವು: ಡಿಕೆಶಿ

• ಪುಟ ೮

ಗ್ಯಾಸ್ಟ್ರಿಕ್ ನಿರ್ಲಕ್ಷ್ಯವೇ ಕ್ಯಾನ್ಸರ್ ಕಾಯಿಲೆಗೆ ಮುನ್ನುಡಿ

• ಪುಟ ೮

ಬಾಬ್ ಎಲ್-ಮಂಡೆಬ್ ಮುಚ್ಚುವುದಾಗಿ ಇರಾನ್ ಸ್ಪೀಕರ್ ಬೆದರಿಕೆ
ಜಾಗತಿಕ ತೈಲ ಪೂರೈಕೆ, ವ್ಯಾಪಾರಕ್ಕೆ ಹೊಡೆತ ನೀಡಲು ಇರಾನ್ ಸಿದ್ಧತೆ

ಬಾಬ್ ಜಲಸಂಧಿ ಬಂದ್?

• **ಟೆಹ್ರಾನ್:** ಇತರ ರಾಷ್ಟ್ರಗಳು ಯುದ್ಧ ನಿಲ್ಲಿಸಲು ಅಮೆರಿಕ ಮತ್ತು ಇಸ್ರೇಲ್ ಮೇಲೆ ಒತ್ತಡ ಹಾಕಬೇಕೆಂಬ ಉದ್ದೇಶದಿಂದ ಹಾರ್ಮುಜ್ ಜಲಸಂಧಿ ಮುಚ್ಚಿ ಜಾಗತಿಕ ತೈಲ ಪೂರೈಕೆ ವ್ಯತ್ಯಯ ಸೃಷ್ಟಿಸಿರುವ ಇರಾನ್ ಇನ್ನೊಂದು ಹೊಡೆತ ನೀಡಲು ಸಿದ್ಧವಾಗುತ್ತಿದೆ. ಜಾಗತಿಕ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುವ ಬಾಬ್ ಎಲ್-ಮಂಡೆಬ್ ಜಲಸಂಧಿಯನ್ನು ಮುಚ್ಚುವ ಕುರಿತು ಇರಾನ್ ಸಂಸತ್ತಿನ ಸ್ಪೀಕರ್ ಸುಳಿವು ನೀಡಿದ್ದಾರೆ.

ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಗೇರ್ ಗಾಲಿಬಫ್, ಇನ್ನೊಂದು ಜಲಸಂಧಿಯನ್ನು ಮುಚ್ಚಲು ಇರಾನ್ ಸಂಸತ್ತು ಕಾರ್ಯತಂತ್ರ ರೂಪಿಸಿದ ಸುಳಿವನ್ನು ನೀಡಿ ಪರೋಕ್ಷ ಬೆದರಿಕೆ ಹಾಕಿದ್ದಾರೆ.



ಬಾಬ್ ಎಲ್-ಮಂಡೆಬ್ ಜಲಸಂಧಿಯನ್ನು ಯಾವೆಲ್ಲಾ ರಾಷ್ಟ್ರಗಳು ಅವಲಂಬಿಸಿವೆ? ಜಾಗತಿಕ ತೈಲ, ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ), ಗೋಧಿ, ಅಕ್ಕಿ ಮತ್ತು ರಸಗೊಬ್ಬರದ ಎಷ್ಟು ಭಾಗ ಈ ಜಲಸಂಧಿಯ ಮೂಲಕ ದಾಟಿ ಹೋಗುತ್ತವೆ? ಯಾವ ರಾಷ್ಟ್ರಗಳೆಲ್ಲಾ ಈ ಜಲಸಂಧಿ ಮೂಲಕ ಅತ್ಯಧಿಕ ಸರಕು ಸಾಗಿಸುತ್ತವೆ? ಇವೇ ಮೊದಲಾದ ಪ್ರಶ್ನೆಗಳನ್ನು ಎಕ್ಸ್ ಪೋಸ್ಟ್‌ನಲ್ಲಿ ಬರೆದಿರುವ ಇರಾನ್ ಸ್ಪೀಕರ್ ಗಾಲಿಬಫ್, ಇರಾನ್ ಕಾರ್ಯತಂತ್ರ ಹೆಣೆದಿರುವ ಕುರಿತು ಸುಳಿವು ನೀಡಿ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಅಣಕಿಸಿದ್ದಾರೆ.

ಪೂರೈಕೆ ವ್ಯತ್ಯಯ ಸೃಷ್ಟಿಸಿದೆ ಇರಾನ್: ಹಾರ್ಮುಜ್ ಜಲಸಂಧಿ ಸಂಪೂರ್ಣ ತೆರೆಯದೆ ಇರಾನ್ ಜಾಗತಿಕ ತೈಲ ಪೂರೈಕೆಯಲ್ಲಿ ಕೃತಕ ವ್ಯತ್ಯಯ ಸೃಷ್ಟಿಸಿದೆ. ಸದ್ಯ ಜಾಗತಿಕ ವ್ಯಾಪಾರದಲ್ಲಿ ವ್ಯತ್ಯಯ ಸೃಷ್ಟಿಸಿದ ಇರಾನ್, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಕ್ಯಾರೇ ಎನ್ನದೆ ಯುದ್ಧ ನಡೆಸುತ್ತಿದೆ. ಫೆ.28ರಂದು ಅಮೆರಿಕ ಮತ್ತು ಇಸ್ರೇಲ್ ಜಂಟಿ ದಾಳಿ ಆರಂಭಿಸಿದಲ್ಲಿಂದ ಹಾರ್ಮುಜ್ ಮುಚ್ಚುವವರೆಗೆ ಯುದ್ಧದ ಮೇಲೆ ಅಮೆರಿಕ ಅಧ್ಯಕ್ಷರ ನಿಯಂತ್ರಣವಿತ್ತು. ಹಾರ್ಮುಜ್ ಮುಚ್ಚಿದ ನಂತರ ಇರಾನ್ ಪ್ರಾಬಲ್ಯ ಮೆರೆದಿದ್ದು, ಮಾನಸಿಕ ಸ್ಥೈರ್ಯ ಹೆಚ್ಚಿಸಿಕೊಂಡಿದೆ. ಇದರಿಂದ ಅಮೆರಿಕ ಬೆದರಿಕೆಗಳಿಗೆ ಇರಾನ್ ಪ್ರತ್ಯುತ್ತರ ನೀಡುತ್ತಿದೆ. ಇದೀಗ ಇನ್ನೊಂದು ಜಲಸಂಧಿಯನ್ನು ಮುಚ್ಚಿದರೆ ಹಲವು ಆರ್ಥಿಕ ಸಮಸ್ಯೆಗಳನ್ನು ಜಗತ್ತು ಎದುರಿಸಬೇಕಾಗುವ ಸಾಧ್ಯತೆಯಿದೆ.



ಹಾರ್ಮುಜ್-ಬಾಬ್ ನಡುವಿನ ಸಂಪರ್ಕ
ಹಾರ್ಮುಜ್ ಮತ್ತು ಬಾಬ್ ಎರಡೂ ಜಲಸಂಧಿಗಳು ಪರಸ್ಪರ ಸಂಪರ್ಕ ಹೊಂದಿವೆ. ➡ಪುಟ ೪

ಭಾರತದ ಮೇಲೆ ನೇರ ಪರಿಣಾಮ?

ಬಾಬ್ ಎಲ್-ಮಂಡೆಬ್ ಜಲಸಂಧಿಯ ಮೂಲಕ ಯುರೋಪ್ ಮತ್ತು ಪಶ್ಚಿಮ ಏಷ್ಯಾ ರಾಷ್ಟ್ರಗಳೊಂದಿಗೆ ಭಾರತ ತನ್ನ ವ್ಯಾಪಾರ ಮತ್ತು ಇಂಧನ ವಹಿವಾಟುಗಳನ್ನು ನಡೆಸುತ್ತದೆ. ಇದರಿಂದ ಇರಾನ್ ಬಾಬ್ ಜಲಸಂಧಿಯನ್ನು ಮುಚ್ಚಿದರೆ ಭಾರತದ ಮೇಲೆ ನೇರ ಪರಿಣಾಮ ಬೀರಲಿದೆ. ಆದರೆ ಹಾರ್ಮುಜ್‌ನಲ್ಲಿ ಭಾರತೀಯ ತೈಲ ಹಡಗುಗಳಿಗೆ ಇರಾನ್ ಅವಕಾಶ ನೀಡಿದ್ದು, ಭಾರತವನ್ನು ಆಪ್ತ ಸ್ನೇಹಿತ ರಾಷ್ಟ್ರವೆಂದು ಇರಾನ್ ಹೇಳಿಕೊಂಡಿದೆ.

ಬಾಬ್ ಜಲಸಂಧಿ ಎಲ್ಲಿದೆ? ಮಹತ್ವ?

50 ಕಿ.ಮೀ. (31 ಮೈಲಿ) ಉದ್ದ ಮತ್ತು 32 ಕಿ.ಮೀ. (20 ಮೈಲಿ) ಅಗಲದ ಈ ಜಲಸಂಧಿ ಕೆಂಪು ಸಮುದ್ರ ಮತ್ತು ಹಿಂದು ಮಹಾಸಾಗರವನ್ನು ಒಂದುಗೂಡಿಸುತ್ತದೆ. ಜಾಗತಿಕ ತೈಲ ಸಾಗಣೆಯ 10ನೇ ಒಂದು ಭಾಗ ಮತ್ತು ಕಾಲು ಭಾಗದ ಕಂಟೇನರ್ ಹಡಗುಗಳು ಇದರ ಮೂಲಕ ಸಾಗುತ್ತವೆ. ಸುಯೆಜ್ ಕಾಲುವೆ ಮೂಲಕ ಯುರೋಪ್-ಏಷ್ಯಾ ರಾಷ್ಟ್ರಗಳು ನಡೆಸುವ ವ್ಯಾಪಾರದಲ್ಲಿ ಬಾಬ್ ಎಲ್-ಮಂಡೆಬ್ ಜಲಸಂಧಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಒಟ್ಟು ಜಾಗತಿಕ ಸಾಗರೋತ್ತರ ವ್ಯಾಪಾರದ ಶೇ.10ರಿಂದ 12ರಷ್ಟು ಭಾಗ ಮಂಡೆಬ್ ಮೂಲಕ ದಾಟುತ್ತದೆ. ಸರಾಸರಿ ದಿನವೊಂದರಲ್ಲಿ 6 ದಶಲಕ್ಷ ಬ್ಯಾರೆಲ್ ತೈಲವನ್ನು ಈ ಜಲಸಂಧಿ ಮೂಲಕ ಸಾಗಿಸಲಾಗುತ್ತದೆ.

ನಾಳೆ ಟ್ರಂಪ್ ಗಡುವು



ಮತ್ತೊಮ್ಮೆ ಅಮೆರಿಕ ಅಧ್ಯಕ್ಷರು ವ್ಯಾಪಾರ ಒಪ್ಪಂದ ಬಲೆ ಬೀಸಿದ್ದಾರೆ. ಹಲವು ರಾಷ್ಟ್ರಗಳೊಂದಿಗೆ ವ್ಯಾಪಾರ ಒಪ್ಪಂದ ಗಡುವು ನೀಡಿ ಯಶಸ್ವಿಯಾದ ಟ್ರಂಪ್ ಇದೀಗ ಅದೇ ತಂತ್ರವನ್ನು ಇರಾನ್ ಮೇಲೆ ಪ್ರಯೋಗಿಸಿದ್ದಾರೆ. ➡ಪುಟ ೪

ಹಿಂದೂ ಧರ್ಮ ಆಚಾರ್ಯ ಸಭಾ ಸಭೆ
28 ರಾಜ್ಯಗಳ ನೂರಾರು ಶ್ರೀಗಳು ಭಾಗಿ

ಸಾಧು ಸಂತರ ಜತೆ ಭಾಗ್ವತ್, ಶಾ ಚರ್ಚೆ



• **ನೆಲಮಂಗಲ (ಬೆಂಗಳೂರು ಗ್ರಾಮಾಂತರ):** ನಗರೂರಿನ ಬಿಜಿಎಸ್ ಎಂಸಿಎಚ್ ಆಸ್ಪತ್ರೆ ಹಾಗೂ ಪಿಯು ಕಾಲೇಜು ಆವರಣದಲ್ಲಿ ಹಿಂದೂ ಧರ್ಮ ಆಚಾರ್ಯ ಸಭಾದಿಂದ ನಡೆದ ಎರಡು ದಿನಗಳ ಸಭೆಯಲ್ಲಿ ದೇಶದ ನೂರಾರು ಸ್ವಾಮೀಜಿಗಳು, ಆರ್‌ಎಸ್‌ಎಸ್ ಸರಸಂಘಚಾಲಕರಾದ ಡಾ.ಮೋಹನ್ ಭಾಗವತ್, ಕೇಂದ್ರ ಗೃಹ ಸಚಿವ ಅಮಿತ್‌ಶಾ ಶನಿವಾರ ಭೇಟಿ ನೀಡಿ ಚರ್ಚೆ ನಡೆಸಿದರು.



28 ರಾಜ್ಯದಿಂದ ಭಾಗಿ: ಎರಡು ದಿನದ ಸಭೆಗೆ ಕರ್ನಾಟಕ, ಗುಜರಾತ್, ತಮಿಳುನಾಡು, ಅಸ್ಸಾಂ, ಉತ್ತರಪ್ರದೇಶ, ಮಧ್ಯಪ್ರದೇಶ, ಬಿಹಾರ, ಕೇರಳ, ಆಂಧ್ರ ಪ್ರದೇಶ, ಪಶ್ಚಿಮ ಬಂಗಾಳ ಸೇರಿದಂತೆ 28 ರಾಜ್ಯದ ಪ್ರಮುಖ ನೂರಾರು ಸ್ವಾಮೀಜಿಗಳು ಭಾಗವಹಿಸಿದ್ದಾರೆ. ಕರ್ನಾಟಕದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಪೇಜಾವರ ಶ್ರೀ ಸೇರಿದಂತೆ ವಿವಿಧ ಮಠಗಳ ಸ್ವಾಮೀಜಿಗಳು ಭಾಗವಹಿಸಿದ್ದರು.

ಅಮಿತ್ ಶಾ ಭೇಟಿ, ಚರ್ಚೆ: ಶುಕ್ರವಾರ ರಾತ್ರಿಯೇ ಬೆಂಗಳೂರಿಗೆ ಆಗಮಿಸಿದ ಕೇಂದ್ರ ಗೃಹ ಹಾಗೂ ಸಹಕಾರಿ ಸಚಿವ ಅಮಿತ್ ಶಾ, ಶನಿವಾರ ಬೆಳಗ್ಗೆ ಸಮಾರಂಭಕ್ಕೆ ಆಗಮಿಸಿದರು. ಮಧ್ಯಾಹ್ನ 2 ಗಂಟೆಯವರೆಗೂ ಹಿಂದೂಧರ್ಮ ಆಚಾರ್ಯ ಸಭಾದ ಸಭೆಯಲ್ಲಿ ಭಾಗವಹಿಸಿ ಸ್ವಾಮೀಜಿಗಳ ಸಲಹೆ ಹಾಗೂ ಸೂಚನೆಗಳನ್ನು ಪಡೆಯುವ ಜತೆ ವಿವಿಧ ವಿಚಾರಗಳ ಬಗ್ಗೆ ಚರ್ಚೆ ಮಾಡಿದರು.

ರಾಜ್ಯದಲ್ಲಿ ಇದೇ ಮೊದಲು

ಬಿಜಿಎಸ್ ಎಂಸಿಎಚ್ ಆಸ್ಪತ್ರೆ ಹಾಗೂ ಕಾಲೇಜು ಆವರಣದಲ್ಲಿ ಹಿಂದೂಧರ್ಮ ಆಚಾರ್ಯ ಸಭಾದಿಂದ ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿತ್ತು. ವೃತ್ತಾಕಾರದಲ್ಲಿ ಸ್ವಾಮೀಜಿಗಳು ಕುಳಿತು ಮಾತನಾಡಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗಿತ್ತು. ರಾಜ್ಯದಲ್ಲಿ ಇದೇ ಮೊದಲ ಬಾರಿ ಇಂತಹ ಸಭೆ ನಡೆದಿದ್ದು, ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳ ಸಹಕಾರದೊಂದಿಗೆ ಅದ್ದೂರಿಯಾಗಿ ನಡೆದಿದೆ.

ಎಲ್‌ಡಿಎಫ್, ಯುಡಿಎಫ್‌ನಿಂದ ಒಳಿತಾಗದು ಎಂದ ಪ್ರಧಾನಿ

ಕೇರಳದಲ್ಲಿ ಎನ್‌ಡಿಎ ಪರ ಅಲೆ

• **ಪಟ್ಟನಂತಿಟ್ಟ:** ಕೇರಳದಲ್ಲಿ ಆಳುವ ಎಲ್‌ಡಿಎಫ್ ನಿರ್ಗಮನದ ಹಾದಿಯಲ್ಲಿದೆ. ಯುಡಿಎಫ್‌ನಿಂದ ಕೇರಳಕ್ಕೆ ಒಳಿತಾಗಲು ಸಾಧ್ಯವಿಲ್ಲ, ಕೇರಳದಲ್ಲೀಗ ಬಿಜೆಪಿ ನೇತೃತ್ವದ ಎನ್‌ಡಿಎ ಅಲೆ ನಿರ್ಮಾಣವಾಗುತ್ತಿದೆ. ಈ ಬಾರಿಯ ಚುನಾವಣೆ ಕೇರಳಕ್ಕೆ ಅತ್ಯಂತ ಪ್ರಯೋಜನಕಾರಿಯಾಗಲಿದೆ ಎಂಬುದಾಗಿ ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ.

ಕೇರಳದ ಜನತೆಗೆ 'ನಮಸ್ಕಾರ' ಎಂದು ಕೈಮುಗಿದ ಮೋದಿಯವರು, 'ತಿರುವಲ್ಲಯುಡೆ ಜನಂಗಳುಡೆ ವಿಶ್ವಾಸಮಾನುಂಜನಂಗಳುಡೆ ಎಟ್ಟವುಮ್‌ವಲಿಯ ಶಕ್ತಿ' (ತಿರುವಲ್ಲದ ಜನತೆಯ ವಿಶ್ವಾಸ ನಮ್ಮ ಅತ್ಯಂತ ದೊಡ್ಡ ಶಕ್ತಿ) ಮಲಯಾಳಂನಲ್ಲಿ ಮಾತು ಆರಂಭಿಸಿದರು. ಅವರು ಇಲ್ಲಿ ಬಿಜೆಪಿಯ ಬೃಹತ್ ಚುನಾವಣಾ ರ್‍ಯಾಲಿ ಉದ್ದೇಶಿಸಿ ಮಾತನಾಡಿದರು. ಕೆಲವು ದಿನಗಳ ಹಿಂದೆ 'ಮೇರಾ ಬೂತ್ ಸಬ್ಸೇ ಮಜಬೂತ್ ಕ್ಯಾಂಪೇನ್'ನ ಭಾಗವಾಗಿ ಬಿಜೆಪಿ ಕಾರ್ಯಕರ್ತರ ಜತೆ ನಡೆಸಿದ ಸಂವಾದ ಉಲ್ಲೇಖಿಸಿದ ಪ್ರಧಾನಿ, ಕೇರಳದಂತಹ ಸಣ್ಣ ರಾಜ್ಯದಲ್ಲೂ 5000 ಶಕ್ತಿ ಕೇಂದ್ರಗಳಿಂದ 1.25 ಲಕ್ಷ ಕಾರ್ಯಕರ್ತರು ಈ ಅಭಿಯಾನದಲ್ಲಿ ಪಾಲ್ಗೊಂಡಿದ್ದಾರೆಂಬ ಅಂಶವನ್ನು ಅಭಿಮಾನದಿಂದ ಹೇಳಿದರು. ➡ಪುಟ ೪



ತಿರುವನಂತಪುರಂನಲ್ಲಿ ನಮೋ ರೋಡ್‌ಶೋ

ತಿರುವಲ್ಲಾದ ರ್‍ಯಾಲಿಯ ಬಳಿಕ ಪ್ರಧಾನಿ ಮೋದಿಯವರು ತಿರುವನಂತಪುರಂಗೆ ಆಗಮಿಸಿ ಸಂಜೆ ಬೃಹತ್ ರೋಡ್‌ಶೋದಲ್ಲಿ ಪಾಲ್ಗೊಂಡರು. ➡ಪುಟ ೪

ಕಾಂಗ್ರೆಸ್‌ಗೆ ಎರಡೂ ಕಡೆ ವಿಜಯ: ಸಿಎಂ



ದುರ್ಗಾದೇವಿ ದರ್ಶನ ಪಡೆದ ಸಿಎಂ ಸಿದ್ದರಾಮಯ್ಯ.

• **ಬಾಗಲಕೋಟೆ:** ಕಾಂಗ್ರೆಸ್ ಸರ್ಕಾರದ ವಿರುದ್ಧ ಅಪಪ್ರಚಾರ ಮಾಡುತ್ತಿರುವ ಬಿಜೆಪಿಯವರಿಗೆ ಸೋಲಿನ ಭಯ ಕಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಬಾಗಲಕೋಟೆಯಲ್ಲಿ ಮಾತನಾಡಿದ ಅವರು, ಬಾಗಲಕೋಟೆ ಉಪಚುನಾವಣಾ ಪ್ರಚಾರ ಕಾರ್ಯ ಉತ್ತಮವಾಗಿ ನಡೆಯುತ್ತಿದ್ದು, ನಿರೀಕ್ಷೆಗೂ ಮೀರಿ ಜನಸ್ಪಂದನೆ ದೊರೆತಿದೆ. ➡ಪುಟ ೪



ಅಭಿವೃದ್ಧಿ ಶೂನ್ಯ ರಾಜ್ಯ ಸರ್ಕಾರ: ಆರ್.ಅಶೋಕ



• **ಬಾಗಲಕೋಟೆ:** ರಾಜ್ಯದ ತೆರಿಗೆದಾರರ ಹಣವನ್ನು ಕಾಂಗ್ರೆಸ್‌ನವರು ವಯನಾಡಿಗೆ ಕೊಡುತ್ತಾರೆ. ಗ್ಯಾರಂಟಿಯಿಂದ ರೈತರು ಉದ್ಧಾರ ಆಗಿದ್ದರೆ ಅವರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಇದೊಂದು ದರೋಡೆ, ರೈತರ ವಿರೋಧಿ ಸರ್ಕಾರವಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಲಿತರ 53 ಸಾವಿರ ಕೋಟಿ ಹಣ ಲೂಟಿ ಮಾಡಿದ ಸರ್ಕಾರವಾಗಿದೆ. ➡ಪುಟ ೪

ಪಾಕ್‌ನಿಂದ ಯುಎಇ ದೊಡ್ಡ ಸಾಲ ವಸೂಲಿ!



• **ಹೊಸದಿಲ್ಲಿ:** ಪಾಕಿಸ್ತಾನಕ್ಕೆ ನೀಡಿದ್ದ 3.5 ಶತಕೋಟಿ ಡಾಲರ್ ಸಾಲವನ್ನು ತಕ್ಷಣ, ಅಂದರೆ ಏಪ್ರಿಲ್‌ನೊಳಗೆ ಮರುಪಾವತಿ ಮಾಡಬೇಕೆಂದು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಗಡುವು ನೀಡಿದೆ. ಸಾಲದ ಹೊರೆಯಲ್ಲಿರುವ ಪಾಕಿಸ್ತಾನಕ್ಕೆ ಇದೀಗ ಮತ್ತೊಂದು ಹೊರೆ ಎದುರಾದಂತಿದೆ. ಮಧ್ಯಪ್ರಾಚ್ಯ ಯುದ್ಧ ವಿಚಾರದಲ್ಲಿ ಪಾಕ್ ಮತ್ತು ಯುಎಇ ಸ್ನೇಹದಲ್ಲಿ ಬಿರುಕು ಮೂಡಿದೆ ಎನ್ನಲಾಗುತ್ತಿದೆ. ಇದೇವೇಳೆ ಇರಾನ್ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳಿಂದ ತನ್ನ ಹಲವು ಅತ್ಯಾಧುನಿಕ ಮೂಲ ಸೌಕರ್ಯಗಳು ಹಾನಿ ಆಗಿರುವುದರಿಂದ ಯುಎಇ ನಷ್ಟ ಅನುಭವಿಸುತ್ತಿದೆ. ➡ಪುಟ ೪

3.5 ಶತಕೋಟಿ ಡಾಲರ್ ಸಾಲ, ಏಪ್ರಿಲ್‌ನೊಳಗೆ ಮರುಪಾವತಿ

ಮರಾಠಿ ಅಥವಾ ಇಂಗ್ಲಿಷ್‌ನಲ್ಲಿ ಟಿಇಟಿ ಬರೆಯಲು ಒತ್ತಾಯ

ಕನ್ನಡ ಭಾಷಿಕ ಶಿಕ್ಷಕರಿಗೆ ಮಹಾ ಅನ್ಯಾಯ

▸ ನಂದಿನಿ ಎನ್.

ದಿಗಂತ ವಿಶೇಷ

• **ಬೆಂಗಳೂರು:** ಸುಪ್ರೀಂ ಕೋರ್ಟ್‌ನ ಆದೇಶದಂತೆ ಮಹಾರಾಷ್ಟ್ರದಲ್ಲಿ 2027ರ ಒಳಗೆ ಎಲ್ಲಾ ಶಿಕ್ಷಕರು ಟಿಇಟಿ (ಶಿಕ್ಷಕರ ಅರ್ಹತಾ ಪರೀಕ್ಷೆ) ಪಾಸಾಗುವುದು ಕಡ್ಡಾಯವಾಗಿದೆ. ಆದರೆ, ಮಹಾರಾಷ್ಟ್ರ ಸರ್ಕಾರ ಒಂದು ಕಡೆ ಪರೀಕ್ಷೆ ಕಡ್ಡಾಯಗೊಳಿಸುತ್ತಿದ್ದರೆ, ಇನ್ನೊಂದೆಡೆ ಅಲ್ಪಸಂಖ್ಯಾತ ಕನ್ನಡ ಭಾಷಿಕ ಶಿಕ್ಷಕರ ಮೇಲೆ ಭಾಷಾ ಅನ್ಯಾಯ ಮಾಡುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ಕರ್ನಾಟಕದಲ್ಲಿ ಮರಾಠಿ ಭಾಷಿಕರಿಗೆ ಮರಾಠಿ ಭಾಷೆಯಲ್ಲೇ ಪ್ರಶ್ನೆಪತ್ರಿಕೆ ನೀಡಲಾಗುತ್ತದೆ. ಆದರೆ, ಮಹಾರಾಷ್ಟ್ರದಲ್ಲಿ ಕನ್ನಡ ಭಾಷಿಕರಿಗೆ ಮರಾಠಿ ಅಥವಾ ಇಂಗ್ಲಿಷ್‌ನಲ್ಲಿ ಪರೀಕ್ಷೆ ಬರೆಯುವಂತೆ ಒತ್ತಾಯಿಸುತ್ತಿದೆ ಎಂದು ಆದರ್ಶ ಕನ್ನಡ ಬಳಗ ಆಕ್ರೋಶ ವ್ಯಕ್ತಪಡಿಸಿದೆ.

ಪರೀಕ್ಷಾ ಪರಿಷತ್ತು ಅರ್ಜಿ ಸಲ್ಲಿಸುವಾಗ ಕನ್ನಡ ಮಾಧ್ಯಮದ ಆಯ್ಕೆಯನ್ನು ನೀಡುತ್ತದೆ. ಪ್ರತ್ಯಕ್ಷ ಪರೀಕ್ಷೆಯ ಸಮಯದಲ್ಲಿ ಪ್ರಶ್ನೆಪತ್ರಿಕೆಯು ಕೇವಲ ಮರಾಠಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಇರುತ್ತದೆ. ಇದರಿಂದ ಕನ್ನಡ ಮಾಧ್ಯಮದಲ್ಲಿ ಡಿ.ಇಡಿ/ಬಿ.ಇಡಿ ಪೂರೈಸಿದ ಅಭ್ಯರ್ಥಿಗಳಿಗೆ ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತಿದೆ. ➡ಪುಟ ೪



ಕನ್ನಡ ಶಾಲೆ ಅಸ್ತಿತ್ವಕ್ಕೆ ಧಕ್ಕೆ

ಮಹಾರಾಷ್ಟ್ರ ಸರ್ಕಾರದ ಈ ಭಾಷಾ ನೀತಿಯಿಂದಾಗಿ, ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದ ಸಾವಿರಾರು ಯುವಕರ ಭವಿಷ್ಯ ಕತ್ತಲಲ್ಲಿದೆ. ಪದವಿ ಇದ್ದರೂ ಕೇವಲ ಭಾಷೆಯ ತಾಂತ್ರಿಕ ಕಾರಣದಿಂದ ಅವರು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಈ ತಾಂತ್ರಿಕ ಸಮಸ್ಯೆಯಿಂದಾಗಿ ಸಾವಿರಾರು ಶಿಕ್ಷಕರ ವೃತ್ತಿಜೀವನಕ್ಕೆ ಸಂಚಕಾರ ಬಂದಿದ್ದು, ರಾಜ್ಯ ಸರ್ಕಾರ ಈ ಕೂಡಲೇ ಮಧ್ಯ ಪ್ರವೇಶಿಸಿ ಪರಿಹಾರ ನೀಡಬೇಕೆಂದು ಶಿಕ್ಷಕರಿಂದ ಒತ್ತಾಯ ಕೇಳಿಬರುತ್ತಿದೆ.

ಅರ್ಹ ಶಿಕ್ಷಕರು ಲಭ್ಯವಾಗದಿದ್ದರೆ ಮುಂದಿನ ದಿನಗಳಲ್ಲಿ ಮಹಾರಾಷ್ಟ್ರದಲ್ಲಿ ಕನ್ನಡ ಶಾಲೆಗಳು ಮುಚ್ಚುವ ಭೀತಿ ಇದೆ. ಇದು ಗಡಿ ಭಾಗದ ಕನ್ನಡ ಸಂಸ್ಕೃತಿ ಮತ್ತು ಶಿಕ್ಷಣದ ಮೇಲೆ ದೊಡ್ಡ ಹೊಡೆತ ನೀಡಲಿದೆ. ಸರ್ಕಾರ ಕೂಡಲೇ ನಿರ್ಧಾರ ಕೈಗೊಳ್ಳದಿದ್ದರೆ, ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು.

■ **ಸೋಮಶೇಖರ್ ಜಮಶೆಟ್ಟಿ**, ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು (ಮಹಾರಾಷ್ಟ್ರ ಘಟಕ)

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,50,000** (2,50,000) ಅಪರಂಜಿ ಚಿನ್ನ: **1,50,940** (1,50,930) ಆಭರಣ ಚಿನ್ನ: **1,38,350** (1,38,350) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹94.84

ಬಿಜೆಪಿ ವೈಯಕ್ತಿಕ ಟೀಕೆ: ಲಾಡ್




ದಾವಣಗೆರೆ: ಸಿಎಂ ಸಿದ್ದರಾಮಯ್ಯ ಅವರನ್ನು ವೈಯಕ್ತಿಕವಾಗಿ ಟಾರ್ಗೆಟ್ ಮಾಡಿ ಮಾತನಾಡುವುದನ್ನು ಬಿಟ್ಟರೆ ಬಿಜೆಪಿಯವರಿಗೆ ಯಾವುದೇ ಗಂಭೀರವಾದ ವಿಷಯಗಳಿಲ್ಲ ಎಂದು ಸಚಿವ ಸಂತೋಷ್ ಲಾಡ್ ಕಿಡಿಕಾರಿದರು.

ನಗರದಲ್ಲಿ ಶನಿವಾರ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರಕ್ಕೆ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಟೀಕಿಸುವ ಬಿಜೆಪಿಯವರು ಸ್ವಲ್ಪ ಯೋಚನೆ ಮಾಡಬೇಕು. 17 ಬಾರಿ ಬಜೆಟ್ ಮಂಡಿಸಿರುವ ಇಂತಹ ಅನುಭವವಿರುವ ನಾಯಕರು ದೇಶದಲ್ಲೇ ಬೇರೆ ಯಾರೂ ಇಲ್ಲ, ನಾವು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಎಂದೂ ವೈಯಕ್ತಿಕವಾಗಿ ಟೀಕೆ ಮಾಡುವುದಿಲ್ಲ, ಅಂಕಿ-ಅಂಶಗಳನ್ನು ಇಟ್ಟುಕೊಂಡು ಮೋದಿಯವರ ಸಾಧನೆ, ಕಾರ್ಯಕ್ಷಮತೆಯ ಬಗ್ಗೆ ಮಾತನಾಡುತ್ತೇವೆ. ಆದರೆ ಬಿಜೆಪಿಯವರು ಕೇವಲ ಪ್ರಚಾರಕ್ಕಾಗಿ ಸಿದ್ದರಾಮಯ್ಯ ವಿರುದ್ಧ ಮಾತನಾಡುತ್ತಿದ್ದಾರೆ ಎಂದರು.

ನನ್ನ ಕಚೇರಿಯಲ್ಲಿ ಒಂದು ಗಂಟೆ ಇರಲಿ: ಸೋಮಣ್ಣ

ದಾವಣಗೆರೆ: ರಾಜ್ಯ ಕಾಂಗ್ರೆಸ್ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ತಾಂತ್ರಿಕ ವ್ಯವಸ್ಥೆಯ ಬಗ್ಗೆ ಅರಿವಿಲ್ಲ, ಇನ್ನೂ ಹಳೆಯ ಕಾಲದಲ್ಲೇ ಉಳಿದುಬಿಟ್ಟಿದ್ದಾರೆ. ಯಾರಿಗೆ ಕೆಲಸವಿದೆ, ಯಾರಿಗೆ ಕೆಲಸವಿಲ್ಲ ಎಂಬುದರ ಬಗ್ಗೆ ಚರ್ಚಿಸಲು ನಾನು ಸಿದ್ಧನಿದ್ದೇನೆ ಎಂದು ಕೇಂದ್ರ ಸಚಿವ ವಿ. ಸೋಮಣ್ಣ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆ ಮುಗಿದ ಮೇಲೆ ಸಿದ್ದರಾಮಯ್ಯ ನನ್ನ ಕಚೇರಿಯಲ್ಲಿ ಒಂದು ಗಂಟೆ ಇರಲಿ. ನಾನು ಅವರ ಕಚೇರಿಯಲ್ಲಿ ಒಂದು ತಿಂಗಳು ಇರುತ್ತೇನೆ. ಆಗ ಯಾರು ಬುದ್ಧಿವಂತರು ಎಂಬುದನ್ನು ಜನರೇ ತೀರ್ಮಾನಿಸಲಿ ಎಂದು ಅವರು ಇದೇ ವೇಳೆ ಸವಾಲು ಹಾಕಿದರು.

ರಾಮ ಬಾಣ



ಅಭಿವೃದ್ಧಿ ಶೂನ್ಯ ಸರ್ಕಾರ: ಅಶೋಕ



ಪುಟ 1➜ ಹೈಕಮಾಂಡ್‌ಗೆ ನಿಯತ್ತರಾಗಿರಲು ಪ್ರತಿ ತಿಂಗಳು ಹಣ ಕಳುಹಿಸಿ ರಾಜ್ಯದ ಸಾಲದ ಹೊರೆ ಏರಿಸಿದ್ದಾರೆ. ರಾಜ್ಯವನ್ನು ಅಧೋಗತಿಗೆ ತಳ್ಳಿದ್ದಾರೆ ಎಂದರು. ಸಿದ್ದರಾಮಯ್ಯ ಅವರ ನಿಜ ಬಣ್ಣ ಮೈಸೂರಿನಲ್ಲಿ ಗೊತ್ತಾಗಿ ಅಲ್ಲಿನ ಮತದಾರರು ಸೋಲಿಸಿದರು. ಆಗ ಬಾದಾಮಿಗೆ ಓಡಿ ಬಂದರು. ಬಾದಾಮಿ ಕೈಹಿಡಿಯಿತು. ಆದರೆ, ಇಲ್ಲಿಗೂ ಕೈಕೊಟ್ಟು ಓಡಿಹೋದರು. ಈಗ ಮತ್ತೆ ಬಾಗಲಕೋಟೆಗೆ ಬಂದಿದ್ದಾರೆ. ಇಲ್ಲಿಗೂ ಕೈ ಕೊಡುತ್ತಾರೆ ಎಂದು ವ್ಯಂಗ್ಯವಾಡಿದರು.

ಸಿದ್ದರಾಮಯ್ಯ ಆಗ ಚುನಾವಣೆಗೆ ಬಾದಾಮಿಗೆ ಬಂದಿದ್ದರು. ಈಗ ಮತ್ತೆ ಬಂದಿದ್ದಾರೆ. ಬಾದಾಮಿ ಹಾಲು ಕುಡಿದು, ಬಿರಿಯಾನಿ ತಿಂದು ಟಾಟಾ ಬಾಯ್ ಬಾಯ್ ಹೇಳಿದರು. ಇನ್ನು ಎರಡು ವರ್ಷದಲ್ಲಿ ಅಭಿವೃದ್ಧಿಯ ಮಳೆ ಸುರಿಸುತ್ತೇನೆ ಎಂದು ಅವರು ಹೇಳುತ್ತಾರೆ. ಮೂರು ವರ್ಷ ನಿಮ್ಮ ಪಕ್ಷದ ಶಾಸಕರಿದ್ದರೂ ಬಾಗಲಕೋಟೆ ಅಭಿವೃದ್ಧಿ ಏಕೆ ಆಗಲಿಲ್ಲ, ನಿಮ್ಮ ಶಿಷ್ಯ ಏನು ಅಭಿವೃದ್ಧಿ ಮಾಡಿದ್ದಾರೆ ಎಂದರು. ಕ್ಷೇತ್ರದಲ್ಲಿ ಈ ಹಿಂದೆ ಚರಂತಿಮಠ ಅವರ ಅಭಿವೃದ್ಧಿ ಕಾರ್ಯ ಜನರ ಮನಸ್ಸಿನಲ್ಲಿ ಉಳಿದಿದೆ. ಆದ್ದರಿಂದ ಈ ಬಾರಿ ಜನರು ಅವರನ್ನು ಗೆಲ್ಲಿಸಲಿದ್ದಾರೆ ಎಂದರು.

ಅಧಿಕಾರಕ್ಕೆ ಬಂದಾಗಿನಿಂದ ಸಿಎಂ ಪಟ್ಟಕ್ಕಾಗಿ ಗುದ್ದಾಟ ನಡೆದಿದೆ. ಮೂರು ವರ್ಷದಲ್ಲಿ 30 ಹಗರಣಗಳನ್ನು ಮಾಡಿದರು. ವಾಲ್ಮೀಕಿ ಹಗರಣದಿಂದ ಹಿಡಿದು ಗುತ್ತಿಗೆದಾರರ ಶೇ.60ರಷ್ಟು ಕಮಿಷನ್ ಹಗರಣ ನಡೆದಿದೆ. ಲಿಕ್ಕರ್ ಲಾಬಿ ಮಾಡಿ ಸಚಿವರೊಬ್ಬರು ಕೋಟಿ ಕೋಟಿ ಹಣ ಹೊಡೆದು ದೆಹಲಿಗೆ ಕಳಿಸಿದರು. ಮೂರು ವರ್ಷದಲ್ಲಿ ಯಾವುದೇ ಸಾಧನೆ ಮಾಡಲಿಲ್ಲ, ನೀರಾವರಿಗೆ ಹಣ ಇಡಲಿಲ್ಲ, ಆದರೆ, ಕಾಂಗ್ರೆಸ್‌ನವರು ಮಾತ್ರ ಹಣ ಮಾಡಿಕೊಳ್ಳುತ್ತಿದ್ದಾರೆ. ಒಂದು ಡ್ಯಾಮ್ ಕಟ್ಟಲಿಲ್ಲ, ಮೆಡಿಕಲ್ ಕಾಲೇಜು ತರಲಿಲ್ಲ ಎಂದರು. ಕಾಂಗ್ರೆಸ್ ಬಂದ ಮೇಲೆ ಒಂದೇ ಒಂದು ಪಿಎಚ್‌ಸಿಗಳಲ್ಲಿ ವೈದ್ಯರಿಲ್ಲ, ಔಷಧ ಖರೀದಿಗೆ ಹಣವಿಲ್ಲ, ಹಣವಿಲ್ಲದೆ ಮೂರು ವರ್ಷದಲ್ಲಿ ಟೆಂಡರ್ ಕರೆದಿಲ್ಲ, ಅಭಿವೃದ್ಧಿಗೆ ಮಾಡಿದ ಸಾಲವೇ ಜಾಸ್ತಿ. ಸಣ್ಣ ಸಣ್ಣ ಸಮುದಾಯಗಳ ಬಳಿ ಹೋಗಿ ಈಗ ಮತ ಕೇಳುತ್ತಿದ್ದಾರೆ. 20ನೇ ತಾರೀಕಿನ ನಂತರ ಇವರ ಕಥೆ ಏನು ಆಗುತ್ತದೋ ಗೊತ್ತಿಲ್ಲ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಸಿಎಂ ಸ್ಥಾನವನ್ನು ಕಿತ್ತುಕೊಳ್ಳುತ್ತಾರೆ ಎಂದು ವಿವರಿಸಿದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೇನೇಜಿ

- ಕಾಂಗ್ರೆಸ್ಸನ್ನು ನಿರ್ನಾಮ ಮಾಡಲು ಯಾರಿಂದಲೂ ಸಾಧ್ಯವಿಲ್ಲ
- ಮಲ್ಲಿಕಾರ್ಜುನ ಖರ್ಗೆ
- ಸಾಧ್ಯವಿದೆ ಸಾಧ್ಯವಿದೆ, ಮತದಾರರಿಂದ ಮಾತ್ರ, ಸಾಧ್ಯವಿದೆ!

ದಿನ ಭವಿಷ್ಯ

ಮೇಷ ನಿಮ್ಮ ಪಾಲಿಗೆ ಅಚ್ಚರಿಯ ಬೆಳವಣಿಗೆ ಸಂಭವ. ಅದರಿಂದ ಹಿತವೇ ಆಗಲಿದೆ. ಅನ್ಯರ ಜತೆಗಿನ ವೈರವನ್ನು ದೀರ್ಘ ಎಳೆಯಬೇಡಿ.

ವೃಷಭ ಆದಾಯ ಗಳಿಕೆಯ ಹೊಸ ದಾರಿ ತೋರಲಿದೆ. ನಿಮ್ಮ ವ್ಯಕ್ತಿತ್ವ ಇತರರ ಮೆಚ್ಚುಗೆ ಗಳಿಸುವುದು. ವಿವಾಹಿತರ ಪಾಲಿಗೆ ಶುಭ ಬೆಳವಣಿಗೆ.

ಮಿಥುನ ನಿಮ್ಮ ಮೇಲೆ ದೊಡ್ಡ ಜವಾಬ್ದಾರಿ ಬೀಳಲಿದೆ. ಮಾನಸಿಕ ಒತ್ತಡದಿಂದ ನೆಮ್ಮದಿ ಹಾಳು. ಪ್ರೀತಿಯ ಬಿಕ್ಕಟ್ಟು ಶಮನವಾಗದೆ ಅಸಹನೆ. ಧನವ್ಯಯ.

ಕಟಕ ವೃತ್ತಿ ಕ್ಷೇತ್ರದಲ್ಲಿ ನಯವಂಚಕರ ಬಗ್ಗೆ ಎಚ್ಚರವಿರಲಿ. ಕುಟುಂಬದಲ್ಲಿ ಸಮಸ್ಯೆ ಉಂಟಾದೀತು. ಪ್ರೀತಿಯ ವ್ಯವಹಾರದಲ್ಲಿ ಬಿಕ್ಕಟ್ಟು.

ಸಿಂಹ ಭಾವುಕತೆ ನಿಮ್ಮ ವಿವೇಕ ಮರೆಸಬಹುದು. ಸಹೋದರರಿಂದ ಸಮಸ್ಯೆ ಸೃಷ್ಟಿ. ಆಪ್ತ ಸಂಬಂಧ ಕೆಡಲಿದೆ. ನೆರೆಕರೆ ಜತೆ ವೈಷಮ್ಯ ಸಂಭವ.

ಕನ್ಯಾ ಒತ್ತಡದ ಬದುಕಿಂದ ವಿರಾಮ ಪಡೆಯಿರಿ. ಆ ಮೂಲಕ ಮಾನಸಿಕ ನೆಮ್ಮದಿ ಪಡಕೊಳ್ಳಿ. ಯುವಕರು ಪ್ರೇಮದ ತುಡಿತಕ್ಕೆ ಒಳಗಾಗುವಿರಿ.

ತುಲಾ ನಿಮ್ಮ ಗುಣಾತ್ಮಕ ನಡವಳಿಕೆಯಿಂದ ಯಶ. ಜತೆಗೇ ವೇದಾಂತದ ಭಾವ ಆವರಿಸಬಹುದು. ಎಲ್ಲದರಿಂದ ದೂರವಾಗಿ ಬದುಕುವ ತುಡಿತ.

ವೃಶ್ಚಿಕ ಕುಟುಂಬದ ಹಿತಕ್ಕೆ ಹೆಚ್ಚು ಕಾಳಜಿ ವಹಿಸುವಿರಿ. ಉದ್ಯಮಿಗಳು ಇಂದು ಒಂದು ಹೆಜ್ಜೆ ಹಿಂದಿಡಿ. ದಿನದಂತ್ಯಕ್ಕೆ ವೈರಾಗ್ಯ ಭಾವ ಉಂಟಾದೀತು.

ಧನು ವ್ಯಕ್ತಿಯೊಬ್ಬರ ಜತೆ ವಿಶ್ವಾಸಭರಿತ ಬಾಂಧವ್ಯ ಬೆಳೆಯಬಹುದು. ಆದಾಯದಲ್ಲಿ ಹೆಚ್ಚಳ. ಮನೆಯ ಸಮಸ್ಯೆ ಪರಿಹಾರ, ನೆಮ್ಮದಿ.

ಮಕರ ಎಲ್ಲರ ಜತೆ ಮುಕ್ತವಾಗಿ ಬೆರೆಯಿರಿ. ಎಲ್ಲರನ್ನು ಸಂಶಯದಿಂದ ನೋಡಬೇಡಿ. ವಿಶ್ವಾಸ ಮುಖ್ಯ. ಆತ್ಮೀಯರ ಮನ ನೋಯಿಸಬೇಡಿ.

ಕುಂಭ ನಿಮ್ಮ ಶ್ರಮದಿಂದ ಉದ್ಯೋಗದಲ್ಲಿ ಯಶ. ಆರ್ಥಿಕ ಉನ್ನತಿ. ಪ್ರೀತಿಯ ವಿಷಯದಲ್ಲಿ ಎಚ್ಚರದ ಹೆಜ್ಜೆ ಇಡಿ. ಅಪಸ್ವರ ಏಳದಂತೆ ನೋಡಿಕೊಳ್ಳಿ.

ಮೀನ ವೃತ್ತಿ ಒತ್ತಡದಿಂದ ಇಂದು ಮುಕ್ತಿ. ಆಪ್ತರ ಜತೆ ಬೆರೆಯುವ ಅವಕಾಶ. ಶ್ಲಾಘನೀಯ ನಿರ್ವಹಣೆ ತೋರುವಿರಿ. ಖಾಸಗಿ ಚಿಂತೆ ಪರಿಹಾರ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 0,5,7,1

ಡಿಆರ್‌ಡಿಒ ಮಹಾನಿರ್ದೇಶಕ ಡಾ. ಬಿನಯ್‌ಕುಮಾರ್ ದಾಸ್ ಇಂಗಿತ
ದೊಡ್ಡ ಆರ್ಥಿಕ ಶಕ್ತಿ ಭಾರತ

ಬೆಂಗಳೂರು: ಕಳೆದ 50 ವರ್ಷಗಳ ಹಿಂದೆ ರಕ್ಷಣಾ ಕ್ಷೇತ್ರದಲ್ಲಿ ಆಮದು ನಿರಾಕರಣೆಯ ಮೂಲಕ ಸ್ವಾವಲಂಬನೆ ಸಾಧಿಸುವತ್ತ ಮುನ್ನುಗ್ಗುತ್ತಿರುವ ಭಾರತ, ಇದೀಗ ಜಗತ್ತಿನ ಮೂರನೇ ಅತೀ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದ್ದೇವೆ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮಹಾನಿರ್ದೇಶಕ ಡಾ. ಬಿನಯ್ ಕುಮಾರ್ ದಾಸ್ ತಿಳಿಸಿದರು.

ಶನಿವಾರ ಸೆಂಟ್ರಲ್ ಕಾಲೇಜು ಆವರಣದ ಜ್ಞಾನ ಜ್ಯೋತಿಸಭಾಂಗಣದಲ್ಲಿ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ 5ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ನಾನು ಸಣ್ಣ ಊರಿನಿಂದ ಬಂದವನು. ಚಿನ್ನದ ಪದಕದೊಂದಿಗೆ ಐಐಟಿ ಶಿಕ್ಷಣ ಪೂರ್ಣಗೊಳಿಸಿದ್ದೆ, ನನ್ನನ್ನು ಕೊಂಡುಕೊಳ್ಳಲು ಹಲವು ಸಂಸ್ಥೆಗಳು ಮುಂದೆ ಬಂದಿದ್ದವು. ನಾನು ಎಲ್ಲವನ್ನೂ ತಿರಸ್ಕರಿಸಿದೆ ಎಂದರು.

ತಂತ್ರಜ್ಞಾನ ಶ್ರೀಮಂತ ಭಾರತ ನಿರ್ಮಿಸುವುದಕ್ಕಾಗಿ ಸಂಕಲ್ಪ ಮಾಡಿದ್ದೆ, ಇಂದು ನನ್ನೊಂದಿಗೆ ಓದಿದವರ ಬಳಿ ಸಾಕಷ್ಟು ಸಂಪತ್ತಿದೆ. ಆದರೆ ನಾನು ಈ ಭಾರತದ ಸ್ವಾಯತ್ತತೆಯನ್ನು ಕಾಪಾಡಲು ಸಹಾಯ ಮಾಡುತ್ತಿದೆ ಎಂಬುದರಲ್ಲಿ ಅತ್ಯಂತ ಶ್ರೀಮಂತನಾಗಿದ್ದೇನೆ ಎಂದು ತಿಳಿಸಿದರು.

ದೇಶದ ಅಭಿವೃದ್ಧಿಗೆ ಅರ್ಪಿಸುವುದೇ ಶಿಕ್ಷಣದ ಮೌಲ್ಯ: ವಿದೇಶಕ್ಕೆ ತೆರಳಿ ಹುದ್ದೆ ಪಡೆದು, ಹಣ ಗಳಿಸುವುದು ಶಿಕ್ಷಣದ ಮೌಲ್ಯವಲ್ಲ, ನಿಮ್ಮ ಜ್ಞಾನ, ಬುದ್ದಿ, ನಿಷ್ಠೆಯನ್ನು ನಿಮ್ಮ ದೇಶದ ಅಭಿವೃದ್ಧಿಗೆ ಅರ್ಪಿಸುವುದೇ ಶಿಕ್ಷಣದ ನಿಜವಾದ ಮೌಲ್ಯ. ವಿದ್ಯಾರ್ಥಿಗಳು ನಿಮ್ಮ ಬುದ್ದಿಯನ್ನು ಬಳಸಿ, ಸವಾಲುಗಳನ್ನು ಸುಂದರ ಅವಕಾಶಗಳಾಗಿ ಪರಿವರ್ತಿಸಬೇಕು. ಅದೇ ಶಿಕ್ಷಣದ ಮೌಲ್ಯ ಹಾಗೂ ಜೀವನದ ಶಕ್ತಿ ಎಂದು ತಿಳಿಸಿದರು.

ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಮಾತನಾಡಿ, ತ್ವರಿತ ಬದಲಾವಣೆಯ ಈ ಕಾಲಘಟ್ಟವು ತಂತ್ರಜ್ಞಾನ, ನಾವಿನ್ಯತೆ ಮತ್ತು ಜಾಗತಿಕ ಸ್ಪರ್ಧೆಯ ಯುಗವಾಗಿದೆ. ಕೃತಕ ಬುದ್ದಿಮತ್ತೆ, ಡೇಟಾ ಸೈನ್ಸ್ ಸೇರಿದಂತೆ ಹೊಸ ಅವಕಾಶಗಳು ನಿರಂತರವಾಗಿ ಹೊರಹೊಮ್ಮುತ್ತಿವೆ. ನಿಮ್ಮ ಜ್ಞಾನ ಮತ್ತು ಕೌಶಲಗಳನ್ನು ನವೀಕರಿಸಿಕೊಂಡು, ಕಾಲದ ಅಗತ್ಯಗಳಿಗೆ ಅನುಗುಣವಾಗಿ ನಿಮ್ಮನ್ನು ಅಭಿವೃದ್ಧಿಪಡಿಸಿಕೊಳ್ಳುವುದು ಅತ್ಯವಶ್ಯಕ ಎಂದು ತಿಳಿಸಿದರು. ಕುಲಪತಿ ಪ್ರೊ. ರಮೇಶ್ ಬಿ. ಮಾತನಾಡಿ, ಅವಕಾಶಗಳಿಗಾಗಿ ಕಾಯದೆ, ಸ್ವಯಂ ಪರಿಶ್ರಮದ ಮೂಲಕ ಭವಿಷ್ಯವನ್ನು ರೂಪಿಸಿಕೊಳ್ಳಲು ಮುಂದಾಗುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.



ಸುಧಾರಿತ ತಂತ್ರಜ್ಞಾನಗಳು ನಮ್ಮ ರಫ್ತನ್ನು ಹೆಚ್ಚಿಸುತ್ತದೆ

ಭಾರತೀಯ ಧರ್ಮಗ್ರಂಥಗಳಲ್ಲಿ ಪುಷ್ಪಕ ವಿಮಾನವಿದ್ದರೆ ಇಂದು ನಮ್ಮದೇ ಆದ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯಬಲ್ಲ ತೇಜಸ್ ಅನ್ನು ನಾವು ಹೊಂದಿದ್ದೇವೆ. ಅದು ಒಂದು ದಿನ ಯುದ್ಧಮಟ್ಟದಲ್ಲಿ ಬಳಸಲ್ಪಡುವುದೆಂದು ನಾನು ಊಹಿಸಿರಲಿಲ್ಲ. ಇದು ಈ ದೇಶದ ಶಕ್ತಿ. ಬುಲೆಟ್ ಪ್ರೂಫ್ ಜಾಕೆಟ್‌ನಿಂದ ಕ್ಷಿಪಣಿಗಳವರೆಗೆ, ಧನುಷ್‌ನಿಂದ ಪ್ರಚಂಡ್‌ವರೆಗೆ, ಇಂದು ಇಡೀ ಜಗತ್ತಿಗೆ ಸವಾಲು ಹಾಕಿದೆ. ಸುಧಾರಿತ ತಂತ್ರಜ್ಞಾನಗಳು ನಮ್ಮ ರಫ್ತನ್ನು ಹೆಚ್ಚಿಸುತ್ತದೆ ಎಂದು ಡಾ. ಬಿನಯ್ ಕುಮಾರ್ ದಾಸ್ ತಿಳಿಸಿದರು.

37,393 ಜನರಿಗೆ ಪದವಿ

64 ಚಿನ್ನದ ಪದಕ ಒಳಗೊಂಡಂತೆ 71 ವಿದ್ಯಾರ್ಥಿಗಳು ರ್‍ಯಾಂಕ್, 23 ಪಿಎಚ್.ಡಿ ವಿದ್ಯಾರ್ಥಿಗಳು, 7,484 ಸ್ನಾತಕೋತ್ತರ ಪದವಿ, 29,880 ಪದವಿ ವಿದ್ಯಾರ್ಥಿಗಳು ಸೇರಿ 37,393 ಜನರಿಗೆ ಪದವಿ ಪ್ರದಾನ ಮಾಡಲಾಯಿತು.

6 ಜನರಿಗೆ ಗೌರವ ಡಾಕ್ಟರೇಟ್

ಕ್ರೀಡಾಪಟು ಬಿ.ಕೆ. ವೆಂಕಟೇಶ್ ಪ್ರಸಾದ್, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ಶಿಕ್ಷಣ ತಜ್ಞ ಟಿ.ಕೆ. ನಾರಾಯಣಪ್ಪ, ಕ್ರೀಡಾ ಆಡಳಿತಗಾರ ಡಾ. ಕೆ. ಗೋವಿಂದರಾಜ್, ಶಿಕ್ಷಣ ತಜ್ಞ ಡಾ. ಮೋಹನ್ ಆಳ್ವಾ ಮತ್ತು ಉದ್ಯಮಿ ಬಿ.ಎಂ. ಫಾರೂಕ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಯಿತು.

ಶ್ರೀನಿವಾಸ ದಾಸಕರಿಯಪ್ಪ ಪರ ಎಚ್ಡಿಕೆ ಮತಯಾಚನೆ



ದಾವಣಗೆರೆ: ಭ್ರಷ್ಟಾಚಾರದ ಕುರಿತು ಮಾತನಾಡುವ ನೈತಿಕತೆ ಕಾಂಗ್ರೆಸ್ ಪಕ್ಷ ಮತ್ತು ಮುಖ್ಯಮಂತ್ರಿಗಳಿಗೆ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ನಡೆಸಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಎನ್.ಡಿ.ಎ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಪರವಾಗಿ ಶನಿವಾರ ಮತಯಾಚನೆ ವೇಳೆ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಕಾಂಗ್ರೆಸ್ಸಿಗರು ಲೂಟಿ ಮಾಡಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮತದಾರರಿಗೆ ದುಡ್ಡು ಹಂಚುತ್ತಿದ್ದಾರೆ.

ಶಾಮನೂರು ನೋಟು, ಬಿಜೆಪಿಗೆ ಓಟು ಅಂತಾ ನಮ್ಮ ಕಾರ್ಯಕರ್ತರು ಹೇಳುತ್ತಿದ್ದಾರೆ. ಜನರು ಎರಡೂ ಕ್ಷೇತ್ರಗಳಲ್ಲಿ ಕಮಲದ ಹೂವನ್ನು ಅರಳಿಸಬೇಕೆಂಬ ಸಂಕಲ್ಪ ಮಾಡಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ಭ್ರಷ್ಟಾಚಾರದ ಹಣದಿಂದ ಈ ಕ್ಷೇತ್ರದ ಜನರ ಮತವನ್ನು ಗೆಲ್ಲಲು ಸಾಧ್ಯವಿಲ್ಲ. ಹಿಂದುಳಿದ ವರ್ಗಗಳನ್ನು ಮತ ಬ್ಯಾಂಕಾಗಿ ಕಾಂಗ್ರೆಸ್ ಬಳಸಿಕೊಳ್ಳುತ್ತಿದೆ. ಎಂದರು.

ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದಿದೆ: ಸಚಿವ



ದಾವಣಗೆರೆ: ಗ್ಯಾರಂಟಿ ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದರು. ಆದರೆ ಕಾಂಗ್ರೆಸ್ ಸರ್ಕಾರ ನುಡಿದಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಅಭಿವೃದ್ಧಿ ಕಾರ್ಯಗಳಿಗೂ ಹಣ ನೀಡುತ್ತಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆಂದೂ ಕಾಣದ ರೀತಿಯಲ್ಲಿ ಪ್ರತಿ ಕ್ಷೇತ್ರದ ಅಭಿವೃದ್ಧಿಗೆ ಶಾಸಕರ ವಿವೇಚನೆಯಡಿ 80 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ವಿಪಕ್ಷ, ಆಡಳಿತದ ಶಾಸಕರಿಗೂ ಅನುದಾನ ಹಂಚಿಕೆ ಮಾಡಲಾಗಿದೆ. ಈ ವರ್ಷ ಪ್ರತಿ ಶಾಸಕರಿಗೂ 25 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ ಎಂದು ಅವರು ಸಮರ್ಥಿಸಿಕೊಂಡರು. ರಾಜ್ಯದಿಂದ 4.50 ಲಕ್ಷ ಕೋಟಿ ರೂ. ತೆರಿಗೆ ಹಣ ಪಡೆಯುತ್ತಿರುವ ಕೇಂದ್ರ ಸರ್ಕಾರ ರಾಜ್ಯಕ್ಕೆ ಹಂಚಿಕೆ ಮಾಡುತ್ತಿರುವುದು ಕೇವಲ 50 ಸಾವಿರ ಕೋಟಿ. ರಾಜ್ಯದಿಂದ ಐವರು ಕೇಂದ್ರ ಸಚಿವರಿದ್ದರೂ ಕರ್ನಾಟಕದ ಹಿತಾಸಕ್ತಿ ಬಗ್ಗೆ ಬಾಯಿಬಿಡುತ್ತಿಲ್ಲ, ಮೇಕೆದಾಟು ಯೋಜನೆಗೆ ಸುಪ್ರೀಂ ಕೋರ್ಟ್ ಅನುಮತಿ ನೀಡಿದ್ದರೂ, ಕೇಂದ್ರ ಸರ್ಕಾರ ಒಪ್ಪಿಗೆ ಕೊಡುತ್ತಿಲ್ಲ ಎಂದು ಆರೋಪಿಸಿದರು.

ಕಾಂಗ್ರೆಸ್‌ಗೆ ಎರಡೂ ಕಡೆ ವಿಜಯ: ಸಿಎಂ

ಪುಟ 1➜ ಎಲ್ಲೆಡೆ ಅಭೂತಪೂರ್ವ ಸ್ಪಂದನೆ ಸಿಗುತ್ತಿದ್ದು, ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲಿದೆ ಎಂದು ಸಿದ್ದರಾಮಯ್ಯ ಭರವಸೆ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರದ ಕಾರ್ಯಕ್ರಮಗಳು ಬಡವರಿಗಾಗಿ ರೂಪಿಸಲ್ಪಟ್ಟಿವೆ. ಎಲ್ಲಾ ಜಾತಿ, ಧರ್ಮ, ಭಾಷೆಗಳಿಗೆ ಸೇರಿದ ಜನರಿಗೆ ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ. ಬಿಜೆಪಿ ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿದ್ದು, ಗ್ಯಾರಂಟಿ ಯೋಜನೆಗಳು ಸಾಮಾಜಿಕ ಬದ್ಧತೆಯನ್ನು ಒದಗಿಸುವ ಹೂಡಿಕೆಯಾಗಿದೆ. ಇದೂ ಕೂಡ ಅಭಿವೃದ್ಧಿಯೇ ಎಂದರು.

ಅಭಿವೃದ್ಧಿ ಕುಂಠಿತವಾಗಿಲ್ಲ: ಸಾಮಾಜಿಕ ಯೋಜನೆಗಳನ್ನು ಘೋಷಿಸಿದ ಮೇಲೆ ಬಿಜೆಪಿ ಅಂದಿನಿಂದ ಇಂದಿನವರೆಗೆ ವಿರೋಧಿಸುತ್ತಲೇ ಬಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಸೇರಿದಂತೆ ಎಲ್ಲರೂ ರಾಜ್ಯ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಹೇಳಿಕೊಂಡು ಬಂದಿದ್ದಾರೆ. ಕಳೆದ ಮೂರು ವರ್ಷಗಳಿಂದ ಗ್ಯಾರಂಟಿ ಯೋಜನೆಗಳು ಜಾರಿಯಲ್ಲಿದ್ದು 24/3/2026 ವರೆಗೆ 1.31 ಲಕ್ಷ ಕೋಟಿ ರೂ.ಗಳನ್ನು ಗ್ಯಾರಂಟಿಗಳಿಗೆ ಕೊಟ್ಟಿದ್ದೇವೆ. ನೀರಾವರಿ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರು, ಪೊಲೀಸ್ ವ್ಯವಸ್ಥೆಗೆ ವೆಚ್ಚ, ಎಸ್‌ಸಿ ಎಸ್‌ಪಿ/ಟಿಎಸ್‌ಪಿ ಯೋಜನೆಗಳಿಗೆ ವೆಚ್ಚ ಮಾಡುವುದನ್ನು ಕಡಿಮೆ ಮಾಡಿಲ್ಲ, ಕಳೆದ ವರ್ಷದಲ್ಲಿ 42,000 ಕೋಟಿ ರೂ. ವೆಚ್ಚ ಮಾಡಿದ್ದರೆ, ಈ ವರ್ಷ 44,000 ಕೋಟಿಗೂ ಹೆಚ್ಚು ವೆಚ್ಚ ಮಾಡಲಾಗುತ್ತಿದೆ. ಅಭಿವೃದ್ಧಿ ಕೆಲಸಗಳ್ಯಾವುವೂ ಕುಂಠಿತವಾಗಿಲ್ಲ ಎಂದರು. ಸಾಲ ಮಾಡಿದ್ದೇನೆ ಎನ್ನುವುದು ಹಸಿ ಸುಳ್ಳು. ಆರ್ಥಿಕ ಹೊಣೆಗಾರಿಕೆ ಕಾಯ್ದೆಯ ಮಾನದಂಡಗಳನ್ನು ಮೀರಿಲ್ಲ, ಆರ್ಥಿಕ ಶಿಸ್ತು ಕಾಪಾಡಿಕೊಂಡಿದ್ದೇವೆ ಎಂದರು.

ನಾವು ಕೇಂದ್ರ ಸರ್ಕಾರಕ್ಕಿಂತ ಉತ್ತಮ ಸ್ಥಿತಿಯಲ್ಲಿದ್ದೇವೆ. ಕೇಂದ್ರ ಸರ್ಕಾರದ ಜಿಡಿಪಿ 7.14% ಬೆಳವಣಿಗೆ ಇದೆ. ಕರ್ನಾಟದ ಜಿಡಿಪಿ 8.1% ಇದೆ. ಇವೆರಡರಲ್ಲಿ ಯಾವುದು ಹೆಚ್ಚು ಎಂದು ಮುಖ್ಯಮಂತ್ರಿಗಳು ಪ್ರಶ್ನಿಸಿದರು.

ಕೇಂದ್ರಕ್ಕಿಂತ ಉತ್ತಮ: ಕರ್ನಾಟಕದ ಜಿಡಿಪಿ ಬೆಳವಣಿಗೆ ಕೇಂದ್ರ ಸರ್ಕಾರಕ್ಕಿಂತ ಉತ್ತಮವಾಗಿದೆ. ಮನಮೋಹನ್ ಸಿಂಗ್ ಪ್ರಧಾನಿಗಳಾಗಿದ್ದಾಗ ಹಾಗೂ ಸ್ವಾತಂತ್ರ್ಯ ಬಂದಾಗಿನಿಂದ ಸೇರಿಸಲ್ಪಟ್ಟ ಒಟ್ಟು ಸಾಲ 53 ಲಕ್ಷದ 11000 ಕೋಟಿ ಸಾಲ ಇತ್ತು. 2026 ಮಾರ್ಚ್‌ವರೆಗೆ 218 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರು 12 ವರ್ಷಗಳಲ್ಲಿ 165 ಲಕ್ಷ ಕೋಟಿ ರೂ. ಸಾಲ ಮಾಡಿದ್ದಾರೆ ಎಂದರು.

ಬಿಜೆಪಿಯಿಂದ ಉಚ್ಚಾಟಿತರಾಗಿರುವ ಶಾಸಕ ಯತ್ನಾಳ್ ಅವರನ್ನು ಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವ ಬಿಜೆಪಿ ಹೀನಾಯ ಸ್ಥಿತಿಗೆ ತಲುಪಿದೆ. ಬಿಜೆಪಿಯವರು ಸೋಲಿನ ಭಯದಿಂದ ಇಂತಹ ಕೃತ್ಯಕ್ಕೆ ಕೈಹಾಕಿದ್ದಾರೆ. ಪ್ರತಿಪಕ್ಷಗಳ ಹೇಳಿಕೆಗಳಿಗೆ ನಾವು ಪ್ರತಿಕ್ರಿಯಿಸುವುದಿಲ್ಲ, ಸರ್ಕಾರದ ಕೆಲಸವನ್ನು ಜನರ ಮುಂದಿಡುತ್ತೇವೆ ಎಂದರು.

ಪಾಕ್‌ನಿಂದ ಯುಎಇ ದೊಡ್ಡ ಸಾಲ ವಸೂಲಿ!

ಪುಟ 1➜ ಇದರಿಂದ ಪಾಕ್‌ಗೆ ನೀಡಿದ ದೊಡ್ಡ ಸಾಲವನ್ನು ತಕ್ಷಣ ಮರುಪಾವತಿ ಮಾಡುವಂತೆ ಒತ್ತಡ ಹೇರಿದ್ದು, ಪಾಕ್‌ಗೆ ಸಂಕಷ್ಟ ಎದುರಾಗಿದೆ. ಸಾಲದ ಮೊತ್ತವನ್ನು ತಕ್ಷಣ ಮರುಪಾವತಿಸಲು ಯುಎಇ ಒತ್ತಡ ಹಾಕಿರುವ ವರದಿಯನ್ನು ಪಾಕ್ ಸಂಪುಟದ ಹಿರಿಯ ಸಚಿವರೊಬ್ಬರು ದೃಢೀಕರಿಸಿದ್ದಾರೆ.

ಆಯ್ದ ಪತ್ರಕರ್ತರ ಗುಂಪನ್ನು ಕರೆದು ಪತ್ರಿಕಾಗೋಷ್ಠಿ ನಡೆಸಿದ ಪಾಕಿಸ್ತಾನ ಸರ್ಕಾರ, ಸಾಲದ ಮೊತ್ತವನ್ನು ಸಂಪೂರ್ಣ ಮರುಪಾವತಿ ಮಾಡುವುದಾಗಿ ಹೇಳಿಕೆ ನೀಡಿದೆ. ಸಾಲದ ಒಂದು ದೊಡ್ಡ ಭಾಗವನ್ನು ಹೂಡಿಕೆಯಾಗಿ ಪರಿವರ್ತಿಸಲು ಯುಎಇ ಜತೆ ತೆರೆಮರೆಯಲ್ಲಿ ಪಾಕ್ ಮಾತುಕತೆ ನಡೆಸುತ್ತಿದೆ ಎಂಬ ಮಾಹಿತಿಯನ್ನು ಮೂಲಗಳು ನೀಡಿವೆ.

ಐಎಂಎಫ್ ಯೋಜನೆ ಅನ್ವಯ ನೀಡಿದ್ದ ಸಾಲ: ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಯೋಜನೆಯ ಅನ್ವಯ ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನ್ (ಎಸ್‌ಬಿಪಿ)ನಲ್ಲಿ ಒಟ್ಟು 12.5 ಶತಕೋಟಿ ಡಾಲರ್ ಹಣ ಠೇವಣಿ ಮಾಡಲು ಯುಎಇ, ಸೌದಿ ಅರೇಬಿಯಾ ಮತ್ತು ಚೀನಾ ಒಪ್ಪಿಕೊಂಡಿದ್ದವು. ಈ ಯೋಜನೆ 2027ರ ಸೆಪ್ಟೆಂಬರ್‌ನಲ್ಲಿ ಮುಕ್ತಾಯ ಆಗುವುದಿದೆ. ಪಾಕಿಸ್ತಾನ ಇನ್ನೆರಡು ವರ್ಷ ಗಡುವು ವಿಸ್ತರಣೆಗೆ ಮನವಿ ಮಾಡಿದ್ದರೂ ಯುಎಇ ಒಪ್ಪಿರಲಿಲ್ಲ.

ಮೂರು ಕಂತುಗಳಲ್ಲಿ ಸಾಲ ಮರುಪಾವತಿ? ಮೂರು ಕಂತುಗಳಲ್ಲಿ ಅಂದರೆ, ಏ.11, ಏ.17 ಹಾಗೂ ಏ.23ರಂದು ಸಾಲ ಮರುಪಾವತಿಸಲು ದಿನ ನಿಗದಿಪಡಿಸಲಾಗಿದೆ. ಅಮೆರಿಕದ ಸೆಂಟ್ರಲ್ ಬ್ಯಾಂಕ್ ಖಾತೆಯಲ್ಲಿರುವ 16.4 ಶತಕೋಟಿ ಡಾಲರ್ ವಿದೇಶಿ ವಿನಿಮಯ ಮೀಸಲು ಹಣವನ್ನು ಹಿಂಪಡೆದು, ಸಾಲ ವಾಪಸಾತಿ ಮಾಡಲಿದೆ ಎಂದು ಮೂಲಗಳು ತಿಳಿಸಿವೆ.

ಹಳೆಯ ಸಾಲ ವಾಪಸಾತಿಗೆ ಸಕಾಲ: ಒಟ್ಟು 3.5 ಶತಕೋಟಿ ಡಾಲರ್ ಸಾಲದ ಮೊತ್ತದಲ್ಲಿ 450 ದಶಲಕ್ಷ ಡಾಲರ್‌ನ್ನು ಪಾಕಿಸ್ತಾನ 1996-97ರಲ್ಲೇ ಯುಎಇಯಿಂದ 1 ವರ್ಷದ ಸಾಲವಾಗಿ ಪಡೆದಿತ್ತು. ಆದರೆ ಕಳೆದ ಮೂರು ದಶಕಗಳಿಂದ ಮರುಪಾವತಿ ಮಾಡಿರಲಿಲ್ಲ.

ಮಾದಕವಸ್ತು ಸೇವನೆ: 17 ಜನ ಬಂಧನ

ಕೊಳ್ಳೇಗಾಲ: ತಾಲೂಕಿನ ಮಧುವನಹಳ್ಳಿ ಹೊರವಲಯದ ರೆಸಾರ್ಟ್‌ನಲ್ಲಿ ಮಾದಕವಸ್ತುಗಳ ಪಾರ್ಟಿ ನಡೆದಿದ್ದು, ರೌಡಿ ಶೀಟರ್ ಸೇರಿದಂತೆ 17 ಮಂದಿಯನ್ನು ಪೊಲೀಸರು ವಶಕ್ಕೆ ಪಡೆದ ಘಟನೆ ಜರುಗಿದೆ. ಮಧುವನಹಳ್ಳಿ ಹೊರವಲಯದ ಹಾರವನಪುರ (ಲಕ್ಷ್ಮೀಪುರ) ವ್ಯಾಪ್ತಿಯಲ್ಲಿ ಗುತ್ತಿಗೆದಾರ ಫಯಾಜ್ ಖಾನ್ ಎಂಬುವರಿಗೆ ಸೇರಿದ ಫ್ಲೋರ ಫಾರ್ಮ್ ಹೌಸ್‌ನಲ್ಲಿ ರೌಡಿ ಶೀಟರ್ ಜಹೀರ್ ಖಾಲು ಎನ್ನುವರ ಹುಟ್ಟುಹಬ್ಬದ ಹಿನ್ನೆಲೆ ಡ್ರಗ್ಸ್ ಸೇವನೆ ಮಾಡಿದ್ದ ಜಹೀರ್ ಸೇರಿದಂತೆ 17 ಮಂದಿಯನ್ನು ವಶಕ್ಕೆ ಪಡೆದರು. ಇವರಿಂದ 17 ಚರಸ್ ಉಂಡೆಗಳು, 43.24 ಗ್ರಾಂ.ನಷ್ಟು ಬ್ರೌನ್ ಕಲರ್ ಪೌಡರ್, 1.40 ಗ್ರಾಮ್ ಸಣ್ಣ ಸಣ್ಣ ಬೇರುಗಳು, 6.26 ವೈಟ್ ಪೌಡರ್, 22.54 ಗ್ರಾಮ್ ನಷ್ಟು ಲೈಟ್ ಬ್ರೌನ್ ಕಲರ್ ಕ್ರಿಸ್ಟಲ್ ಪೌಡರ್‌ನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿಗಳಾದ ಜಹೀರ್ ಖಾಲು, ಉಮೇರ್ ಖಾನ್, ಶೇಖ್ ಮೆಹಬೂಬ್, ನಿಶಾರ್ ಖಾನ್ ಎಂಬುರನ್ನು ಬಂಧಿಸಿದ್ದಾರೆ.

ಹಾರ್ಮುಜ್-ಬಾಬ್ ನಡುವಿನ ಸಂಪರ್ಕ



ಪುಟ 1➜ ಎರಡೂ ಜಲಸಂಧಿಗಳು ಪರಸ್ಪರ ಸಂಪರ್ಕ ಹೊಂದಿವೆ ಎಂಬುದು ಪ್ರಮುಖವಾದ ಅಂಶವಾಗಿದೆ. ಏಕೆಂದರೆ ಹಾರ್ಮುಜ್ ದಾಟಿಹೋಗುವ ಹೆಚ್ಚಿನ ಸರಕು ಹಡಗುಗಳು ಬಾಬ್ ಮೂಲಕವೂ ಹಾದುಹೋಗುತ್ತವೆ. ಇದರಿಂದ ಈಗಾಗಲೇ ಹಾರ್ಮುಜ್ ಮುಚ್ಚಲಾಗಿದ್ದು, ಬಾಬ್ ಜಲಸಂಧಿ ಮುಚ್ಚುವುದರಿಂದ ಇರಾನ್ ರಾಜತಾಂತ್ರಿಕ ಹಿಡಿತವನ್ನು ಸಾಧಿಸಲಿದೆ.

ನಾಳೆ ಟ್ರಂಪ್ ಗಡುವು



ಪುಟ 1➜ ಏ.6ರೊಳಗೆ ನಮ್ಮೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಿ ಅಥವಾ ಹಾರ್ಮುಜ್ ತೆರೆಯಿರಿ. ಇಲ್ಲದಿದ್ದರೆ ನೇರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಹೊಸ ಗಡುವಿನೊಂದಿಗೆ ಇರಾನ್‌ಗೆ ಎಚ್ಚರಿಕೆ ನೀಡಿದ್ದಾರೆ. ಸಮಯ ಮೀರಿ ಹೋಗುತ್ತಿದೆ, ಇರಾನ್ ಬಳಿ ಕೇವಲ 48 ಗಂಟೆ ಉಳಿದಿದೆ. 48 ಗಂಟೆಗಳೊಳಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಿ ಅಥವಾ ಹಾರ್ಮುಜ್ ತೆರೆಯಲಿ. ದೇವರಿಗೆ ಜಯವಾಗಲಿ ಎಂದು ಟ್ರಂಪ್ ಟ್ರುತ್ ಸೋಷಿಯಲ್‌ನಲ್ಲಿ ಬರೆದಿದ್ದಾರೆ.

ಕೇರಳದಲ್ಲಿ ಎನ್‌ಡಿಎ ಪರ ಅಲೆ

ಪುಟ 1➜ ಈ ಸಂವಾದದ ವೇಳೆ ಕೇರಳದ ಮತದಾರರು ಈ ಬಾರಿ ಆಳುವ ಎಡರಂಗವನ್ನು ಅಧಿಕಾರದಿಂದ ಇಳಿಸಲು ನಿರ್ಧರಿಸಿರುವುದು ಮತ್ತು ಬದಲಾವಣೆಯೊಂದರ ಪರವಾಗಿರುವುದು ಸ್ಪಷ್ಟಗೊಂಡಿತು. ವಿರೋಧಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ರಾಜ್ಯಕ್ಕೆ ಒಳಿತುಂಟುಮಾಡಲು ಸಾಧ್ಯವಿಲ್ಲ. ಯಾಕೆಂದರೆ ಎಡರಂಗ ಮತ್ತು ಯುಡಿಎಫ್‌ಗಳು ಅದಲುಬದಲಾಗಿ ದಶಕಗಳ ಕಾಲ ರಾಜ್ಯವನ್ನು ಆಳಿದರೂ ಕೇರಳಕ್ಕೆ ನ್ಯಾಯ ನೀಡಲು ವಿಫಲವಾಗಿವೆ. ತಮ್ಮ ಅಡ್ಜಸ್ಟ್‌ಮೆಂಟ್ ರಾಜಕೀಯದಿಂದ ಕೇರಳದ ಅಭಿವೃದ್ಧಿಗೆ ವಂಚನೆ ಎಸಗಿದ್ದು ಸ್ಪಷ್ಟವಾಗಿದೆ ಎಂದರು.

ಕೇಂದ್ರದಿಂದ ಕೇರಳಕ್ಕೆ ನೆರವು: ಕೇರಳದಲ್ಲಿ ಬಿಜೆಪಿ ಸರಕಾರ ಇಲ್ಲದೆ ಇದ್ದರೂ ಕೇಂದ್ರ ಸರಕಾರವು ಕೇರಳಕ್ಕೆ ತುಂಬು ನೆರವು ನೀಡಿದ್ದು, ಹಿಂದೆಂದೂ ಕಾಣದ ರೀತಿಯಲ್ಲಿ ರಸ್ತೆ, ರೈಲ್ವೆಯಂತಹ ಅನೇಕ ಮೂಲಸೌಕರ್ಯಗಳನ್ನು ಒದಗಿಸಿದೆ. ಕೇಂದ್ರದ ಬೆಂಬಲದಿಂದ ರಾಜ್ಯವು ಅನೇಕ ಲಾಭಗಳನ್ನು ಗಳಿಸಿದೆ. ಕೇರಳದಲ್ಲಿ ಹಿಂದೆಯೂ ಬಿಜೆಪಿ ಸರಕಾರ ಇರಲಿಲ್ಲ, ಆದರೆ ಬಿಜೆಪಿ ಮಾತ್ರ ಕೇರಳದ ಅಭಿವೃದ್ಧಿಗೆ ನಿರಂತರ ನೆಲೆಯಲ್ಲಿ ಬೆಂಬಲವಿತ್ತಿದೆ. ಹಿಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ನೀಡಿದ್ದಕ್ಕಿಂತ 5 ಪಟ್ಟು ಹೆಚ್ಚಿನ ಅನುದಾನಗಳನ್ನು ತಮ್ಮ ಸರಕಾರ ಕೇರಳಕ್ಕೆ ನೀಡಿದೆ ಎಂದು ಬೊಟ್ಟು ಮಾಡಿದರು.

ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಕ್ರೈಸ್ತ ಜನಸಂಖ್ಯೆ ಇದ್ದು, ಅವರೆಲ್ಲರೂ ಅಭಿವೃದ್ಧಿಯ ಲಾಭ ಪಡೆದಿದ್ದಾರೆ. ಇದಕ್ಕೆ ಗೋವಾ ರಾಜ್ಯವೇ ಉದಾಹರಣೆ ಎಂದು ಮೋದಿಯವರು ಎತ್ತಿತೋರಿದರು. ಈ ಮೂಲಕ ಅವರು ಬಿಜೆಪಿ ಕ್ರೈಸ್ತ ವಿರೋಧಿ ಎಂದು ಬಿಂಬಿಸಲು ಯುಡಿಎಫ್ ನಡೆಸುತ್ತಿರುವ ಯತ್ನಕ್ಕೆ ತಿರುಗೇಟು ನೀಡಿದರು. ಕೇರಳದಲ್ಲಿ ಕ್ರೈಸ್ತರು ದೊಡ್ಡ ಪ್ರಮಾಣದಲ್ಲಿ ಬಿಜೆಪಿಯನ್ನು ಬೆಂಬಲಿಸಲು ಮುಂದಾಗಿರುವುದರಿಂದ ಆತಂಕಿತ ಕಾಂಗ್ರೆಸ್ ಬಿಜೆಪಿ ಕ್ರೈಸ್ತ ವಿರೋಧಿ ಎಂದು ಪ್ರಚಾರ ನಡೆಸುತ್ತಿರುವುದಿಲ್ಲಿ ಉಲ್ಲೇಖನೀಯ.

ಕೇರಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದ್ದೇ ಆದರೆ ಮೀನುಗಾರರ ಸಮಸ್ಯೆ ಸೇರಿದಂತೆ ಜನರ ಅನೇಕ ಸಮಸ್ಯೆಗಳಿಗೆ ಪರಿಹಾರ ಲಭಿಸಲಿದೆ. ಕೇರಳದಲ್ಲಿ ರಾಷ್ಟ್ರೀಯ ಹೆದ್ದಾರಿಗಳು, ರೈಲ್ವೆ ಅಭಿವೃದ್ಧಿ ಮತ್ತು ಕೊಟ್ಟಾಯಂಗೆ ವಂದೇ ಭಾರತ್ ಸೇವೆಗಳನ್ನು ಒದಗಿಸಿರುವುದು ಸೇರಿದಂತೆ ಅನೇಕ ಮಹತ್ವದ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಒದಗಿಸಿರುವುದನ್ನು ಅವರು ಪ್ರಸ್ತಾಪಿಸಿದರು.

ಶಬರಿಮಲೆಗೆ ಪ್ರಸ್ತಾಪಿಸಲಾಗಿರುವ ಶಬರಿ ರೈಲ್ವೆ ಯೋಜನೆಯಿಂದ ಶಬರಿಮಲೆಗೆ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ಮತ್ತು ಇಲ್ಲಿನ ಆರ್ಥಿಕ ಅಭಿವೃದ್ಧಿಗೂ ನೆರವಾಗಲಿದೆ. ಈ ಯೋಜನೆಯಿಂದ ಪ್ರಯಾಣಿಕರ ಸಂಚಾರ, ಮಾರುಕಟ್ಟೆ ಒದಗಿಸುವಿಕೆ, ಯುವಜನರಿಗೆ ಉದ್ಯೋಗಗಳನ್ನು ಸೃಷ್ಟಿಸಲು ನೆರವಾಗಲಿದೆ. ಆದರೆ ಪ್ರಸಕ್ತ ರಾಜ್ಯ ಸರಕಾರ ಇಂತಹ ಯೋಜನೆಗಳ ಜಾರಿಗೆ ಸೂಕ್ತ ಸಹಕಾರ ನೀಡದಿರುವುದು ವಿಷಾದನೀಯ. ಕೇರಳದಲ್ಲಿ ಬಿಜೆಪಿ ಸರಕಾರ ಬಂದಾಗ ಮಾತ್ರ ಅಭಿವೃದ್ಧಿ ಯೋಜನೆಗಳಿಗೆ ಬಲ ಬರುವುದು ಎಂದರು.

ಶಬರಿಮಲೆ ಚಿನ್ನ ಲೂಟಿ: ಶಬರಿಮಲೆ ದೇವಳದಲ್ಲಿ ನಡೆದ ಚಿನ್ನಲೂಟಿ ಹಗರಣವು ಆಘಾತಕಾರಿಯಾಗಿದ್ದು, ಎಲ್‌ಡಿಎಫ್ ಮತ್ತು ಯುಡಿಎಫ್‌ಗಳು ಈ ಹಿಂದೆ ಶಬರಿಮಲೆ ಯಾತ್ರೆಗೆ ಕಳಂಕ ತರಲು ಮುಂದಾಗಿದ್ದರೆ, ಈಗ ನೇರ ದೇವಾಲಯವನ್ನೇ ಗುರಿಯಾಗಿರಿಸಿವೆ. ಎನ್‌ಡಿಎ ಅಧಿಕಾರಕ್ಕೆ ಬಂದದ್ದೇ ಆದರೆ ಇದಕ್ಕೆ ಹೊಣೆಗಾರರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿದೆ ಎಂದು ಭರವಸೆಯಿತ್ತರು. ಈ ಬಾರಿಯ ಚುನಾವಣೆ ಪ್ರಚಾರದಲ್ಲಿ ಮೋದಿಯವರ 2ನೇ ರಾಜ್ಯ ಭೇಟಿ ಇದಾಗಿದ್ದು, ಈ ಹಿಂದೆ ಮಾ.29ರಂದು ಪಾಲಕ್ಕಾಡಿನಲ್ಲಿ ಸಾರ್ವಜನಿಕ ರ್‍ಯಾಲಿ, ತ್ರಿಶೂರ್‌ನಲ್ಲಿ ರೋಡ್‌ಶೋ ನಡೆಸಿದಾಗ ಸಾವಿರಾರು ಜನರು ಪಾಲ್ಗೊಂಡು ಮೋದಿಯವರಿಗೆ ಬೆಂಬಲ ಘೋಷಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ತಿರುವನಂತಪುರಂನಲ್ಲಿ ನಮೋ ರೋಡ್‌ಶೋ

ಪುಟ 1➜ 1.5 ಕಿ.ಮೀ. ಉದ್ದಕ್ಕೂ ಭಾರೀ ಸಂಖ್ಯೆಯಲ್ಲಿ ಸೇರಿದ್ದ ಜನಸಾಗರದತ್ತ ಪ್ರಧಾನಿಯವರು ಕೈಬೀಸಿ, ಕೈಮುಗಿದು ಕೃತಜ್ಞತೆ ಸಲ್ಲಿಸಿದರು.

ಕನ್ನಡ ಭಾಷಿಕ ಶಿಕ್ಷಕರಿಗೆ ಮಹಾ ಅನ್ಯಾಯ

ಪುಟ 1➜ ಭಾಷೆಯ ಈ ತಾಂತ್ರಿಕ ಅಡಚಣೆಯಿಂದಾಗಿ ಅರ್ಹ ಅಭ್ಯರ್ಥಿಗಳು ಅನುತ್ತೀರ್ಣರಾಗುತ್ತಿದ್ದು, ರಾಜ್ಯದಲ್ಲಿ ಕನ್ನಡ ಶಿಕ್ಷಕರ ಕೊರತೆ ಉಂಟಾಗುತ್ತಿದೆ.

ಭರವಸೆಗಳ ಉಲ್ಲಂಘನೆ: 2023ರಲ್ಲಿ ಜತ್ ತಾಲೂಕಿನ ಅಂದಿನ ಶಾಸಕ ವಿಕ್ರಮಸಿಂಹ ಸಾವಂತ್ ಅವರ ನೇತೃತ್ವದಲ್ಲಿ ಶಿಕ್ಷಣ ಕಾರ್ಯದರ್ಶಿಗಳು ಕನ್ನಡದಲ್ಲಿ ಪ್ರಶ್ನೆಪತ್ರಿಕೆ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ, 2026ರ ಪರೀಕ್ಷಾ ವೇಳಾಪಟ್ಟಿಯಲ್ಲಿ ಮತ್ತೆ ಮರಾಠಿ ಮಾಧ್ಯಮವನ್ನೇ ಕಡ್ಡಾಯಗೊಳಿಸಲಾಗಿದೆ. ಈ ಕುರಿತು ರಾಜ್ಯ ಸರ್ಕಾರದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೂಡ ಮಹಾರಾಷ್ಟ್ರದ ಶಿಕ್ಷಣ ಸಚಿವರು ಮತ್ತು ಕಾರ್ಯದರ್ಶಿಗಳಿಗೆ ಪತ್ರ ಬರೆದು ಅಲ್ಪಸಂಖ್ಯಾತರ ಹಿತರಕ್ಷಣೆ ಮಾಡುವಂತೆ ವಿನಂತಿಸಿದೆ. ಆದರ್ಶ ಕನ್ನಡ ಬಳಗವು ಕಳೆದ ಎರಡು ತಿಂಗಳ ಹಿಂದೆ ನೀಡಿದ ಪತ್ರಕ್ಕೂ ಈವರೆಗೆ ಯಾವುದೇ ಸ್ಪಂದನೆ ಸಿಕ್ಕಿಲ್ಲ.

ಅಲ್ಪಸಂಖ್ಯಾತರ ಭಾಷಾ ಹಿತಾಸಕ್ತಿ ಕಾಪಾಡುವುದು ಸರ್ಕಾರದ ಸಂವಿಧಾನಿಕ ಕರ್ತವ್ಯವಾಗಿದೆ. ಕರ್ನಾಟಕದಲ್ಲಿ ಮರಾಠಿ ಭಾಷಿಕರಿಗೆ ಸಿಗುವ ಸೌಲಭ್ಯ ಮಹಾರಾಷ್ಟ್ರದ ಕನ್ನಡಿಗರಿಗೆ ಏಕೆ ಸಿಗುತ್ತಿಲ್ಲ? ಪರೀಕ್ಷಾ ಪರಿಷತ್ತು 2026ರ ಪರೀಕ್ಷೆಯಲ್ಲಿ ತಕ್ಷಣ ಸುಧಾರಣೆ ತರಬೇಕು. ಇಲ್ಲದಿದ್ದರೆ, ಈ ಅನ್ಯಾಯ ಸಹಿಸುವುದಿಲ್ಲ ಎಂದು ಆದರ್ಶ ಕನ್ನಡ ಬಳಗದ ಅಧ್ಯಕ್ಷ ಮಲಿಕಜಾನ್ ಶೇಖ್ ತಿಳಿಸಿದ್ದಾರೆ.

ಕನ್ನಡಿಗರ ಋಣ ಮರೆಯಲಾಗದು: ನಾರಾ ಲೋಕೇಶ್

ಸಿಂಧನೂರು: ಸುಮಾರು ವರ್ಷಗಳ ಹಿಂದೆ ಆಂಧ್ರದಿಂದ ಬಂದು ಕರ್ನಾಟಕದಲ್ಲಿ ನೆಲೆಸಿದ್ದ ಆಂಧ್ರ ಜನತೆಗೆ ಕರ್ನಾಟಕದ ಜನತೆ ಎಲ್ಲ ರೀತಿಯಿಂದಲೂ ಸಹಾಯ, ಸಹಕಾರ ನೀಡಿದ್ದಾರೆ. ಆದ್ದರಿಂದ ಕನ್ನಡಿಗರ ಋಣವನ್ನು ಮರೆಯಲಾಗದು ಎಂದು ಆಂಧ್ರಪ್ರದೇಶದ ಐಟಿ ಮತ್ತು ಶಿಕ್ಷಣ ಇಲಾಖೆ ಸಚಿವ ನಾರಾ ಲೋಕೇಶ್ ಹೇಳಿದರು.



ನಗರದ ಕಮ್ಮವಾರಿ ಕಲ್ಯಾಣ ಮಂಟಪದಲ್ಲಿ ಎನ್‌ಟಿ ರಾಮರಾವ್ ಅವರ ಪುತ್ಥಳಿ ಅನಾವರಣಗೊಳಿಸಿ ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕರ್ನಾಟಕದ ಋಣ ಆಂಧ್ರದ ಜನತೆಯ ಮೇಲೆ ಇದೆ ಎಂದು ಹೇಳಿದರು.

ದೇವೇಗೌಡರ ಕುಟುಂಬಕ್ಕೂ ನಮಗೂ ಅವಿನಾಭವ ಸಂಬಂಧವಿದೆ. ಈಗಲೂ ಕೂಡ ಎಚ್.ಡಿ.ಕುಮಾರಸ್ವಾಮಿ ಅವರ ಜೊತೆ ನಾನು ಕೆಲಸ ಮಾಡುತ್ತಿದ್ದೇನೆ. ಅವರ ನಮ್ಮ ನಡುವೆ ಉತ್ತಮ ಬಾಂಧವ್ಯ ಇದೆ ಎಂದು ಕುಮಾರಸ್ವಾಮಿಯನ್ನು ಹೊಗಳಿದರು. ಇನ್ನೂ ಗ್ರೀನ್ ಫೀಲ್ಡ್ ಗ್ರೀನ್ ಕಂಪನಿ ಆಂಧ್ರಪ್ರದೇಶಕ್ಕೆ ಬರಲು ಕುಮಾರಸ್ವಾಮಿಯವರೇ ಕಾರಣ ಎಂದು ನೆನೆದರು.

ನಂತರ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, ಸಿಂಧನೂರು ನಗರಕ್ಕೆ ಸೈನಿಕ ಶಾಲೆ ಮಂಜೂರಾಗಲು ಮಾಜಿ ಸಚಿವ ನಾಡಗೌಡರವರ ಪ್ರಯತ್ನ ಅಮೂಲ್ಯವಾಗಿದೆ. ಈ ಶಾಲೆ ನಗರಕ್ಕೆ ಮಂಜೂರಾಗಿದ್ದು ಸಂತಸದ ಸಂಗತಿಯಾಗಿದೆ. ಈ ಒಂದು ಒಳ್ಳೆಯ ಸುವರ್ಣ ಅವಕಾಶವನ್ನು ಜಿಲ್ಲೆಯ ಜನರು ಸದುಪಯೋಗ ಪಡೆದುಕೊಳ್ಳಬೇಕು. ಹಾಗೆಯೇ ಕ್ಷೇತ್ರದ ಅಭಿವೃದ್ಧಿಯಾಗಬೇಕಾದರೆ ಪಕ್ಷಭೇದ ಮರೆತು ಎಲ್ಲರೂ ಒಗ್ಗಟ್ಟಾಗಿ ಕಾರ್ಯನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಮಾಜಿ ಸಚಿವ ನಾಡಗೌಡ ಮಾತನಾಡಿ, ಈ ನಾಡು ಕಂಡ ಅಪರೂಪದ ನಾಯಕ ಎಚ್.ಡಿ.ಕುಮಾರಸ್ವಾಮಿಯವರು ಸಿಂಧನೂರಿಗೆ ಸೈನಿಕ ಶಾಲೆ ಮಂಜೂರಾಗಲು ಅಗಾಧವಾದ ಪ್ರಯತ್ನ ಮಾಡಿದ್ದಾರೆ. ಅವರ ಪ್ರಯತ್ನದ ಫಲವೇ ಇಂದು ನಗರಕ್ಕೆ ಸೈನಿಕ ಶಾಲೆ ಮಂಜೂರಾಗಿದೆ. ಆದ್ದರಿಂದ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇವೆಂದು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶಾಸಕ ಹಂಪನಗೌಡ ಬಾದರ್ಲಿ, ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಸೇರಿದಂತೆ ಹಲವು ಗಣ್ಯರು ಮಾತನಾಡಿದರು.

ಕೇಂದ್ರ ಸಚಿವ ಕುಮಾರಸ್ವಾಮಿ, ನಾರಾ ಲೋಕೇಶ್‌ಗೆ ಅದ್ದೂರಿ ಸ್ವಾಗತ

ಸಿಂಧನೂರು: ಸೈನಿಕ ಶಾಲೆ ಉದ್ಘಾಟನೆ, ಎನ್‌ಟಿಆರ್ ಅವರ ಪುತ್ಥಳಿ ಅನಾವರಣಗೊಳಿಸಲು ಭಾನುವಾರ ನಗರಕ್ಕಾಗಮಿಸಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಆಂಧ್ರಪ್ರದೇಶದ ಸಚಿವ ನಾರಾ ಲೋಕೇಶ್ ಅವರಿಗೆ ಅದ್ದೂರಿ ಸ್ವಾಗತ ಕೋರಲಾಯಿತು. ನಗರದ ಪಿಡಬ್ಲ್ಯುಡಿ ಕ್ಯಾಂಪ್‌ನಿಂದ ಗಾಂಧಿ ವೃತ್ತದ ಬೃಹತ್ ಬೈಕ್ ರ‍್ಯಾಲಿ ನಡೆಸಲಾಯಿತು. ಗಾಂಧಿ ವೃತ್ತದಿಂದ ಕಮ್ಮವಾರಿ ಕಲ್ಯಾಣ ಮಂಟಪದ ವರೆಗೆ ತೆರೆದ ವಾಹನದಲ್ಲಿ ಕುಮಾರಸ್ವಾಮಿ, ನಾರಾ ಲೋಕೇಶ್ ಅವರು ಭರ್ಜರಿ ರೋಡ್ ಶೋ ನಡೆಸಲಾಯಿತು. ದಾರಿಯುದ್ದಕ್ಕೂ ಆಂಧ್ರ ಜನತೆ ಹಾಗೂ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಹೂವಿನ ಸುರಿಮಳೆಗೈದರು. ಕೇಂದ್ರದ ರಕ್ಷಣಾ ಖಾತೆಯ ರಾಜ್ಯ ಸಚಿವ ಸಂಜಯ್ ಶೇಠ್, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಇತರರು ರೋಡ್ ಶೋನಲ್ಲಿ ಪಾಲ್ಗೊಂಡಿದ್ದರು.



ಕೇಂದ್ರ ರಕ್ಷಣಾ ಇಲಾಖೆ ರಾಜ್ಯ ಖಾತೆ ಸಚಿವ ಸಂಜಯ್ ಶೇಠ್, ಸಚಿವ ಎನ್.ಎಸ್.ಬೋಸರಾಜ್, ವಿಶಾಕ್ ಪಟ್ನಂ ಲೋಕಸಭಾ ಸದಸ್ಯ ಮೋತುಕುಮಿಲ್ಲಿ ಭರತ್, ಸಂಸದರಾದ ಜಿ.ಕುಮಾರ ನಾಯಕ, ರಾಜಶೇಖರ ಹಿಟ್ನಾಳ್, ಮಾಜಿ ಸಂಸದ ಕೆ ವಿರೂಪಾಕ್ಷಪ್ಪ, ರಾಜಾ ವೆಂಕಟಪ್ಪ ನಾಯಕ ಸೇರಿದಂತೆ ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜಕೀಯ ಪಕ್ಷಗಳ ಮುಖಂಡರುಗಳು ಹಾಗೂ ಕಮ್ಮಾ ಸಮಾಜದ ಮುಖಂಡರು, ಯುವ ಮುಖಂಡರು ಉಪಸ್ಥಿತರಿದ್ದರು.

ಕಿರುಸುದ್ದಿ

ಬಿಜೆಪಿ ಅಭ್ಯರ್ಥಿ ವಿರುದ್ಧ ಕರಪತ್ರ, ಹಂಚಿಕೆ

ಬಾಗಲಕೋಟೆ: ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರಿಗೆ ಮತ ಹಾಕಿದರೆ ಜೈಲಿಗೆ ಹೋಗುತ್ತೀರಿ ಎಂಬ ಕರಪತ್ರವನ್ನು ಎನ್‌ಎಸ್‌ಯುಐ ವಿದ್ಯಾರ್ಥಿ ಒಕ್ಕೂಟದವರು ಮೆಡಿಕಲ್ ಕಾಲೇಜಿನಲ್ಲಿ ಕೇಸರಿ ಶಾಲು ಹಾಕಿಕೊಂಡು ಹಂಚುತ್ತಿರುವಾಗ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಬಿವಿವಿ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳಿಗೆ ಕರಪತ್ರ ಹಂಚಿಕೆ ಮಾಡುವಾಗ ಈ ಘಟನೆ ನಡೆದಿದೆ. ಸರ್ಕಾರಿ ವಾಹನದಲ್ಲಿ ಕರಪತ್ರ ಇರುವುದು ಕಂಡು ಬಂದಿದೆ. ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಭಾವಚಿತ್ರ ಇರುವ ಪಾಂಪ್ಲೆಟ್‌ಗಳು ಎನ್‌ಎಸ್‌ಯುಐ ತಲೆಬರಹ ಇರುವ ಪಾಂಪ್ಲೆಟ್. ನೀವು ಬಿಜೆಪಿಯವರ ಮಾತು ಕೇಳಿ ಬಿಜೆಪಿಗೆ ಓಟ್ ಹಾಕಿದರೆ ಜೈಲಿಗೆ ಹೋಗ್ತಿರಾ ಎಂಬ ಕರಪತ್ರ ಹಂಚಿಕೆ ಮಾಡಿದ್ದಾರೆ. ಬಿಜೆಪಿ ತಮ್ಮ ರಾಜಕೀಯಕ್ಕಾಗಿ ನಿಮ್ಮನ್ನು ಬಳಸಿಕೊಳ್ತಾರೆ ಎಂಬ ಕರಪತ್ರಗಳು ಇರುವ ಕಾರು ವಶಕ್ಕೆ ಪಡೆಯಲಾಗಿದೆ. ನಗನಗರ ಸಿಪಿಐ ಕಚೇರಿ ಎದುರು ಬಿಜೆಪಿ ಕಾಂಗ್ರೆಸ್ ಕಾರ್ಯಕರ್ತರ ಜಮಾವಣೆಯಾಗಿ ಸ್ಥಳದಲ್ಲಿ ಗೊಂದಲದ ವಾತಾವರಣ ಉಂಟಾಯಿತು. ಸರ್ಕಾರಿ ವಾಹನದ ಇಬ್ಬರು ಸಿಬ್ಬಂದಿಯನ್ನು ಬಿಜೆಪಿ ಕಾರ್ಯಕರ್ತರು ಹಿಡಿದಿದ್ದಾರೆ. ಚುನಾವಣೆ ಉಸ್ತುವಾರಿ ಅರುಣ್ ಶಹಾಪುರ, ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ, ಶರಣು ತಳ್ಳಿಕೇರಿ, ರಾಜು ನಾಯ್ಕರ, ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು. ಕರ ಪತ್ರ ಹಂಚಿಕೆ ಮಾಡಿದವರ ಮೇಲೆ ಎಫ್‌ಐಆರ್ ದಾಖಲು ಮಾಡುವಂತೆ ಒತ್ತಾಯಿಸಿ ಬಿಜೆಪಿಯವರು ಪ್ರತಿಭಟನೆ ನಡೆಸಿದರು.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	3931	5503
ಕಡಲೆಕಾಳು	1009	5485
ಉದ್ದಿನಬೇಳೆ	14600	14600
ಉದ್ದಿನಕಾಳು	5011	5511
ತೆಂಗಿನಕಾಯಿ	20000	42000
ಧನಿಯಾ	9667	9667
ಒಣ ಮೆಣಸಿನಕಾಯಿ	3301	61121
ಹೆಸರುಕಾಳು	609	7052
ಹುರುಳಿ ಕಾಳು	3109	3625
ಬೆಲ್ಲ	4150	4952
ಜೋಳ	1205	4141
ಮೆಕ್ಕೆಜೋಳ	1411	1862
ಮಡಿಕೆ (ಮಟಕಿ)	8685	13310
ಮೆಂತ್ಯ	731	731
ಈರುಳ್ಳಿ	500	2100
ಆಲೂಗಡ್ಡೆ	1200	1700
ಅಕ್ಕಿ	5415	6374
ಕುಸುಬೆ	5160	5330
ಸಾವೆ/ಸಾವಿ	4110	4220
ಸೋಯಾಬಿನ್	4830	5590
ತೊಗರಿ	1811	4516
ತೊಗರಿ ಬೇಳೆ	11301	11301
ಗೋಧಿ	1409	4906

ಕೆಪಿಎಸ್ ಶಾಲೆ ವಿರೋಧಿಸಿ ಸಮಾವೇಶ

ಧಾರವಾಡ: ಕೆಪಿಎಸ್ ಮ್ಯಾಗ್ನೇಟ್ ಶಾಲೆ ಯೋಜನೆ ವಿರೋಧಿಸಿ ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಒಕ್ಕೂಟದಿಂದ (ಎಐಡಿಎಸ್‌ಒ) ಏ.10ರಂದು ಬೆಳಗ್ಗೆ 10.30ಕ್ಕೆ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯಮಟ್ಟದ ಸಮಾವೇಶ ಹಮ್ಮಿಕೊಂಡಿದೆ.



ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಒಕ್ಕೂಟದ ಜಿಲ್ಲಾ ಕಾರ್ಯದರ್ಶಿ ಶಶಿಕಲಾ ಮೇಟಿ, ಕರ್ನಾಟಕ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಹೆಸರಲ್ಲಿ ರಾಜ್ಯದ 40 ಸಾವಿರ ಸರ್ಕಾರಿ ಶಾಲೆಗಳು ಮುಚ್ಚುವ ಹುನ್ನಾರ ನಡೆಸಿದೆ ಎಂದು ಆಪಾದಿಸಿದಿರು.

ಶಿಕ್ಷಣದ ಹಕ್ಕು ಖಾಸಗಿ ಒಡೆತನಕ್ಕೆ ನೀಡುವ ಉದ್ದೇಶದಿಂದ ಕೆಪಿಎಸ್ ಮ್ಯಾಗ್ನೆಟ್ ಶಾಲಾ ಯೋಜನೆ ಜಾರಿಗೆ ತಂದಿದೆ. ಈ ಯೋಜನೆಗೆ ಏಷಿಯನ್ ಅಭಿವೃದ್ಧಿ ಬ್ಯಾಂಕಿನಿಂದ ರೂ.2,500 ಕೋಟಿ ಸಾಲ ಪಡೆದಿದೆ ಎಂದು ಗಂಭೀರ ಆರೋಪ ಮಾಡಿದರು.

ಶಿಕ್ಷಣ ಸಚಿವರು ರಾಜ್ಯದ ಒಂದೇ ಒಂದು ಶಾಲೆ ಸರ್ಕಾರಿ ಶಾಲೆಯೂ ಮುಚ್ಚಲು ಎಂದು ಮೌಖಿವಾಗಿ ಹೇಳಿದರೂ, ಸರ್ಕಾರಿ ಶಾಲೆ ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ವಿಲೀನಗೊಳಿಸಲು ಶಿಕ್ಷಣ ಇಲಾಖೆ ಮೂಲಕ ಆದೇಶ ಹೊರಡಿಸಿರುವುದು ತೀವ್ರ ಖಂಡಿಸಿದರು.

ಸರ್ಕಾರ ಹಾಗೂ ಶಿಕ್ಷಣ ಸಚಿವರ ಈ ಧೋರಣೆ ಖಂಡಿಸಿ ಮತ್ತು ಸರ್ಕಾರಿ ಶಾಲೆ ವಿಲೀನಗೊಳಿಸುವ ಆದೇಶ ಹಿಂಪಡೆಗೆ ಆಗ್ರಹಿಸಿ, ಏ.10ರಂದು ಹಮ್ಮಿಕೊಂಡ ಸಮಾವೇಶಕ್ಕೆ ಖ್ಯಾತ ಸಾಹಿತಿಗಳು ಮತ್ತು ಶಿಕ್ಷಣ ಚಿಂತಕರು ಸಾಕ್ಷಿಯಾಗಲಿದ್ದಾರೆ ಎಂದರು.

ಸುದ್ದಿ ಗೋಷ್ಠಿಯಲ್ಲಿ ಡಾ.ಲಿಂಗರಾಜ ಅಂಗಡಿ, ವಿನಯ ಚಂದ್ರ, ಸಿಂಧು ಕೌದಿ, ಶರಣಬಸವ ಹೋನಾವರ, ಮಲ್ಲೇಶ ಕಟಗಿ ಇದ್ದರು.

> **ಕಲ್ಯಾಣ ಕರ್ನಾಟಕ ಹಾಗೂ ಗಡಿ ಭಾಗ ಸೇರಿ 300 ಸರ್ಕಾರಿ ಶಾಲೆ ಮುಚ್ಚಲು 700 ಕೋಟಿ ಹಣ ಬಳಸಿ, ಸರ್ಕಾರ ತರಾತುರಿಯಲ್ಲಿ ಸರ್ಕಾರಿ ಶಾಲೆ ಮುಚ್ಚಲು ಹೊರಟಿದೆ. ಇದನ್ನು ವಿರೋಧಿಸಿ, ರಾಜ್ಯದ ವಿವಿಧ ಹಳ್ಳಿಗಳಿಂದ ಸಮಾವೇಶಕ್ಕೆ ಆಗಮಿಸಲಿದ್ದಾರೆ.**
> ■ **ಶಶಿಕಲಾ ಮೇಟಿ, ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ**

18.30 ಲಕ್ಷ ರೂ. ಮೌಲ್ಯದ 27 ವಾಹನಗಳ ವಶ

ಸಂಕೇಶ್ವರ: ದ್ವಿಚಕ್ರ ವಾಹನಗಳನ್ನು ಕದಿಯುತ್ತಿದ್ದ ಅಂತರ್‌ರಾಜ್ಯ ಇಬ್ಬರು ಕಳ್ಳರನ್ನು ಹೆಡೆಮುರಿ ಕಟ್ಟುವಲ್ಲಿ ಸಂಕೇಶ್ವರ ಪೊಲೀಸರು ಯಶಸ್ವಿಯಾಗಿದ್ದು, ಅವರಿಂದ ಸುಮಾರು 18.30 ಲಕ್ಷ ರೂ. ಮೌಲ್ಯದ 27 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.



ಬಂಧಿತರು ಬೆಳಗಾವಿ ಸಮರ್ಥ ನಗರದ ಲಕ್ಷ್ಮಣ ಕಣಬರಗಿ ಹಾಗೂ ಯರಗಟ್ಟಿ ತಾಲೂಕಿನ ಬೋಳಕಡಬಿ ಗ್ರಾಮದ ಫಕೀರಪ್ಪಾ ಕರಿಗಾರ ಎಂದು ಗುರುತಿಸಲಾಗಿದೆ. ಈ ಇಬ್ಬರು ಕೂಡಿಕೊಂಡು ಸಂಕೇಶ್ವರ, ಬೈಲಹೊಂಗಲ, ಹಿರೇಬಾಗೇವಾಡಿ, ಬೆಳಗಾವಿ ಶಹರ ಹಾಗೂ ಪಕ್ಕದ ಮಹಾರಾಷ್ಟ್ರದ ಚಂದಗಡಗಳಲ್ಲಿ ಹೀರೊ ಸ್ಪಂಡ್ಲರ್, ಬಜಾಜ ಡಿಸ್ಕವರ್, ಯಮಹಾ, ಹಿರೋ ಎಚ್‌ಎಫ್ ಡಿಲಕ್ಸ್ ಹಾಗೂ ಬಜಾಜ್ ಪಲ್ಸರ್ ಕಂಪನಿಗಳ 26 ದ್ವಿಚಕ್ರ ವಾಹನಗಳನ್ನು ಕದ್ದಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರ ಮಾರ್ಗದರ್ಶನದಲ್ಲಿ ಈ ಕಳ್ಳರನ್ನು ಹಿಡಿಯುವಲ್ಲಿ ಸಂಕೇಶ್ವರ ಪೊಲೀಸ್ ಠಾಣೆಯ ಸಿಪಿಐ ಎಸ್.ಎಂ.ಅವಜಿ, ಪಿಎಸ್‌ಐಗಳಾದ ಯು.ಎಸ್.ಶೆಟ್ಟೆನ್ನವರ, ವಿಠ್ಠಲ ನಾಯಿಕ, ಎ.ಎಸ್.ಖೋತ ಹಾಗೂ ಅವರ ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ಈ ಹಿಂದೆಯೂ ಈ ಇಬ್ಬರು ಕಳ್ಳರು ಕಳ್ಳತನದ ಪ್ರಕರಣಗಳಲ್ಲಿ ಭಾಗಿಯಾಗಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹಿಂದು ಕಾರ್ಯಕರ್ತರ ಮೇಲಿನ ಪ್ರಕರಣ ವಾಪಸ್ ಪಡೆಯದಿದ್ದರೆ ಹುಬ್ಬಳ್ಳಿ ಬಂದ್‌ಗೆ ಕರೆ: ಮುತಾಲಿಕ್

ಹುಬ್ಬಳ್ಳಿ: ಆರವತ್ತಮೂರು ಹಿಂದು ಕಾರ್ಯಕರ್ತರು ಸೇರಿ ಲವ್ ಜಿಹಾದ್ ಪ್ರಕರಣವನ್ನು ಸಾಕ್ಷ್ಯ ಸಮೇತ ಪತ್ತೆ ಹಚ್ಚಿ ಆರೋಪಿಯನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಅವರ ಮೇಲೆ ದಾಖಲಿಸಿರುವ ಪ್ರಕರಣ ತಕ್ಷಣ ಹಿಂಪಡೆಯಬೇಕು. ಇಲ್ಲವಾದಲ್ಲಿ ಹುಬ್ಬಳ್ಳಿ ಬಂದ್‌ಗೆ ಕರೆ ನೀಡಲಾಗುವುದು ಎಂದು ಶ್ರೀರಾಮ ಸೇನಾ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ್ ಎಚ್ಚರಿಕೆ ನೀಡಿದರು.

ಶನಿವಾರ ಸಂತ್ರಸ್ತೆ ಯುವತಿಯ ಮನೆಗೆ ಭೇಟಿ ನೀಡಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎಂಟಹತ್ತು ಹಿಂದು ಯುವತಿಯರ ಜೊತೆ ಜಿಮ್ ತರಬೇತಿದಾರ ಸಮೀರ್ ಮುಲ್ಲಾ ಅಸಭ್ಯವಾಗಿ ವರ್ತಿಸಿರುವ ವಿಡಿಯೋಗಳು, ಅವರ ಮೊಬೈಲ್‌ನಲ್ಲಿ ಇದ್ದವು. ಅವುಗಳನ್ನು ಅಳಿಸಿ ಹಾಕಿದರೆ ಸಾಕ್ಷ್ಯ ನಾಶವಾಗುತ್ತದೆ ಎಂದು ಹಿಂದು ಕಾರ್ಯಕರ್ತರು ಅವರ ಮನೆಗೆ ಹೋಗಿ ಮೊಬೈಲ್ ವಶಕ್ಕೆ ಪಡೆದು ಪೊಲೀಸರಿಗೆ ಒಪ್ಪಿಸಿದ್ದಾರೆ. ಇದನ್ನೇ ದೊಡ್ಡ ಅಪರಾಧ ಎನ್ನುವಂತೆ ಅಪಹರಣ ಪ್ರಕರಣ ದಾಖಲಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಈ ಕುರಿತು ಪೊಲೀಸ್ ಕಮಿಷನರ್ ಅವರ ಜೊತೆ ಚರ್ಚಿಸಿ, ಪ್ರಕರಣ ಹಿಂಪಡೆಯಲು ಒಂದು ವಾರ ಗಡುವು ನೀಡಲಾಗುವುದು. ಸಮೀರ್ ನಡೆಸುತ್ತಿರುವ ಜಿಮ್ ಬಂದ್ ಮಾಡಬೇಕು ಎಂದು ಆಗ್ರಹಿಸಿದರು.

ರಾಜಕೀಯದ ಒತ್ತಡಕ್ಕೆ ಮಣಿದು ಪೊಲೀಸ್ ಕಮಿಷನರ್ ಅವರು ಪ್ರಕರಣದ ತನಿಖೆಯ ದಿಕ್ಕು ತಪ್ಪಿಸಬಾರದು. ಜಿಮ್‌ನಲ್ಲಿ ಏನೇನು ನಡೆಯುತ್ತಿವೆ ಎನ್ನುವ ಕುರಿತು ರಾಜ್ಯ ಸರ್ಕಾರ ಪರಿಶೀಲನೆ ನಡೆಸಲು ಮುಂದಾಗಬೇಕು ಎಂದರು.

ಕಾಂಗ್ರೆಸ್ ಅಭ್ಯರ್ಥಿ ಪರ ಸಿಎಂ ಪ್ರಚಾರ

ಕಮತಗಿ: ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಬಡವರ, ದಿನ ದಲಿತರ, ಹಿಂದುಳಿದ ವರ್ಗದ ಜನರ ಕಲ್ಯಾಣಕ್ಕಾಗಿ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲು ಮುಂದಾದಾಗ ಇದನ್ನು ವಿರೋಧಿಸಿದವರು ಬಿಜೆಪಿ ಪಕ್ಷದವರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.



ಪಟ್ಟಣದಲ್ಲಿನ ಪಾರ್ವತಿ ಪರಮೇಶ್ವರ ಕಲ್ಯಾಣಮಂಟಪದ ಆವರಣದಲ್ಲಿ ಕಾಂಗ್ರೆಸ್ ಪಕ್ಷದವತಿಯಿಂದ ಶನಿವಾರ ಹಮ್ಮಿಕೊಳ್ಳಲಾಗಿದ್ದ ಬಾಗಲಕೋಟ ವಿಧಾನಸಭಾ ಉಪಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರ ಹಮ್ಮಿಕೊಳ್ಳಲಾಗಿದ್ದ ಬಹಿರಂಗ ಪ್ರಚಾರದಲ್ಲಿ ಅವರು ಮಾತನಾಡಿದರು. ಪಂಚ ಗ್ಯಾರಂಟಿ ಯೋಜನೆಗಳನ್ನು ಇಂದಿಗೂ ವಿರೋಧ ಮಾಡುತ್ತಿದ್ದಾರೆ. ಅಲ್ಲದೆ, ನಮ್ಮ ಬಗ್ಗೆ ರಾಜ್ಯದ ತುಂಬ ಸುಳ್ಳು ಹೇಳುತ್ತ ತಿರುಗಾಡುತ್ತಿದ್ದಾರೆ. ಇಂತಹ ಕಾರ್ಯಕ್ರಮಗಳನ್ನು ಜಾರಿಗೆ ಮಾಡಿದರೆ ಬಹಳ ದುಡ್ಡು ಖರ್ಚಾಗುತ್ತದೆ. ಅಲ್ಲದೆ ಖಜಾನೆ ಖಾಲಿಯಾಗುತ್ತದೆ. ಅಭಿವೃದ್ಧಿ ಮಾಡಲು ದುಡ್ಡಿಲ್ಲಾ ಎಂದು ಸುಳ್ಳು ಹೇಳುತ್ತಿದ್ದಾರೆ.

ನಾವು ಗ್ಯಾರಂಟಿ ಯೋಜನೆಗಳ ಜೊತೆಗೆ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದೇವೆ. ಬಿಜೆಪಿ ಪಕ್ಷದವರು 9ವರ್ಷದ ಆಡಳಿತ ಅವಧಿಯಲ್ಲಿ ಏನು ಮಾಡಿದ್ದಾರೆ ಎಂದು ಮತದಾರರು ಕೇಳಬೇಕು. ಕಮತಗಿ ಪಟ್ಟಣದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಶಾಸಕರ ಅನುದಾನದಲ್ಲಿ 12ಕೋಟಿ ರೂಗಳ ಅನುದಾನ ನೀಡಲಾಗಿದ್ದು, ಅಲ್ಲದೆ 34ಕೋಟಿ ರೂ.ಗಳಲ್ಲಿ ವಸತಿ ಶಾಲೆಯನ್ನು ನಿರ್ಮಿಸಲು ಅನುದಾನ ನೀಡಲಾಗಿದ್ದು, 3ಬಾರಿ ನೇಕಾರರ ಸಾಲಮನ್ನಾ ಮಾಡಲಾಗಿದ್ದು, ಆದ್ದರಿಂದ ತಾವೆಲ್ಲರೂ ಕಾಂಗ್ರೆಸ್ ಅಭ್ಯರ್ಥಿಯಾದ ಉಮೇಶ ಮೇಟಿ ಅವರಿಗೆ ಮತವನ್ನು ಹಾಕಿ ಗೆಲ್ಲಿಸಬೇಕು ಎಂದರು. ಸಚಿವರಾದ ಆರ್.ಬಿ.ತಿಮ್ಮಾಪೂರ, ಎಚ್.ಕೆ.ಪಾಟೀಲ, ಶಿವಾನಂದ ಪಾಟೀಲ, ಶಾಸಕರಾದ ಬಸವರಾಜ ರಾಯರೆಡ್ಡಿ, ಉಮಾಶ್ರೀ, ವಿಜಯಾನಂದ ಕಾಶಪ್ಪನವರ, ಪಪಂ ಅಧ್ಯಕ್ಷ ಬಿ.ಪಿ. ಕುಂಬಳಾವತಿ, ಮುಖಂಡರಾದ ಎಸ್.ಎಸ್.ಮಂಕಣಿ, ಸಿದ್ದು ಹೊಸಮನಿ, ಮಹಾಂತೇಶ ಅಂಗಡಿ, ದೇವಿಪ್ರಸಾದ ನಿಂಬಲಗುಂದಿ, ಯಲ್ಲಪ್ಪ ವಡ್ಡರ, ವಿ.ಆರ್. ಮಳ್ಳಿ, ಚಂದು ಕುರಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಇದ್ದರು.

ಕೊಲೆ ಆರೋಪಿ ಕಾಲಿಗೆ ಗುಂಡು

ಕಲಬುರಗಿಯಲ್ಲಿ ಪೊಲೀಸ್ ಫೈರಿಂಗ್

ಕಲಬುರಗಿ: ಕಳೆದ ಎರಡು ದಿನಗಳ ಹಿಂದಷ್ಟೇ ಗುರುವಾರ ತಡರಾತ್ರಿ ಹಣಕಾಸು ವ್ಯವಹಾರ ಸಂಬಂಧವಾಗಿ ನಗರದ ಪಿಎನ್‌ಟಿ ಕಾಲೋನಿಯ ವೆಂಕಟೇಶ್ವರ ಕಾಂಪ್ಲೆಕ್ಸ್‌ನಲ್ಲಿ ಫೈನಾನ್ಸಿಯರ್, ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುತ್ತಿದ್ದ ಮಾಜಿ ಸಚಿವ ರೇವೂನಾಯಕ ಬೆಳಮಗಿ ಅವರ ಅಳಿಯ ಅನಿಲ್ ರಾಠೋಡ್ ಅವರ ಹತ್ಯೆ ನಡೆದಿರುವ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿ ಮೇಲೆ ಕಲಬುರಗಿ ಪೊಲೀಸರು ಫೈರಿಂಗ್ ನಡೆಸಿದ ಘಟನೆ ಶನಿವಾರ ಸಂಜೆ ನಡೆದಿದೆ. ಅನಿಲ್ ರಾಠೋಡ್ ಕೊಲೆ ನಡೆದ ಎರಡು ದಿನಗಳೊಳಗೆ ಆರೋಪಿಯನ್ನು ಪತ್ತೆಹಚ್ಚಿದ ಪೊಲೀಸರು,ಅವನನ್ನು ಬಂಧಿಸಲು ಮುಂದಾಗಿದ್ದರು. ಈ ವೇಳೆ ಆರೋಪಿ ಈಶ್ವರ ರಾಠೋಡ್ ಪೊಲೀಸರ ಮೇಲೆ ಪ್ರತಿದಾಳಿ ನಡೆಸಿದ್ದು, ಪರಿಸ್ಥಿತಿ ನಿಯಂತ್ರಿಸಲು ಹಾಗೂ ಆತ್ಮರಕ್ಷಣೆಗಾಗಿ ಸ್ಟೇಷನ್ ಬಜಾರ್ ಪೊಲೀಸರು ಆರೋಪಿಯ ಎಡ ಕಾಲಿಗೆ ಗುಂಡು ಹಾರಿಸಿದ್ದಾರೆ. ಗುಂಡೇಟಿನಿಂದ ಗಾಯಗೊಂಡ ಆರೋಪಿ ಈಶ್ವರ ರಾಠೋಡ್ ಅವರನ್ನು ತಕ್ಷಣ ಕಲಬುರಗಿಯ ನಗರದ ಜಿಮ್ಸ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಘಟನೆ ಕುರಿತು ಮಾಹಿತಿ ಪಡೆದ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ ಅವರು ಜಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುವಿನ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸಿದರು.

ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಪ್ರಶಂಸೆ ಮಾಡಲು ಯೋಗ್ಯವಾದುದು ಯಾವುದು?

▸ ಉದಾರತಾ

ಔದಾರ್ಯ ಅಥವಾ ಉದಾರತಾ ಎಂಬ ಗುಣವು ಅತ್ಯಂತ ಶ್ರೇಷ್ಠವಾದದ್ದು. ಇದು ಯಾರಲ್ಲಿ ಇರುತ್ತದೆಯೋ ಆ ವ್ಯಕ್ತಿಯನ್ನು ಪ್ರಶಂಸೆ ಮಾಡುವುದರಲ್ಲಿ ಯಾವುದೇ ಅಂಜಿಕೆ ಇರಬಾರದು. ಏಕೆಂದರೆ ಆ ವ್ಯಕ್ತಿ ಈ ಗುಣದಿಂದ ಪ್ರಶಂಸೆಗೆ ಅರ್ಹನಾಗುತ್ತಾನೆ. ಹಾಗಾದರೆ ಈ 'ಉದಾರತಾ' ಎಂಬ ಗುಣವು ಏಕೆ ಅಷ್ಟು ಶ್ರೇಷ್ಠವಾಗಿದೆ ಎಂಬುದನ್ನು ತಿಳಿಯಬೇಕಾಗಿದೆ. 'ಔದಾರ್ಯ' ಎಂಬುದು ಒಂದು ಕೊಡುವ ಮನೋಧರ್ಮ. ಈ ಹಿಂದಿನ ಪ್ರಶ್ನೋತ್ತರದಲ್ಲಿ ಒಂದು ವಿಷಯವನ್ನು ಗಮನಿಸಿದ್ದೆವು. ಆ ವಿಷಯವನ್ನು ಇಲ್ಲಿ ನೆನಪಿಸಿಕೊಂಡು ಈ ಉತ್ತರವನ್ನು ಅರ್ಥ ಮಾಡಿಕೊಳ್ಳಬೇಕು. ಈ ಹಿಂದಿನ ಪ್ರಶ್ನೆಯಲ್ಲಿ ವೈಭವಿದ್ದರೂ ಮತ್ತೊಬ್ಬರಿಗೆ ಕೊಡದಿರುವ ಅತಿಹೇಯವಾದ ಕೃಪಣತಾ ಎಂಬ ದೋಷವನ್ನು ವಿವರಿಸಿದ್ದಾಗಿತ್ತು. ಇದಕ್ಕೆ ವಿರುದ್ಧವಾದ ಗುಣವೇ ಉದಾರತಾ ಎಂಬುದು. ಅಂದರೆ ತನ್ನಲ್ಲಿ ಏನಿದೆಯೋ ಅದರಲ್ಲಿ ಕೊಟ್ಟು ಸಂತೋಷಪಡುವ, ತೃಪ್ತಿಪಡುವ ಮನಸ್ಸು. ಈ ಔದಾರ್ಯವೆಂಬ ಗುಣವಿಲ್ಲದಿದ್ದರೆ ದಾನ ಮಾಡುವ ಸ್ವಾಭಾವ ಹೇಗೆ ಬರಲು ಸಾಧ್ಯ. ಇದ್ದು ಕೊಟ್ಟರೆ ಅದು ಔದಾರ್ಯವೆನಿಸುವುದು. ತನ್ನಲ್ಲಿ ಇರುವಷ್ಟನ್ನು ದೀನದರಿದ್ರರಿಗೆ ಅವರ ಅವಶ್ಯಕತೆಗೆ ಅನುಗುಣವಾಗಿ ಸ್ಪಂದಿಸುವ ವಿಶೇಷ ಗುಣವೇ ಉದಾರತಾ. ಹಾಗಾಗಿ ಇಂತಹ ವಿಶೇಷ ಗುಣವನ್ನು ಪ್ರಶಂಸಿಸಬೇಕಾದುದು ಅತ್ಯಂತ ಅವಶ್ಯಕ. ಈ ಗುಣವು ಬರಲು ಹೇಗೆ ಸಾಧ್ಯ? ಎಂಬುದಕ್ಕೆ ಭಗವದ್ಗೀತೆಯಲ್ಲಿ ಯಾರು ಉದಾರರು ಎಂಬುದನ್ನು ಹೀಗೆ ಹೇಳಲಾಗಿದೆ. ಆರ್ತ, ಜಿಜ್ಞಾಸು ಅರ್ಥಾರ್ಥೀ ಮತ್ತು ಜ್ಞಾನಿ ಈ ನಾಲ್ವರನ್ನು ಉದಾರರು ಎಂಬುದಾಗಿ ಕರೆಯಬೇಕು. ಈ ನಾಲ್ವರಲ್ಲಿ ಜ್ಞಾನಿಯಾದವನು ಅತ್ಯಂತ ಶ್ರೇಷ್ಠ ಉದಾರಿ ಎಂಬುದಾಗಿ ತಿಳಿಯಬೇಕು. ಅಂದರೆ ಅಂತಹ ಜ್ಞಾನಿಗೆ ಮಾತ್ರ ಈ ವಿಶೇಷಗುಣ ಬರಲು ಸಾಧ್ಯ ಎಂಬುದು ಇದರ ತಾತ್ಪರ್ಯ. ಸಾಮಾನ್ಯ ಮಾನವನಿಗೆ ಅಲ್ಪಸಲ್ಪ ಔದಾರ್ಯದ ಗುಣ ಬರಬಹುದು. ಆದರೆ ಜ್ಞಾನಿಗೆ ಪರಿಪೂರ್ಣ ಔದಾರ್ಯ ಗುಣವು ಬರುತ್ತದೆ. ಏಕೆಂದರೆ ಜ್ಞಾನಿಯಾದವನಿಗೆ ತ್ಯಾಗ ಎಂಬ ಗುಣವು ವಿಶೇಷವಾಗಿರುತ್ತದೆ. ತ್ಯಾಗದಿಂದಲೇ ಅವನು ಅಮೃತತ್ವವನ್ನು ಪಡೆಯಬಹುದು ಎಂಬುದನ್ನು ಬಲವಾಗಿ ನಂಬಿದವನಾಗಿರುತ್ತಾನೆ. ಕೇವಲ ಸಂಪತ್ತನ್ನು ಮಾತ್ರವಲ್ಲದೆ ಈ ಜನ್ಮಕ್ಕೆ ಕಾರಣವಾದ ಶರೀರವು ಕೂಡ ತ್ಯಾಜ್ಯವಾದದ್ದು ಎಂಬ ಎಂಬ ತ್ಯಾಗ ಮನೋಧರ್ಮ ಅವನಿಗೆ ಇರುತ್ತದೆ. ಔದಾರ್ಯ ಇರುವವನು ಎಲ್ಲಾ ಕಾಲದಲ್ಲೂ ಶುದ್ಧನಾಗಿ ಇರುತ್ತಾನೆ. ಕಾರಣ ಇಷ್ಟೇ. ಔದಾರ್ಯ ಎಂಬ ಗುಣ ಇರುವುದರಿಂದಲೇ ಅವನು ಜ್ಞಾನಿಯಾದ, ಯೋಗಿಯಾದ, ಶೋಭಾ ವಿಲಾಸೋ ಮಾಧುರ್ಯಂ ಗಾಂಭೀರ್ಯಂ ಧೈರ್ಯತೇಜಸೀ? ಲಲಿತಾ ಔದಾರ್ಯಂ ಇತಿ ಅಷ್ಟ ಸತ್ತ್ವಜಾಃ ಪುರುಷಾಃ ಗುಣಾಃ? '' ಎಂದು ಸಾಹಿತ್ಯದರ್ಪಣ ಎಂಬ ಗ್ರಂಥದಲ್ಲಿ ಸಜ್ಜನಪುರುಷರ ಎಂಟು ಲಕ್ಷಣಗಳನ್ನು ಹೇಳಲಾಗಿದೆ. ಅದರಲ್ಲಿ ಔದಾರ್ಯ ಎಂಬ ಗುಣವನ್ನು ಎತ್ತಿ ಹೇಳಲಾಗಿದೆ. ಅಂದರೆ ಈ ಗುಣವು ಸತ್ತ್ವಗುಣದ ಪ್ರತೀಕವಾದದ್ದು. ಯಾರಲ್ಲಿ ಸತ್ತ್ವಗಣ ಇರುತ್ತದೆಯೋ, ಅವರಲ್ಲಿ ಉದಾರತೆ ಇರುತ್ತದೆ. ಅಥವಾ ಉದಾರತೆ ಎಂಬುದು ಸತ್ತ್ವಗುಣದಿಂದಲೇ ಜಾಗೃತವಾಗುತ್ತದೆ ಎಂಬ ಅರ್ಥವೂ ಸತ್ಯವಾದದ್ದು. ಒಟ್ಟರೆ ಇಂತಹ ಸತ್ಪುರುಷನು ಉದಾರತಾ ಎಂಬ ಗುಣದಿಂದ ಪ್ರಶಂಸೆಗೆ ಅರ್ಹನಾಗುತ್ತಾನೆ.

ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ವಾದದಲ್ಲಿ ಸರಿಸಮನೆನಿಸಿದ ಜರಾಸಂಧ!

ಜರಾಸಂಧನನ್ನು ಎದುರಿಸಿ ಕೃಷ್ಣ ಮತ್ತು ಪಾಂಡವರಿಬ್ಬರು ನಿಂತಿದ್ದಾರೆ. ವೇಷಾಂತರದಲ್ಲಿ ಬಂದಿರುವುದಾದರೂ ತಾವು ವಾಸ್ತವವಾಗಿ ಯಾರೆಂಬುದನ್ನು ತಿಳಿಸಹೊರಟ ಕೃಷ್ಣನು ತನ್ನ ಮಾತನ್ನು ಮುಂದುವರೆಸುತ್ತಿದ್ದಾನೆ. ಜರಾಸಂಧನೇ, ಸ್ವರ್ಗಪ್ರಾಪ್ತಿ ವೇದಾಧ್ಯಯನದಿಂದ ಪ್ರಾಪ್ತಿಯಾಗಬಲ್ಲದು. ಸ್ವರ್ಗವನ್ನು ಹೊಂದಲು ಕಾರಣವೆನಿಸುವುದು ಮಹಾಯಶಸ್ಸು; ಸ್ವರ್ಗಸಂಪಾದನೆಗೆ ಹೇತುವಾದದ್ದು ತಪಸ್ಸು; ಇವೆಲ್ಲಕ್ಕಿಂತಲೂ ಮಿಗಿಲಾದದ್ದೆಂದರೆ ಹಿಂಜರಿಯದೆಯೇ ಯುದ್ಧದಲ್ಲಿ ಕ್ಷತ್ರಿಯನು ಮೃತ್ಯುವನ್ನು ಹೊಂದುವಂತಹುದು. ಯುದ್ಧದಲ್ಲಿಯ ಸಾವೆಂದರೆ ಕ್ಷತ್ರಿಯನು ವೈಜಯಂತವನ್ನು ಹೊಂದಿದಂತೆಯೇ. ಅದಂತೂ, ಇಂದ್ರನ ರಾಜಗೃಹವೇ! ಸರ್ವಗುಣಗಳಿಂದಲೂ ಪರಿಪೂರ್ಣವಾದುದು. ಯುದ್ಧವೆಂಬುದನ್ನು ಆಧರಿಸಿಯೇ ಅಸುರರನ್ನು ಪರಾಭವಗೊಳಿಸಿ ಇಂದ್ರನು ಜಗದ್ರಕ್ಷಕನಾಗಿರುವುದು.

ಈಗ ನಮ್ಮೊಂದಿಗೆ ಯುದ್ಧವೆಂಬುದೇನುಂಟೋ ಅದು ನಿನಗೆ ಸ್ವರ್ಗಪ್ರಾಪಕವೇ ಸರಿ. ಈ ಬಗೆಯು ಮತ್ತಾರಿಗೆ ದೊರಕೀತು? ಮಾಗಧರ ವಿಪುಲವಾದ ಸೈನ್ಯವೆನಗಿದೆ ಎಂಬ ಬಾಹುಲ್ಯದ ಬಲದಿಂದ ನೀನು ದರ್ಪಗೊಂಡಿರುವೆ. ಹಾಗೆ ನೀನು ದರ್ಪಗೊಂಡು ಅನ್ಯರನ್ನು ಅವಮಾನಿಸುವುದಲ್ಲ, ತಿಳಿದುಕೋ. ನರನರನಲ್ಲೂ ವೀರ್ಯವಿರುವುದು, ನಿನಗೆ ಸಮಾನವೆನಿಸುವ ತೇಜಸ್ಸಿರುವುದು. ನಿನಗಿಂತಲೂ ಅತಿಶಯವಾದದ್ದೂ ಉಂಟು ರಾಜನೇ! ಎಲ್ಲಿಯವರೆಗೆ ಇದೆಲ್ಲಾ ನಿನ್ನ ಅರಿವಿಗೆ ಬರುವುದಿಲ್ಲವೋ, ಅಲ್ಲಿಯವರೆಗಷ್ಟೆ ಇದನ್ನೆಲ್ಲಾ ನಾವು ಸಹಿಸಿಕೊಳ್ಳಬೇಕಾಗಿಬರುವಂತಹುದು. ರಾಜನೇ, ನಾನು ನಿನಗೆ ಹೇಳುತ್ತಿರುವುದು ನಿನಗೆ ಯಾರು ಸಮಾನರೋ ಅಂತಹವರ ವಿಷಯದಲ್ಲಿ ನಿನ್ನ ಸ್ವಾಭಿಮಾನವನ್ನೂ ದರ್ಪವನ್ನೂ ಬಿಡು, ಮಾಗಧನೇ!

ನಿನ್ನ ಮಕ್ಕಳು ಮಂತ್ರಿಗಳೊಂದಿಗೆ ಹಾಗೂ ಸೈನ್ಯದೊಂದಿಗೆ ನೀನು ಯಮಲೋಕವನ್ನು ಸೇರಬಾರದಲ್ಲವೇ? ದಂಭೋದ್ಭವ, ಕಾರ್ತವೀರ್ಯ, ಉತ್ತರ, ಬೃಹದ್ರಥ–ಎಂಬೀ ನಾಲ್ವರು ರಾಜರೂ ನಾಶಹೊಂದಿದರು. ಏಕೆ? ತಮಗಿಂತಲೂ ಹಿರಿಯರನ್ನು ಅವಮಾನಗೊಳಿಸಿದ್ದಕ್ಕಾಗಿ. ನಿನ್ನೊಡನೆ ಯುದ್ಧಮಾಡಬಯಸುತ್ತಿರುವ ನಾವು ಬ್ರಾಹ್ಮಣರಲ್ಲ, ನಾನು ಶೌರಿಯಾದ ಹೃಷೀಕೇಶ, ಎಂದರೆ ವಸುದೇವಪುತ್ರ. ಹಾಗೂ ಇವರಿಬ್ಬರೂ ಪಾಂಡವರು. ಇವರಿಬ್ಬರಿಗೂ ನಾನು ಮಾತುಲೇಯ, ಎಂದರೆ ಸೋದರಮಾವನ ಮಗನಾದ ಕೃಷ್ಣ, ನಿನ್ನ ಶತ್ರು ಎಂಬುದಾಗಿ ತಿಳಿ. ಇದೋ, ಯುದ್ಧಕ್ಕೆ ನಿನ್ನನ್ನು ಆಹ್ವಾನಿಸುತ್ತಿದ್ದೇವೆ. ರಾಜನೇ, ಸ್ಥಿರನಾಗಿ ಯುದ್ಧಮಾಡು. ಮಾಗಧ, ನಿನಗಿರುವುದು ಎರಡೇ ಆಯ್ಕೆಗಳು. ಎಲ್ಲ ರಾಜರನ್ನೂ ಬಂಧಮುಕ್ತಗೊಳಿಸು; ಇಲ್ಲವೇ ಯಮಸದನಕ್ಕೆ ಹೋಗು ಎಂದನು. ಕೃಷ್ಣನು ಹೀಗೆ ಹೇಳಲು, ಜರಾಸಂಧನು ನುಡಿದನು: ಮೊದಲು ನೀನಿದನ್ನು ತಿಳಿದುಕೋ, ಕೃಷ್ಣಾ! ಯಾವ ರಾಜರು ನನ್ನೊಡನೆ ಸೆಣಸಿನಲ್ಲಿ ಸೋತಿಲ್ಲವೋ, ಅಂತಹವರನ್ನೊಬ್ಬರನ್ನೂ ನಾನು ಕೈದಿಯಾಗಿಸಿಲ್ಲ. ನನಗೆ ಪ್ರತಿಭಟಿಸಿಯೂ ನನ್ನಿಂದ ಸೋಲನ್ನು ಕಾಣದ ಯಾವೊಬ್ಬ ವ್ಯಕ್ತಿಯೂ ಇಲ್ಲಿಲ್ಲ. ಕೃಷ್ಣಾ! ಇದನ್ನೇ ಅಲ್ಲವೇ ಕ್ಷತ್ರಿಯನ ಜೀವಿಕೆಯೆಂಬುದಾಗಿ ಹೇಳುವುದು. ಪರಾಕ್ರಮವನ್ನು ತೋರಿಸಿ, ಶತ್ರುವನ್ನು ವಶಕ್ಕೆ ತೆಗೆದುಕೊಂಡು, ಬಳಿಕ ತನಗೆ ತೋಚಿದಂತೆ ಆಚರಿಸುವುದು. ದೇವತೆಗಳಿಗೆ ಬಲಿಗೊಡಲೆಂದು ಈ ರಾಜರುಗಳನ್ನು ನಾನು, ಕ್ಷತ್ರಿಯ–ವ್ರತವನ್ನು ಮರೆಯದೆ, ಸೆರೆಯಾಗಿಸಿದ್ದೇನೆ. ಈಗೇನು ನಿನಗೆ ಭಯಪಟ್ಟುಕೊಂಡು ಅವರುಗಳನ್ನು ನಾನು ವಿಮುಕ್ತಗೊಳಿಸಬೇಕೇನು? ನಿನ್ನ ಸೇನಾವ್ಯೂಹದೊಂದಿಗೆ ನನ್ನ ಸೇನಾವ್ಯೂಹವು ಹೋರಲಿ. ಅಥವಾ ಒಂಟಿಯಾಗಿ ಒಂಟಿಯಾದವನ ಮೇಲೆ ಹೋರಾಡುವುದೆಂದರೆ ಹಾಗೂ ಸರಿಯೇ. ಅಥವಾ ಇಬ್ಬರೊಂದಿಗೋ ಮೂವರೊಂದಿಗೋ ಸೆಣಸುವುದೆಂದರೆ ಹಾಗೂ ಸರಿಯೇ. ನಾನು ಯಾವುದಕ್ಕೂ ಸಿದ್ಧ ಎಂದನು ಜರಾಸಂಧ.

ಪರಿಚಯದ ಪರಿಪರಿಯ ಕಿರಿಕಿರಿಗಳು

ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com

ಬಹಳ ವರ್ಷಗಳ ಹಿಂದಿನ ಮಾತು. ಜರಗನಹಳ್ಳಿ ಶಿವಶಂಕರರು ಪ್ರತಿ ತಿಂಗಳು ನಡೆಸುತ್ತಿದ್ದ ಕಾರ್ಯಕ್ರಮವೊಂದಕ್ಕೆ ಮುಖ್ಯ ಅತಿಥಿಗಳಾಗಿ ಏಣಗಿ ಬಾಳಪ್ಪನವರು ಆಗಮಿಸಿದ್ದರು. ಪ್ರಾರ್ಥನೆ, ಸ್ವಾಗತಗಳ ನಂತರ ನಿರೂಪಕರು 'ಈಗ ಅತಿಥಿಗಳ ಪರಿಚಯವನ್ನು ಪರಮೇಶಿಯವರು (ನಿಜ ಹೆಸರಲ್ಲ) ಮಾಡಿಕೊಡುತ್ತಾರೆ' ಎಂದರು.

ಒರಳುಕಲ್ಲಿನಲ್ಲಿ ರುಬ್ಬುಗುಂಡು ಚಲಿಸುವ ರೀತಿಯಲ್ಲಿ ಉರುಟು ನಡೆಯಲ್ಲಿ ವೇದಿಕೆಯನ್ನೇರಿದ ಪರಮೇಶಿಯವರು ''ಇಂದಿನ ಮುಖ್ಯ ಅತಿಥಿಗಳು ಏಣಗಿ ಬಾಳಪ್ಪ ಉಕ್ಕೇರಿ'' ಎನ್ನುತ್ತಾ ಪರಿಚಯಕ್ಕೆ ಉಪಕ್ರಮಿಸಿದರು. ಹೌಹಾರಿದ ನಾನು ಅವರ ಗಮನವನ್ನು ಸೆಳೆಯಲು ಸಕಲ ಪ್ರಯತ್ನಗಳನ್ನೂ ಮಾಡಲಾರಂಭಿಸಿದೆ. ಪರಿಣಾಮಶೂನ್ಯ. ''ಏಣಗಿ ಬಾಳಪ್ಪ ಉಕ್ಕೇರಿಯವರು ಒಳ್ಳೆಯ ಆಡುಗಾರರು'' ಮುಂದುವರಿಸಿದರು ವ್ಯತ್ತೋದರರು, ''ಅವರು ಆಡಿದರೆ ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ.''

'ಆಡುವುದನ್ನು ನೋಡುವುದು ತಿಳಿದಿದೆ. ಆಡುವುದನ್ನು ಕೇಳುವುದೆ?' ಎಂಬ ಗೊಂದಲ ಯಾರಲ್ಲೂ ಮೂಡಲಿಲ್ಲ, ಆ ಹೊತ್ತಿಗೆ ಸಭೆಗೆ ಈ ಪರಿಚಯಕಾರನು ಹಕಾರ ಹಂತಕನೆಂದು ಅರಿವಾಗಿತ್ತು. ತತ್ಪರಿಣಾಮ ಮುಖ್ಯ ಅತಿಥಿಗಳು ಉಕ್ಕೇರಿಯಲ್ಲ, ಹುಕ್ಕೇರಿ ಎಂದೂ, ಪರಿಚಯ ಮಾಡಿಕೊಡುತ್ತಿರುವ ವ್ಯಕ್ತಿಗೆ ಗಾಯಕ ಬಾಳಪ್ಪ ಹುಕ್ಕೇರಿಯೂ ತಿಳಿದಿಲ್ಲ, ನಾಟಕಕಾರ ಏಣಗಿ ಬಾಳಪ್ಪನವರೂ ತಿಳಿದಿಲ್ಲವೆಂಬುದು ಸ್ಪಷ್ಟವಾಗಿತ್ತು. ಆದರೆ ಸ್ವಯಂ ಪರಿಚಯಕಾರನಿಗೆ ತಿಳಿದಿರಲಿಲ್ಲವಲ್ಲ, ಆತ ಮುಂದುವರಿಸಿದರು:

''ಏಣಗಿ ಬಾಳಪ್ಪ ಉಕ್ಕೇರಿಯವರಿಗೆ ಈಗ ತೊಂಬತ್ತೇಳು ವರ್ಷ ವಯಸ್ಸು'' ಎಂದರವರು. ವಾಸ್ತವವಾಗಿ ಅಂದು ಏಣಗಿಯವರಿಗೆ ತೊಂಬತ್ತು ವರ್ಷಗಳು ತುಂಬಿದ್ದವು, ಇನ್ನು ಏಳು ವರ್ಷಗಳನ್ನು ಪರಿಚಯಕಾರರೇ ಬೋನಸ್ ಆಗಿ ನೀಡಿದ್ದರು. ಪರಿಚಯಕಾರರ ತಲೆಯನ್ನು ತುಂಬಿಕೊಂಡಿದ್ದ ಬಾಳಪ್ಪ ಹುಕ್ಕೇರಿ ಅಂದಿಗೆ ಗತಿಸಿ ಹಲವು ವರ್ಷಗಳಾಗಿದ್ದವು. ''ಇವರ ಎಸರಿನಲ್ಲಿ ಉಕ್ಕೇರಿ ಅಂತ ಇರೋದು ಯಾಕೆ ಅಂದರೆ ಈ ವಯಸ್ಸಿನಲ್ಲೂ ಅವರ ಉತ್ಸಾಹವು ಆಲಿನಂತೆ ಉಕ್ಕೇರುತ್ತಿದೆ. ಆದ್ದರಿಂದಲೇ ಅವರ ಎಸರು ಬಾಳಪ್ಪ ಉಕ್ಕೇರಿ!''

ಏಣಗಿಯವರಿಗೆ ಒದಗಿದ್ದ ವಯೋಸಹಜವಾದ ಕಿವುಡು ಈ ಪರಿಚಯವನ್ನು ಕೇಳಿಸಿಕೊಳ್ಳುವ ಸಂಕಷ್ಟದಿಂದ ಅವರನ್ನು ಪಾರು ಮಾಡಿತ್ತು.

ವೇದಿಕೆಯಲ್ಲದೆ ಹೊರಜಗತ್ತಿನಲ್ಲಿಯೂ ಒಬ್ಬರನ್ನು ಮತ್ತೊಬ್ಬರೆಂದು ಗ್ರಹಿಸುವ ಸನ್ನಿವೇಶಗಳು ಉದ್ಭವಿಸುತ್ತವೆ. ''ನಿಮ್ಮ 'ನಟಸಾರ್ವಭೌಮ' ಕಾದಂಬರಿಯನ್ನು ಓದಿದ್ದೇನೆ ಸಾರ್, ತುಂಬಾ ಚೆನ್ನಾಗಿದೆ'' ಎಂದು ಕಾಲೇಜು ಹುಡುಗನೊಬ್ಬನು ಶಿವರಾಮ ಕಾರಂತರಿಗೆ ನುಡಿದಿದ್ದ. ಕಾರಂತರು ''ಗುಡ್. ಅದರಲ್ಲಿ ಯಾವ ಪಾತ್ರ ಇಷ್ಟವಾಯಿತು?'' ಎನ್ನುತ್ತಾ ಮಾತು ಮುಂದುವರೆಸಿದ್ದರು. ಅನಂತರ ''ಕಾರಂತರೆ, ಅನಕೃ ಬರೆದ ಕೃತಿಯನ್ನು ನಿಮ್ಮದೆಂದರೂ ಸಮ್ಮತಿಸಿ ಮಾತನಾಡಿದ್ದೇಕೆ?'' ಎಂದು ಕೇಳಿದರೆ, ''ಯಾರದೇ ಆಗಲಿ, ಕನ್ನಡದ ಪುಸ್ತಕ ಓದಿದನಲ್ಲ, ಅದೇ ಸಂತೋಷ'' ಎಂದು ನುಡಿದಿದ್ದರು.

ಬಿ.ವಿ. ಕಾರಂತ ಮತ್ತು ಶಿವರಾಮ ಕಾರಂತರನ್ನು ಪರಸ್ಪರ ತಪ್ಪಾಗಿ ಗ್ರಹಿಸಿದ ಪ್ರಸಂಗಗಳಿವೆ. ''ನಿಮ್ಮ ಕಾದಂಬರಿಗಳನ್ನು ಓದಿದೆ ಸಾರ್'' ಎಂದು ಬಿ.ವಿ. ಕಾರಂತರಿಗೂ, ''ನಿಮ್ಮ 'ಹಯವದನ' ತುಂಬಾ ಚೆನ್ನಾಗಿದೆ ಸಾರ್'' ಎಂದು ಶಿವರಾಮ ಕಾರಂತರಿಗೂ ಜನರು ಹೇಳಿದುದುಂಟು. ಶಿವರಾಮ ಕಾರಂತರು ಮನದಲ್ಲಿಯೇ 'ಹಯವದನನಂತೆ ಹಯವದನ. ನನ್ನ ಮುಖವೇನು ಕುದುರೆಯ ಮುಖದಂತೆ ಇದೆಯೆ?' ಎಂದುಕೊಂಡಿದ್ದರೂ ಆಚ್ಚರಿಯಿಲ್ಲ.

ಇಂತಹ ಬದಲುಗ್ರಹಿಕೆ ವಿಶ್ವವ್ಯಾಪಿಯಾದ ಗುಣ. ಹಾಲಿವುಡ್ಡಿನ ಖ್ಯಾತ ನಟರಾದ ಪೀಟರ್ ಸೆಲ್ಲರ್ಸ್ ಮತ್ತು ವುಡಿ ಆಲನ್ 'ಕೆಸಿನೋ ರಾಯೇಲ್' ಎಂಬ ಚಿತ್ರವೊಂದರಲ್ಲಿ ಅಭಿನಯಿಸಿದ್ದರು. ಯಾವುದೋ ಸನ್ನಿವೇಶದ ಬಗ್ಗೆ ಚರ್ಚಿಸಲೆಂದು ಪೀಟರ್ ಸೆಲ್ಲರ್ಸ್ ಸ್ಟುಡಿಯೋವೊಂದಕ್ಕೆ ಹೋದಾಗ ಸ್ಟುಡಿಯೋದವನು ಸೆಲ್ಲರ್ಸ್‌ರನ್ನು ಆಲನ್ ಎಂದು ಭ್ರಮಿಸಿ, ''ಮಿಸ್ಟರ್ ಆಲನ್, ನೀವು ಬಂದದ್ದು ಬಹಳ ಸಂತೋಷ. ನಿಮ್ಮೊಡನೆ ನಟಿಸಿದ ಪೀಟರ್ ಸೆಲರ್ಸ್‌ನ ನಟನೆ ನನಗೆ ಏನೇನೂ ಹಿಡಿಸಲಿಲ್ಲ'' ಎನ್ನುತ್ತಾ ಸೆಲ್ಲರ್ಸ್‌ರ ಅಭಿನಯದ ಬಗ್ಗೆ ಕಟುನುಡಿಗಳನ್ನು ಆಡತೊಡಗಿದನು. ಎಲ್ಲವನ್ನೂ ಕೇಳಿಸಿಕೊಂಡ ಸೆಲ್ಲರ್ಸ್, ಕಡೆಗೆ ''ನಾನು ಆಲನ್ ಅಲ್ಲ, ಸೆಲ್ಲರ್ಸ್. ಗುಡ್ ಬೈ'' ಎನ್ನುತ್ತಾ ಹೊರನಡೆದರು.

ಹಾಲಿವುಡ್ಡಿನದೇ ಮತ್ತೊಂದು ಪ್ರಸಂಗವು ಅಭಿಮಾನಿಗಳನ್ನು ಒಳಗೊಂಡಿದ್ದಾಗಿದೆ. ಚಹರೆಯಲ್ಲಿ ಒಂದಿಷ್ಟು ಹೋಲಿಕೆ ಇದ್ದ ಟಾಮ್ ಹ್ಯಾಂಕ್ಸ್ ಮತ್ತು ಬಿಲ್ ಮರ್ರೆ ಈರ್ವರನ್ನು ಅಭಿಮಾನಿಗಳು ತಪ್ಪಾಗಿ ಗ್ರಹಿಸುತ್ತಿದ್ದುದುಂಟು. ಟಾಮ್ ಹ್ಯಾಂಕ್ಸ್ ''ನನ್ನನ್ನು ಮರ್ರೆ ಎಂದು ತಪ್ಪಾಗಿ ಗ್ರಹಿಸಿದ ಅಭಿಮಾನಿಗಳು ಮರ್ರೆಯ ಸ್ಮರಣಿಕೆಗಳ ಮೇಲೆ ನನ್ನ ಸಹಿಯನ್ನು ಕೋರಿದರು. ನಾನು ಅವುಗಳ ಮೇಲೆ ಬಿಲ್ ಮರ್ರೆ ಎಂದೇ ಸಹಿ ಹಾಕಿದೆ'' ಎಂದು ನುಡಿದಿದ್ದರು.

ಇತ್ತೀಚಿನ ದಿನಗಳಲ್ಲಿ ನಮ್ಮಲ್ಲಿ ಅತಿ ಹೆಚ್ಚು ಗೊಂದಲ ಮೂಡಿಸಿದವರೆಂದರೆ ಗುಂಡೂರಾವ್‌ದ್ವಯರು. ವೈ.ವಿ. ಗುಂಡೂರಾವ್ ಅತ್ಯುತ್ತಮ ಮಾತುಗಾರರು. ಲೀಲಾಜಾಲವಾಗಿ ಮಾತನಾಡುವ ಅವರಿಗೆ ಸಿಗ್ನೇಚರ್ ಹಾಕಲೂ ಬರೆಹಾಲಸ್ಯ. ವೈ.ಎನ್.ಗುಂಡೂರಾವ್ ಉತ್ತಮ ಬರೆಹಗಾರರು. 'ಮಾತನಾಡಿ ಬನ್ನಿ ಸಾರ್' ಎಂದರೆ ನುಡಿವಿರಕ್ತಿ. ಇಂತಿರುವಾಗ ವೈ.ವಿ.ಗೆ ''ನಿಮ್ಮ ಆರ್ಟಿಕಲ್ ಓದಿದೆ ಸಾರ್. ಸಖತ್ತಾಗಿ ಬರೀತೀರಿ ಸಾರ್'' ಎಂಬ ಪ್ರಶಂಸೆಯೂ, ವೈ.ಎನ್.ಗೆ ''ಯೂಟ್ಯೂಬಲ್ಲಿ ನಿಮ್ಮ ವಿಡಿಯೋ ನೋಡಿದೆ ಸಾರ್. ಏನ್ ಸೂಪರ್ರಾಗಿ ಮಾತಾಡ್ತೀರಾ ಸಾರ್! ಸಖತ್ ಹಾಸ್ಯ ನಿಮ್ಮದು'' ಎಂಬ ಪ್ರಶಂಸೆಯೂ ಆಗಾಗ್ಗೆ ಸಂದಾಯ ಆಗುತ್ತಲೇ ಇರುತ್ತವೆ. ''ನಾನವನಲ್ಲ'' ಎಂದು ಹೇಳೀ ಹೇಳೀ ರೋಸಿರುವ ಇಬ್ಬರೂ 'ಬಂದದ್ದೆಲ್ಲ ಬರಲಿ, ಅಭಿಮಾನದ ಹೊನಲಿರಲಿ' ಎಂಬ ಭಾವದಿಂದ ಸ್ವೀಕರಿಸುತ್ತಾರೆ.

ಸಾರ್ವಜನಿಕರ ಮಧ್ಯೆ ಪದೇ ಪದೇ ಕಂಡುಬಂದರೂ ಜನಮನದಲ್ಲಿ ಚೆಹರೆಯು ಅಚ್ಚೊತ್ತದಿರುವುದು ಅಚ್ಚರಿಯ ಸಂಗತಿಯೇ. ವೈ.ವಿ. ಗುಂಡೂರಾವ್‌ರನ್ನು 'ನೀವು ಡುಂಡಿರಾಜ್ ಅಲ್ವಾ?' ಎಂದೂ, ಡುಂಡಿರಾಜರನ್ನು 'ನೀವು ಎಮ್ಮೆಸ್ಸೆನ್ ಅಲ್ವಾ?' ಎಂದೂ, ಕೇಳಿದವರಿದ್ದಾರೆ. ನಾನಂತೂ ಜನರ ಕಣ್ಣಿಗೆ ಗಂಗಾವತಿ ಪ್ರಾಣೇಶ್, ನರಸಿಂಹಮೂರ್ತಿ, ಡುಂಡಿರಾಜ್ ಆಗಿ ಕಾಣಿಸಿಕೊಂಡಿದ್ದೇನೆ. ಡುಂಡಿಗೂ ನನಗೂ 'ಶಿರಸಾಮ್ಯ'ವಿದೆ. ಮಿಕ್ಕವರಿಗೂ ನನಗೂ ಯಾವುದೇ ಹೋಲಿಕೆ ಇಲ್ಲದಿದ್ದರೂ ಅದು ಹೇಗೆ ಅವರು ಹಾಗೆ ಗ್ರಹಿಸಿದರೆಂಬುದು ಯಕ್ಷಪ್ರಶ್ನೆಯಾಗಿಯೇ ಉಳಿದಿದೆ.

ಚೆಹರೆಯನ್ನು ತಪ್ಪಾಗಿ ಗ್ರಹಿಸುವುದು ಒಂದು ವಿಧವಾದರೆ ಹೆಸರನ್ನು ತಪ್ಪಾಗಿ ಗ್ರಹಿಸುವುದು ಮತ್ತೊಂದು ಪರಿ. ಎಷ್ಟೋ ಸಭೆಗಳಲ್ಲಿ ನಾನು 'ರಾಮಮೂರ್ತಿ' ಎಂದು ಪರಿಚಯಗೊಂಡಿದ್ದೇನೆ, 'ರಮಾನಾಥ'ನಾಗಿ ರಮೆಯೆಂಬ ಹೆಣ್ಣಿನ ಕೈ ಹಿಡಿದಿದ್ದೇನೆ, 'ರಮಾನಂದ್' ಆಗಿ ಯಾರಿಗೋ ಆನಂದ ನೀಡಿದ್ದೇನೆ. ನನ್ನ ಇನಿಷಿಯಲ್ ಆದ ಎನ್ ನನ್ನ ತಂದೆಯವರಾದ ಎಸ್.ನರಸಿಂಹಮೂರ್ತಿಯವರನ್ನು ಸೂಚಿಸಿದರೆ, ಪರಿಚಯಕಾರರಪ್ರಕಾರ ನಾನು ಎಮ್ಮೆಸ್ಸೆನ್‌ರ ಮಗನಾಗಿದ್ದೆ! ಇನಿಷಿಯಲ್ ಎನ್ ಅನ್ನೂ ಎಸ್ ಆಗಿಸಿ, ನಾನು ಎಷ್ಟೇ ಬಾರಿ 'ನೋ' ಎಂದರೂ, ಪರಿಚಯಕಾರರು 'ಎಸ್' ಎಂದೇ ಮುಂದುವರಿಸಿದ್ದಿದೆ.

ಸಭೆಯೊಂದರಲ್ಲಿ ನನ್ನನ್ನು 'ಅಣಕು ಕಲೆಯಲ್ಲಿ ಪರಿಣತರಾದವರು' ಎಂದು ಪರಿಚಯಿಸಿದ್ದೇ ಅಲ್ಲದೆ, 'ಈಗ ಅಣಕುರಾಮನಾಥರಿಂದ ಮಿಮಿಕ್ರಿ! ಸಾರ್, ಸಿದ್ರಾಮಣ್ಣಂದೂ ಮಿಮಿಕ್ರಿ ಮಾಡ್ತೀರಾ ಸಾರ್?' ಎಂಬ ಉದ್ಘೋಷ!

''ನನ್ನದು ಮಿಮಿಕ್ರಿ ಅಲ್ಲ, ಅಣಕವಾಡು ಅಂದರೆ...''

ತಾಳ್ಮೆಗೂ, ಅಪರಿಚಯಕಾರನಿಗೂ ಬದ್ಧದ್ವೇಷ. ನನ್ನ ಮಾತನ್ನು ಅರ್ಧದಲ್ಲೇ ತುಂಡರಿಸಿದ ಅವನು, ''ಗೊತ್ತಾಯ್ತು ಬಿಡಿ ಸಾರ್. ಮಾತಿನ ಬದಲು ಹಾಡ್ತೀರ. ಅಂಬರೀಷ್ 'ನಾವಾಡುವ ನುಡಿಯೆ' ಹಾಡಿದರೆ ಹೇಗಿರತ್ತೆ ಅಂತ ತೋರಿಸಿ ಸಾರ್'' ಎಂದಿದ್ದ.

ಹಾಸ್ಯವಯಸ್ಯೆ ಭುವನೇಶ್ವರಿ ಹೆಗಡೆಯವರದು ಮತ್ತೊಂದು ವಿಧವಾದ ಪರಿಚಯಗ್ರಹಣ. ಅವರ ಪ್ರಬಂಧವೊಂದು ಬಿಬಿಎ ಮೊದಲ ಸೆಮಿಸ್ಟರ್‌ಗೆ ಪಠ್ಯವಾಗಿತ್ತು. ತತ್ಸಂಬಂಧವಾಗಿ ಪರೀಕ್ಷೆಯಲ್ಲಿ 'ನಾಲ್ಕು ಸಾಲುಗಳಲ್ಲಿ ಲೇಖಕಿಯ ಪರಿಚಯ ಬರೆಯಿರಿ' ಎಂಬ ನಾಲ್ಕು ಅಂಕಗಳ ಪ್ರಶ್ನೆಯಿದ್ದಿತು. ಅದಕ್ಕೆ ಬಂದ ಉತ್ತರಗಳು ಇಂತಿವೆ: ''ಲೇಖಕಿಯು ಸುಮಾರು 13 ಶತಮಾನಗಳ ಕಾಲ ಅರ್ಥಶಾಸ್ತ್ರ ಬೋಧನೆ ಮಾಡಿದ್ದಾರೆ.''

ಇನ್ನೊಬ್ಬರಿಗೆ ಹದಿಮೂರು ಶತಮಾನಗಳು ಮನುಷ್ಯರು ಇರಲಾರರೆಂಬ ಶಂಕೆ ಮೂಡಿದ್ದರಿಂದ, ''ಲೇಖಕಿಯು 3 ಶತಮಾನಗಳ ಕಾಲ ಬೋಧನೆ ಮಾಡಿದ್ದಾರೆ'' ಎಂದು ಬರೆದರೆ, ಮತ್ತೊಬ್ಬರಿಗೆ ಕೇವಲ ಶತಮಾನಗಳು ಚಿಲ್ಲರೆ ಸಮಯವೆನಿಸಿರಬೇಕು. ಅವರು ''ಶ್ರೀಮತಿ ಭುವನೇಶ್ವರಿ ಹೆಗಡೆಯವರು 3 ದಶಕ ಶತಮಾನ ಸಾಹಿತ್ಯ ರಚಿಸಿದ್ದಾರೆ'' ಎಂದಿದ್ದಾರೆ. ಅಲ್ಲದೆ ಭುವನೇಶ್ವರಿ ಹೆಗಡೆಯವರಿಗೆ ವಿದ್ಯಾರ್ಥಿಗಳ ಪ್ರಕಾರ ಕರ್ನಾಟಕ ರತ್ನ ಪ್ರಶಸ್ತಿ, ಜ್ಞಾನಪೀಠ ಹಾಗೂ ಪದ್ಮಭೂಷಣಗಳು ಲಭಿಸಿವೆ. ಲೇಖಕಿಯ ಜನನವು ಕರ್ನಾಟಕದ ಎಂಟು ಜಿಲ್ಲೆಗಳಲ್ಲಿ ಆಗಿದೆ!

ಇಂದುಶ್ರೀಯೊಡನೆ ನಾನು ನೂರಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಡಿಂಕು ಗೊಂಬೆಯೊಡನೆ ಇಂದು ಪ್ರದರ್ಶಿಸುವ ವೆಂಟ್ರಿಲಾಕ್ವಿಸಮ್ ಕಲೆಯನ್ನು 'ವೆಂಟ್ರಾಲಿಸಮ್', 'ವೆಂಟ್ರಿಕುಲಿಸಮ್', 'ವೆಂಟಲಿಸಮ್' ಎಂದವರಿದ್ದಾರೆ. 'ಎಂಟರ್‌ಟೈನ್‌ಮೆಂಟ್‌ಕೇ ಲಿಯೇ ಕುಛ್ ಭೀ ಕರೇಗಾ' ದಫರಾಖಾನ್ ಅದನ್ನು 'ವೆಂಟ್ರಿಲೋಲೋಲೋಕ್ವಿಸಮ್' ಎಂದು ನುಡಿದು ಅದನ್ನು ಬಹಳ ಲೋ ಲೆವೆಲ್‌ಗೆ ಇಳಿಸಿದ್ದರು. ಇಂದುವಿನೊಡನೆ ನನ್ನನ್ನು ಕಂಡಿದ್ದ ಒಬ್ಬರು ನನ್ನತ್ತಲೇ ಪರೀಕ್ಷಾದೃಷ್ಟಿಯಿಂದ ನೋಡುತ್ತಿದ್ದರು. ಕುತೂಹಲವು ಕುದಿಮಟ್ಟವನ್ನು ತಲುಪಿದಾಗ ಬಳಿಸಾರಿ,

''ನೀವು... ನೀವೂ...'' ಎನ್ನಲಾರಂಭಿಸಿದರು.

ಬರವಣಿಗೆಯಿಂದಲೇ ಖ್ಯಾತನಾಗಿರಬಹುದೆಂದೆಣಿಸಿ ನಾನು ನನ್ನ ಪ್ರವರವನ್ನು ಬಿಚ್ಚುವುದಕ್ಕೆ ಮುಂಚೆಯೇ ಅವರಿಗೆ ನನ್ನ ಗುರುತು ಹತ್ತಿಬಿಟ್ಟಿತು, ಕೇಳಿಯೇಬಿಟ್ಟರು,

''ನೀವು ಡಿಂಕು ಅಲ್ವಾ?''

ಬಲೂಚಿಸ್ತಾನ; ಇದು ಕತೆಯಲ್ಲ, ವ್ಯಥೆ

▸ ಗುರುಪ್ರಸಾದ್ ಭಟ್ ಉಡುಪಿ

ಧುರಂಧರ್ 2 ಸಿನಿಮಾದಲ್ಲಿ ಎಸ್.ಪಿ. ಅಸ್ಲಮ್ 'ಏ ಬಲೂಚ್' ಎಂದು ಬಲೂಚಿಗಳನ್ನು ತಾತ್ಸಾರದಿಂದ ಅವಮಾನಿಸುವುದನ್ನೂ, ಐದು ಅಮಾಯಕ ಬಲೂಚಿ ವಿದ್ಯಾರ್ಥಿಗಳನ್ನು ಎಳೆದುತಂದು ಅವರ ಎನ್‌ಕೌಂಟರ್ ಮಾಡುವ ದೃಶ್ಯವನ್ನೂ ಕಂಡು ಹೌಹಾರಿದ್ದೇವೆ. ಕಳೆದ ಐದಾರು ದಶಕಗಳಲ್ಲಿ ಬಲೂಚಿಗಳ ಮೇಲೆ ಪಾಕಿಸ್ತಾನದ ಪಠಾಣರು ಮತ್ತು ಪಂಜಾಬಿ ಸುನ್ನಿ ಮುಸ್ಲಿಮರು ನಡೆಸಿದ ದೌರ್ಜನ್ಯಕ್ಕೆ ಹೋಲಿಸಿದರೆ, ಧುರಂಧರ್ 2 ಸಿನಿಮಾದಲ್ಲಿ ತೋರಿಸಿದ್ದು ಕೇವಲ ಒಂದು ಸ್ಯಾಂಪಲ್. ಈ ಬಲೂಚಿಗಳು ಯಾರು? ಅವರ ಇತಿಹಾಸವೇನು?

ಮಹಾಭಾರತದ ಸಮಯದಲ್ಲಿ ಭದ್ರಗಣ ಕ್ಷತ್ರಿಯರು ವಾಸಿಸುತ್ತಿದ್ದ ಪ್ರಾಂತವನ್ನು 'ಪಾರದರಾಜ' (ಪಾರದ) ಎಂದೂ ಕರೆಯುತ್ತಿದ್ದರು ಮತ್ತು ಅದು ಗಾಂಧಾರದ ಅಧೀನವಾಗಿತ್ತು. ಸ್ವಾಭಾವಿಕವಾಗಿ ಅವರೆಲ್ಲರೂ ಕೌರವರ ಕೈ ಜೋಡಿಸಿಕೆಟ್ಟರು. ಯುಧಿಷ್ಠಿರನ ಅಶ್ವಮೇಧ ಯಜ್ಞಕ್ಕಾಗಿ ಈ ಎಲ್ಲ ಪ್ರಾಂತಗಳನ್ನು ಅರ್ಜುನನು ಗೆದ್ದುಕೊಂಡನು.

'ಬಲೂಚ್' ಒಂದು ಸಂಸ್ಕೃತ ಶಬ್ದ 'ಬಲ+ಉಚ್ಚ', ಅಂದರೆ 'ಉಚ್ಚವರ್ಗೀಯ ಬಲವಂತ ಕ್ಷತ್ರಿಯರು' ಎಂದರ್ಥ. ಕ್ರಮೇಣ ಆಡುಭಾಷೆಯಲ್ಲಿ ಅದು 'ಬಲೂಚ್' ಎಂದಾಯಿತು. ಕೆಲವೊಂದು ವೇದಕಾಲದ ಗ್ರಂಥದಲ್ಲಿ ಈ ಕ್ಷೇತ್ರವನ್ನು 'ಬಲಾಕ್ಷ' ಎಂದೂ ಕರೆಯಲಾಗಿದೆ. ಬಲೂಚಿಸ್ತಾನವನ್ನು ಸಾವಿರಾರು ವರ್ಷಗಳಿಂದ ಉತ್ತಮ ಕ್ಷತ್ರಿಯ ಕುಲದ ಬಲಾಢ್ಯರ ನಾಡೆಂದೇ ಗುರುತಿಸಲಾಗುತ್ತಿತ್ತು. ಏಳನೆಯ ಶತಮಾನದಲ್ಲಿ ಚೀನಾದ ಪ್ರವಾಸಿಗ ಹುಯೆನ್‌ತ್ಸಾಂಗ್ ಕೂಡ ಇದರ ರಾಜಧಾನಿ 'ಶಂಭುರೀಶ್ವರ' ಎಂದೂ ಗುರುತಿಸಿ, ಇಲ್ಲೊಂದು ಬೃಹಸ್ಪತಿವನ ಮಂದಿರವಿತ್ತೆಂದು ಬರೆದಿದ್ದಾನೆ. ಗಾಂಧಾರವು ಇಸ್ಲಾಂ ದಾಳಿಗೆ ತತ್ತರಿಸಿ ಪತನವಾದ ನಂತರ, ಬಲೂಚ್ ಕೂಡ ಭಯೋತ್ಪಾದನೆಗೆ ತುತ್ತಾಗಿ ಸನಾತನ ಧರ್ಮ ನಶಿಸಿತು. ಇಸ್ಲಾಮಿಕ್ ಆಳ್ವಿಕೆ ಬಂದಿತು.

ಬಲೂಚ್ ಮತ್ತು ಮರಾಠರು

ಮೂರನೇ ಪಾಣಿಪತ್ ಯುದ್ಧದಲ್ಲಿ ಸೋತ ನಂತರ ಸುಮಾರು 30–50 ಸಾವಿರ ಮರಾಠಾ ಸೈನಿಕರನ್ನು ಮತ್ತವರ ಬಂಧು–ಬಾಂಧವರನ್ನು ಅಬ್ದಾಲಿ ಗುಲಾಮರನ್ನಾಗಿ ಸೆರೆಹಿಡಿದು 1500 ಕಿ.ಮೀ ದೂರದ ಬಲೂಚಿಸ್ತಾನ ಮೂಲಕ ಕಾಬೂಲಿಗೆ ಕೊಂಡೊಯ್ಯಲು ಪ್ರಯಾಣ ಬೆಳೆಸಿದ. ಸಾವಿರಾರು ಮರಾಠರು ಸರಿಯಾದ ಆಹಾರವಿಲ್ಲದೆ ಕಾಲ್ನಡಿಗೆಯಿಂದ ಬವಳಿ ಮಾರ್ಗದಲ್ಲಿಯೇ ಆಸುನೀಗಿದರು. ಅನೇಕ ಮರಾಠ ಸೈನಿಕರು ಹರ್ಯಾಣದ ಸುತ್ತುಮುತ್ತಲಿನ ಅರಣ್ಯಗಳಲ್ಲಿ ತಪ್ಪಿಸಿಕೊಂಡು ತಮ್ಮ ಜೀವ ರಕ್ಷಿಸಿಕೊಂಡರು. ಇಂದು ಕರ್ನಾಲ್, ರೊಹಟಕ್, ಭಿವಾನಿ ಪ್ರದೇಶದಲ್ಲಿ ಏಳರಿಂದ ಹತ್ತು ಲಕ್ಷ ಜನಸಂಖ್ಯೆಯಿರುವ ಅವರನ್ನು ರೋಡ ಅಥವಾ ರೋರ್ಮರಾಠರೆಂದು ಕರೆಯುತ್ತಾರೆ. ಅಳಿದುಳಿದ 25 ಸಾವಿರ ಮರಾಠರನ್ನು ಅಬ್ದಾಲಿ ಬಲೂಚಿಸ್ತಾನದ ದೇರಾ–ಬುಗ್ತಿ ಸುಲ್ತಾನ ಮೀರ್ನಾಸೀರ್ಖಾನನಿಗೆ ಸೈನಿಕ ಬೆಂಬಲ ನೀಡಿದ್ದಕ್ಕಾಗಿ ಉಡುಗೊರೆಯಾಗಿ ನೀಡಿದನು. ಈ ಮರಾಠರು ಮುಸ್ಲಿಮರಾಗಿ ಮತಾಂತರಗೊಂಡಿದ್ದರೂ ಇಂದಿಗೂ ತಮ್ಮತನವನ್ನು ಕಿಂಚಿತ್ ಕಾಪಾಡಿಕೊಂಡಿದ್ದಾರೆ. ತಾವೆಲ್ಲರೂ ಛತ್ರಪತಿ ಶಾಹು ಮಹಾರಾಜರ ವಂಶಜರೆಂದು ಹೆಮ್ಮೆಪಡುತ್ತಾರೆ. ಇಂದಿಗೂ ಬುಗ್ತಿ–ಮರಾಠರು ಬಲೂಚಿಸ್ತಾನದಲ್ಲಿ ಗಣೇಶೋತ್ಸವವನ್ನು ವೈಭವದಿಂದ ಆಚರಿಸಿಕೊಂಡು ಬಂದಿದ್ದಾರೆ. ಬುಗ್ತಿಗಳಲ್ಲಿ 'ಶಾಹು' ಎಂಬುದೊಂದು ಪ್ರತ್ಯೇಕ ಉಪಜಾತಿ.

ಸ್ವಾತಂತ್ರ್ಯ ಸಂಗ್ರಾಮ

ಬಲೂಚಿಗಳು ಮೀರ್ ಅಹ್ಮದ್ ಖಾನ್‌ಯಾರ ನೇತೃತ್ವದಲ್ಲಿ ತಮ್ಮದು ಸಂಪೂರ್ಣ ಸ್ವತಂತ್ರದೇಶವೆಂದು ಘೋಷಿಸಿಕೊಂಡರು. ಅವರ ಪರಿಕಲ್ಪನೆಯಲ್ಲಿ ಕಲಾತ್ರಾಜ್ಯ (ಬಲೂಚ್) ಹಾಗೂ ಸುತ್ತುಮುತ್ತಲಿನ ಖರನ್, ಲಾಸ್ಬೇಲ ಇತ್ಯಾದಿ ಪ್ರದೇಶಗಳನ್ನು ಒಳಗೊಂಡಿತ್ತು. ಬಲೂಚಿಸ್ತಾನದ ಸ್ವಾತಂತ್ರ್ಯ 226 ದಿನವಷ್ಟೇ ಬಾಳಿತು. ಅದರ ನಂತರ, ಬಲೂಚ್ ನಾಯಕ ಮೀರ್ ಯಾರ್‌ಖಾನನು ಜಿನ್ನಾನನ್ನು ತನ್ನ ದೇಶದ ಕಾನೂನು ಸಲಹೆಗಾರನನ್ನಾಗಿ ನಿಯುಕ್ತಿಮಾಡಿ ಕೆಟ್ಟನು. ಅದು ಕುರಿ ಹಿಂಡನ್ನು ಕಾಯಲು ತೋಳನಿಗೆ ಹೇಳಿದಂತಾಯಿತು. ಮೂಲತಃ ಜಿಹಾದಿ ಜಿನ್ನಾ ಎಂದಾದರೂ ಬಲೂಚಿಗಳ ಶುಭ ಕೋರಿಯಾನೇ? ಮಾರ್ಚ್ 26, 1948 ಪಾಕಿಸ್ತಾನಿ ಪಂಜಾಬಿ ಸುನ್ನಿ ಮತ್ತು ಪಠಾಣ ಮುಸ್ಲಿಂ ಸೈನ್ಯವು ಬಲೂಚಿಸ್ತಾನದಲ್ಲಿ ಸೈನ್ಯಕಾರ್ಯಚರಣೆ ನಡೆಸಿ, ಮಾರಣಹೋಮ ನಡೆಸಿತು. ಕಂಡವರನ್ನೆಲ್ಲ ಕೊಚ್ಚಿ ಹಾಕಲಾಯಿತು. ಅಳಿದವರೆಷ್ಟು, ಅಳಿಸಿಹೋದವರೆಷ್ಟು, ಉಳಿದವರೆಷ್ಟು ಎಂಬುದನ್ನು ಮೋಜಿನಲ್ಲಿದ್ದ ಜಿನ್ನಾ ಅಂತೂ ಲೆಕ್ಕವಿಡಲಿಲ್ಲ. ಬಂದೂಕಿಗೆ ಹೆದರಿ ಕಲಾತ್ ಪಾಕಿಸ್ತಾನದಲ್ಲಿ ತನ್ನ ಸ್ವತಂತ್ರದೇಶವನ್ನು ವಿಲೀನಗೊಳಿಸಲು ಸೇರ್ಪಡೆಯ ಒಪ್ಪಂದಕ್ಕೆ ಸಹಿಹಾಕಿದ. ಬಲೂಚಿಗಳ ಸಂಕಷ್ಟ ಎಣ್ಣೆಯ ಬಾಣಲಿಯಿಂದ ನೇರವಾಗಿ ಬೆಂಕಿಗೆ ಧುಮುಕಿದಂತಾಯಿತು.



ಕೈಬಿಟ್ಟ ನೆಹರೂ

ಮೀರ್ ಯಾರ್‌ಖಾನ್ ಕೊನೆ ಗಳಿಗೆಯಲ್ಲಿ ಒಂದು ದಾಳವನ್ನೆಸೆದ– ತಾನು ಬಲೂಚಿಸ್ತಾನವನ್ನು ಭಾರತ ದೇಶದೊಳಗೆ ವಿಲೀನಗೊಳಿಸಿದ್ದೇನೆ, ಪಾಕಿಸ್ತಾನದೊಳಗಲ್ಲ ಎಂದೂ ಹೇಳಿದ. ಆದರೆ, ನೆಹರೂ ಒಪ್ಪಿಕೊಳ್ಳಲಿಲ್ಲ, ಬಹುಶಃ ಪ್ರಿಯತಮೆ ಎಡ್ವಿನಾ ಬೇಡ ಎಂದಿರಬೇಕು. ಸರ್ದಾರ್ ವಲ್ಲಭಭಾಯ್ ಪಟೇಲ್ ಅಥವಾ ಮಂತ್ರಿಮಂಡಲದಲ್ಲಿ ಚರ್ಚಿಸದೇ ನನಗೆ ಬೇಡ ಎಂದುಬಿಟ್ಟರು. ಆದೇ ದಿನ ಸಂಜೆ ಭಾರತದ ರಾಜ್ಯ ಮಂತ್ರಾಲಯದ ಕಾರ್ಯದರ್ಶಿ ವಿ.ಪಿ. ಮೆನನ್ ಅವರು ಆಲ್ ಇಂಡಿಯಾ ರೇಡಿಯೋ ರೇಡಿಯೋ ಸಂದೇಶದಲ್ಲಿ ಬಲೂಚಿಸ್ತಾನದ ಖಾನ್ ಭಾರತದಲ್ಲಿ ತನ್ನ ದೇಶವನ್ನು ವಿಲೀನಗೊಳಿಸಬೇಕೆಂದು ನಿವೇದಿಸುತ್ತಿದ್ದಾನೆ. ಆದರೆ, ಪ್ರಧಾನಮಂತ್ರಿ ನೆಹರೂ ಅವರಿಗೆ ಇದರಲ್ಲಿ ಕಿಂಚಿತ್ತೂ ಅಭಿರುಚಿಯಿಲ್ಲ, ಬಲೂಚಿಸ್ತಾನ ಭಾರತದಲ್ಲಿ ಸೇರುವುದು ಬೇಡ. ಅವರ ಹಣೆಬರಹ ಅವರಿಗೆ ಎಂದುಬಿಟ್ಟರು! ಬಲೂಚಿಸ್ತಾನದ ಬೆನ್ನಿಗೆ ಬ್ರಿಟಿಷರು ಮೊದಲು ಚೂರಿ ಇರಿದರೆ, ನೆಹರೂ ಚುಚ್ಚಿದ್ದು ಎರಡನೆಯದು. ಅಲ್ಲಿಗೆ ಬಲೂಚಿಸ್ತಾನವನ್ನು ರಕ್ಷಿಸುವವರು, ಸಮರ್ಥಿಸುವವರು ಒಬ್ಬರೂ ಉಳಿಯಲಿಲ್ಲ. ಬಲೂಚ್ ಸುಲಭವಾಗಿ ಪಾಕಿಸ್ತಾನದ ವಶವಾಯಿತು. ಕಳೆದ 76 ವರ್ಷಗಳಲ್ಲಿ ಬಲೂಚಿಸ್ತಾನವು ಪುನಃ ಸ್ವಾತಂತ್ರ್ಯ ಪಡೆಯಲು ಹೋರಾಟ ಮಾಡುತ್ತಿದೆ. ಲಕ್ಷಾನುಗಟ್ಟಲೆ ಯುವಕ–ಯುವತಿಯರು ಬಲಿದಾನ ನೀಡಿದ್ದಾರೆ. ಅಕ್ಷರಶಃ ಜನರನ್ನು ರೇಗಿಸ್ತಾನದಲ್ಲಿ ಓಡಲು ಬಿಟ್ಟು, ಬೇಟೆನಾಯಿಗಳನ್ನು ಛೂಬಿಟ್ಟು, ಅವರನ್ನು ಬೆನ್ನಟ್ಟಿಕೊಂಡು ಹೊಡೆಯುವ ಮನೋರಂಜನಾ ಕ್ರೀಡೆ ಪಾಕಿಸ್ತಾನದ ಸುನ್ನಿ ಮುಸ್ಲಿಂ ಪಂಜಾಬಿ ಸೈನಿಕರ ಬಂದೂಕಿಗೆ ಶಿಕಾರಿಯಾಗಿದ್ದಾರೆ. 1947ರಲ್ಲಿ ಭಾರತಕ್ಕೆ ಸೇರುವ ಅವರ ನಿವೇದನೆಯನ್ನು ನೆಹರು ತಿರಸ್ಕರಿಸದಿದ್ದರೆ, ಬಹುಶಃ ಬಲೂಚಿಸ್ತಾನ ಇಂದು ಭಾರತಕ್ಕೆ ಸೇರಿದ ರಾಜ್ಯವಾಗಿರುತ್ತಿತ್ತು. ಇಂದಿಗೂ ಮರಾಠರು ಬಲೂಚಿಸ್ತಾನದ ಸ್ವಾತಂತ್ರ್ಯ ಸಮರದ ಮುಂಚೂಣಿಯಲ್ಲಿ ನಿಂತಿದ್ದು, ಅಪಾರ ಸಾವುನೋವಿನ ಹೊರತಾಗಿಯೂ ನಿರಂತರವಾಗಿ ಹೋರಾಡುತ್ತಿದ್ದಾರೆ. ಪಾಕಿಸ್ತಾನದ ಸೈನ್ಯಕ್ಕೆ ತೀವ್ರ ಪ್ರತಿರೋಧವನ್ನು ನೀಡುತ್ತಲೇ ಬಂದಿದ್ದು, ಅವರಿಗೆ ತಲೆನೋವಾಗಿದ್ದಾರೆ.

ಎರಡೂವರೆ ಶತಮಾನಗಳ ಹಿಂದೆ ಬಲವಂತದಿಂದ ಮುಸ್ಲಿಮರಾಗಬೇಕಾದರೂ ಮರಾಠರು ತಮ್ಮ ಧರ್ಮದ ಕೆಲವೊಂದು ಪ್ರಮುಖ ಕುರುಹುಗಳನ್ನು ಆಚರಣೆಯ ಮೂಲಕ ಕಾಯ್ದುಕೊಂಡಿದ್ದಾರೆ. ಅವರು ಈಗಲೂ ಮದುವೆಯ ಸಮಯದಲ್ಲಿ ವಧುವರರಿಗೆ ಅರಸಿನ ಅಭ್ಯಂಜನದ ರಿವಾಜು, ಸೆರಗು–ಶಲ್ಯಕ್ಕೆ ಗಂಟುಹಾಕುವುದು, ಮಾಂಗಲ್ಯ ತೊಡಿಸುವುದು, ಸಪ್ತಪದಿ, ನೂತನ ವಧು ಗೃಹಪ್ರವೇಶಿಸುವ ಮುನ್ನ ಹೊಸ್ತಿಲ ಮೇಲೆ ಅಕ್ಕಿಯ ಸೇರನ್ನಿಟ್ಟು ಅದನ್ನು ಬಲಗಾಲಿನಿಂದ ಮೆತ್ತನೆ ಒಳಗೆ ನೂಕಿ ಪ್ರವೇಶಿಸುವುದು ಇತ್ಯಾದಿ ಮರಾಠ ಪದ್ಧತಿಗಳನ್ನು ನಿಯಮಿತವಾಗಿ ಆಚರಿಸುವ ಮೂಲಕ ಕಾಪಾಡಿಕೊಂಡಿದ್ದಾರೆ. ಶಾಹು–ಬುಗ್ತಿ ಮರಾಠರು ತಮ್ಮ ತಾಯಿಯನ್ನು 'ಆಯಿ' ಎಂದೇ ಕರೆಯುತ್ತಾರೆ. ಗೋದಿ, ಗೋದಾ, ಕೋಮಲ್, ಕಮ್ಲಾ, ಜೀಜಾ, ಸಯೀ ಇತ್ಯಾದಿ ಹೆಣ್ಣುಮಕ್ಕಳ ಹೆಸರುಗಳು ಮರಾಠ ಸೊಗಡನ್ನು ಬೀರುತ್ತವೆ. ಬಲೂಚಿಸ್ತಾನದ ಭಾಷೆಯಲ್ಲಿಯೂ ಮರಾಠಿ ಭಾಷೆಯ ಪ್ರಭಾವ ಸಾಕ್ಷ್ಯಿದೆ.

ಬಲೂಚಿಸ್ತಾನದ ಸ್ವಾತಂತ್ರ್ಯ ಹೋರಾಟದಲ್ಲಿ ಅಗ್ರೇಸರರಾಗಿರುವ ಬುಗ್ತಿ ವಂಶಜರು ಕಟ್ಟಿದ 'ದಿ ಮರ್ಹಟ್ಟಕ್ವಾಮೀ ಇತ್ತೇಹಾದ್ ಪಾಕಿಸ್ತಾನ' ಎಂಬ ಸಂಸ್ಥೆಯು ಅಲ್ಲಿಯ ಅಧಿಕೃತ ಸೈನ್ಯವನ್ನೇ ಸೋಲಿಸುವಷ್ಟು ಬಲಶಾಲಿಗಳಾಗಿ ಸಶಸ್ತ್ರ ಪ್ರತಿರೋಧವನ್ನು ನೀಡುತ್ತಿದೆ. ಇಲ್ಲಿ 'ಮರ್ಹಟ್ಟ' ಅಂದರೆ 'ಮರಾಠಾ' ಎಂದರ್ಥ. ಬುಗ್ತಿ–ಮರಾಠ ಬುಡಕಟ್ಟು ಜನರು ತಮ್ಮ ಕ್ಷತ್ರಿಯ ಮೂಲ ಮತ್ತು ಇತಿಹಾಸವನ್ನು ಮರೆತಿಲ್ಲ, ನೂರಾರು ವರ್ಷಗಳಿಂದಲೂ ತಮ್ಮ ಪಾರಂಪರಿಕ ಸಂಸ್ಕೃತಿ ಮತ್ತು ಹಬ್ಬಹರಿದಿನಗಳ ಆಚರಣೆಯನ್ನು ಮರೆತಿಲ್ಲ. ಬುಗ್ತಿ–ಮರಾಠ ಮೂಲದ ಜನರು ಸೈನ್ಯ, ಶಿಕ್ಷಣ, ರಾಜಕೀಯ, ಕೃಷಿ ಕ್ಷೇತ್ರಗಳಲ್ಲಿ ತಮ್ಮದೇ ಛಾಪನ್ನು ಮೂಡಿಸಿದ್ದಾರೆ. ಅನೇಕ ಮರಾಠಿ ಶಬ್ದಗಳು, ಹೆಸರುಗಳು ಬಲೂಚಿಸ್ತಾನದ ಬುಗ್ತಿಯವರ ಭಾಷೆಯಲ್ಲಿ ಸಾಮರಸ್ಯದಿಂದ ವಿಲೀನಗೊಂಡಿವೆ.

ಇಂದಿಗೂ ಅವರು ಅನುಸರಿಸುತ್ತಿರುವುದು ಶಿವಾಜಿ ಮಹಾರಾಜರ 'ಗನೀಮಿಕಾವ' ಅಂದರೆ ಹೊಂಚುಹಾಕಿ ಕಾಯ್ದುಕೊಂಡಿದ್ದು ಹಠಾತ್ ಆಗಿ ದಾಳಿಮಾಡಿ ವೈರಿಯನ್ನು ಚಕಿತಗೊಳಿಸುವ ಗೆರಿಲ್ಲಾ ಯುದ್ಧನೀತಿ. ಬಲೂಚಿಸ್ತಾನದಲ್ಲಿ ಮೂರು ಲಕ್ಷ ಬಲಾಢ್ಯ ಬುಗ್ತಿ ಮತ್ತು ಮರ್ಹಟ್ಟ ಸ್ವಾತಂತ್ರ್ಯ ಹೋರಾಟಗಾರರಿಗೆ ಆದಷ್ಟು ಬೇಗನೆ ಪಾಕಿಸ್ತಾನದಿಂದ ವಿಮೋಚನೆಯಾಗಲಿ ಎಂಬುದೇ ಭಾರತೀಯರ ಆಶಯ.

ಮೌಲ್ಯ ತುಂಬುವ ಕಾರ್ಯಕರ್ತ

ಹೊಸದಿಗಂತದಲ್ಲಿ ಎಪ್ರಿಲ್ 3ರಂದು ಪ್ರಕಟವಾದ 'ಕಾರ್ಯಕರ್ತ? ಆತ ಬಂಗಾಳದಲ್ಲಿದ್ದಾನೆ!' ಲೇಖನವು ಕೇವಲ ರಾಜಕೀಯ ವಿಶ್ಲೇಷಣೆಯಲ್ಲ, ಬದಲಾಗಿ ಕಾರ್ಯಕರ್ತ ಎಂಬ ಪರಿಕಲ್ಪನೆಯ ಮರುಶೋಧನೆಯಂತಿದೆ. ಇಂದಿನ ರಾಜಕಾರಣದಲ್ಲಿ ಕಾರ್ಯಕರ್ತ ಎಂದರೆ ಕೇವಲ ಬಾವುಟ ಹಿಡಿಯುವವನು ಅಥವಾ ಸೌಲಭ್ಯಗಳನ್ನು ಆಶಿಸುವವನು ಎಂಬ ಸಾರ್ವತ್ರಿಕ ಲಕ್ಷಣಗಳ ನಡುವೆ, ಬಂಗಾಳದ ನೆಲದ ವಾಸ್ತವವನ್ನು ಬಳಸಿಕೊಂಡು ನೈಜ ಕಾರ್ಯಕರ್ತನ ವ್ಯಾಖ್ಯಾನವನ್ನು ಕಟ್ಟಿಕೊಡಲಾಗಿದೆ. ದೀನದಯಾಳ್ ಉಪಾಧ್ಯಾಯ ಮತ್ತು ಶ್ಯಾಮಪ್ರಸಾದ್ ಮುಖರ್ಜಿಯವರ ಆದರ್ಶಗಳನ್ನು ಪ್ರಸ್ತಾಪಿಸುವ ಮೂಲಕ ಲೇಖನವು ಬಲವಾದ ಸೈದ್ಧಾಂತಿಕ ಚೌಕಟ್ಟನ್ನು ಹೊಂದಿದೆ.

ಪತ್ರ ಮಿತ್ರ

ಐಪಿಎಲ್ ಟಿಕೆಟ್ ಕೇಳುವ ಅಥವಾ ಅಧಿಕಾರಕ್ಕಾಗಿ ಬೆನ್ನುಬೀಳುವ ಇಂದಿನ ಕಾಲದ ಪುಡಾರಿ ಸಂಸ್ಕೃತಿಯನ್ನು ಪ್ರಶ್ನಿಸುವ ಮೂಲಕ ಲೇಖನವು ನೈತಿಕ ಎಚ್ಚರಿಕೆಯನ್ನು ನೀಡುತ್ತದೆ. ಪ್ರಾಣದ ಭಯದ ನಡುವೆಯೂ ಬಂಗಾಳದ ಕಾರ್ಯಕರ್ತ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ 20 ಗಂಟೆ ಪ್ರಯಾಣಿಸಿ ನಾಯಕನನ್ನು ನೋಡಲು ಬರುವ ಚಿತ್ರಣ ಓದುಗರ ಕಣ್ಣಾಲಿಗಳನ್ನು ತೇವಗೊಳಿಸುವಂತಿದೆ.

ಈ ಲೇಖನವು ರಾಜಕೀಯ ಪಕ್ಷದ ಕಾರ್ಯಕರ್ತರಿಗೆ ಮಾತ್ರವಲ್ಲದೆ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಂಬುವ ಪ್ರತಿಯೊಬ್ಬರಿಗೂ ತಲುಪಬೇಕಾದ ಬರಹವಾಗಿದೆ. ಇದು ರಾಜಕೀಯ ಅಂಧಾಭಿಮಾನಕ್ಕಿಂತ ಹೆಚ್ಚಾಗಿ ನೆಲದ ಸತ್ಯ ಮತ್ತು ಸಿದ್ಧಾಂತದ ಬದ್ಧತೆಯನ್ನು ಎತ್ತಿ ಹಿಡಿಯುತ್ತದೆ.

–ಶ್ರೀನಿವಾಸ್ ಹಳಗತ್ತಿ, ಮುಧೋಳ

ಝೊಂಬಿ ಡ್ರಗ್ : ಇದು ಹೊಸ ಕಾಲದ ಹೊಸ ಭೀತಿ

ಇತ್ತೀಚೆಗೆ ಚಂಡೀಗಢದ ವಸತಿ ಪ್ರದೇಶವೊಂದರಲ್ಲಿ ಬೆನ್ನಿನ ಮೇಲೆ ಡೆಲಿವರಿ ಬ್ಯಾಗನ್ನು ಹೊತ್ತ ಬ್ಲಿಂಕಿಟ್ ಡೆಲಿವರಿ ಬಾಯ್ ಒಬ್ಬ ಸುಮಾರು 2 ಗಂಟೆಗಳ ಕಾಲ ರಸ್ತೆಯಲ್ಲಿ ಯಾವುದೇ ಚಲನೆಯಿಲ್ಲದೆ, ತನ್ನ ಸುತ್ತಲ ಪರಿಸರದ ಬಗ್ಗೆ ಅರಿವಿಲ್ಲದೆ ಅರೆಪ್ರಜ್ಞಾವಸ್ಥೆಯ ಸ್ಥಿತಿಯಲ್ಲಿ ನಿಂತಿರುವ ವಿಚಿತ್ರ ಘಟನೆಯ ವಿಡಿಯೋ ಸಾಮಾಜಿಕಮಾಧ್ಯಮದಲ್ಲಿ ವೈರಲ್ ಆಗಿರುವುದನ್ನು ಗಮನಿಸಿದ್ದೇವೆ. ಈ ವೀಡಿಯೋದಲ್ಲಿ ಅವನ ಬಾಯಿಯಲ್ಲಿ ಬೀಡಿಯಿರುವುದು, ಕಣ್ಣುಗಳು ನೆಟ್ಟಗಿರುವುದನ್ನು ಗಮನಿಸಬಹುದಾಗಿದೆ. ಇದು ಬಹುಶಃ ಡ್ರಗ್ ಸೇವನೆಯ ಪರಿಣಾಮವಾಗಿದ್ದು, ಅಮೆರಿಕಾದಲ್ಲಿ ಕುಖ್ಯಾತಿ ಪಡೆದಿರುವ ಝೊಂಬಿ ಡ್ರಗ್ ಭಾರತಕ್ಕೂ ಬಂದಿದೆಯಾ ಎಂದು ಆತಂಕವನ್ನೂ ಸೃಷ್ಟಿಸಿದೆ. ಇದು ಹೌದಾದಲ್ಲಿ, ರಸ್ತೆಯ ಮಧ್ಯೆ ಅಸ್ಥಿರವಾಗಿ ನಡೆಯುತ್ತಿರುವ ತನ್ನನ್ನು ತಾನೇ ನಿಯಂತ್ರಿಸಿಕೊಳ್ಳಲು ಅಸಮರ್ಥನಾಗಿರುವ ಆ ಯುವಕನ ವರ್ತನೆ ಭೀತಿ ಹುಟ್ಟಿಸುವುದು ಸಹಜ.

ಏನಿದು ಝೊಂಬಿ ಡ್ರಗ್? ಪ್ರಾಣಿಗಳಿಗೆ ಬಳಸುವ ಕ್ಸೈಲಜಿನ್ ಎಂಬ ಟ್ರ್ಯಾಂಕ್ವಿಲೈಜರ್ ಅನ್ನು ಝೊಂಬಿ ಡ್ರಗ್ ಎಂದು ಹೇಳಲಾಗುತ್ತದೆ. ಪ್ರಾಣಿಗಳ ನೋವಿಗೆ ಪರಿಹಾರ ನೀಡಲು ಉತ್ಪಾದಿಸಲಾದ ಇದು ಒಂದು ಬಗೆಯ ಶಾಂತಕ(sedative) ವಾಗಿದ್ದು, ಮಾನವರಿಗೆ ಬಳಸಲು ಅನುಮೋದಿತವಾಗಿಲ್ಲ. ಇದನ್ನು ಫೆಂಟನಿಲ್, ಮಾರ್ಫಿನ್ ಹಾಗೂ ಹೆರಾಯಿನ್‌ನಂತಹ ಒಪಿಯಾಯ್ಡ್‌ಗಳಲ್ಲಿ ಬೆರೆಸಲ್ಪಡುತ್ತದೆ. ಇದನ್ನು ಸೇವಿಸಿದವರು ಅರಿವಿಲ್ಲದ ಸ್ಥಿತಿ ತಲುಪಿ ದೇಹದ ನಿಯಂತ್ರಣ ಕಳೆದುಕೊಂಡಂತೆ ಕಾಣುವುದರಿಂದಲೇ 'ಝೊಂಬಿ ಡ್ರಗ್' ಎಂಬ ಹೆಸರು ಬಂದಿದೆ. ಇಂತಹ ಪ್ರಕರಣಗಳು ಹೆಚ್ಚಾಗಿ ಅಮೆರಿಕಾದಲ್ಲಿ ಕಂಡುಬರುತ್ತವೆ.

ಈ ಮದ್ದು ದೇಹದ ಮೇಲೆ ಬೀರುವ ಪರಿಣಾಮಗಳು ಅತ್ಯಂತ ಗಂಭೀರ. ಇದು ನರಮಂಡಲವನ್ನು ಮಂದಗೊಳಿಸಿ, ಉಸಿರಾಟದ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಕೆಲವೊಮ್ಮೆ



ಚರ್ಮದಲ್ಲಿ ಗಾಯಗಳು ಉಂಟಾಗಿ ಅವು ಗಂಭೀರ ಸೋಂಕಿಗೆ ಕಾರಣವಾಗಬಹುದು. ದೀರ್ಘಕಾಲ ಬಳಸಿದರೆ ಅಂಗಾಂಗ ವೈಫಲ್ಯಕ್ಕೂ ದಾರಿ ಮಾಡಿಕೊಡಬಹುದು. ಮುಖ್ಯವಾಗಿ ಇದು ಒಪಿಯಾಯ್ಡ್ ಅಲ್ಲದಿರುವುದರಿಂದ ಕ್ಸೈಲಜಿನ್ ಮಿಶ್ರಿತ ಮದ್ದು ಸೇವಿಸಿದ ವ್ಯಕ್ತಿಯನ್ನು ಸಾಮಾನ್ಯ ನಾರ್ಕೋಟಿಕ್ ಔಷಧಗಳಿಂದ ತಕ್ಷಣ ರಕ್ಷಿಸುವುದು ಕಷ್ಟವಾಗಬಹುದು.

ಇತ್ತೀಚಿನ ವರ್ಷಗಳಲ್ಲಿ ಜಾಗತಿಕವಾಗಿ ಡ್ರಗ್ಸ್ ಸೇವನೆಯ ರೂಪಗಳು ಬದಲಾಗುತ್ತಿದ್ದು, ಹೊಸ ರಾಸಾಯನಿಕ ಸಂಯೋಜನೆಗಳು ಕಾಣಿಸಿಕೊಳ್ಳುತ್ತಿವೆ. ಡ್ರಗ್ಸ್ ಸೇವನೆಗೆ ಬಲಿಯಾಗುತ್ತಿರುವ ಯುವ ಸಮೂಹದ ಸಮಸ್ಯೆಯ ಮೂಲವನ್ನು ಗಮನಿಸಿದರೆ ಯುವಜನರಲ್ಲಿ ಹೆಚ್ಚುತ್ತಿರುವ ಒತ್ತಡ, ಉದ್ಯೋಗದ ಅನಿಶ್ಚಿತತೆ, ಮಾನಸಿಕ ಸಮಸ್ಯೆಗಳು ಮತ್ತು ಸಾಮಾಜಿಕ ಬೆಂಬಲದ ಕೊರತೆಗಳು ಪ್ರಮುಖ ಕಾರಣಗಳಾಗಿವೆ. ಡ್ರಗ್ಸ್ ಸೇವನೆ ಕೆಲವರಿಗೆ ತಾತ್ಕಾಲಿಕ ನಿರಾಳತೆಯನ್ನು ನೀಡಬಹುದು. ಆದರೆ ಅದು ದೀರ್ಘಕಾಲದಲ್ಲಿ ಜೀವಕ್ಕೆ ಕುತ್ತನ್ನು ಉಂಟುಮಾಡುತ್ತದೆ. ಅದರಲ್ಲೂ, 'ಝೊಂಬಿ ಡ್ರಗ್'ನಂತಹ ಅಪಾಯಕಾರಿ ಪದಾರ್ಥಗಳು ವ್ಯಕ್ತಿಯ ಜೀವನವನ್ನೇ ಸಂಪೂರ್ಣವಾಗಿ ಹಾಳು ಮಾಡಬಹುದು.

ಆದುದರಿಂದ, ಸರ್ಕಾರ ಈ ಬಗ್ಗೆ ಗಮನ ಹರಿಸಿ ಸೂಕ್ತ ಕಾನೂನು ಜಾರಿಗೊಳಿಸಬೇಕಾದ ಅವಶ್ಯಕತೆಯಿದೆ. ಹೊಸ ಹೊಸ ಬಗೆಯ ಡ್ರಗ್ಸ್ ಸಾಗಾಣಿಕೆಯನ್ನು ತಡೆಯಲು ಗಡಿ ನಿಯಂತ್ರಣ, ಗುಪ್ತಚರ ಮಾಹಿತಿ ವ್ಯವಸ್ಥೆ ಮತ್ತು ಕಠಿಣ ಕ್ರಮಗಳು ಅಗತ್ಯ. ಒಟ್ಟಿನಲ್ಲಿ, ಚಂಡೀಗಢದ ಈ ಘಟನೆ ನಮಗೆ ಒಂದು ಎಚ್ಚರಿಕೆಯ ಘಂಟೆಯಾಗಿದೆ. 'ಝೊಂಬಿ ಡ್ರಗ್'ನಂತಹ ಅಪಾಯಕಾರಿ ಪದಾರ್ಥಗಳು ನಮ್ಮ ಸಮಾಜಕ್ಕೆ ಪ್ರವೇಶಿಸದಂತೆ ತಡೆಯಲು ಜಾಗೃತಿ, ಕಠಿಣ ಕಾನೂನು ಕ್ರಮಗಳು ಮತ್ತು ಮಾನಸಿಕ ಆರೋಗ್ಯದ ಕಡೆ ಹೆಚ್ಚಿನ ಗಮನ ಅಗತ್ಯ.

–ಡಾ. ಮೈತ್ರಿ ಭಟ್, ವಿಟ್ಲ

ಜಾಗತಿಕ ಯುದ್ಧ ಮಧ್ಯೆ ಭಾರತದ ಸುಗಮ ಹಾದಿ

• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಯುದ್ಧದಿಂದಾಗಿ ಕಳೆದೊಂದು ತಿಂಗಳಿನಿಂದ ಜಗತ್ತು ಹಲವಾರು ರೀತಿಯ ಸಮಸ್ಯೆಯನ್ನು ಎದುರಿಸುತ್ತಿದೆ. ಇಂಧನ ಸರಬರಾಜು ಕೊರತೆಯಿಂದ ಹಲವು ದೇಶಗಳಲ್ಲಿ ಮನೆಯಿಂದಲೇ ಕೆಲಸ(ವರ್ಕ್ ಫ್ರಂ ಹೋಮ್) ಶಾಲಾ ಮಕ್ಕಳಿಗೆ ಆನ್‌ಲೈನ್ ತರಗತಿ ಸೇರಿದಂತೆ ಹಲವು ಬದಲಾವಣೆಗಳನ್ನು ತಂದಿದೆ. ಆದರೇ ಭಾರತ ಮಾತ್ರ ಯಾವುದೇ ಬದಲಾವಣೆಗಳನ್ನು ತರದೇ ಎಂದಿನಂತೇ ಜೀವನ ನಡೆಸುತ್ತಿದೆ. ನಿರ್ಬಂಧಗಳ ಹೊರತಾಗಿಯೂ, ಯುದ್ಧಗ್ರಸ್ತ ಮಾರ್ಗದ ಮೂಲಕ ಅತಿ ಹೆಚ್ಚು ಹಡಗುಗಳನ್ನು ಸಾಗಣೆ ಮಾಡಿದ ದೇಶಗಳಲ್ಲಿ ಭಾರತ ಅಗ್ರಸ್ಥಾನದಲ್ಲಿದೆ. ಇದಕ್ಕೆ ಜ್ವಲಂತ ಸಾಕ್ಷಿ ಎಂಬಂತೆ ಸಂಘರ್ಷ ಆರಂಭವಾದ ನಂತರ ಈ ವರೆಗೂ



ಕನಿಷ್ಠ 8 ಭಾರತೀಯ ಹಡಗುಗಳು ಹಾರ್ಮುಜ್ ಜಲಸಂಧಿಯನ್ನು ದಾಟಿವೆ. ಸಂಘರ್ಷದ ನಡುವೆ ಶುಕ್ರವಾರ ಭಾರತ ಧ್ವಜ ಹಾರಿಸಿರುವ ಏಳನೇ ಎಲ್‌ಪಿಜಿ ಟ್ಯಾಂಕರ್ ಗ್ರೀನ್ ಸಾನ್ವಿ ಹಾರ್ಮುಜ್ ಜಲಸಂಧಿಯನ್ನು ದಾಟಿದ ಸಂದರ್ಭದಲ್ಲಿ, ಇರಾನ್ ಭಾರತಕ್ಕೆ ವಿಶೇಷ ಸಂದೇಶವೊಂದನ್ನು ರವಾನಿಸಿದೆ. ಭಾರತದ ರಾಜತಂತ್ರದ ಯಶಸ್ಸನ್ನು ಜಗತ್ತೇ ನಿಬ್ಬೆರಗಾಗಿ ನೋಡುವಂತೆ ಮಾಡಿದೆ. ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಮಾಡಿದ ಪೋಸ್ಟ್‌ನಲ್ಲಿ ಮುಂಬೈಯಲ್ಲಿರುವ ಇರಾನ್ ದೂತಾವಾಸ ಕಚೇರಿ ಭಾರತ, ವಿಶೇಷವಾಗಿ ಗುಜರಾತ್, ನಮ್ಮ ಸಾಮೂಹಿಕ ಇತಿಹಾಸದಲ್ಲಿ ಒಂದು ಅತ್ಯಂತ ಮೌಲ್ಯವಾದ ಸ್ಥಾನ ಹೊಂದಿದೆ ಎಂದು ತಿಳಿಸಿದೆ.

ಶತ್ರು ಪೈಲಟ್ ಹುಡುಕಿ

• **ಟೆಲ್ ಅವಿವ್/ಟೆಹ್ರಾನ್:** ನೈಋತ್ಯ ಇರಾನ್‌ನ ದೂರದ ಪ್ರದೇಶದಲ್ಲಿ ನಾಪತ್ತೆಯಾದ ಪೈಲಟ್‌ನನ್ನು ಪತ್ತೆಹಚ್ಚಲು ಅಮೆರಿಕ ಸೇನೆ ಶನಿವಾರ ತೀವ್ರ ಹುಡುಕಾಟ ನಡೆಸಿತು. ಇಸ್ಲಾಮಿಕ್ ರಿಪಬ್ಲಿಕ್ ಶುಕ್ರವಾರ ಅಮೆರಿಕದ ಯುದ್ಧವಿಮಾನವನ್ನು ಹೊಡೆದುರುಳಿಸಿ, ಪೈಲಟ್‌ನನ್ನು ಒಪ್ಪಿಸುವವರಿಗೆ ಬಹುಮಾನ ಘೋಷಿಸಿದೆ. ಅಮೆರಿಕ ಪೈಲಟ್‌ಗಾಗಿ ಹುಡುಕಾಟ ಇರಾನ್‌ನ ನೈಋತ್ಯ ಪ್ರಾಂತ್ಯ ಕೊಹ್ಗಿಲ್ಯೂಯೆ ಮತ್ತು ಬೊಯರ್-ಅಹ್ಮದ್‌ನ ಪರ್ವತ ಪ್ರದೇಶದಲ್ಲಿ ಕೇಂದ್ರೀಕೃತವಾಗಿದೆ. ಇರಾನ್ ತನ್ನ ನಿವಾಸಿಗಳಿಗೆ ಯಾವುದೇ ಶತ್ರು ಪೈಲಟ್ ಸಿಕ್ಕರೆ ಪೊಲೀಸರಿಗೆ ಒಪ್ಪಿಸಿ ಎಂದು ಕರೆ ನೀಡಿದೆ. ಪ್ರತ್ಯೇಕವಾಗಿ, ಇರಾನ್ ರಾಜ್ಯ ಮಾಧ್ಯಮ ತಿಳಿಸಿದ ಪ್ರಕಾರ ಅಮೆರಿಕದ ಎ-10 ದಾಳಿ ವಿಮಾನ ಒಂದು ಇರಾನಿ ರಕ್ಷಣಾ ಪಡೆಯ ಹೊಡೆತಕ್ಕೆ ಸಿಲುಕಿ ಪರ್ಷಿಯನ್ ಕೊಲ್ಲಿಯಲ್ಲಿ ಪತನಗೊಂಡಿದೆ.

ಮಾತುಕತೆ ನಿಂತಿಲ್ಲ

ಪಾಕಿಸ್ತಾನ, ಟರ್ಕಿ ಮತ್ತು ಈಜಿಪ್ಟ್‌ನ ಮಧ್ಯವರ್ತಿಗಳು ಅಮೆರಿಕ ಮತ್ತು ಇರಾನ್ ಅನ್ನು ಮತ್ತೆ ಮಾತುಕತೆಯ ಮೇಜಿಗೆ ತರಲು ಇನ್ನೂ ಕೆಲಸ ಮಾಡುತ್ತಿದ್ದಾರೆ. ಯುದ್ಧವನ್ನು ನಿಲ್ಲಿಸಲು ಮತ್ತು ನಿರ್ಣಾಯಕ ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲು ಅಮೆರಿಕ ಮತ್ತು ಇರಾನಿನ ಬೇಡಿಕೆಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಪ್ರಾದೇಶಿಕ ಶಕ್ತಿಗಳು ರಾಜಿ ಮಾರ್ಗ ಹುಡುಕುತ್ತಿವೆ ಎಂದು ಮೂಲಗಳು ಹೇಳಿವೆ.

ಪಾಕ್‌ಗೆ ಹೋಗಲ್ಲ ಎಂದಿಲ್ಲ

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘಚಿ ಅವರು ಮಾತನಾಡಿ, ಮಾತುಕತೆಗಾಗಿ ಪಾಕ್‌ಗೆ ಹೋಗಲ್ಲ ಎಂದು ತಾವು ಹೇಳಿಲ್ಲ ಎಂದಿದ್ದಾರೆ. ಜತೆಗೆ ಅಮೆರಿಕ ಜತೆಗೆ ಮಾತುಕತೆ ಆರಂಭಿಸಲು ಇಚ್ಛೆ ಇದೆ ಎಂದಿದ್ದಾರೆ. ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಟರ್ಕಿ ವಿದೇಶಾಂಗ ಸಚಿವರ ಜತೆ ಮಾತುಕತೆ ನಡೆಸಿರುವುದಾಗಿ ಹೇಳಿದ್ದಾರೆ.





ದುಬೈನಲ್ಲಿ ಒರಾಕಲ್ ಕಚೇರಿಗೆ ಹಾನಿ

ಇರಾನ್‌ನ ಅರೆಸೈನಿಕ ರಿವಲ್ಯೂಷನರಿ ಗಾರ್ಡ್ ಒರಾಕಲ್ ಕಂಪನಿಯನ್ನು ಗುರಿ ಮಾಡಿ ಬೆದರಿಕೆ ಹಾಕಿದ ನಂತರ, ಯುಎಇ ದುಬೈನಲ್ಲಿರುವ ಒರಾಕಲ್ ಕಚೇರಿಗೆ ಅನುಮಾನಾಸ್ಪದ ಇರಾನಿ ಡ್ರೋನ್ ಹಾನಿ ಮಾಡಿದೆ. ಎಪಿ ಸಂಸ್ಥೆಯು ಕಟ್ಟಡದ ನೈಋತ್ಯ ಮೂಲೆಯಲ್ಲಿ ದೊಡ್ಡ ರಂಧ್ರ ಕಾಣಿಸಿದ ದೃಶ್ಯಗಳನ್ನು ಪರಿಶೀಲಿಸಿ ದೃಢಪಡಿಸಿದೆ. ದುಬೈ ಮೀಡಿಯಾ ಕಚೇರಿ ಇದನ್ನು ವೈಮಾನಿಕ ತಡೆ ಸಮಯದಲ್ಲಿ ಬಿದ್ದ ಅವಶೇಷಗಳಿಂದ ಉಂಟಾದ ಸಣ್ಣ ಘಟನೆ ಎಂದು ಬಣ್ಣಿಸಿ, ಯಾವುದೇ ಗಾಯಗಳಾಗಿಲ್ಲ ಎಂದಿದೆ.

ಇಸ್ರೇಲ್ ವೈಮಾನಿಕ ದಾಳಿ

ಟೆಹ್ರಾನ್‌ನಲ್ಲಿರುವ ಬ್ಯಾಲಿಸ್ಟಿಕ್ ಮತ್ತು ವಿಮಾನ ವಿರೋಧಿ ಕ್ಷಿಪಣಿ ಸಂಗ್ರಹಣಾ ಕೇಂದ್ರಗಳ ಮೇಲೆ ಶನಿವಾರ ತನ್ನ ವಾಯುಪಡೆ ದಾಳಿ ನಡೆಸಿದೆ ಎಂದು ಇಸ್ರೇಲ್ ಸೇನೆ ಖಚಿತಪಡಿಸಿದೆ. ಶಸ್ತ್ರಾಸ್ತ್ರ ತಯಾರಿಕಾ ಘಟಕಗಳು ಮತ್ತು ಮಿಲಿಟರಿ ಸಂಶೋಧನಾ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಸಲಾಗಿದೆ. ಇರಾನ್‌ನ ಪ್ರಮುಖ ರಕ್ಷಣಾ ವ್ಯವಸ್ಥೆಗಳಿಗೆ ಹಾನಿ ಮಾಡುವ ಉದ್ದೇಶದಿಂದ ಈ ಕಾರ್ಯಾಚರಣೆ ಕೈಗೊಳ್ಳಲಾಗಿದೆ, ಎಂದು ಇಸ್ರೇಲ್ ಹೇಳಿದೆ.

ಇರಾನ್‌ನ ಪೆಟ್ರೋಕೆಮಿಕಲ್ ಘಟಕದ ಮೇಲೆ ದಾಳಿ

ಯುಎಸ್ ಮತ್ತು ಇಸ್ರೇಲಿ ಯುದ್ಧ ವಿಮಾನಗಳು ಶನಿವಾರ ಇರಾನ್ ಮೇಲೆ ದಾಳಿ ಮಾಡುವುದನ್ನು ಮುಂದುವರಿಸಿದ್ದು, ಪೆಟ್ರೋಕೆಮಿಕಲ್ ಸೌಲಭ್ಯ ಸೇರಿದಂತೆ ಹಲವಾರು ಗುರಿಗಳನ್ನು ಹೊಡೆದಿವೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ. ಇರಾನ್‌ನ ಅಧಿಕೃತ ಇಂಗ್ಲಿಷ್ ಭಾಷೆಯ ಪತ್ರಿಕೆ ಟೆಹ್ರಾನ್ ಟೈಮ್ಸ್ ಪಶ್ಚಿಮ ನಗರವಾದ ಮೆಹ್ರಾನ್‌ನಲ್ಲಿರುವ ಇರಾನ್‌ನ ಕೃಷಿ ಸಚಿವಾಲಯಕ್ಕೆ ಸೇರಿದ ಕೇಂದ್ರದ ಮೇಲೆ ವೈಮಾನಿಕ ದಾಳಿ ನಡೆದಿದೆ ಎಂದು ವರದಿ ಮಾಡಿದೆ.

ಬುಶೆಹರ್ ಪರಮಾಣು ಸ್ಥಾವರ ಬಳಿ ದಾಳಿ

• **ಬುಶೆಹರ್:** ಇರಾನ್‌ನ ಬುಶೆಹರ್ ಪರಮಾಣು ವಿದ್ಯುತ್ ಸ್ಥಾವರದ ಸಮೀಪ ಶನಿವಾರ ಕ್ಷಿಪಣಿಯೊಂದು ಅಪ್ಪಳಿಸಿದ್ದು, ಭದ್ರತಾ ತಂಡದ ಓರ್ವ ಸದಸ್ಯ ಮೃತಪಟ್ಟಿದ್ದಾರೆ. ಕಳೆದ ಎರಡು ವಾರಗಳಲ್ಲಿ ಈ ಪ್ರದೇಶದ ಮೇಲೆ ನಡೆದ ನಾಲ್ಕನೇ ದಾಳಿ ಇದಾಗಿದೆ. ಸ್ಫೋಟದ ಅವಶೇಷಗಳು ತಗುಲಿ ಸ್ಥಾವರದ ಭೌತಿಕ ರಕ್ಷಣಾ ವಿಭಾಗದ ಸಿಬ್ಬಂದಿಯೊಬ್ಬರು ಮೃತಪಟ್ಟಿರುವುದನ್ನು ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (ಐಎಇಎ) ಖಚಿತಪಡಿಸಿದೆ. ಸ್ಫೋಟದ ತೀವ್ರತೆ ಮತ್ತು ಅವಶೇಷಗಳಿಂದಾಗಿ ಸ್ಥಾವರದ ಒಳಗಿನ ಕಟ್ಟಡವೊಂದಕ್ಕೂ ಹಾನಿಯಾಗಿದೆ. ಆದರೆ, ದಾಳಿಯ ನಂತರ ವಿಕಿರಣ ಮಟ್ಟದಲ್ಲಿ ಯಾವುದೇ ಹೆಚ್ಚಳ ಕಂಡುಬಂದಿಲ್ಲ ಎಂದು ಇರಾನ್ ಅಧಿಕಾರಿಗಳು ಮತ್ತು ಅಂತಾರಾಷ್ಟ್ರೀಯ ವೀಕ್ಷಕರು ವರದಿ ಮಾಡಿದ್ದಾರೆ. ಐಎಇಎ ಮಹಾನಿರ್ದೇಶಕ ರಾಫೆಲ್ ಮರಿಯಾನೊ ಗ್ರೋಸಿ ಈ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ವಿಕಿರಣಶೀಲ ಪರಿಣಾಮ ಎಲ್ಲರ ಮೇಲೆ

ಬುಶೆಹರ್ ಪರಮಾಣು ವಿದ್ಯುತ್ ಸ್ಥಾವರದ ಮೇಲಿನ ನಿರಂತರ ದಾಳಿಯ ವಿಕಿರಣಶೀಲ ಪರಿಣಾಮವು ಟೆಹ್ರಾನ್ ಅಲ್ಲ, ಪ್ರಾದೇಶಿಕ ರಾಜಧಾನಿಗಳಲ್ಲಿ ಜೀವನವನ್ನು ಕೊನೆಗೊಳಿಸುತ್ತದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಶನಿವಾರ ಎಚ್ಚರಿಕೆ ನೀಡಿದ್ದಾರೆ. ಸ್ಥಾವರದ ಮೇಲೆ ಪದೇ ಪದೆ ನಡೆಯುತ್ತಿರುವ ದಾಳಿಗಳ ಬಗ್ಗೆ ಪಾಶ್ಚಿಮಾತ್ಯ ಸರ್ಕಾರಗಳು ಮೌನವಾಗಿವೆ ಎಂದು ಅವರು ಆರೋಪಿಸಿದರು. ಬುಶೆಹರ್ ಸಂಕೀರ್ಣದ ಮೇಲೆ ಶನಿವಾರ ನಾಲ್ಕನೇ ದಾಳಿ ನಡೆದಿದ್ದು, ಭದ್ರತಾ ಸಿಬ್ಬಂದಿ ಸಾವನ್ನಪ್ಪಿದ್ದಾರೆ. ಆದರೆ, ಇಂಟರ್‌ನ್ಯಾಷನಲ್ ಅಟಾಮಿಕ್ ಎನರ್ಜಿ ಏಜೆನ್ಸಿಯ ಪ್ರಕಾರ, ವಿಕಿರಣದ ಮಟ್ಟದಲ್ಲಿ ಯಾವುದೇ ಹೆಚ್ಚಳ ವರದಿಯಾಗಿಲ್ಲ.

ಕತಾರ್‌ಗೆ ಮೆಲೋನಿ ಭೇಟಿ

ಇರಾನ್ ಬಾಂಬ್ ದಾಳಿಯಿಂದ ಹಾನಿಗೊಳಗಾದ ಕತಾರ್ ಇಂಧನ ಮೂಲಸೌಕರ್ಯವನ್ನು ಪುನಃಸ್ಥಾಪಿಸಲು ಸಹಾಯ ಮಾಡುವುದಾಗಿ ಇಟಲಿ ಪ್ರಧಾನಿ ಮೆಲೋನಿ ಕತಾರ್ ನಾಯಕರಿಗೆ ಭರವಸೆ ನೀಡಿದರು. ಇರಾನ್ ವಿರುದ್ಧ ಯುಎಸ್-ಇಸ್ರೇಲ್ ಯುದ್ಧ ಪ್ರಾರಂಭವಾದ ನಂತರ ಗಲ್ಫ್ ಪ್ರದೇಶಕ್ಕೆ ಭೇಟಿ ನೀಡಿದ ಮೊದಲ ಇಯು, ಜಿ20 ಮತ್ತು ನ್ಯಾಟೋ ನಾಯಕಿ ಎಂಬ ಹೆಗ್ಗಳಿಕೆಗೂ ಮೆಲೋನಿ ಪಾತ್ರರಾಗಿದ್ದಾರೆ. ಸೌದಿ ಅರೇಬಿಯಾದಲ್ಲಿ ಶುಕ್ರವಾರ ಎರಡು ದಿನಗಳ ಭೇಟಿಯನ್ನು ಪ್ರಾರಂಭಿಸಿದ ಅವರು ಯುಎಇಗೂ ಭೇಟಿ ನೀಡಲಿದ್ದಾರೆ. ಮೆಲೋನಿ ಮತ್ತು ಕತಾರ್‌ನ ಅಮೀರ್ ಶೇಖ್ ತಮೀಮ್ ಬಿನ್ ಹಮದ್ ಅಲ್-ಥಾನಿ ಅವರು ಹೋರ್ಮುಜ್ ಜಲಸಂಧಿಯನ್ನು ತೆರೆಯುವ ಅಗತ್ಯವನ್ನು ಪುನರುಚ್ಚರಿಸಿದರು.

ಇರಾನ್‌ನೊಂದಿಗೆ ಯಾವುದೇ ಪಾವತಿ ಸಮಸ್ಯೆ ಇಲ್ಲ: ಕೇಂದ್ರ

• **ಹೊಸದಿಲ್ಲಿ:** ಭಾರತದತ್ತ ಬರುತ್ತಿದ್ದ ಕಚ್ಚಾ ತೈಲ ಕ್ಯಾರಿಯರ್ ಹಡಗು ಪಾವತಿ ಸಮಸ್ಯೆಯಿಂದ ಚೀನಾಗೆ ಮಾರ್ಗ ಬದಲಾಯಿಸಿದೆಯೆಂಬ ವರದಿಯನ್ನು ತೈಲ ಸಚಿವಾಲಯವು ತಳ್ಳಿಹಾಕಿದೆ. ಇರಾನ್‌ನೊಂದಿಗೆ ಯಾವುದೇ ಪಾವತಿ ಸಂಬಂಧಿತ ಸಮಸ್ಯೆಗಳಿಲ್ಲ. ನಮಗೆ ಬರಬೇಕಾಗಿದ್ದ ಸಂಪೂರ್ಣ ಕಚ್ಚಾ ತೈಲ ಈಗಾಗಲೇ ಪೂರೈಕೆಯಾಗಿವೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಶನಿವಾರ ಸ್ಪಷ್ಟಪಡಿಸಿದೆ.

ಭಾರತದ ವದಿನಾರ್‌ನಿಂದ ಇರಾನಿ ಕಚ್ಚಾ ತೈಲ ಹಡಗು ಚೀನಾಗೆ ಮಾರ್ಗ ಬದಲಿಸಿದ್ದು ಪಾವತಿ ಸಮಸ್ಯೆಗಳಿಂದ ಎಂಬುದು ತಪ್ಪು ಮಾಹಿತಿ. ಹಣಕಾಸು ಲೆಕ್ಕಾಚಾರಗಳನ್ನು ಗಮನದಲ್ಲಿಟ್ಟು, ಇರಾನ್ ಸಹಿತ 40 ರಾಷ್ಟ್ರಗಳ ವಿವಿಧ ಕಂಪನಿಗಳಿಂದ ಭಾರತ ಕಚ್ಚಾ ತೈಲ ಆಮದು ಮಾಡುತ್ತದೆ. ಹೀಗಾಗಿ ಇರಾನ್ ತೈಲ ಖರೀದಿಯಲ್ಲೂ ಯಾವುದೇ ಪಾವತಿ ಸಮಸ್ಯೆ ಎದುರಾಗಿಲ್ಲ ಎಂದು ಅದು ಹೇಳಿಕೊಂಡಿದೆ. ಹಡಗಿನ ಮಾರ್ಗ ಬದಲಾವಣೆ ಸುದ್ದಿಯಲ್ಲಿ ತೈಲ ವ್ಯಾಪಾರ ಹೇಗೆ ನಡೆಯುತ್ತದೆ ಎಂಬ ಸತ್ಯವನ್ನು ಕಡೆಗಣಿಸಲ್ಪಟ್ಟಿದೆ. ಬಿಲ್ ಪಾವತಿಸಿದ ಬಳಿಕ ಹಡಗುಗಳು ತಮ್ಮ ಸಂಚಾರ ಆರಂಭಿಸುತ್ತವೆ. ಮುಂದಿನ ತಿಂಗಳುಗಳಿಗೆ ಅಗತ್ಯವಿರುವ ಕಚ್ಚಾ ತೈಲವನ್ನು ಭಾರತ ಹೊಂದಿದೆ. ಇರಾನ್‌ನಿಂದ ಬರಬೇಕಾಗಿದ್ದ ಕಚ್ಚಾ ತೈಲ ಈಗಾಗಲೇ ಬಂದಿವೆ ಎಂದು ತೈಲ ಸಚಿವಾಲಯ ತಿಳಿಸಿದೆ. ಎಲ್‌ಪಿಜಿ ಪೂರೈಕೆ ವಿಚಾರದಲ್ಲೂ ಈ ರೀತಿ ತಪ್ಪು ಮಾಹಿತಿ ಪ್ರಸರಿಸಲಾಗಿದೆ.

ಇರಾನ್‌ಗೆ ಮತ್ತೆ ಟ್ರಂಪ್ ಗಡುವು

- ಇರಾನ್ ವಿರುದ್ಧ ಮತ್ತೆ ಕಿಡಿಕಾರಿದ ಟ್ರಂಪ್
- ಯುದ್ಧ ವಿಮಾನ ಪತನವಾದ ಮೇಲೆ ಆಕ್ರೋಶ
- ಮತ್ತೊಬ್ಬ ಪೈಲಟ್‌ಗಾಗಿ ನಡೆಯುತ್ತಲೇ ಇದೆ ಶೋಧ

• **ದುಬೈ/ವಾಷಿಂಗ್ಟನ್:** ಇರಾನ್ ವಿರುದ್ಧದ ಯುದ್ಧದಲ್ಲಿ ಅಮೆರಿಕದ ಎರಡು ಯುದ್ಧ ವಿಮಾನ ಪತನವಾಗಿರುವ ಘಟನೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ತೀವ್ರ ಆಕ್ರೋಶದ ವಿಚಾರವಾಗಿದ್ದು, ಈಗ ತನ್ನ ಜತೆ ಡೀಲ್ ಮಾಡಿಕೊಳ್ಳಲು 48 ಗಂಟೆಗಳ ಗಡುವು ನೀಡಿದ್ದಾರೆ. ಈ ಹಿಂದೆ ಯುದ್ಧದಲ್ಲಿ ಇರಾನ್ ಸೋತಿದೆ ಎಂದು ಟ್ರಂಪ್ ಘೋಷಿಸಿದ ತರುವಾಯ, ಈ ದೇಶವು ಅಮೆರಿಕದ ಯುದ್ಧ ವಿಮಾನಗಳನ್ನು ಟಾರ್ಗೆಟ್ ಮಾಡಿತ್ತು. ಅಷ್ಟೇ ಅಲ್ಲ, ಯಶಸ್ವಿಯಾಗಿ ಒಂದು ಯುದ್ಧ ವಿಮಾನವನ್ನು ಹೊಡೆದುರುಳಿಸಲಾಗಿದೆ. ಇದನ್ನು ಅಮೆರಿಕ ಕೂಡ ಒಪ್ಪಿಕೊಂಡಿದೆ. ಆದರೆ ಒಬ್ಬ ಪೈಲಟ್ ಮಾತ್ರ ಸಿಕ್ಕಿದ್ದು, ಮತ್ತೊಬ್ಬರ ಬಗ್ಗೆ ಸುಳಿವೇ ಇಲ್ಲ, ಇದೂ ಆಕ್ರೋಶಕ್ಕೆ ಕಾರಣವಾಗಿದೆ.

ಸಿಬ್ಬಂದಿಗಾಗಿ ಹುಡುಕಾಟ

ಸುಮಾರು ಐದು ವಾರಗಳ ಹಿಂದೆ ಇರಾನ್ ಯುದ್ಧ ಪ್ರಾರಂಭವಾದ ನಂತರ ಮೊದಲ ಗುಂಡಿನ ದಾಳಿ ಸೇರಿದಂತೆ ಎರಡು ಯುಎಸ್ ಯುದ್ಧ ವಿಮಾನಗಳು ಪತನಗೊಂಡ ನಂತರ, ಕಾಣೆಯಾದ ಯುಎಸ್ ಪೈಲಟ್‌ಗಾಗಿ ಹುಡುಕಾಟ ನಡೆಯುತ್ತಿದ್ದು, ಇನ್ನೊಬ್ಬರನ್ನು ರಕ್ಷಿಸಲಾಗಿದೆ.



ಕಿರುಸುದ್ಧಿ

ಎಟಿಎಸ್‌ನಿಂದ ನಾಲ್ವರು ಉಗ್ರರ ಸೆರೆ

• **ಲಖನೌ:** ರಾಷ್ಟ್ರೀಯ ಮೂಲಸೌಕರ್ಯ ಮತ್ತು ರಾಜಕೀಯ ಮುಖಂಡರ ಮೇಲೆ ದಾಳಿ ನಡೆಸಲು ಸಂಚು ರೂಪಿಸಿದ್ದ ಪಾಕಿಸ್ತಾನ ಮೂಲದ ಜಾಲಕ್ಕೆ ಸೇರಿದ ನಾಲ್ವರು ವ್ಯಕ್ತಿಗಳನ್ನು ಉತ್ತರ ಪ್ರದೇಶ ಭಯೋತ್ಪಾದನಾ ನಿರೋಧಕ ದಳ (ಎಟಿಎಸ್) ಏಪ್ರಿಲ್ 2 ರಂದು ಬಂಧಿಸಿದೆ. ಲಕ್ನೋ ರೈಲ್ವೇ ನಿಲ್ದಾಣದ ಬಳಿ ರೈಲ್ವೆ ಸಿಗ್ನಲ್‌ಗಳನ್ನು ಗುರಿಯಾಗಿಸಿಕೊಂಡಿದ್ದ ಸಾಕಿಬ್, ಅರ್ಬಾಬ್, ವಿಕಾಸ್ ಪೆಹ್ಲಾವತ್ ಮತ್ತು ಲೋಕೇಶ್ ಅವರನ್ನು ಬಂಧಿಸಲಾಗಿದೆ. ಬಂಧಿತರಿಂದ ದಹನಕಾರಿ ವಸ್ತುಗಳು, ಸ್ಮಾರ್ಟ್‌ಫೋನ್‌ಗಳು ಮತ್ತು ಕರಪತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ತಂಡ, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕ ಸಾಧಿಸಲು ಸಾಮಾಜಿಕ ಮಾಧ್ಯಮಗಳನ್ನು ಬಳಸುತ್ತಿತ್ತು ಹಾಗೂ ಘಾಜಿಯಾಬಾದ್, ಅಲಿಗಢ ಮತ್ತು ಲಕ್ನೋಗಳಲ್ಲಿ ಸಂಚು ರೂಪಿಸಲು ಸ್ಥಳ ಪರಿಶೀಲನೆ ನಡೆಸಿತ್ತು ಎಂದು ತಿಳಿದುಬಂದಿದೆ.

ಸಂಕಷ್ಟ ನಡುವೆಯೂ ಭಾರತ ದೃಢ: ಜೈಶಂಕರ್

• **ರಾಯ್ಪುರ:** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಮಿಲಿಟರಿ ಸಂಘರ್ಷದಂತಹ ಜಾಗತಿಕ ಆಘಾತಗಳನ್ನು ಭಾರತ ಯಶಸ್ವಿಯಾಗಿ ಎದುರಿಸಿದೆ. ತನ್ನ ಸದೃಢತೆಯನ್ನು ಸಾಬೀತುಪಡಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಶನಿವಾರ ತಿಳಿಸಿದ್ದಾರೆ. ಭಾರತ ಇಂದು ವಿಶ್ವದ ಅಗ್ರ ಐದು ಆರ್ಥಿಕತೆಗಳಲ್ಲಿ ಒಂದಾಗಿದೆ. ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆ, ಪ್ರಾತಿನಿಧಿಕ ರಾಜಕಾರಣ ಮತ್ತು ನಿರ್ಣಾಯಕ ನಾಯಕತ್ವದಿಂದ ಈ ಸ್ಥಾನ ಲಭ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಫೆ.28ರಂದು ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ನಡೆಸಿದ ನಂತರ ಆರಂಭವಾದ ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ನಡುವೆಯೂ ದೇಶ ಆಂತರಿಕ ಮತ್ತು ಬಾಹ್ಯ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಿದೆ ಎಂದು ಅವರು ಹೇಳಿದರು.

ಸಾವಿರ ಕೆಜಿ ತೂಕದ ದೇಸಿ ವೈಮಾನಿಕ ಬಾಂಬ್ ಅಭಿವೃದ್ಧಿ

• **ಹೊಸದಿಲ್ಲಿ:** ಭಾರತೀಯ ವಾಯುಪಡೆಗೆ (ಐಎಎಫ್) ಬೆಂಬಲ ನೀಡಲು 1,000 ಕೆಜಿ ತೂಕದ ವೈಮಾನಿಕ ಬಾಂಬ್‌ಗಳ ಸ್ವದೇಶಿ ವಿನ್ಯಾಸ, ಅಭಿವೃದ್ಧಿ ಮತ್ತು ಖರೀದಿಗಾಗಿ ರಕ್ಷಣಾ ಸಚಿವಾಲಯ ಆಸಕ್ತಿ ಪತ್ರವನ್ನು (ಇಒಐ) ಹೊರಡಿಸಿದೆ. ಈ ಯೋಜನೆ ಕೈಗಾರಿಕಾ ಅನುದಾನಿತ 'ಮೇಕ್-' ಉಪ-ವರ್ಗದಲ್ಲಿ ನಡೆಯಲಿದ್ದು, ಎರಡು ಪ್ರತ್ಯೇಕ ಹಂತಗಳನ್ನು ಒಳಗೊಂಡಿದೆ. ಆರಂಭದಲ್ಲಿ, ಅಭಿವೃದ್ಧಿ ಸಂಸ್ಥೆಗಳು ಆರು ಮಾದರಿಗಳನ್ನು (ಪ್ರೊಟೊಟೈಪ್ಸ್) ತಯಾರಿಸಲಿವೆ. ಯಶಸ್ವಿ ಪ್ರಯೋಗಗಳ ನಂತರ, ಸ್ವದೇಶಿ ವಿನ್ಯಾಸ, ಅಭಿವೃದ್ಧಿ ಮತ್ತು ತಯಾರಿಕೆ (ಐಡಿಡಿಎಂ) ವರ್ಗದಲ್ಲಿ 600 ಬಾಂಬ್‌ಗಳನ್ನು ಖರೀದಿಸಲು ಸಚಿವಾಲಯ ಯೋಜಿಸಿದೆ.

ರಕ್ಷಣಾ ರಫ್ತು ದಾಖಲೆ ಮಟ್ಟದ ಏರಿಕೆ

• **ಹೊಸದಿಲ್ಲಿ:** ಭಾರತದ ರಕ್ಷಣಾ ರಫ್ತು 2025-26 ಆರ್ಥಿಕ ವರ್ಷದಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದ್ದು, ಒಟ್ಟು 38,424 ಕೋಟಿ ರೂ. ದಾಖಲಾಗಿದೆ. 2016-17ರಲ್ಲಿ ಕೇವಲ 1,522 ಕೋಟಿ ರೂ. ಇದ್ದ ರಫ್ತು, ಕಳೆದ ದಶಕದಲ್ಲಿ ಸುಮಾರು 25 ಪಟ್ಟು ಏರಿಕೆಯಾಗಿರುವುದು ಗಮನಾರ್ಹವಾಗಿದೆ. ಇದರಿಂದ ಜಾಗತಿಕ ರಕ್ಷಣಾ ಮಾರುಕಟ್ಟೆಯಲ್ಲಿ ಭಾರತದ ಸ್ಥಾನ ಮತ್ತಷ್ಟು ಬಲಗೊಂಡಿದೆ. ಭಾರತೀಯ ರಕ್ಷಣಾ ಉತ್ಪನ್ನಗಳಿಗೆ ಜಾಗತಿಕ ಮಟ್ಟದಲ್ಲಿ ಬೇಡಿಕೆ ಹೆಚ್ಚುತ್ತಿದ್ದು, ಮ್ಯಾನ್ಮಾರ್ ಅತಿ ದೊಡ್ಡ ಖರೀದಿದಾರ ದೇಶವಾಗಿ ಹೊರಹೊಮ್ಮಿದೆ. ಒಟ್ಟು ರಫ್ತಿನಲ್ಲಿ



ಸುಮಾರು ಶೇ.28 ಪಾಲು ಮ್ಯಾನ್ಮಾರ್‌ಗೆ ಸೇರಿದೆ. ಫಿಲಿಪ್ಪೈನ್ಸ್ (19%) ಮತ್ತು ಅರ್ಮೇನಿಯಾ (15%) ಮುಂದಿನ ಸ್ಥಾನಗಳಲ್ಲಿ ಇದ್ದು, ಈ ಮೂರು ದೇಶಗಳೇ ಒಟ್ಟು ರಫ್ತಿನ 60% ಕ್ಕೂ ಹೆಚ್ಚು ಪಾಲು ಹೊಂದಿವೆ. ಇದಲ್ಲದೆ ಶ್ರೀಲಂಕಾ, ಮೋರಿಷಸ್, ಸೆಶೆಲ್ಸ್, ವಿಯೆಟ್ನಾಂ ಸೇರಿದಂತೆ ಅನೇಕ ದೇಶಗಳೂ ಭಾರತೀಯ ರಕ್ಷಣಾ ಸಾಧನಗಳನ್ನು ಖರೀದಿಸುತ್ತಿವೆ.

ರಫ್ತಾಗುತ್ತಿರುವ ಉತ್ಪನ್ನಗಳಲ್ಲಿ ನೌಕಾಪಡೆಗೆ ಸಂಬಂಧಿಸಿದ ಸಾಧನಗಳೇ ಪ್ರಮುಖವಾಗಿದ್ದು, ಒಟ್ಟು ರಫ್ತಿನಲ್ಲಿ ಸುಮಾರು ಶೇ.55 ಪಾಲು ಹೊಂದಿವೆ. ಇದಕ್ಕೆ ಜೊತೆಗೆ ಗನ್ ಮತ್ತು ತೋಪು ವ್ಯವಸ್ಥೆಗಳು, ಕ್ಷಿಪಣಿ ವ್ಯವಸ್ಥೆಗಳು, ನಿಗಾ ಸಾಧನಗಳು, ಸೆನ್ಸರ್‌ಗಳು, ವಿಮಾನ ಮತ್ತು ಇತರೆ ಉನ್ನತ ತಂತ್ರಜ್ಞಾನಾಧಾರಿತ ರಕ್ಷಣಾ ಸಾಧನಗಳೂ ರಫ್ತಾಗುತ್ತಿವೆ.

ಕೊರೊನಾ ಅವಧಿಯಲ್ಲಿ ಸ್ವಲ್ಪ ಕುಸಿತ ಕಂಡಿದ್ದರೂ, 2021-22ರಿಂದ ರಫ್ತು ಮತ್ತೆ ವೇಗ ಪಡೆದುಕೊಂಡಿದ್ದು, 2023-24ರಿಂದ 2025-26ರ ಅವಧಿಯಲ್ಲಿ 21,083 ಕೋಟಿ ರೂ.ನಿಂದ 38,424 ಕೋಟಿ ರೂ.ಗೆ ಏರಿಕೆಯಾಗಿದೆ.

ಈ ಸಾಧನೆ ಆತ್ಮನಿರ್ಭರ ಭಾರತ ದೃಷ್ಟಿಕೋನಕ್ಕೆ ಮತ್ತಷ್ಟು ಬಲ ನೀಡಿದ್ದು, ಭಾರತವು ಜಾಗತಿಕ ರಕ್ಷಣಾ ಸರಬರಾಜು ಕ್ಷೇತ್ರದಲ್ಲಿ ಪ್ರಮುಖ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ. ಮುಂದಿನ ವರ್ಷಗಳಲ್ಲಿ ಭಾರತದ ರಕ್ಷಣಾ ರಫ್ತು ಇನ್ನಷ್ಟು ಏರಿಕೆಯಾಗುವ ನಿರೀಕ್ಷೆ ವ್ಯಕ್ತವಾಗಿದೆ.

- 38,424 ಕೋಟಿ ರೂ. ಇತಿಹಾಸದಲ್ಲೇ ಅತಿ ಹೆಚ್ಚು ರಫ್ತು
- 2016ರಿಂದ 25 ಪಟ್ಟು ಏರಿಕೆ
- ಮ್ಯಾನ್ಮಾರ್, ಫಿಲಿಪ್ಪೈನ್ಸ್, ಅರ್ಮೇನಿಯಾ ಪ್ರಮುಖ ಖರೀದಿದಾರರು
- ನೌಕಾ ಸಾಧನಗಳಿಗೆ 55% ಪಾಲು

ಭಾರತ ಏನು ರಫ್ತು ಮಾಡುತ್ತಿದೆ?

ಭಾರತದ ರಕ್ಷಣಾ ರಫ್ತಿನಲ್ಲಿ ನೌಕಾಪಡೆಗೆ ಸಂಬಂಧಿಸಿದ ಸಾಧನಗಳೇ ಮುಂಚೂಣಿಯಲ್ಲಿದ್ದು, ಒಟ್ಟು ರಫ್ತಿನಲ್ಲಿ ಸುಮಾರು 55% ಪಾಲು ಹೊಂದಿವೆ.

- ಗನ್ ಹಾಗೂ ತೋಪು ವ್ಯವಸ್ಥೆಗಳು
- ಕ್ಷಿಪಣಿ ವ್ಯವಸ್ಥೆಗಳು
- ನಿಗಾವ್ಯವಸ್ಥೆ ಮತ್ತು ಸೆನ್ಸರ್‌ಗಳು
- ವಿಮಾನ ಹಾಗೂ ರಕ್ಷಣಾ ತಂತ್ರಜ್ಞಾನ

ಲಡಾಖ್: ಗಗನಯಾತ್ರಿಗಳ ಮಾನಸಿಕ, ದೈಹಿಕ ಪರೀಕ್ಷೆ

• **ಹೊಸದಿಲ್ಲಿ:** ಗಗನಯಾತ್ರಿಗಳ ಮಾನಸಿಕ, ದೈಹಿಕ, ಮತ್ತು ಕಾರ್ಯಾಚರಣಾ ಸಾಮರ್ಥ್ಯ ಪರೀಕ್ಷೆಯ ಉದ್ದೇಶದಿಂದ ಇಸ್ರೋ ಲಡಾಖ್‌ನಲ್ಲಿ ಮಿಷನ್ ಮಿತ್ರ ಕಾರ್ಯಾಚರಣೆಗೆ ಚಾಲನೆ ನೀಡಿದೆ. ಅತಿ ಎತ್ತರದ ಪ್ರದೇಶಗಳಲ್ಲಿ ಕ್ರೂ ಸದಸ್ಯರು ಹೇಗೆ ಕಾರ್ಯಾಚರಣೆ ನಡೆಸುತ್ತಾರೆಂದು ಗಮನಿಸಲಾಗುವುದು. ಭಾರತದ ಮಹತ್ವಾಕಾಂಕ್ಷಿ ಬಾಹ್ಯಾಕಾಶ ಯೋಜನೆ ಗಗನಯಾನ ಹಾಗೂ ಮುಂಬರುವ ದೀರ್ಘಕಾಲದ ಯೋಜನೆಗಳಿಗಾಗಿ ಕ್ರೂ ಸದಸ್ಯರ ಪ್ರದರ್ಶನವನ್ನು ಅಳೆಯಲಾಗುವುದು. ಸಮುದ್ರ ಮಟ್ಟದಿಂದ 3,500 ಮೀ. ಎತ್ತರದ ಲೇಹ್‌ನಲ್ಲಿ ಏ.9ರವರೆಗೆ ಮಿಷನ್ ಮಿತ್ರ (ಪರಸ್ಪರ ಕಾರ್ಯಸಾಧ್ಯಗಳ ನಕ್ಷೆ ಮತ್ತು ಪ್ರತಿಕ್ರಿಯೆ ಮೌಲ್ಯಮಾಪನ) ನಡೆಸಲಾಗುತ್ತಿದೆ. ಹೈಪೋಕ್ಸಿಯಾ (ಆಮ್ಲಜನಕದ ಕೊರತೆ), ಕಡಿಮೆ ತಾಪಮಾನದ ಪರಿಸ್ಥಿತಿಯ ಅನುಕರಣೆ ಮತ್ತು ಬಾಹ್ಯಾಕಾಶ ಯಾನಕ್ಕೆ ಸ್ವಾಭಾವಿಕ ಹೋಲಿಕೆಯ ಏಕಾಂಗಿತನದ ಪರಿಸರದಲ್ಲಿದ್ದು ಪರೀಕ್ಷೆ ನಡೆಸಲಾಗುತ್ತದೆ. ಇಸ್ರೋ ಹಾಗೂ ಭಾರತೀಯ ವಾಯುಪಡೆಯ ಏರೋಸ್ಪೇಸ್ ಮೆಡಿಸಿನ್ ಸಂಸ್ಥೆ ಈ ಮಿಷನ್ ಅನ್ನು ವಿನ್ಯಾಸಗೊಳಿಸಿದ್ದು, ಬೆಂಗಳೂರಿನ ನವೋದ್ಯಮ ಪ್ರೋಟೋಪ್ಲಾನೆಟ್ ಸೌಲಭ್ಯ ನಿರ್ವಹಣೆ ಮತ್ತು ಕಾನೂನುಬದ್ಧ ಪ್ರೋಟೋಕಾಲ್‌ಗಳ ಜವಾಬ್ದಾರಿಯನ್ನು ವಹಿಸಿಕೊಂಡಿದೆ. ಎಲ್ಲಾ ಮಾನವ ಬಾಹ್ಯಾಕಾಶ ಯೋಜನೆಗಳಲ್ಲಿ ಸಿಬ್ಬಂದಿಯ ಸುರಕ್ಷತೆ ಮತ್ತು ಕಾರ್ಯಕ್ಷಮತೆ ಅತ್ಯಂತ ಮುಖ್ಯ ಅಂಶಗಳಾಗಿವೆ. ಪರಿಣಾಮಕಾರಿ ಸಂವಹನ ನಡೆಸುವುದು, ಒತ್ತಡಕ್ಕೆ ಹೊಂದಿಕೊಳ್ಳುವುದು, ಮಾನಸಿಕ ಸ್ಥೈರ್ಯವನ್ನು ಕಾಪಾಡುವುದು ಮತ್ತು ಪರಸ್ಪರ ಬೆಂಬಲಿಸುವ ಸಾಮರ್ಥ್ಯವೇ ಎಲ್ಲಾ ಯೋಜನೆಗಳ ಯಶಸ್ಸು ಮತ್ತು ಸುರಕ್ಷತೆಯನ್ನು ನಿರ್ಧರಿಸುತ್ತದೆ ಎಂದು ಇಸ್ರೋ ತನ್ನ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಫ್ಘಾನಿಸ್ತಾನದಲ್ಲಿ 5.8 ತೀವ್ರತೆಯ ಭೂಕಂಪ: 8 ಮಂದಿ ಸಾವು

• **ಕಾಬೂಲ್:** ಅಫ್ಘಾನಿಸ್ತಾನದ ಉತ್ತರ ಮತ್ತು ಪೂರ್ವ ಭಾಗ ಹಾಗೂ ಪಾಕಿಸ್ತಾನದ ಪಶ್ಚಿಮ ಭಾಗದಲ್ಲಿ ಶುಕ್ರವಾರ ತಡರಾತ್ರಿ 5.8 ತೀವ್ರತೆಯ ಭೂಕಂಪ ಸಂಭವಿಸಿದ್ದು, ಕಾಬೂಲ್‌ನಲ್ಲಿ ಕನಿಷ್ಠ ಎಂಟು ಜನರು ಮೃತಪಟ್ಟಿದ್ದಾರೆ. ಕಾಬೂಲ್ ಗವರ್ನರ್ ವಕ್ತಾರ ಹಫೀಜುಲ್ಲಾ ಬಶಾರತ್ ಮಾತನಾಡಿ, ಕಾಬೂಲ್‌ನ ಹೊರವಲಯದಲ್ಲಿ ಮನೆಯೊಂದು ಕುಸಿದು ಒಂದೇ ಕುಟುಂಬದ ಎಂಟು ಮಂದಿ ಮೃತಪಟ್ಟಿದ್ದು, ಮಗುವೊಂದು ಗಾಯಗೊಂಡಿದೆ ಎಂದು ತಿಳಿಸಿದ್ದಾರೆ. ಆರೋಗ್ಯ ಸಚಿವಾಲಯದ ವಕ್ತಾರ ಶರಾಫತ್ ಜಮಾನ್ ಅವರು ಪ್ರಾಂತೀಯ ಆರೋಗ್ಯ ಅಧಿಕಾರಿಗಳನ್ನು ಜಾಗರೂಕರಾಗಿರುವಂತೆ ಸೂಚಿಸಿದ್ದಾರೆ. ಭೂಕಂಪದ ಕೇಂದ್ರಬಿಂದು ಕುಂದುಜ್ ನಗರದಿಂದ 150 ಕಿಲೋಮೀಟರ್ ದೂರದಲ್ಲಿರುವ ಹಿಂದೂ ಕುಶ್ ಪರ್ವತ ಶ್ರೇಣಿಯಲ್ಲಿತ್ತು. ಇಸ್ಲಾಮಾಬಾದ್, ಪೇಶಾವರ ಮತ್ತು ಸ್ವಾತ್ ನಗರಗಳಲ್ಲಿಯೂ ನಡುಕ ಉಂಟಾಗಿದೆಯಾದರೂ, ಪಾಕಿಸ್ತಾನದಲ್ಲಿ ಯಾವುದೇ ಹಾನಿಯಾದ ಬಗ್ಗೆ ವರದಿಯಾಗಿಲ್ಲ. ಕಳೆದ ಆಗಸ್ಟ್‌ನಲ್ಲಿ ಸಂಭವಿಸಿದ 6.0 ತೀವ್ರತೆಯ ಭೂಕಂಪಕ್ಕೆ 2,200 ಜನರು ಬಲಿಯಾಗಿದ್ದರು.

ರಾಷ್ಟ್ರೀಯ ಚೇತನ ಜಾಗೃತಿಗೆ ಆರ್‌ಎಸ್‌ಎಸ್ ಭಾರೀ ಅಭಿಯಾನ | 62 ಸಾವಿರ ಕಾರ್ಯಕ್ರಮ, 32 ಲಕ್ಷ ಸ್ವಯಂಸೇವಕರು

ಹತ್ತು ಕೋಟಿ ಮನೆಗಳನ್ನು ತಲುಪಿದ ಆರ್‌ಎಸ್‌ಎಸ್

• **ಹೊಸದಿಲ್ಲಿ :** ಸಮಾಜದಲ್ಲಿ ಗುರುತು ಆಧಾರಿತ ಭೇದಗಳನ್ನು ಉಂಟುಮಾಡುವ ಯತ್ನಗಳ ನಡುವೆಯೂ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ದೇಶದಲ್ಲಿ ರಾಷ್ಟ್ರೀಯ ಚೇತನವನ್ನು ಜಾಗೃತಿಗೊಳಿಸುವಲ್ಲಿ ಹಾಗೂ ವಿಸ್ತರಿಸುವಲ್ಲಿ ಮಹತ್ತರ ಸಾಧನೆ ಮಾಡಿದೆ ಎಂದು ಸಂಘದೊಂದಿಗೆ ಸಂಬಂಧಿತ ವಾರಪತ್ರಿಕೆ ಆರ್ಗನೈಸರ್ ತನ್ನ ಸಂಪಾದಕೀಯದಲ್ಲಿ ಪ್ರಶಂಸಿಸಿದೆ. 2025ರ ವಿಜಯದಶಮಿ ಉತ್ಸವದಿಂದ ಆರಂಭವಾದ ಸಂಘದ ಈ ಭಾರೀ ಅಭಿಯಾನವು ದೇಶವ್ಯಾಪಿಯಾಗಿ ಬಿರುಸುಗೊಂಡಿದ್ದು, ಕೇವಲ 15 ದಿನಗಳ ಅವಧಿಯಲ್ಲಿ 62,000ಕ್ಕೂ ಹೆಚ್ಚು ಕಾರ್ಯಕ್ರಮಗಳು ನಡೆಸಿದ್ದು, 32 ಲಕ್ಷಕ್ಕೂ ಅಧಿಕ ಸ್ವಯಂಸೇವಕರು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. 22,000 ಸ್ಥಳಗಳಲ್ಲಿ ನಡೆದ ಪಥ ಸಂಚಲನಗಳಲ್ಲಿ 25 ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಿರುವುದು ಗಮನಾರ್ಹವಾಗಿದೆ.

ಇದಕ್ಕೂ ಮೀರಿ, ಮನೆಮನೆಗೆ ತಲುಪುವ ಗೃಹ ಸಂಪರ್ಕ ಅಭಿಯಾನದ ಮೂಲಕ ಸಂಘವು ತನ್ನ ಪಂಚ ಪರಿವರ್ತನೆ ಸಂದೇಶವನ್ನು 10 ಕೋಟಿಗೂ ಅಧಿಕ ಕುಟುಂಬಗಳಿಗೆ ತಲುಪಿಸಿದೆ. ಈ ಅಭಿಯಾನವು 46 ಪ್ರಾಂತಗಳಲ್ಲಿ 37 ಪ್ರಾಂತಗಳನ್ನು ವ್ಯಾಪಿಸಿದೆ ಎಂದು ಸಂಪಾದಕೀಯ ತಿಳಿಸಿದೆ.

ಈ ಪ್ರಕ್ರಿಯೆಯಿಂದ ರಾಷ್ಟ್ರದ 'ಸುಪ್ತ ಶಕ್ತಿ' ಜಾಗೃತಿಗೊಂಡಿದ್ದು,



ಸಂಘದ ಕಾರ್ಯಗಳ ಬಗ್ಗೆ ಜನರಲ್ಲಿ ಇರುವ ಪ್ರಶ್ನೆಗಳು ಮತ್ತು ಭಿನ್ನಾಭಿಪ್ರಾಯಗಳನ್ನೂ ನೇರವಾಗಿ ಅರಿಯುವ ಅವಕಾಶ ಸಿಕ್ಕಿದೆ ಎಂದು ಉಲ್ಲೇಖಿಸಲಾಗಿದೆ.

ದೇಶದಾದ್ಯಂತ ನಡೆದ ಹಿಂದೂ ಸಮಾವೇಶಗಳಲ್ಲಿ ಜಾತಿ, ಪಂಥ, ರಾಜಕೀಯ ಭೇದಗಳನ್ನು ಮೀರಿ 3 ಕೋಟಿಗೂ ಹೆಚ್ಚು ಜನರು ಭಾಗವಹಿಸಿದ್ದು, ಸಾಮಾಜಿಕ ಏಕತೆ ಬಲಪಡಿಸುವಲ್ಲಿ ಸಂಘದ ಪ್ರಯತ್ನಗಳು ಸ್ಪಷ್ಟವಾಗಿವೆ. ಸ್ಥಳೀಯ ಮಟ್ಟದಲ್ಲಿ 20ರಿಂದ 40 ಪ್ರಮುಖ ವ್ಯಕ್ತಿಗಳು ಹಾಗೂ ಸಂಘಟನೆಗಳ ಸಹಭಾಗಿತ್ವದಲ್ಲಿ ಈ ಕಾರ್ಯಕ್ರಮಗಳು ನಡೆದವು.

ಸದ್ಭಾವ ಬೈಠಕ್ ಹಾಗೂ ಪ್ರಮುಖ ಜನ ಸಂಗೋಷ್ಠಿಗಳ ಮೂಲಕ ಸಮಾಜದ ಬೌದ್ಧಿಕ ಹಾಗೂ ಸಾಮಾಜಿಕ ನಾಯಕತ್ವವನ್ನು ಒಂದೇ ವೇದಿಕೆಗೆ ತರಲಾಗಿದ್ದು, ಸಾಮಾಜಿಕ ಸೌಹಾರ್ದತೆಗೆ ಒತ್ತು ನೀಡಲಾಗಿದೆ. ಸಂಘದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ನಿವಾರಿಸಲು ಮುಕ್ತ ಪ್ರಶ್ನೋತ್ತರ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಜನಸಂಪರ್ಕದ ಮೂಲಕ ನೇರ ಸಂವಾದ ನಡೆಸಲಾಗಿದೆ ಎಂದು ಸಂಪಾದಕೀಯ ಹೇಳಿದೆ.

ರಾಷ್ಟ್ರಪುನರ್‌ನಿರ್ಮಾಣಕ್ಕೆ 'ಜಾಗೃತಿ ಶಕ್ತಿ, ಸುಪ್ತ ಶಕ್ತಿ ಹಾಗೂ ಸಜ್ಜನ ಶಕ್ತಿ' ಪ್ರಮುಖ ಕಂಬಗಳೆಂದು ಉಲ್ಲೇಖಿಸಿದ ಪತ್ರಿಕೆ, ಸಂಘವು ದೇಶದ ತಲುಪದ ವರ್ಗಗಳತ್ತವೂ ಗಮನ ಹರಿಸಿದೆ ಎಂದು ತಿಳಿಸಿದೆ.

ಇದೇ ವೇಳೆ, ಹರಿಯಾಣದ ಸಮಾಲ್ಖಾದಲ್ಲಿ ನಡೆದ ಅಖಿಲ ಭಾರತೀಯ ಪ್ರತಿನಿಧಿ ಸಭೆಯಲ್ಲಿ 2025-26ರ ಕಾರ್ಯಗಳನ್ನು ಪರಿಶೀಲಿಸಿ, ಮುಂದಿನ ಕಾರ್ಯಯೋಜನೆ ರೂಪಿಸಲಾಗಿದೆ. ಸಂಘದ ಕಾರ್ಯವಿಸ್ತರಣೆ, ಸಕಾರಾತ್ಮಕ ಶಕ್ತಿಗಳ ಸಕ್ರಿಯ ಪಾಲ್ಗೊಳ್ಳಿಕೆ ಹಾಗೂ ಸಾಮಾಜಿಕ ಸೌಹಾರ್ದತೆ ಬಲಪಡಿಸುವ ನಿರ್ಧಾರ ಕೈಗೊಳ್ಳಲಾಗಿದೆ.

ಸರಸಂಘಚಾಲಕ್ ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಸೇರಿದಂತೆ ಹಿರಿಯ ಪದಾಧಿಕಾರಿಗಳು ಹಾಗೂ ಬಿಜೆಪಿ ಸೇರಿ 32 ಸಹೋದರ ಸಂಘಟನೆಗಳ ಪ್ರಮುಖರು ಸಭೆಯಲ್ಲಿ ಭಾಗವಹಿಸಿದ್ದರು.

- 22 ಸಾವಿರ ಸ್ಥಳಗಳಲ್ಲಿ ಪಥ ಸಂಚಲನ, 25 ಲಕ್ಷ ಮಂದಿ ಭಾಗಿ
- ಆರ್ಗನೈಸರ್ ಸಂಪಾದಕೀಯದಲ್ಲಿ ಸಂಘದ ಕಾರ್ಯಗಳಿಗೆ ಮೆಚ್ಚುಗೆ



'ಮಾಜವನ್ನು ಗುರುತು ಆಧಾರಿತ ಭೇದಗಳ ಮೂಲಕ ವಿಭಜಿಸಲು ನಡೆಯುವ ಯತ್ನಗಳು ಮತ್ತು ಜಾಗತಿಕ ಅಸ್ಥಿರ ಪರಿಸ್ಥಿತಿಗಳು ಒಂದಾಗಿರುವ ಸಂದರ್ಭದಲ್ಲಿ, ಸಂಘವು ಭಾರತದ ರಾಷ್ಟ್ರೀಯ ಚೇತನವನ್ನು ಜಾಗೃತಿಗೊಳಿಸುವ ಮತ್ತು ವಿಸ್ತರಿಸುವಲ್ಲಿ ಗಮನಾರ್ಹ ಸಾಮರ್ಥ್ಯವನ್ನು ಪ್ರದರ್ಶಿಸಿದೆ.

■ ಪ್ರಫುಲ್ಲ ಕೆತ್ಕರ್, ಆರ್ಗನೈಸರ್ ಸಂಪಾದಕ

ಬಿಜೆಪಿ ಗೆಲುವು ಶತಸ್ಸಿದ್ಧ: ಎಚ್‌ಡಿಕೆ



ಸಿಂಧನೂರು: ರಾಜ್ಯದಲ್ಲಿ ಎರಡುವರೆ ಮೂರು ವರ್ಷಗಳಿಂದ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಜನರ ವಿಶ್ವಾಸ, ನಂಬಿಕೆ ಕಳೆದುಕೊಂಡಿದ್ದು, ಈಗ ನಡೆಯುತ್ತಿರುವ ಉಪಚುನಾವಣೆಗಳಲ್ಲಿ ಎರಡು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಗೆಲುವು ಸಿಗಲಿದೆ ಎಂದು ಕೇಂದ್ರ ಸರ್ಕಾರದ ಸಚಿವ ಎಚ್.ಡಿ.ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ಶನಿವಾರ ನಗರದ ಕಮ್ಮವಾರಿ ಕಲ್ಯಾಣ ಮಂಟಪದಲ್ಲಿ ನಡೆದ ಅಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಎನ್.ಟಿ. ರಾಮರಾವ್ ಅವರ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ರಾಜ್ಯದಲ್ಲಿ ನಡೆಯುತ್ತಿರುವ ಉಪಚುನಾವಣೆ ಎರಡು ಪಕ್ಷಗಳು ಅತ್ಯಂತ ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ. ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮೈತ್ರಿಯೊಂದಿಗೆ ಚುನಾವಣೆಯ ಅಖಾಡದಲ್ಲಿರುವ ಎರಡು ಕ್ಷೇತ್ರಗಳ ಇಬ್ಬರು ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದರು.

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷದ ದುರಾಡಳಿತಕ್ಕೆ ಜನತೆ ಬೇಸತ್ತು ಹೋಗಿದ್ದು, ಈಗ ನಡೆಯುತ್ತಿರುವ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ತೆಗೆದು ಹಾಕಬೇಕು ಎನ್ನುವ ಭಾವನೆ ಜನರಲ್ಲಿ ಬಂದಿದೆ. ಈ ನಿಟ್ಟಿನಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಸಾಧಿಸಲಿದ್ದಾರೆ ಎಂದು ಹೇಳಿದರು. ನಾನು ಈಗ ಉಪಚುನಾವಣೆ ಹಿನ್ನೆಲೆಯಲ್ಲಿ ಇಂದು ಪ್ರಚಾರಕ್ಕೆ ತೆರಳುತ್ತಿದ್ದಾನೆ. ದಾವಣಗೆರೆ ಕ್ಷೇತ್ರದಲ್ಲಿ ಎರಡು ಕಡೆ ಸಭೆಗಳಲ್ಲಿ ಭಾಗವಹಿಸುತ್ತೇನೆ. ತದನಂತರ ಭಾನುವಾರ ಬಾಗಲಕೋಟ ಕ್ಷೇತ್ರದಲ್ಲಿ ಪ್ರಚಾರ ನಡೆಸುತ್ತೇನೆ. ಪ್ರತಿಷ್ಠಿತ ಎರಡು ಪಕ್ಷಗಳು ಗೆಲುವು ಸಾಧಿಸಲು ಹೋರಾಟ ಮಾಡುತ್ತಿದ್ದು, ಬಿಜೆಪಿ ಅಭ್ಯರ್ಥಿಗಳು ಎರಡು ಕಡೆ ಜಯ ಸಾಧಿಸುವ ವಿಶ್ವಾಸವಿದೆ ಎಂದು ಹೇಳಿದರು.

ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಕಡ್ಡಾಯ

ಬೆಂಗಳೂರು: ರಾಜ್ಯದಲ್ಲಿರುವ ಹಳೆಯ ವಾಹನಗಳಿಗೂ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಕಡ್ಡಾಯ ಆದೇಶ ರಾಜ್ಯ ಸರ್ಕಾರ ಹಿಂಪಡೆದಿದೆ ಎನ್ನುವ ಸುದ್ದಿ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದು, ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ 2019ಕ್ಕಿಂತ ಮುಂಚಿತವಾಗಿ ನೋಂದಣಿಯಾದ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಕಡ್ಡಾಯ ಎಂದು ಸಾರಿಗೆ ಇಲಾಖೆ ಸ್ಪಷ್ಟಪಡಿಸಿದೆ.

ಇತ್ತೀಚೆಗೆ ಕೆಲವು ಟಿವಿ ಮತ್ತು ಇತರ ಮಾಧ್ಯಮಗಳಲ್ಲಿ ಹಳೆಯ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಕಡ್ಡಾಯವಲ್ಲ ಎಂಬ ಸುದ್ದಿಯನ್ನು ಪ್ರಸಾರ ಮಾಡುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಕೇಂದ್ರ ಮೋಟಾರು ವಾಹನಗಳ ನಿಯಮವನ್ನು 1989ರ ನಿಯಮ 50ರಡಿ ಕೇಂದ್ರ ಸರ್ಕಾರವು 2018 ಡಿಸೆಂಬರ್ 4 ರಂದು ಅಧಿಸೂಚನೆ ಹೊರಡಿಸಿದ್ದಾರೆ. 2019ರ ಏಪ್ರಿಲ್ 1ಕ್ಕಿಂತ ಮುಂಚಿತವಾಗಿ ನೋಂದಣಿಯಾದ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು ಅಳವಡಿಸಲು ಕಡ್ಡಾಯಗೊಳಿಸಿ ಆದೇಶಿಸಿದೆ. ಆದರಂತೆ, ರಾಜ್ಯ ಸರ್ಕಾರವು 2023ರ ಆ.17 ರಂದು ಅಧಿಸೂಚನೆ ಹೊರಡಿಸಿ, 2019 ಏ.1ಕ್ಕಿಂತ ಮುಂಚಿತವಾಗಿ ನೋಂದಣಿಯಾದ ಎಲ್ಲಾ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು ಅಳವಡಿಕೆಯನ್ನು ಕಡ್ಡಾಯಗೊಳಿಸಿರುತ್ತದೆ.

ಸದ್ಯ ಉಚ್ಚ ನ್ಯಾಯಾಲಯವು ನೀಡಿದ ಆದೇಶದಿಂದಾಗಿ, ವಾಹನಗಳಿಗೆ ಎಚ್‌ಎಸ್ ಆರ್‌ಪಿ ಅಳವಡಿಕೆಯ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿದೆ.

324 ಗ್ರಾಮಗಳಲ್ಲಿ ಕುಡಿವ ನೀರಿನ ಸಮಸ್ಯೆ

ಬೆಂಗಳೂರು: ರಾಜ್ಯದ 20 ಜಿಲ್ಲೆಗಳ 60 ತಾಲ್ಲೂಕುಗಳಲ್ಲಿನ 324 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದು, ಇವುಗಳ ಪೈಕಿ 76 ಗ್ರಾಮಗಳಿಗೆ 76 ಟ್ಯಾಂಕರ್‌ಗಳ ಮುಖಾಂತರ ಹಾಗೂ 248 ಗ್ರಾಮಗಳಿಗೆ 280 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ.



ರಾಜ್ಯದ 31 ಜಿಲ್ಲೆಗಳಲ್ಲಿ 26,676 ಗ್ರಾಮಗಳಿದ್ದು, 57,883 ಜನವಸತಿ ಪ್ರದೇಶಗಳಲ್ಲಿ 1,01,30,798 ಮನೆಗಳು ಇರುತ್ತವೆ. ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿನ ಹಲವು ಜಲಮೂಲಗಳು ಬತ್ತಿಹೋಗುವುದರಿಂದ ಕೆಲವೊಂದು ಜನವಸತಿ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಿರುತ್ತದೆ.

ತುರ್ತು ಕಾಮಗಾರಿಗಳನ್ನು ನಿರ್ವಹಿಸಲು ಈಗಾಗಲೇ 60 ಕೋಟಿ ರೂ.ಗಳನ್ನು ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ ಎಂಬ ಮಾಹಿತಿಯನ್ನು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ನೀಡಿದ್ದು, ಟಾಸ್ಕ್‌ಫೋರ್ಸ್‌ಅಡಿ ಮುಂದುವರೆದ ಕಾಮಗಾರಿಗಳ ಬಾಕಿ ಬಿಲ್ ಪಾವತಿಗೆ ಹೆಚ್ಚುವರಿಯಾಗಿ 48 ಕೋಟಿ ರೂ. ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ ಹಾಗೂ ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ತಿಗಾಗಿ 14.50 ಕೋಟಿ ರೂ. ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ ಎಂದು ಹೇಳಿದ್ದಾರೆ.

ಮುಂದಿನ ಪ್ರತಿ 2ನೇ ಹಾಗೂ 4ನೇ ಸೋಮವಾರದಂದು ಪಿಡಿಒಗಳ ಜೊತೆಯಲ್ಲಿ ಜಿಲ್ಲಾ ಪಂಚಾಯ್ತಿ ಸಿಇಒಗಳು ಸಭೆ ನಡೆಸಲಿದ್ದಾರೆ. ಕುಡಿಯುವ ನೀರಿನ ಅಭಾವ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲು ಎಲ್ಲಾ ಜಿಲ್ಲಾ ಪಂಚಾಯತಿಗಳಲ್ಲಿ 24/7 ಕಂಟ್ರೋಲ್ ರೂಮ್ ತೆರೆಯಲಾಗಿದೆ.

ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ಕ್ಷಿಪ್ರ ಕಾರ್ಯಪಡೆ ರಚಿಸಿ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಮುಖಾಂತರ ಪಡೆಯಲಾಗುವುದು, ಅಗತ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುವುದು, ಕೊಳವೆ ಬಾವಿಗಳನ್ನು ಫ್ಲಶಿಂಗ್ ಮತ್ತು ಆಳಗೊಳಿಸುವುದರೊಂದಿಗೆ ನೀರಿನ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಲಾಗುವುದು, ಅನಿವಾರ್ಯ ಸಂದರ್ಭಗಳಲ್ಲಿ ಕೊಳವೆಬಾವಿಗಳನ್ನು ಕೊರೆಯುವುದು ಅತ್ಯಗತ್ಯವೆಂದು ಕಂಡು ಬಂದಲ್ಲಿ ಮಾತ್ರ ಸಂಬಂಧಪಟ್ಟ ಜಿಯಾಲಜಿಸ್ಟ್ ವರದಿಯನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ಕಿರುಸುದ್ದಿ

ಸಿಂಹ ಹೇಳಿಕೆಗೆ ಸುರ್ಜೆವಾಲ ಕಿಡಿ

ಬೆಂಗಳೂರು: ಬಾಗಲಕೋಟೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರ ಬಗ್ಗೆ ಮಾಜಿ ಸಂಸದ ಪ್ರತಾಪ್ ಸಿಂಹ ನೀಡಿರುವ ಹೀನಾಯ ಕಟ್ ಹೇಳಿಕೆ ಬಿಜೆಪಿಯ ನೀಚ ರಾಜಕಾರಣವನ್ನು ಮತ್ತೊಮ್ಮೆ ಬಟ್ಟಬಯಲು ಮಾಡಿದೆ. ಪ್ರತಾಪ್ ಸಿಂಹರ ಈ ಆಕ್ರೋಶ ಹತಾಶೆಯಿಂದ ಹುಟ್ಟಿದ್ದು ಎನ್ನುವುದು ಈಗ ಸ್ಪಷ್ಟ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಹೇಳಿದ್ದಾರೆ. ಎಕ್ಸ್‌ನಲ್ಲಿ ಬಿಜೆಪಿ ವಿರುದ್ಧ ಕಿಡಿಕಾರಿರುವ ಅವರು, ಹಿಂದುಳಿದ ಸಮುದಾಯದ ಅತ್ಯಂತ ಹಿರಿಯ ನಾಯಕ ಸಿದ್ದರಾಮಯ್ಯ ಅವರನ್ನು ಅವಮಾನಿಸಲು ಬಿಜೆಪಿ ಉದ್ದೇಶಪೂರ್ವಕವಾಗಿ ಪ್ರತಾಪ್ ಸಿಂಹರನ್ನು ಬಳಸಿಕೊಳ್ಳುತ್ತಿದೆ ಎಂದು ದೂರಿದ್ದಾರೆ. ಸಿದ್ದರಾಮಯ್ಯನವರ ವಿರುದ್ಧ ಬಿಜೆಪಿ ನಾಯಕ ಪ್ರತಾಪ್ ಸಿಂಹ ನೀಡಿರುವ ಅವಹೇಳನಕಾರಿ ಮತ್ತು ಅಸಹನೀಯ ಹೇಳಿಕೆಗಳಿಗಾಗಿ 6.5 ಕೋಟಿ ಕನ್ನಡಿಗರಿಗೆ, ವಿಶೇಷವಾಗಿ ಒಬಿಸಿ, ಎಸ್ಸಿ ಮತ್ತು ಅಲ್ಪಸಂಖ್ಯಾತರಿಗೆ ಸಾರ್ವಜನಿಕ ಕ್ಷಮಾಪಣೆ ಕೋರಬೇಕು ಆಗ್ರಹಿಸಿದ್ದಾರೆ.

ಕೋತಿಗಳ ದಾಳಿಗೆ 15 ಮಂದಿ ಗಾಯ

ಕೋಲಾರ: ಹೊರವಲಯದಲ್ಲಿರುವ ದಕ್ಷಿಣ ಕಾಶಿ ಅಂತರಗಂಗೆ ಕ್ಷೇತ್ರದಲ್ಲಿ ಬಿರು ಬೇಸಿಗೆ ಆರಂಭವಾಗುತ್ತಿದ್ದಂತೆ ಅನ್ನ ನೀರು ಸಿಗದ ಹಿನ್ನೆಲೆ, ಕೋತಿಗಳ ದಾಳಿಯಿಂದ ಗಾಯಗೊಂಡು 15ಕ್ಕೂ ಹೆಚ್ಚು ಜನರು ಆಸ್ಪತ್ರೆ ಪಾಲಾಗಿದ್ದಾರೆ. ಹಲವರನ್ನು ತೀವ್ರವಾಗಿ ಕಚ್ಚಿ ಗಾಯಗೊಳಿಸಿರುವ ಮಂಗಗಳು ತಮ್ಮ ಹಸಿವಿನ ದಾಳಿ ಮುಂದುವರಿಸಿವೆ. ಅಂತರಗಂಗೆ ತಪ್ಪಲಿನಲ್ಲಿರುವ ಸಾವಿರಾರು ಕೋತಿಗಳು ಇಲ್ಲಿಗೆ ಬರುವ ಪ್ರವಾಸಿಗರ ಮೇಲೆ ಎರಗಲಾರಂಭಿಸಿವೆ ಎಂದು ಮೂಲಗಳು ತಿಳಿಸಿವೆ.



ನಾಪತ್ತೆಯಾಗಿದ್ದ ಮಹಿಳಾ ಪಿಎಸ್‌ಐ ಪತ್ತೆ!

ತುಮಕೂರು: ತೀವ್ರ ಆತಂಕ ಮತ್ತು ಕುತೂಹಲಕ್ಕೆ ಕಾರಣವಾಗಿದ್ದ ಮಹಿಳಾ ಪೊಲೀಸ್ ಸಬ್ ಇನ್ಸ್ಪೆಕ್ಟರ್ ನಾಪತ್ತೆ ಪ್ರಕರಣ ಸುಖಾಂತ್ಯ ಕಂಡಿದೆ. ತುಮಕೂರಿನ ಹೊಸ ಬಡಾವಣೆ ಪೊಲೀಸ್ ಠಾಣೆಯ ಪಿಎಸ್‌ಐ-2 ಆಗಿ ಕಾರ್ಯನಿರ್ವಹಿಸುತ್ತಿದ್ದ ಮಂಗಳಮ್ಮ ಅವರು ಕೊನೆಗೂ ಪತ್ತೆಯಾಗಿದ್ದಾರೆ. ನಿನ್ನೆ ಬೆಳಗ್ಗೆ ಡಿವೈಎಸ್ ಪಿ ಕಚೇರಿಯಲ್ಲಿ ಮೀಟಿಂಗ್ ನಲ್ಲಿ ಭಾಗಿಯಾಗಿದ್ದ ಮಂಗಳಮ್ಮ ಅವರು, ಸಭೆಯ ಮಧ್ಯೆಯೇ ಇಂಪಾರ್ಟೆಂಟ್ ಫೋನ್ ಬಂದಿದೆ ಎಂದು ಮೀಟಿಂಗ್‌ನಿಂದ ಹೊರಬಂದಿದ್ದರು. ಸಮವಸ್ತ್ರದಲ್ಲೇ ಹೊರಬಂದಿದ್ದ ಮಂಗಳಮ್ಮ ಆ ಬಳಿಕ ಎಲ್ಲಿ ಹೋದರೆಂಬ ಸುಳಿವು ಸಿಕ್ಕಿರಲಿಲ್ಲ. ಇಡೀ ದಿನ ಹುಡುಕಿದ್ರೂ ನಿನ್ನೆ ಇಡೀ ದಿನ ಯಾರ ಸಂಪರ್ಕಕ್ಕೆ ಸಿಗದ ಹಿನ್ನೆಲೆ. ಆತಂಕಗೊಂಡು ಪಿಎಸ್ ಐ ಮಂಗಲಮ್ಮ ಪುತ್ರಿಯಿಂದ ದೂರು ನೀಡಿದ್ದರು.

ಕೌಟುಂಬಿಕ ಕಲಹವೇ ಕಾರಣ? ಪ್ರಾಥಮಿಕ ಮಾಹಿತಿ ಪ್ರಕಾರ, ಮನೆಯಲ್ಲಿ ನಡೆದಿದ್ದ ಕೌಟುಂಬಿಕ ಕಲಹದಿಂದ ಮಂಗಳಮ್ಮ ಅವರು ತೀವ್ರ ಮನನೊಂದಿದ್ದರು ಎನ್ನಲಾಗಿದೆ. ಇದೇ ಕಾರಣಕ್ಕೆ ಅವರು ಯಾರಿಗೂ ತಿಳಿಸದೆ ಮನೆ ಬಿಟ್ಟು ಹೋಗಿರಬಹುದು ಎಂಬ ಶಂಕೆ ವ್ಯಕ್ತವಾಗಿತ್ತು. ಪೊಲೀಸರು ತಕ್ಷಣ ಕಾರ್ಯಪ್ರವೃತ್ತರಾಗಿ ಹುಡುಕಾಟ ಆರಂಭಿಸಿದ್ದರು.

ಚಿಕ್ಕಮಗಳೂರಿನಲ್ಲಿ ಪತ್ತೆಯಾದ ಮಂಗಳಮ್ಮ: ತೀವ್ರ ಹುಡುಕಾಟದ ನಂತರ, ನಾಪತ್ತೆಯಾಗಿದ್ದ ಪಿಎಸ್‌ಐ ಮಂಗಳಮ್ಮ ಅವರು ಚಿಕ್ಕಮಗಳೂರಿನಲ್ಲಿರುವ ತಮ್ಮ ಸಂಬಂಧಿಕರ ಮನೆಯಲ್ಲಿರುವುದು ಪತ್ತೆಯಾಗಿದೆ. ಮನಸ್ತಾಪದಿಂದ ಬೇಸತ್ತು ಅವರು ಅಲ್ಲಿಗೆ ತೆರಳಿದ್ದರು ಎಂದು ತಿಳಿದುಬಂದಿದೆ.

ವಿದ್ಯಾಗಿರಿಯಲ್ಲಿ ಸುನೀಲ್‌ಕುಮಾರ ಭರ್ಜರಿ ಮತಯಾಚನೆ

ಫಲಿತಾಂಶ ರಾಜ್ಯಕ್ಕೆ ದಿಕ್ಸೂಚಿ

ಬಾಗಲಕೋಟೆ: ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲುವುದರ ಮೂಲಕ ಮುಂದಿನ ಸಾರ್ವತ್ರಿಕ ಚುನಾವಣೆಗೆ ಮುನ್ನುಡಿ ಬರೆಯಲಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಬಿಜೆಪಿ ಪರವಾದ ಒಳ್ಳೆಯ ವಾತಾವರಣವಿದ್ದು, ಉಪಚುನಾವಣೆ ಮೂಲಕ ರಾಜ್ಯಕ್ಕೆ ಹೊಸ ದಿಕ್ಸೂಚಿ ಸಿಗಲಿದೆ ಎಂದು ಕಾರ್ಕಳ ಶಾಸಕ ವಿ.ಸುನೀಲ್‌ಕುಮಾರ ಹೇಳಿದರು.



ಉಪಚುನಾವಣೆ ನಿಮಿತ್ತ ನವನಗರದದ ವಾರ್ಡ್ ನಂ.33ರಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರ ಪರ ಮತಯಾಚನೆ ಮಾಡಿ ಮಾತನಾಡಿದ ಅವರು, ಬಿಜೆಪಿ ಅಭಿವೃದ್ಧಿ ಕಾರ್ಯಗಳ ಅರಿವು ಈ ಕ್ಷೇತ್ರದ ಜನರಿಗೆ ಇದೆ. ಮೂರು ವರ್ಷಗಳ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಆರೋಪ ಮಾಡುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಮುಸ್ಲಿಂ ಅತಿಯಾದ ಓಲೈಕೆಯಿಂದ ಅಶಾಂತಿ ಸೃಷ್ಟಿ, ಶಿವಾಜಿ ಮೆರವಣಿಗೆ, ಗಣೇಶ ಮೆರವಣಿಗೆಗಳ ಮೇಲೆ ಕಲ್ಲು ತೂರಾಟಗಳು ಕಾಂಗ್ರೆಸ್ ನೀತಿಗೆ ಕಾರಣವಾಗಿವೆ.

ಹೆಸರಿಗಷ್ಟೆ ಜೋಡೆತ್ತು ಎಂದುಕೊಂಡಿರುವ ಸಿದ್ದರಾಮಯ್ಯ ಮತ್ತು ಡಿಕೆಶಿ ಬೇರೆ ಬೇರೆ ದಿಕ್ಕಿನಲ್ಲಿ ಓಡುತ್ತಿದ್ದಾರೆ. ಸರ್ಕಾರದಲ್ಲಿ ಅಭಿವೃದ್ಧಿ ಅನ್ನುವುದು ಕನಸು ಮಾತ್ರ. ಈ ಬಾರಿಯ ಬಜೆಟ್‌ನಲ್ಲಿ 1 ಲಕ್ಷ 32 ಸಾವಿರ ಕೋಟಿ ರೂ. ಸಾಲ ಮಾಡಿ ರಾಜ್ಯವನ್ನು ಸಾಲದ ಶೂಲಕ್ಕೆ ಏರಿಸಿದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ಸರ್ಕಾರಿ ನೌಕರರಿಗೆ ಸಂಬಳ ಕೊಡಲೂ ಆಗದ ಆರ್ಥಿಕ ಸಂದಿಗ್ಧ ಪರಿಸ್ಥಿತಿ ರಾಜ್ಯಕ್ಕೆ ತಂದಿದ್ದಾರೆ. ಬಾಗಲಕೋಟೆಯಲ್ಲಿ ಮುಖ್ಯಮಂತ್ರಿಗಳು ಐದು ದಿನ ಬೀಡು ಬಿಟ್ಟಿದ್ದು ಕಾಳಜಿಗಾಗಿ ಅಲ್ಲ,ಸೋಲಿನ ಭಯಕ್ಕಾಗಿ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, ಭ್ರಷ್ಟ ಆಡಳಿತ ಇಷ್ಟವಿಲ್ಲ ಎಂಬ ಸಂದೇಶವನ್ನು ಸರ್ಕಾರಕ್ಕೆ ಕೊಡಲು ಜನರು ಮುಂದಾಗಿದ್ದಾರೆ. ಗ್ಯಾರಂಟಿಗಳು ಎಸ್.ಸಿಪಿ, ಟಿಎಸ್.ಪಿ ಅನುದಾನಗಳಲ್ಲಿಯೇ ಬಳಕೆಯಾಗಬೇಕಿತ್ತಾ? ಎಂದು ಸರ್ಕಾರದ ವಿರುದ್ಧ ಪ್ರಶ್ನೆಗಳ ಸುರಿಮಳೆಗೈದರು.

> ದಲಿತರ ಮೇಲೆ ಕಾಳಜಿ ಇದ್ದಿದ್ದರೆ ಅವರ ಹಣವನ್ನು ಗ್ಯಾರಂಟಿಳಿಗೆ ಬಳಕೆ ಮಾಡಿದ್ದು ಏಕೆ, ಅಲ್ಪಸಂಖ್ಯಾತರ ಹಣವನ್ನು ಏಕೆ ಬಳಕೆ ಮಾಡಿಕೊಳ್ಳಲಿಲ್ಲ, ಅಲ್ಪಸಂಖ್ಯಾತರಿಗೆ ಹತ್ತು ಸಾವಿರ ಕೋಟಿ ಕೊಟ್ಟ ಸಿದ್ದರಾಮಯ್ಯ ಹಿಂದುಗಳ ಕಲ್ಯಾಣಕ್ಕೆ ಎಷ್ಟು ಕೋಟಿ ಕೊಟ್ಟಿದ್ದಾರೆ.
> ■ ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

ಕಳ್ಳೆತ್ತು ವಾಲ್ಮೀಕಿ ನಿಗಮ, ಬೋವಿ ನಿಗಮದ ಹಣ ನುಂಗಿ ಅಭಿವೃದ್ಧಿ ಕೆಲಸ ಒಂದೂ ಮಾಡದೇ ಸುಳ್ಳು ಹೇಳಿ ಕಾಲಹರಣ ಮಾಡಿತು. ಇದರ ಮೇಲೆಯೇ ದುಡಿಯೋ ಎತ್ತು ಯಾವುದು ಕಳ್ಳೆತ್ತು ಯಾವುದು ಎಂದು ಜನಕ್ಕೆ ಗೊತ್ತಾಗುತ್ತದೆ. ಕೇಂದ್ರ ಸರ್ಕಾರ ಅಕ್ಕಿಯನ್ನು ಕೊಡದಿದ್ದರೆ ಇವರ ಹಣೆಬರಹ ಗೊತ್ತಾಗುತ್ತಿತ್ತು. ಮೋದಿ ಅವರು ಕೊಟ್ಟಿರುವುದನ್ನು ಕೇವಲ ಮುಟ್ಟಿ ಕೊಟ್ಟು ತಾವು ಕೊಟ್ಟಿದ್ದೇವೆ ಎಂದು ಬೀಗುತ್ತಾರೆ ಇದು ಯಾವ ಸೀಮೆಯ ನ್ಯಾಯ.

ಸಿದ್ದರಾಮಯ್ಯ, ಸಾಲ ಮಾಡಿದ್ದು ಸುಳ್ಳಾ? ಸ್ವತಃ ಸಿಎಂ 5 ಲಕ್ಷ ಕೋಟಿಗೂ ಹೆಚ್ಚು ಸಾಲ ಮಾಡಿದ್ದಾರೆ. ಗ್ಯಾರಂಟಿನಾನುಕೊಟ್ಟಿದ್ದುಎಂದುಹೇಳಿದಹಾಗೆಸಾಲ ನಾನೇ ಮಾಡಿದ್ದು ಎಂದು ಹೇಳಲಿ. ಬೆಲೆಗಳ ಹೆಚ್ಚಳದಿಂದ ಇಪ್ಪತ್ತು ರೂ. ಬಾಂಡ್ ಪೇಪರ್ ಕೂಡ ಮಾಯ ಮಾಡಿದ್ದಾರೆ. ಜನ ವತ್ತೆ ಇಟ್ಟ ತಮ್ಮ ಚಿನ್ನಕ್ಕೆ ಹಣ ಕಟ್ಟುವ ಸ್ಥಿತಿಗೆ ತಂದು ಇಟ್ಟಿದ್ದಾರೆ. ಬಾಗಲಕೋಟೆ ಹಿಂದುತ್ವ ಕೋಟೆ ಇಲ್ಲಿ ಬಿಜೆಪಿ ಗೆಲ್ಲಬೇಕು ಎಂದರು.

ವೀರಣ್ಣ ಚರಂತಿಮಠ ಮನೆ ಮನೆಗೆ ತೆರಳಿ ಮತಯಾಚನೆಮಾಡಿದರು. ಈವೇಳೆ ವಿಧಾನಪರಿಷತ ಸದಸ್ಯರಾದ ಪಿ.ಎಚ್.ಪೂಜಾರ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಸೇರಿದಂತೆ ಸಾವಿರಾರು ಜನ ಕಾರ್ಯಕರ್ತರು ಭಾಗವಹಿಸಿದ್ದರು.

ಡಿಸಿಎಂ ಡಿ.ಕೆ. ಶಿವಕುಮಾರ್ ವಿಶ್ವಾಸ

ಕೈಗೆ ದೊಡ್ಡ ಗೆಲುವು

ಬೆಂಗಳೂರು: ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಂದ ಮತಕ್ಕಿಂತ ಈ ಬಾರಿಯ ಉಪಚುನಾವಣೆಯಲ್ಲಿ ಹೆಚ್ಚು ಮತ ಬೀಳಲಿದ್ದು, ನಮ್ಮ ಅಭ್ಯರ್ಥಿಗಳು ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲಲಿದ್ದಾರೆ ಡಿಸಿಎಂ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಸದಾಶಿವನಗರ ನಿವಾಸದಲ್ಲಿ ಶನಿವಾರ ಮಾಧ್ಯಮಗಳ ಜತೆಗೆ ಮಾತನಾಡಿ, ಗ್ಯಾರಂಟಿ ಫಲಾನುಭವಿಗಳಲ್ಲಿ ಕಳೆದ ಬಾರಿ ಬಿಜೆಪಿಗೆ ಮತ ಹಾಕಿರುವವರೂ ಕೂಡ ಈ ಬಾರಿ ಕಾಂಗ್ರೆಸ್‌ಗೆ ಮತ ಹಾಕುವುದಾಗಿ ತಿಳಿಸಿದ್ದಾರೆ. ಬೆಲೆ ಏರಿಕೆಯಾಗುತ್ತಿರುವ ಪರಿಸ್ಥಿತಿಯಲ್ಲಿ ಗ್ಯಾರಂಟಿ ಯೋಜನೆ ಎಷ್ಟು ನೆರವಾಗುತ್ತಿವೆ ಎಂದು ಸ್ಮರಿಸುತ್ತಿದ್ದಾರೆ. ಇವುಗಳನ್ನು ಉಳಿಸಿಕೊಳ್ಳಲು ಜನ ತೀರ್ಮಾನಿಸಿದ್ದಾರೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರಕ್ಕೆ ಇರಲಿ ಮುಂಜಾಗ್ರತೆ: ಅನಿಲ ಪೂರೈಕೆ ಅಧಿಕಾರ ರಾಜ್ಯ ಸರ್ಕಾರದ ಕೈಯಲ್ಲಿಲ್ಲ, ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಕೇಂದ್ರ ಸರ್ಕಾರ ಸರಿಯಾಗಿ ಮುಂಜಾಗ್ರತೆ, ನೀತಿ ರೂಪಿಸಬೇಕಿತ್ತು. ಈ ವಿಚಾರದಲ್ಲಿ ವಿಫಲವಾಗಿದೆ. ಈ ವಿಚಾರವಾಗಿ ಬಿಜೆಪಿಯವರು ಈವರೆಗೂ ಯಾಕೆ ಮಾತನಾಡುತ್ತಿಲ್ಲ, ನಮ್ಮಿಂದ ತೊಂದರೆಯಾಗಿದೆ ಎಂದು ಒಪ್ಪಿಕೊಂಡು ಜನರ ಬಳಿ ಕ್ಷಮೆ ಕೋರಬೇಕು ಎಂದರು.

ರಾಜ್ಯದಲ್ಲಿ ಗ್ಯಾಸ್ ಅಭಾವದದಿಂದ ಆಟೋ ಚಾಲಕರಿಗೆ ಬಹಳ ತೊಂದರೆಯಾಗುತ್ತಿದೆ. ಇದರಿಂದ ಸಂಚಾರವ್ಯವಸ್ಥೆಗೆ ಪರಿಣಾಮ ಬೀರುತ್ತಿದೆ. ಜತೆಗೆ ಹೊಟೇಲ್ ಕ್ಷೇತ್ರವು ಸಮಸ್ಯೆ ಎದುರಿಸುತ್ತಿದೆ. ಕೇಂದ್ರ ಸರ್ಕಾರ ಈ ಬಗ್ಗೆ ಗಮನಹರಿಸಬೇಕು ಎಂದು ಆಗ್ರಹಿಸಿದರು.

ಸಾಮಾಜಿಕ ನ್ಯಾಯದ ಪರ ಕಾಂಗ್ರೆಸ್: ಪರಂ

ಬಾಗಲಕೋಟೆ: ಸಾಮಾಜಿಕ ನ್ಯಾಯದ ಪರ ಹಾಗೂ ಎಲ್ಲ ಸಮುದಾಯಕ್ಕೆ ಅನುಕೂಲಕರ ವಾತಾವರಣ ಕಲ್ಪಿಸುವ ಬದ್ಧತೆ ಹಾಗೂ ಸಂವಿಧಾನದ ಆಧಾರದ ಮೇಲೆ ಕಾಂಗ್ರೆಸ್ ಪಕ್ಷದ ಸರ್ಕಾರ ಕೆಲಸ ಮಾಡಲಿದೆ. ಬಿಜೆಪಿ ಕೋಮುವಾದದ ಬದ್ಧತೆಯನ್ನು ತೋರಿಸುತ್ತದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಡವರು, ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರ ಜೀವನ ಮಟ್ಟ ಸುಧಾರಿಸಲು ಕಾಂಗ್ರೆಸ್ ಪಕ್ಷ ಕೆಲಸ ಮಾಡುತ್ತದೆ. ನಮ್ಮ ಸಾಮಾಜಿಕ ಬದ್ಧತೆ ವಿರುದ್ಧ ಬಿಜೆಪಿ ಕೆಲಸ ಮಾಡುತ್ತದೆ ಎಂದು ದೂರಿದರು. ರಾಜ್ಯಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸುವ ಮೂಲಕ ಅವರನ್ನು ಆರ್ಥಿಕವಾಗಿ ಮೇಲಕ್ಕೆತ್ತಲಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಉತ್ತಮ ಆಡಳಿತವನ್ನು ನೀಡುತ್ತಿದೆ. ಕಾನೂನು ಸುವ್ಯವಸ್ಥೆ ಕಾಪಾಡಲಾಗುತ್ತಿದೆ. ಕೊಲೆ ಪ್ರಕರಣಗಳು ಕಡಿಮೆಯಾಗಿವೆ. ಡ್ರಗ್ಸ್ ದಂದೆಯಲ್ಲಿ ಭಾಗಿಯಾದವರ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದರು.

ಟಿಕೆಟ್‌ಗಾಗಿ ಸಾಲಲ್ಲಿ ಶಾಸಕರ ಪಿಎ | ಆಟೋ ಚಾಲಕರ ಗೋಳಾಟ

ವಿಧಾನಸೌಧಕ್ಕೂ ಅಂಟಿದ ಐಪಿಎಲ್ ಜ್ವರ

ಬೆಂಗಳೂರು: ಒಂದು ಕಡೆ ರಾಜ್ಯದಲ್ಲಿ ಆಟೋಗಳಿಗೆ ಗ್ಯಾಸ್ ಸಿಗುತ್ತಿಲ್ಲ ಅಂತ ಆಟೋ ಚಾಲಕರು ಗೋಳಾಡುತ್ತಾ ಗ್ಯಾಸ್‌ಗಾಗಿ ರಾತ್ರಿಯಿಡೀ ಕ್ಯೂ ನಿಲ್ಲುತ್ತಿದ್ದಾರೆ. ಮತ್ತೊಂದೆಡೆ ನಮ್ಮ ಜನಪ್ರತಿನಿಧಿಗಳು ಐಪಿಎಲ್ ಟಿಕೆಟ್ ಪಡೆಯೋಕೆ ತಮ್ಮ ಪಿಎಗಳನ್ನೇ ಕ್ಯೂ ನಿಲ್ಲಿಸಿದ್ದಾರೆ.

ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರಮನವಿಗೆಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಸೂಚನೆಯನ್ವಯ ಪ್ರತಿ ಐಪಿಎಲ್ ಪಂದ್ಯಕ್ಕೆ ಶಾಸಕರಿಗೆ ಉಚಿತವಾಗಿ 3 ಟಿಕೆಟ್ ಕೊಡಲು ಕೆಎಸ್‌ಸಿಎ ನಿರ್ಧರಿಸಿತ್ತು. ಈ ನಡುವೆ ಭಾನುವಾರ(ಏ.5) ಬೆಂಗಳೂರು ಮತ್ತು ಚೆನ್ನೈ ನಡುವೆ ಪಂದ್ಯವಿರುವ ಹಿನ್ನೆಲೆಯಲ್ಲಿ ಟಿಕೆಟ್‌ಗಾಗಿ ಶಾಸಕರ ಆಪ್ತ ಸಹಾಯಕರು ಸ್ಪೀಕರ್ ಕಚೇರಿ ಮುಂದೆ ಕ್ಯೂ ನಿಂತು ಟಿಕೆಟ್ ಪಡೆದಿದ್ದಾರೆ. ಜನರ ಸಮಸ್ಯೆ ಕೇಳದ ಜನಪ್ರತಿನಿಧಿಗಳು ಐಪಿಎಲ್ ಟಿಕೆಟ್‌ಗಾಗಿ ಹೀಗೆ ವರ್ತನೆ ತೋರಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಕೆಲ ದಿನಗಳ ಹಿಂದೆ ಸದನದಲ್ಲಿ ಶಾಸಕರು ಬಹಿರಂಗವಾಗಿ ಟಿಕೆಟ್‌ಗಾಗಿ ಬೇಡಿಕೆ ಇಟ್ಟಿದ್ದರು. ವಿಐಪಿ ಟಿಕೆಟ್‌ಗಳೇ ಬೇಕು ಅಂತಾ ಒತ್ತಾಯಿಸಿದ್ದರು. ಶಾಸಕರ ಈ ಬೇಡಿಕೆಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದರು. ಜನರ ಸಮಸ್ಯೆ ಆಲಿಸುವುದಕ್ಕಿಂತ ಇವರಿಗೆ ಟಿಕೆಟ್‌ನದ್ದೆ ಚಿಂತೆ ಎಂದು ಕಿಡಿಕಾರಿದ್ದರು.

ನಮ್ಮ ಸಮಸ್ಯೆ ಕೇಳೋರಿಲ್ಲ: ಆಟೋ ಗ್ಯಾಸ್ ಇಲ್ಲದೇ ಆಟೋ ಚಾಲಕರು ಅತಂತ್ರರಾಗಿದ್ದಾರೆ. ಈ ಸಮಸ್ಯೆಗಳ ನಡುವೆ, ಜನಪ್ರತಿನಿಧಿಗಳು ಮಾತ್ರ ಕ್ರಿಕೆಟ್ ಮ್ಯಾಚ್ ನೋಡಲು ಮುಗಿಬಿದ್ದಿರುವುದನ್ನು ನೋಡಿ ಆಟೋ ಚಾಲಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಮ್ಮ ಸಮಸ್ಯೆಗಳು ಯಾರಿಗೂ ಬೇಕಿಲ್ಲ, ಐಪಿಎಲ್ ಟಿಕೆಟ್ ಇದ್ದರೆ ಸಾಕು ಅವರಿಗೆ, ನಾವು ಗ್ಯಾಸ್ ಸಿಗದೆ ಸಾಯುತ್ತಿದ್ದೇವೆ, ಗಂಟೆಗಟ್ಟಲೆ ಕ್ಯೂನಲ್ಲಿ ನಿಲ್ಲುತ್ತಿದ್ದೇವೆ. ದುಡಿಮೆ ಇಲ್ಲ ಎಂದು ಆಕ್ರೋಶ ಹೊರಹಾಕಿದರು.

ಟಿಕೆಟ್‌ಗಾಗಿ ಶಾಸಕರಿಗೆ ಕರೆ

ಬೆಂಗಳೂರು: ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏ.5ರಂದು ಆರ್‌ಸಿಬಿ ಮತ್ತು ಸಿಎಸ್‌ಕೆ ಮಧ್ಯೆ ಹೈವೋಲ್ಟೇಜ್ ಪಂದ್ಯ ನಡೆಯಲಿದೆ ಇತ್ತ ಶಾಸಕರಿಗೆ ತಲಾ ಮೂರು ಐಪಿಎಲ್ ಟಿಕೆಟ್ ವಿತರಣೆ ಮಾಡಲಾಗಿದೆ. ಹೀಗಾಗಿ ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಸಂಬಂಧಿ ಎಂದು ಹೇಳಿಕೊಂಡು ರಾಜಾಜಿನಗರ ಶಾಸಕ ಸುರೇಶ್ ಕುಮಾರ್‌ಗೆ ದೂರವಾಣಿ ಕರೆ ಮಾಡಿರುವ ಘಟನೆ ನಡೆದಿದೆ. ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಸಂಬಂಧಿ ಎಂದು ಹೇಳಿರುವ ಸಂದೀಪ್ ಎನ್ನುವವವರು , ತೆಲಂಗಾಣ ಸಿಎಂ ಕಚೇರಿಯಿಂದ ನಿಮ್ಮ ದೂರವಾಣಿ ಸಂಖ್ಯೆ ಪಡೆದಿದ್ದೇನೆ. ಐಪಿಎಲ್ ಟಿಕೆಟ್ ಪಡೆಯಲು ಸಹಾಯ ಎಂದಿದ್ದಾರೆ.



ಲವ್ ಜಿಹಾದ್ ಆರೋಪ | ನಾಲ್ಕು ಪ್ರಕರಣ ದಾಖಲು

ಆರೋಪಿ ಸಮೀರ್ ಮುಲ್ಲಾ ಬಂಧನ

ಹುಬ್ಬಳ್ಳಿ: ಲವ್ ಜಿಹಾದ್ ಆರೋಪಕ್ಕೆ ಸಂಬಂಧಿಸಿದಂತೆ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಸೇರಿದಂತೆ ನಾಲ್ಕು ಪ್ರಕರಣಗಳು ದಾಖಲಾಗಿದ್ದು, ಪೊಲೀಸರು ಶನಿವಾರ ತನಿಖೆ ಚುರುಕುಗೊಳಿಸಿದ್ದಾರೆ. ಮೊಬೈಲ್ ಹಾಗೂ ಹಲವು ಸಾಕ್ಷ್ಯಗಳ ಸಂಗ್ರಹಿಸಿದ್ದಾರೆ. ಯುವತಿ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಮ್ ತರಬೇತುದಾರ ಸಮೀರ್ ಮುಲ್ಲಾನನ್ನು ವಿದ್ಯಾನಗರ ಪೊಲೀಸರು ಬಂಧಿಸಿದ್ದಾರೆ.

ಈಗಾಗಲೇ ಪೊಲೀಸರ ವಶದಲ್ಲಿರುವ ಜಿಮ್ ತರಬೇತುದಾರ ಸಮೀರ್ ಮುಲ್ಲಾ ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಪೊಲೀಸ್ ಆಯುಕ್ತ ಎನ್.ಶಶಿಕುಮಾರ ಸ್ವತಃ ಭೇಟಿ ನೀಡಿ ಕೆಲ ಹೊತ್ತು ವಿಚಾರಣೆ ನಡೆಸಿದರು. ವಿದ್ಯಾನಗರ ಪೊಲೀಸ್ ಠಾಣೆಗೆ ಭೇಟಿ ನೀಡಿ ದಾಖಲಾದ ಪ್ರಕರಣಗಳ ಕುರಿತು ಪೊಲೀಸರಿಂದ ಹಲವು ಮಾಹಿತಿ ಪಡೆದರು. ಇದೇ ವೇಳೆ ಯುವತಿಯನ್ನು ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ವಿದ್ಯಾನಗರ ಹಾಗೂ ಅಶೋಕನಗರ ಠಾಣೆಯಲ್ಲಿ 4 ಪ್ರಕರಣಗಳು ದಾಖಲಾಗಿವೆ. ಶನಿವಾರ ಸಮೀರ್ ಬಾವ ಲೂಕ್ ಎಂಬುವರು ಯುವತಿ ಕುಟುಂಬಸ್ಥರ ಹಾಗೂ ಹಲವರ ಮೇಲೆ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಈ ಕುರಿತು ಹು-ಧಾ ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಮಾಧ್ಯಮದರೊಂದಿಗೆ ಮಾತನಾಡಿ, ಯುವತಿ ತನ್ನ ಮೇಲೆ ಲೈಂಗಿಕ ದೌರ್ಜನ್ಯವಾಗಿದೆ, ಯುವತಿ ತಾಯಿ ಮನೆಗೆ ನುಗ್ಗಿ ಸಮೀರ್ ಮುಲ್ಲಾ ಕುಟುಂಬಸ್ಥರು ಹಲ್ಲೆ ಮಾಡಿ, ಮನೆ ಆಸ್ತಿಗಳಿಗೆ ಹಾನಿ ಮಾಡಿದ್ದಾರೆ ಎಂದು ಪ್ರಕರಣ ದಾಖಲಿಸಿದರೇ, ಯುವಕ ಸಮೀರ್, ಯುವತಿ ಕುಟುಂಬಸ್ಥರು ಹಾಗೂ ಹಲವರು ಸೇರಿ ನನ್ನ ಅಪಹರಿಸಿ ಹಲ್ಲೆ ಮಾಡಿದ್ದಾರೆ ಎಂದು ಪ್ರತಿದೂರು ನೀಡಿದ್ದಾರೆ ಎಂದರು.

ಯುವತಿ ಹಾಗೂ ಕುಟುಂಬಸ್ಥರು ಸಮೀರ್, ಆತನ ಸಹೋದರಿ ಹಾಗೂ ಬಾವ ಶೋಷಣೆ ಮಾಡಿದ್ದು, ಸಮೀರ್ ನೊಂದಿಗಿರು ಅಂತ ಬಲವಂತ ಮಾಡಿರುವುದಾಗಿ, ಬೇರೆ ಹುಡುಗಿಯರಿಗೆ ತೊಂದರೆ ಕೊಟ್ಟಿರುವುದುದಾಗಿ ಆರೋಪಿಸಿದ್ದು, ಅವರನ್ನು ಸಹ ವಿಚಾರಣೆಗೆ ಒಳಪಡಿಸಲಾಗುವುದು ಎಂದು ಹೇಳಿದರು.

ಪೊಲೀಸರಿಂದ ಮೊಬೈಲ್ ವಶ

ಲೈಂಗಿಕ ದೌರ್ಜನ್ಯ ನಡೆಸಿರುವ ವಿಡಿಯೋವೊಂದರ ಕುರಿತು ಶುಕ್ರವಾರ ಯುವತಿ ಹಾಗೂ ಯುವಕ ಸಮೀರ್ ಮುಲ್ಲಾ ಆರೋಪ ಹಾಗೂ ಪ್ರತ್ಯಾರೋಪ ಮಾಡಿದ್ದರು. ಈ ಹಿನ್ನೆಲೆ ತನಿಖಾಧಿಕಾರಿಗಳು ಯುವಕ ಹಾಗೂ ಯುವತಿ ಮೊಬೈಲ್ ವಶಕ್ಕೆ ಪಡೆದು ಪರಿಶೀಲನೆ ನಡೆಸಿದ್ದಾರೆ. ಪೊಲೀಸರಿಗೆ ತನಿಖೆ ವೇಳೆ ಹಲವು ಪ್ರಮುಖ ಮಾಹಿತಿ ದೊರೆಕಿವೆ. ಪ್ರಕರಣಕ್ಕೆ ಸಂಬಂಧಿಸಿ ಮೊಬೈಲ್‌ಗಳ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಆಯುಕ್ತ ಎನ್. ಶಶಿಕುಮಾರ ತಿಳಿಸಿದರು.

ಸಮೀಕ್ಷೆಯಲ್ಲಿ ಅಘಾತಕಾರಿ ಅಂಶ ಬಹಿರಂಗ | ಸಾಮಾನ್ಯ ಗ್ಯಾಸ್ಟ್ರಿಕ್ ಅಥವಾ ಜೀರ್ಣಕ್ರಿಯೆ ಕ್ಯಾನ್ಸರ್‌ಗೆ ಆಹ್ವಾನ

ಗ್ಯಾಸ್ಟ್ರಿಕ್ ನಿರ್ಲಕ್ಷ್ಯವೇ ಕ್ಯಾನ್ಸರ್ ಕಾಯಿಲೆಗೆ ಮುನ್ನುಡಿ

▸ ಚಂದನ್ ಲಕ್ಕೂರು

ದಿಗಂತ ವಿಶೇಷ

ಬೆಂಗಳೂರು: ಸಿಲಿಕಾನ್ ಸಿಟಿಯ ಜನಜೀವನ ಎಷ್ಟು ವೇಗವಾಗಿದೆಯೋ, ಅಷ್ಟೇ ಅಪಾಯಕಾರಿಯಾಗಿ ಜನರ ಆರೋಗ್ಯ ಶೈಲಿ ಬದಲಾಗುತ್ತಿದೆ. ಸಾಮಾನ್ಯ ಗ್ಯಾಸ್ಟ್ರಿಕ್ ಅಥವಾ ಜೀರ್ಣಕ್ರಿಯೆಯ ತೊಂದರೆ ಎಂದು ಭಾವಿಸಿ ಮನೆಮದ್ದುಗಳಿಗೆ ಮೊರೆ ಹೋಗುವ ಬೆಂಗಳೂರಿನ ಶೇ. 88ರಷ್ಟು ಮಂದಿ, ತಿಳಿಯದೆಯೇ ಮಾರಕ ಕೊಲೊರೆಕ್ಟಲ್ (ದೊಡ್ಡ ಕರುಳು) ಕ್ಯಾನ್ಸರ್‌ಗೆ ಆಹ್ವಾನ ನೀಡುತ್ತಿದ್ದಾರೆ ಎಂಬ ಆತಂಕಕಾರಿ ವಿಷಯ ಈಗ ಬೆಳಕಿಗೆ ಬಂದಿದೆ.

ಮೆರ್ಕ್ ಸ್ಪೆಷಾಲಿಟೀಸ್ ಪ್ರೈವೇಟ್ ಲಿಮಿಟೆಡ್ ಇತ್ತೀಚೆಗೆ ನಡೆಸಿದ ಜೀವನ ಶೈಲಿ ಮತ್ತು ಜೀರ್ಣಾಂಗ ಆರೋಗ್ಯ ಜಾಗೃತಿ ಸಮೀಕ್ಷೆಯಲ್ಲಿ ದೃಢಪಟ್ಟಿದೆ. ನಗರದ ನಿವಾಸಿಗಳು ಸಣ್ಣಪುಟ್ಟ ಜೀರ್ಣಕ್ರಿಯೆಯ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತಿರುವುದು ಮತ್ತು ವೈದ್ಯಕೀಯ ಸಲಹೆ ಪಡೆಯುವಲ್ಲಿ ತೋರುತ್ತಿರುವ ವಿಳಂಬವು ಭವಿಷ್ಯದಲ್ಲಿ ದೊಡ್ಡ ಆರೋಗ್ಯ ದುರಂತಕ್ಕೆ ಕಾರಣವಾಗುವ ಮುನ್ಸೂಚನೆಯನ್ನು ನೀಡಿದೆ.

ಏನಿದು ಸಮೀಕ್ಷೆಯ ಅಂತರಾಳ? ದೇಶದ 14 ಪ್ರಮುಖ ನಗರಗಳಲ್ಲಿ 25 ರಿಂದ 65 ವರ್ಷದ ಸುಮಾರು 10,198 ಜನರನ್ನು ಈ ಸಮೀಕ್ಷೆಗೆ ಒಳಪಡಿಸಲಾಗಿತ್ತು. ಬೆಂಗಳೂರಿನವರು ಸಮೀಕ್ಷೆಯಲ್ಲಿ ಭಾಗವಹಿಸಿದ್ದ 932 ಜನರಲ್ಲಿ ಕೇವಲ ಶೇ.12ರಷ್ಟು ಮಂದಿ ಮಾತ್ರ ತಜ್ಞ ವೈದ್ಯರ ಸಲಹೆ ಪಡೆಯುತ್ತಿದ್ದಾರೆ. ಉಳಿದ ಶೇ. 88ರಷ್ಟು ಜನರು ಮಲಬದ್ಧತೆ ಮತ್ತು ಗ್ಯಾಸ್ಟ್ರಿಕ್‌ನಂತಹ ಸಮಸ್ಯೆಗಳಿಗೆ ತಾವೇ ಸ್ವಯಂ ಮದ್ದು ಅಥವಾ ಮನೆಮದ್ದು ಮಾಡಿಕೊಳ್ಳುತ್ತಿದ್ದಾರೆ. ಇದಕ್ಕಿಂತಲೂ ಭಯಾನಕ ಸಂಗತಿಯೆಂದರೆ, ಮಲವಿಸರ್ಜನೆಯ ಸಮಯದಲ್ಲಿ ರಕ್ತಸ್ರಾವ ಕಂಡುಬಂದರೂ ಶೇ. 26ರಷ್ಟು ಜನರು ವೈದ್ಯರ ಬಳಿ ಹೋಗದೆ ಮನೆಮದ್ದನ್ನೇ ನಂಬಿ ಕುಳಿತಿದ್ದಾರೆ.

ಆರಂಭದಲ್ಲೇ ಚಿಕಿತ್ಸೆ ಪಡೆದರೆ ಕ್ಯಾನ್ಸರನಿಂದ ಪಾರು: ಆರಂಭಿಕ ಲಕ್ಷಣಗಳನ್ನು ನಿರ್ಲಕ್ಷಿಸುವುದೇ ಕ್ಯಾನ್ಸರ್ ಉಲ್ಬಣಕ್ಕೆ ಮೂಲ ಕಾರಣ. ಸಾಮಾನ್ಯವಾಗಿ ಗುದದ್ವಾರದಲ್ಲಿ ಕಾಣಿಸಿಕೊಳ್ಳುವ ಸಣ್ಣ ಗಂಟುಗಳನ್ನು (ಪಾಲಿಪ್ಸ್) ಆರಂಭ ದಲ್ಲೇ ಪತ್ತೆ ಹಚ್ಚಿ ಚಿಕಿತ್ಸೆ ನೀಡದಿದ್ದರೆ ಅವು ಕ್ಯಾನ್ಸರ್ ಗಡ್ಡೆಗಳಾಗಿ ಪರಿವರ್ತನೆಯಾಗುತ್ತವೆ. ನಾರಿನಂಶವಿಲ್ಲದ ಆಹಾರ, ಅತಿಯಾದ ಸಂಸ್ಕರಿತ ಆಹಾರ ಸೇವನೆ, ತಂಬಾಕು ಮತ್ತು ವ್ಯಾಯಾಮದ ಕೊರತೆಯು ಈ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸುತ್ತಿವೆ.

ಬದಲಾಗಬೇಕಿದೆ ಜೀವನಶೈಲಿ



ಸಮೀಕ್ಷೆಯ ಪ್ರಕಾರ, ಬೆಂಗಳೂರಿನ ಶೇ. 80ರಷ್ಟು ಜನರು ಪ್ರತಿನಿತ್ಯ ಹೋಟೆಲ್ ಅಥವಾ ಸಂಸ್ಕರಿತ ಆಹಾರದ ಮೇಲೆ ಅವಲಂಬಿತರಾಗಿದ್ದಾರೆ. ವ್ಯಾಯಾಮ ಮಾಡುವವರ ಸಂಖ್ಯೆ ಶೇ. 47ರಷ್ಟಿದ್ದು, ಶೇ. 36ರಷ್ಟು ಜನರು ತಂಬಾಕು ವ್ಯಸನಿಗಳಾಗಿದ್ದಾರೆ. ನಿರಂತರ ತೂಕ ಇಳಿಕೆ, ಮಲದಲ್ಲಿ ರಕ್ತ ಕಾಣಿಸಿಕೊಳ್ಳುವುದು ಅಥವಾ ಪದೇ ಪದೇ ಹೊಟ್ಟೆಯ ತೊಂದರೆ ಕಾಡುತ್ತಿದ್ದರೆ ತಕ್ಷಣವೇ ಎಚ್ಚೆತ್ತುಕೊಳ್ಳುವುದು ಒಳಿತು. ಕೊಲೊರೆಕ್ಟಲ್ ಕ್ಯಾನ್ಸರ್ ಅನ್ನು ಆರಂಭಿಕ ಹಂತದಲ್ಲಿ ಪತ್ತೆಹಚ್ಚಿದರೆ ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿದೆ. ಆದರೆ ಕೇವಲ ಗ್ಯಾಸ್ಟ್ರಿಕ್ ಎಂದು ನಿರ್ಲಕ್ಷಿಸಿದರೆ ಅದು ಜೀವಕ್ಕೇ ಕುತ್ತು ತರಬಹುದು ಎಂಬುದು ವೈದ್ಯಲೋಕದ ಕಳಕಳಿಯಾಗಿದೆ.

> ಜನರು ಉತ್ತಮ ಆರೋಗ್ಯ ಶೈಲಿ ರೂಪಿಸಿಕೊಳ್ಳದೇ ಇರುವುದು ಕೊಲೊರೆಕ್ಟಲ್ ಕ್ಯಾನ್ಸರ್‌ಗೆ ದಾರಿ ಮಾಡಿಕೊಡುತ್ತಿದೆ. ಗುದದ್ವಾರದಲ್ಲಿ ಸಣ್ಣದಾಗಿ ಗುಳ್ಳೆ ಮಾದರಿಯಲ್ಲಿ ಕಾಣಿಸಿಕೊಳ್ಳುವ ಪಾಲಿಪ್ಸ್ ಅನ್ನು ಕಡೆಗಣಿಸಿದರೆ ಅದು ಮುಂದೆ ಕ್ಯಾನ್ಸರ್ ಆಗಿ ಪರಿವರ್ತನೆಯಾಗುತ್ತದೆ.
> ■ ಡಾ. ಎಂ.ಸಿ. ಸುರೇಶ್ ಬಾಬು, ನಿರ್ದೇಶಕ ಕಿಮ್ಸ್

> ಸಮೀಕ್ಷೆಯ ಫಲಿತಾಂಶ ವೈದ್ಯಲೋಕಕ್ಕೆ ನಿಜಕ್ಕೂ ಆತಂಕಕಾರಿಯಾಗಿದೆ. ಜನರು ತಮಗಿರುವ ಆರೋಗ್ಯ ಸಮಸ್ಯೆಗಳಿಗೆ ವೈದ್ಯರಿಂದ ಸಲಹೆ ಪಡೆಯುವ ಬದಲು, ತಾವೇ ಸ್ವಯಂ ಔಷಧಿ ಮಾಡಿಕೊಳ್ಳುತ್ತಿರುವುದು ಅನಾರೋಗ್ಯಕ್ಕೆ ದೊಡ್ಡ ಆಹ್ವಾನ ನೀಡಿದಂತಿದೆ.
> ■ ಡಾ. ಮಾನಸಿ, ಹಿರಿಯ ವೈದ್ಯೆ, ಸ್ಪರ್ಶ ಆಸ್ಪತ್ರೆ

ಘಾಟಿ ವಿಭಾಗದಲ್ಲಿ ಸಂಚಾರಕ್ಕೆ ಸಮಸ್ಯೆಯಾಗದಂತೆ ಕ್ರಮವಹಿಸಿ

ಬೆಳ್ತಂಗಡಿ: ಮಳೆಗಾಲದಲ್ಲಿ ಘಾಟಿವಿಭಾಗದಲ್ಲಿ ಸಂಚಾರಕ್ಕೆ ಸಮಸ್ಯೆ ಉಂಟಾಗದಂತೆ ಕ್ರಮವಹಿಸುವಂತೆ ರಾಷ್ಟ್ರೀಯ ಹೆದ್ದಾರಿ ಇಲಾಖೆ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕೀಹೊಳಿ ಸೂಚನೆ ನೀಡಿದರು.

ಅವರು ಶುಕ್ರವಾರ ಸಂಜೆ ಚಾರ್ಮಾಡಿ ಘಾಟಿ ವಿಭಾಗ ಮತ್ತು ಪುಂಜಾಲಕಟ್ಟೆ- ಚಾರ್ಮಾಡಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಯ ವೀಕ್ಷಣೆ ನಡೆಸಿದರು. ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ಅಗತ್ಯ ಕಾಮಗಾರಿ ನಿರ್ವಹಿಸಲು ತಿಳಿಸಿದರು. ಪುಂಜಾಲಕಟ್ಟೆ- ಚಾರ್ಮಾಡಿ ಹೆದ್ದಾರಿ ಅಭಿವೃದ್ಧಿ ಕಾಮಗಾರಿ ವೇಳೆ ತೆರವುಗೊಂಡ ಕಟ್ಟಡ, ಸ್ಥಳಗಳ ಮಾಲೀಕರಿಗೆ ನೀಡಲಾಗುವ ಪರಿಹಾರ ಧನ ವಿಳಂಬವಾಗುತ್ತಿರುವ ಕುರಿತು ಮಾಹಿತಿ ತಿಳಿದು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಸೂಚಿಸಿದರು. ಸಾರ್ವಜನಿಕರು, ವಾಹನ ಸವಾರರಿಗೆ ತೊಂದರೆ ಉಂಟಾಗದಂತೆ ಮಳೆಗಾಲಕ್ಕೆ ಆರಂಭಕ್ಕೆ ಮೊದಲು ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ತಿಳಿಸಿದರು.

ರಸ್ತೆ ಅಭಿವೃದ್ಧಿ ಹೊಂದಿದ ಕೆಲವು ಕಡೆ ರಸ್ತೆ ಅಂಕುಡೊಂಕಾಗಿ ಇರುವ ಬಗ್ಗೆ ಪ್ರಶ್ನಿಸಿದರು. ಹೆದ್ದಾರಿ ಬದಿ ಬರುವ ಶಾಲೆಗಳ ಮಕ್ಕಳು ರಸ್ತೆ ದಾಟುವಾವ ವೇಳೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಹೇಳಿದರು. ಹೆದ್ದಾರಿ ಅಭಿವೃದ್ಧಿ ಅಂಗವಾಗಿ ಹೊಸ ಸೇತುವೆಗಳು ನಿರ್ಮಾಣಗೊಳ್ಳುತ್ತಿದ್ದು ಇವುಗಳ ಕೆಲಸವನ್ನು ಬೇಗನೆ ಪೂರ್ಣಗೊಳಿಸುವಂತೆ ಸೂಚಿಸಿದರು.

ಸಾರ್ವಜನಿಕ ನೋಟಿಸು

ನನ್ನ ಪಕ್ಷಗಾರರಾದ ಶ್ರೀ. ರಾಜು ಬಾಲಚಂದ್ರ ರಾಯ್ಕರ, ಸಾಕೀನ: ದೇಸಾಯಿ ಓಣಿ, ಅಣ್ಣಿಗೇರಿ, ತಾಲೂಕ : ಅಣ್ಣಿಗೇರಿ, ಧಾರವಾಡ ಜಿಲ್ಲೆ ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇಲಿಂದ ನಾನು ಅರುಣಕುಮಾರ ಎನ್. ಪಾಟೀಲ ವಕೀಲರು, ಹುಬ್ಬಳ್ಳಿ ಕೊಡುವ ಸಾರ್ವಜನಿಕ ತಿಳುವಳಿಕೆ ನೋಟಿಸು ಈ ಕೆಳಗಿನಂತಿದೆ.

ಧಾರವಾಡ ಜಿಲ್ಲಾ ಅಣ್ಣಿಗೇರಿ ತಾಲೂಕ ಸಬ್ ರಜಿಸ್ಟಾರ ಹದ್ದಿಯ ಅಣ್ಣಿಗೇರಿ ನಗರ ವ್ಯಾಪ್ತಿಯಲ್ಲಿ ಬರುವ ಕೆಎಚ್‌ಬಿ ಕಾಲೋನಿಯಲ್ಲಿರುವ ರಿ.ಸ. ನಂ. 132/133/1ಎ+1ಬಿ+1ಕ/134/1 ರಲ್ಲಿ ರಚಿಸಲ್ಪಟ್ಟ ವಾಸಯೋಗ್ಯ ಖುಲ್ಲಾ ಪ್ಲಾಟ ನಂ. ಎಲ್‌ಐಜಿ-20 **ಕ್ಷೇತ್ರ 01 ಗುಂಟೆ 01 ಅಣೆ ಆಸ್ತಿಗೆ ಸಂಬಂಧಿಸಿದಂತೆ ದಿನಾಂಕ 13.12.2006 ರಂದು ದಸ್ತ್ ನಂ. ಎನ್‌ವಿಎಲ್-1-01947/2006-07 ಕ್ಕೆ** ನವಲಗುಂದ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಾಯಿಸಲ್ಪಟ್ಟ ಕರ್ನಾಟಕ ಹೌಸಿಂಗ್ ಬೋರ್ಡ ನವರು **ಶ್ರೀ. ಮೌಲಾಸಾಬ ದೊಡ್ಡರಾಜೇಸಾಬ ಬಸಾಪೂರ** ಇವರ ಪರವಾಗಿ ಬರೆದುಕೊಟ್ಟ ಮೂಲ ಖರೀದಿ ಪತ್ರ ಮತ್ತು ದಿನಾಂಕ 02.01.2016 ರಂದು ದಸ್ತ್ ನಂ. ಎಜಿಆರ್-1-02573/2015-16 ಸಿಡಿ ನಂ. ಎಜಿಆರ್‌ಡಿ22 ಕ್ಕೆ ಅಣ್ಣಿಗೇರಿ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಾಯಿಸಲ್ಪಟ್ಟ ಕರ್ನಾಟಕ ಹೌಸಿಂಗ್ ಬೋರ್ಡ ನವರು ಶ್ರೀ. ಮೌಲಾಸಾಬ ದೊಡ್ಡರಾಜೇಸಾಬ ಬಸಾಪೂರ ಇವರ ಪರವಾಗಿ ಬರೆದುಕೊಟ್ಟ ಮೂಲ ಖರೀದಿ ಪತ್ರದ ದುರಸ್ತಿ ಪತ್ರಗಳು ಕಳೆದುಹೋಗಿದ್ದು, ಈ ಕುರಿತು ದಿನಾಂಕ: 03.04.2026 ರಂದು ಕರ್ನಾಟಕ ರಾಜ್ಯ ಪೋಲಿಸ್ ಇಲಾಖೆಗೆ ದೂರನ್ನು ದಾಖಲಿಸಿದ್ದು, ಸದರ ದೂರಿನ ಸಂಖ್ಯೆ: 2137520/2026 ಅಂತಾ ಇರುತ್ತದೆ. ಕಾರಣ ಸದರ ವಿಷಯ ಕುರಿತು ಈ ಮೂಲಕ ಸಾರ್ವಜನಿಕರಿಗೆ ಕೊಟ್ಟ ತಿಳುವಳಿಕೆ ನೋಟಿಸು ಏನೆಂದರೆ, ಒಂದು ವೇಳೆ ಸದರ ಮೂಲ ಪತ್ರ ಸಿಕ್ಕಲ್ಲಿ ಈ ಕೆಳಗೆ ಹೇಳಿದ ವಿಳಾಸಕ್ಕೆ ತಲುಪಿಸಲು ವಿನಂತಿ.

ಶ್ರೀ. ಅರುಣಕುಮಾರ ಎನ್. ಪಾಟೀಲ, ವಕೀಲರು
#201/ಎ, 1ನೇ ಮಹಡಿ, ಕುಂದಗೋಳ ಕಾಂಪ್ಲೆಕ್ಸ, ಹಳೇ ಕೋರ್ಟ ಎದುರುಗಡೆ,
ಹುಬ್ಬಳ್ಳಿ-29 ಮೊ. 9743235274
ಹುಬ್ಬಳ್ಳಿ
04.04.2026

ಕ್ರಿಮಿನಲ್ ಮಿಸ್‌ಲೆನಿಯಸ್ ನಂ:61/2026
ಮಾನ್ಯ:ಸಿವ್ಹಿಲ್ ಜಜ್ಜ ಮತ್ತು ಜೆ.ಎಮ್.ಎಫ್.ಸಿ ಸವಣೂರ ಇವರ ನ್ಯಾಯಾಲಯಕ್ಕೆ

ಅರ್ಜಿದಾರರು 1) ಶ್ರೀಮತಿ ಶಕುಂತಲಾ ಕೋಂ ಶಿದ್ದಪ್ಪ ಬೆಂಡಿಗೇರಿ ಹಾಗೂ ಇನ್ನೊಬ್ಬರು

ವಿರುದ್ಧ

ಎದುರುಗಾರರು : ಮೆ:ತಹಶೀಲದಾರ ಕಾರ್ಯಾಲಯ [ಜನನ-ಮರಣ ನೋಂದಣಿಧಿಕಾರಿಗಳು] ತಹಶೀಲದಾರ ಕಾರ್ಯಾಲಯ ಸವಣೂರ ತಾ: ಸವಣೂರ ಜಿ:ಹಾವೇರಿ

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಇದರಲ್ಲಿ 1ನೇ ಅರ್ಜಿದಾರಳ ಗಂಡ ಹಾಗೂ 2 ನೇ ಅರ್ಜಿದಾರನ ತಂದೆಯಾದ ಶ್ರೀ ಶಿದ್ದಪ್ಪ ತಂದೆ ಪರಸಪ್ಪ ಬೆಂಡಿಗೇರಿ ಈತನು ದಿನಾಂಕ:17-08-2010 ರಂದು ಸವಣೂರ ತಾಲೂಕ ಮಂತ್ರೋಡಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ಫೋತಿಯಾಗಿದ್ದು ಇರುತ್ತದೆ ಹಾಗೂ ಫೋತಿಗೆ 1ನೇ ಅರ್ಜಿದಾರಳಿಗೆ ಗಂಡನಾಗಬೇಕು ಹಾಗೂ 2ನೇ ಅರ್ಜಿದಾರನಿಗೆ ತಂದೆಯಾಗಬೇಕು ಹಾಗೂ ಅರ್ಜಿದಾರರಿಗೆ ಫೋತಿಯ ವಾರಸಾ ಪಡೆಯಲು ಮರಣ ಪ್ರಮಾಣ ಪತ್ರ ಅವಶ್ಯಕತೆ ಇರುತ್ತದೆ .ಅದಕ್ಕೆ ಮರಣ ಪ್ರಮಾಣ ಪತ್ರವನ್ನು ಪಡೆಯುವ ಕುರಿತು. ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದು ಇದ್ದು ಆ ಕುರಿತು ಮಾನ್ಯ ನ್ಯಾಯಾಲಯದವರು ದಿನಾಂಕ:19/04/2026 ರಂದು ಮುದ್ದತ್ತನ್ನು ನೇಮಿಸಿದ್ದು ಇದ್ದು ಸದರಿ ಪ್ರಕರಣಕ್ಕೆ ಸಮ್ಮಂದಿಸಿದಂತೆ ಯಾರಾದರೂ ಆಸಕ್ತಿಯುಳ್ಳವರು ಮೇಲಿನ ದಿನಾಂಕದಂದು ಮಾನ್ಯ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಏಕತರ್ಫಿಯಾಗಿ ಮುಂದಿನ ಆದೇಶ ಮಾಡಲಾಗುವದು ಅಂತಾ ಕೊಟ್ಟ ಸಾರ್ವಜನಿಕ ಪತ್ರಿಕಾ ಪ್ರಕಟಣೆ ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ಹೊರಡಿಸಲಾಯಿತು

ಸವಣೂರ
ದಿನಾಂಕ : 01/04/2026

ಸಹಿ/- ಶಿರಸ್ತೇದಾರ
ಕಿರಿಯ ದಿವಾಣಿ ನ್ಯಾಯಧೀಶರು ವ ಜೆ. ಎಮ್. ಎಫ್. ಸಿ. ನ್ಯಾಯಾಲಯ ಸವಣೂರ

ಅರ್ಜಿದಾರರ ಪರ ವಕೀಲರು
ಸಹಿ/-ಶ್ರೀಮತಿ ಎಲ್.ಹೆಚ್. ಕಡಕೋಳ ವಕೀಲರು.ಶಿಗ್ಗಾಂವ

ಕ್ರಿಮಿನಲ್ ಮಿಸಲೇನಿಯಸ ನಂ: 140/2026
ಕಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ಶಿಗ್ಗಾಂವ ಇವರ ನ್ಯಾಯಾಲಯಕ್ಕೆ

ಅರ್ಜಿದಾರರು: 1) ಶ್ರೀಮತಿ ವಿಜಯಲಕ್ಷ್ಮಿ ಕೋಂ ಜಗದೇವಯ್ಯ ಕುಲಕರ್ಣಿ ಹಾಗೂ ಇತರರು

ವಿರುದ್ಧ

ಎದುರುಗಾರರು:ಜನನ-ಮರಣ ನೋಂದಣಾಧಿಕಾರಿಗಳು ಮೆ॥ ಉಪತಹಶೀಲ್ದಾರ ದುಂಡಶಿ ತಾ॥ ಶಿಗ್ಗಾಂವ ಜಿ॥ ಹಾವೇರಿ

ಪತ್ರಿಕಾ ಪ್ರಕಟಣೆ

ಇದರಲ್ಲಿ ಅರ್ಜಿದಾರರ ತಂದೆಯಾದ ಶ್ರೀ ಶಿವ ಮೂರ್ತಯ್ಯ ತಂದೆ ನಿಸಿಮಯ್ಯ ಹಿರೇಮಠ ಸಾ॥ ಮುಳಕೇರಿ ತಾ॥ ಶಿಗ್ಗಾಂವ ಜಿ॥ ಹಾವೇರಿ ಇವರು ದಿನಾಂಕ: 01-06-1996 ಇಸ್ವಿ ಯಂದು ಮುಳಕೇರಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಸದರಿ ಫೋತಿಗೆ ಅರ್ಜಿದಾರರು ವಾರಸುದಾರರು ಇದ್ದು, ಅರ್ಜಿದಾರರಿಗೆ ಈಗ ವಾರಸಾ ಪ್ರಮಾಣ ಪತ್ರ ಪಡೆಯಲು ಮತ್ತು ಸರಕಾರಿ ಸೌಲಭ್ಯ ಪಡೆಯುವ ಸಲುವಾಗಿ ಈ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು ಇದ್ದು, ದಿನಾಂಕ:07-05-2026 ರಂದು ಮುದ್ದತ್ತು ನೇಮಿಸಿದ್ದು ಇದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ಆಸಕ್ತಿಯುಳ್ಳವರೂ ಮೇಲಿನ ದಿನಾಂಕ ರಂದು ಈ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಏಕತರ್ಫಿಯಾಗಿ ಮುಂದಿನ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಪತ್ರಿಕಾ ಪ್ರಕಟಣೆ.

ನ್ಯಾಯಾಲಯದ ಆದೇಶ ಹಾಗೂ ಮೊಹರನೊಂದಿಗೆ ಹೊರಡಿಸಲಾಗಿತು.

ಶಿಗ್ಗಾಂವ
ದಿನಾಂಕ: 27-03-2026

ಶಿರಸ್ತೇದಾರ
(ಇಮಾಮ ಅ. ಲಿಂಗದಹಳ್ಳಿ)
ಕಿರಿಯ ದಿವಾಣಿ ನ್ಯಾಯಾಧೀಶರು ಜೆ.ಎಮ್.ಎಫ್.ಸಿ ನ್ಯಾಯಾಲಯ ಶಿಗ್ಗಾಂವ

ಅರ್ಜಿದಾರರ ಪರ ವಕೀಲರು
ಶ್ರೀ ಎಮ್.ಸಿ.ಹುಡೇದ ವಕೀಲರು, ಶಿಗ್ಗಾಂವ

ಕ್ರಿ.ಮಿ.ನಂ: 338/2026
ಮೇ:ಜೆ.ಎಮ್ ಎಫ್.ಸಿ ಸವಣೂರ ಇವರ ನ್ಯಾಯಾಲಯಕ್ಕೆ

ಅರ್ಜಿದಾರರು:1)ಅಬ್ದುಲಗನಿ ತಂದೆ ಅಬ್ದುಲರಜಾಕಸಾಬ @ ರಜಾಕಸಾಬ ಮೋಮಿನ, ವ ಇತರರು

-ವಿರುದ್ಧ-

ಎದುರುಗಾರರು:ಜನನ ಮರಣ ನೋಂದಣಾಧಿಕಾರಿಗಳು/ ತಹಶೀಲ್ದಾರ ಸವಣೂರ

: ಸಾರ್ವಜನಿಕ ನೋಟಿಸು :

ಈ ಮೂಲಕ ಯಾವತ್ತು ಸಾರ್ವಜನಿಕರಿಗೆ ತಿಳಿಸುವುದೇನೆಂದರೆ :ಮೇಲ್ಕಾಣಿಸಿದ ಕೇಸಿನಲ್ಲಿಯ ಅರ್ಜಿದಾರರ ತಾಯಿಯಾದ 'ಶರಫುನ ಕೋಂ ರಜಾಕ ಸಾಬ @ ಅಬ್ದುಲರಜಾಕಸಾಬ ಮೋಮಿನ' ರವರು ದಿ: 15-05-2015 ರಂದು ಸವಣೂರ ತಾಲ್ಲೂಕ ಕಾರಡಗಿ ಗ್ರಾಮದ ಸ್ವಗೃಹದಲ್ಲಿ ಎದುರುಗಾರರ ಅಧಿಕಾರ ವ್ಯಾಪ್ತಿಯಲ್ಲಿ ಮರಣ ಹೊಂದಿದ್ದಾಗಿ ಮರಣ ಪ್ರಮಾಣ ಪತ್ರ ಕೋರಿ ಅರ್ಜಿ ಸಲ್ಲಿಸಿದ್ದು, ಈಗ್ಗೆ ಸದರಿ ಕೇಸು ಸಾರ್ವಜನಿಕ ಆಕ್ಷೇಪಣೆಗಾಗಿ ದಿ: 18-04-2026 ರಂದು ನೇಮಿಸಲ್ಪಟ್ಟಿದ್ದು ಇರುತ್ತದೆ. ಕಾರಣ, ಸದರಿ ಅರ್ಜಿದಾರರ ಮಾಗಣಿಗೆ ವಿರುದ್ಧವಾಗಿ ಯಾರದೇವರೂ ಯಾವುದೇ ತಕರಾರು ಇದ್ದಲ್ಲಿ, ಸದರಿ ದಿನಾಂಕದಂದು ಮುಂಜಾನೆ 11.00 ಘಂಟೆಗೆ ನೀವು ಸ್ವತಃ ಇಲ್ಲವೇ ನಿಮ್ಮ ವಕೀಲರ ಮೂಲಕ ಸದರಿ ಕೇಸಿನಲ್ಲಿ ಹಾಜರಾಗತಕ್ಕದ್ದು. ಅದಕ್ಕೆ ತಪ್ಪಿದಲ್ಲಿ, ಸದರಿ ಪ್ರಕರಣವನ್ನು, ಯಾರದೂ ಯಾವುದೇ ಆಕ್ಷೇಪಣೆ ಇರುವುದಿಲ್ಲವಾಗಿ ಪರಿಗಣಿಸಿ ಅರ್ಹತೆಯ ಮೇರೆಗೆ ನಿಕಾಲಿ ಮಾಡಲಾಗುವುದು ತಿಳಿಯಿರಿ.

ಈ ಬಗ್ಗೆ ದಿ: 01-04-2026 ರಂದು ನ್ಯಾಯಾಲಯದ ಸಹಿ ಹಾಗೂ ಮೊಹರಿನೊಂದಿಗೆ ಮಾಡಿಕೊಟ್ಟಿತು.

ಸವಣೂರ
01-04-2026

: ಕೋರ್ಟ ಹುಕುಂ ಮೇರೆಗೆ:
ಶಿರೆಸ್ತೆದಾರರು
ದಿವಾಣಿ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ನ್ಯಾಯಾಲಯ ಸವಣೂರ

ಶ್ರೀ ಎನ್.ಎನ್. ಪಾಟೀಲ
ಅರ್ಜಿದಾರರ ಪರ ವಕೀಲರು

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ಸಾಮಾಜಿಕ ಅರಣ್ಯ ವಿಭಾಗ,
ಜಾರಕ್ ಬಂಡೆ ಅರಣ್ಯ ವಸತಿ ಸಂಕೀರ್ಣ, ಜಾಲಹಳ್ಳಿ ಪಶ್ಚಿಮ, ಬೆಂಗಳೂರು-560 015.
E-mail: dcf.buzp@yahoo.in Phone No: 080-29900992.

ಸಂಖ್ಯೆ: ಎ1/ಬಿಯುಡಿ/ಟೆಂಡರ್/ಸಿಆರ್-26/2025-26 ದಿನಾಂಕ: 04-04-2026

ಮರು-ಟೆಂಡರ್ ಪ್ರಕಟಣೆ

2026-27ನೇ ಸಾಲಿನಲ್ಲಿ ನಗರ ಸಾಮಾಜಿಕ ಅರಣ್ಯ ವಿಭಾಗದ ಆನೇಕಲ್, ಕಗ್ಗಲೀಪುರ ಮತ್ತು ಯಲಹಂಕ ಸಾಮಾಜಿಕ ಅರಣ್ಯ ವಲಯಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ಮಾನ್ಸೂನ್ ನೆಡುತೋಪು ನಿರ್ಮಾಣ ಮತ್ತು 3ನೇ ವರ್ಷದ ನೆಡುತೋಪು ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಅರಣ್ಯ ಇಲಾಖೆಯಲ್ಲಿ 2025-26ನೇ ಸಾಲಿನಲ್ಲಿ ನೋಂದಾಯಿತರಾಗಿರುವ ಅರ್ಹ ಗುತ್ತಿಗೆದಾರರು ಹಾಗೂ 2026-27ನೇ ಸಾಲಿನಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೋಂದಾಯಿಸಲು ಇಚ್ಛಿಸುವ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೋಕ್ ಪೋರ್ಟಲ್ (https://.kppp.karnataka.gov.in) ಮೂಲಕ ಮರು-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ 13-04-2026 ರಂದು ಸಂಜೆ 4:00 ಗಂಟೆ.** ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 16-04-2026 ರಂದು ಪೂರ್ವಾಹ್ನ 11.00 ಗಂಟೆ** ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಯಶಸ್ವಿಯಾಗಿದ್ದರೆ **ದಿನಾಂಕ 18-04-2026 ಸಂಜೆ 3.00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಹಾಗೂ ಸರ್ಕಾರಿ ರಜಾ ದಿನಗಳನ್ನು ಹೊರತು ಪಡಿಸಿ ಕಛೇರಿ ವೇಳೆಯಲ್ಲಿ ಮಾಹಿತಿಗಳನ್ನು ಪಡೆಯಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ನಗರ ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು

ವಾಸಾಸಂಇ/ವಾಪ್ರ/61/ಆಕಾರ್/2026-27

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ

REQUEST FOR PROPOSAL (CALL-2)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ "OPERATING BERTH AT MALPE PORT, KARNATAKA UNDER PUBLIC PRIVATE PARTNERSHIP (PPP) MODEL ON RENOVATE, OPERATE, MAINTAIN AND TRANSFER (ROMT) BASIS" (IDD/2025-26/SE0060/CALL-2)" ಕಾಮಗಾರಿಯನ್ನು ಕೈಗೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು https://kppp.karnataka.gov.in/kppp ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು.

RFP ಮತ್ತು ಇತರ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 02.04.2026 ರಂದು ಡೌನ್‌ಲೋಡ್ ಮಾಡಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 01.05.2026 @ 17.30 ಆಗಿರುತ್ತದೆ. RFP ಗೆ ಸಂಬಂಧಿಸಿದ ಯಾವುದೇ ಹೆಚ್ಚಿನ ಬದಲಾವಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.

ಸಂಪರ್ಕ ವಿವರ: ಮುಖ್ಯ ಕಾರ್ಯನಿರ್ವಹಣಾಧಿಕಾರಿ ರವರ ಕಛೇರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಅಲಿಗದ್ದಾ, ಬೈತ್ ಖೋಲ್, ಕಾರವಾರ-581302

Phone: 08382-221494; & Email: piwtdev.wks@gmail.com/ ceokmb2019@gmail.com

ಸಹಿ/- ಬಂದರು ಇಂಜಿನೀಯರ್
ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ

DIPR/KWR/KSMCA/10/26-27 Dt: 02.04.2026

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ
ಕೋಲಾರ - 563101

e-mail: eepwdkolar07@gmail.com website: www.kpwd.gov.in e-portal: http://kppp.karnataka.gov.in
ದೂರವಾಣಿ ಸಂಖ್ಯೆ: 08152-222022

ಇ-ಟೆಂಡರ್ ಪ್ರಕಟಣೆ- ಕೆಡಬ್ಲ್ಯು -4 ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-01/2026-27 ದಿನಾಂಕ: 02.04.2026

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ಕೆ.ಜಿ.ಎಫ್ ತಾಲ್ಲೂಕು ವ್ಯಾಪ್ತಿಯಲ್ಲಿ **ಲೆಕ್ಕಶೀರ್ಷಿಕೆ: 8443-ಠೇವಣಿ ವಂತಿಗೆ** ಅಡಿಯಲ್ಲಿ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ: ರೂ.330.00 ಲಕ್ಷಗಳು ಇ.ಎಂ.ಡಿ ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ **ನಮೂದಿಸಿರುತ್ತಾರೆ,** ಕಾಲಾವಧಿ : 11 ತಿಂಗಳು ನಿರ್ವಹಿಸಲು **ಕೆಡಬ್ಲ್ಯು-4 ರ ಕಾಮಗಾರಿಗೆ ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ** ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು **ಕೆಡಬ್ಲ್ಯು-4** ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz., http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ ದಿನಾಂಕಃ **18.04.2026** ರಂದು ಸಂಜೆ **16.00** ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: **21.04.2026** ರಂದು ಬೆಳಗ್ಗೆ **11.30** ಗಂಟೆಯ ನಂತರ ಕೆಪಿಪಿಪಿ ಪೋರ್ಟಲ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆಪಿಪಿಪಿ ಪೋರ್ಟಲ್‌ನಲ್ಲಿ **(Viz.,http://kppp.karnataka.gov.in)**ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:10/ಕೆಎಸ್‌ಎಂಸಿಎ/2026-27

IN THE COURT OF THE HON'BLE III ADDL. CIVIL JUDGE & J.M.F.C. AT BALLARI
Crl. M.C. No. 89/2026

Between: Sri. Seena Naik and others
Petitioners

And

The Tahasildar Cum Registrar of Birth and Deaths Taluk office, Ballari
.....Respondent

Notice

To,
Respondent: The Tahasildar Cum Registrar of Birth and Deaths Taluk office, Ballari.

Whereas, the above named Petitioners has instituted above petition u/s 13 (2) of the Births and Death Act 1969 against the above Respondent for purpose seeking death of the Petitioners Father Sri. Nanaka Naik @ Nanya Naik S/o Late Sakraya died on 25.06.1987 at B. Belagal Thanda, Ballari Taluk and District,

You are hereby directed to appear in this court in person or by a pleader duly instructed on 16/05/2026 at about 11.00.a.m. in the before this court to show cause against the above petition, failing which the petition will be heard and determined ex-parte.

Given under my hand and seal of the court on this 4th day of April- 2026

By Order of the Court
Chief Ministerial Officer
III ACJ, & JMFC Court At Ballari

Talavara Somappa
Advocate for the petitioners

CR. MISC. No. 150/2025

IN THE COURT OF THE IV ADDL. CIVIL JUDGE & J.M.F.C. AT: HUBBALLI

Petitioner : Basavaraj H. Budarpur Hubballi.

V/S

Respondent : The Registrar of Births & Deaths H.D.M.C Hubballi. Zonal Office No. 07, Hubballi.

CITATION

WHEREAS, the Petitioner above named has filed this petition for mutation of death of his father **Hanumantappa Krishnappa Budarpur who was expired on 09-08-1981 at his residence at Anandnagar, Hubballi.** in the register of the respondent. And whereas the person interested in the matter are hereby called upon to putforth their say and submit their claim/objection if any for the same on 12-05-2026 at 11-00 hours sharp.

Take notice, if you failed to appear and putforth your say on the day and time afore mentioned the case will be heard and decided ex-parte finally.

Given under my hand & seal of the court on this on 04-04-2026 at Hubballi.

COURT SEAL

By order of the Court
Sd/- Sherestedar
Principal & J.M.F.C. Court, Hubballi

C.B. Ganiger
Advocate for Petitioner,
R.M. Lohiya Nagar, Gokul Road, Hubballi

GOVERNMENT OF KARNATAKA
KARNATAKA FOREST DEPARTMENT
Assistant Conservator of Forests,
Nagamangala Territorial Sub Division, Mandya Division
No: Acf/NMG/Outource/Tender/CR-1/2026-27
Date: 01-04-2026

Tender Notification

TENDER No. : Acf/NMG/Outsource/Tender/CR-1/2026-27. PROCUREMENT ENTITY : Karnataka Forest Department. TENDER INVITING AUTHORITY : Assistant Conservator of Forest, Nagamangala Territorial Sub Division, Mandya Division. PUBLISHED DATE : 01.04.2026. MAIL ID/ADDRESS TO REQUEST CLARIFICATIONS : acfnagamangala@gmail.com. CONTACT PERSON : Assistant Conservator of Forest, Nagamangala Territorial Sub Division, Mandya Division.

First Time Tender

LAST DATE & TIME FOR TENDER QUERIES/ CLARFICATIONS : 13-04-2026, 5.30 PM. LAST DATE & TIME FOR SUBMISSION OF TENDERS : 15.04.2026-5.00 PM. ONLINE IN KARNATAKA PUBLIC PROCUREMENT PORTAL : https://kppp.karnataka.gov.in. DATE & TIME FOR OPENING OF TECHNICAL TENDER ONLINE IN KARNATAKA PUBLIC PROCUREMENT PORTAL : 16.04.2026, 5.10 PM. DATE & TIME FOR OPENING OF FINANCIAL TENDERS : 21.04.2026-5.20 PM.

Second Time Tender (If no successfull bids are received on first time)

LAST DATE & TIME FOR SUBMISSION OF TENDERS : 20.04.2026-5.30 PM. DATE AND TIME FOR OPENING OF TECHNICAL TENDER ONLINE IN KARNATAKA PUBLIC PROCUREMENT PORTAL : 27.04.2026, 5.00 PM. DATE & TIME FOR OPENING OF FINANCIAL TENDERS : 28.04.2026, 5.00 PM. ADDRESS FOR COMMUNICATION : Assistant Conservator of Forest, Nagamangala Territorial Sub Division, TB Extension, Nagamangala. AMOUNT PUT TO TENDER (Including Service charge, GST) : Rs.54,85,804.00/-. AMOUNT OF EARNEST MONEY DEPOSIT : Show in Table 1.1.

ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ/ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು.

PERIOD OF CONTRACT : 01.04.2026 to 31.03.2027 = 12 Months.

VALIDITY OF TENDER : 45 days from the last date for Submission of Tenders.

Sd/-Assitant Conservator of Forests, Nagamangala Sub Division, Mandya Division

ವಾಸಾಸಂಇ/ಸನಿ ಮಂ/ಕೆಎಸ್‌ಎಂಸಿಎ/008/2026 27

(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:02/2025-26 ದಿನಾಂಕ:01.04.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಹಾಸನ ರವರು, ಅರಕಲಗೂಡು ಉಪ ವಿಭಾಗ ವ್ಯಾಪ್ತಿಯ 2025-26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮೂಲಸೌಕಾರ್ಯ ಅಭೀವೃದ್ಧಿ ಯೋಜನೆಯಡಿ INDENT NO:(1) RDPR/2025-26/BD/WORK_INDENT25517 (2)RDPR/2025-26/RD/WORK_INDENT25520 (3) RDPR/2025-26/BD/WORK_INDENT25516 ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ-ಪ್ರೊಕ್ಯೂರ್‌ಮೆಂಟ್ ಅಡಿ KW-4 ರ ರೀತ್ಯಾ ಅಂತರ್ಜಾಲದಲ್ಲಿ ದಿ: 02.04.2026 ರಿಂದ ದಿ:13.04.2026ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:13.04.2026ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:10.04.2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ಪ್ರೀ-ಬಿಡ್ ಮೀಟಿಂಗನ್ನು ದಿನಾಂಕ:08.04.2026 ಬೆಳಗೆ 11.00 ಗಂಟೆಗೆ ಕಾರ್ಯಪಾಲಕ ಅಭಿಯಂತರರು,ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,ಹಾಸನ ಕಛೇರಿಯಲ್ಲಿ ನಿಗಧಿ ಪಡಿಸಲಾಗಿದೆ. ದಿ:15.04.2026 ರಂದು ಬೆಳಗೆ 11.00 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಪ.ರಾಜ್.ಇಂ. ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/12/ಕೆಎಸ್‌ಎಂಸಿಎ/2026-27

ತುಮಕೂರು ಜಿಲ್ಲಾ ಪಂಚಾಯತ್,
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ತುಮಕೂರು ವಿಭಾಗ,
ತುಮಕೂರು. ದೂ:0816-2252937

ಸಂಖ್ಯೆ:ಕಾಇಂ/ಪಂರಾಇವಿ/ತುಮ/ತಾಂಶಾ/ಟೆಂಡರ್/2026-27/01 ದಿನಾಂಕ 02.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-01/2026-27
(ಕೆ.ಪಿ.ಪಿ ಪೋರ್ಟಲ್ ಮುಖಾಂತರ ಏಕ & ದ್ವಿ ಲಕೋಟೆ ಪದ್ಧತಿ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-1, KW-2, KW-3 & KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಪೋರ್ಟ್‌ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು-560 025, ದೂರವಾಣಿ: 080-22485867, 080-22485927ರಲ್ಲಿ ಹಾಗೂ ಪಂಚಾಯತ್‌ರಾಜ್ ಇಂಜಿನಿಯರಿಂಗ್/ ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ಅರ್ಹ (ಸಿವಿಲ್) ನೊಂದಾಯಿಸಿದ ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವ್ಯಾಪ್ತಿಯ 2025-26 ನೇ ಸಾಲಿನ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ, 2025-26ನೇ ಸಾಲಿನ 5054-ರ ಕಾರ್ಯಕ್ರಮ, 2024-25ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ತರಗತಿ ಕೊಠಡಿಗಳ ದುರಸ್ಥಿ ಯೋಜನೆ, 2024-25 ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಶೌಚಾಲಯ ಬ್ಲಾಕ್ ನಿರ್ಮಾಣ, 2018-19 ನೇ ಸಾಲಿನ ಪರಿಶಿಷ್ಟ ಜಾತಿ ವಿವಿಧ ಅಭಿವೃದ್ಧಿ ಯೋಜನೆ (ಬಂಡವಾಳ ಲೆ.ಶೀ4225-01-796-0-01) ಯೋಜನೆಗಳಡಿ ಕಾಮಗಾರಿಗಳಿಗೆ ಟೆಂಡರ್‌ನ್ನು ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಏಕ ಮತ್ತು ದ್ವಿ ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

(Indent No:
1.RDPR/2025-26/BD/WORK_INDENT24930,
2.RDPR/2025-26/BD/WORK_INDENT24926,
3.RDPR/2025-26/BD/WORK_INDENT22856/CALL-2,
4.RDPR/2025-26/RD/WORK_INDENT25755,
5.RDPR/2025-26/RD/WORK_INDENT25756,
6.RDPR/2025-26/BD/WORK_INDENT25902,
7.RDPR/2025-26/BD/WORK_INDENT25901,
8.RDPR/2026-27/BD/WORK_INDENT25932,
9.RDPR/2025-26/BD/WORK_INDENT24189)

ಕಾಮಗಾರಿಗಳ ಟೆಂಡರ್‌ನ್ನು, ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಏಕ ಮತ್ತು ದ್ವಿ - ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ http://www.KPPP.karnataka.gov.in ಮುಖಾಂತರ ದಿನಾಂಕ: 02.04.2026 ರಿಂದ 17.04.2026 ಸಂಜೆ 5.00 ಗಂಟೆವರೆಗೆ ಫಾರಂ ಫೀ ಕೆ.ಪಿ.ಪಿ.ಪೋರ್ಟಲ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816-2272620 ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಕೆ.ಪಿ.ಪಿ.-ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ತುಮಕೂರು.

DIPR/TUM/07/KSMCA/2026-27

ಕರ್ನಾಟಕ ಸರ್ಕಾರ
ತಹಶೀಲ್ದಾರರು ಹಾಗೂ ತಾಲ್ಲೂಕ ಕಾರ್ಯನಿರ್ವಾಹಕ ದಂಡಾಧಿಕಾರಿಗಳು ಮಾನ್ವಿ
OFFICE OF THE TAHSILDAR & TALUK EXCUTIVE MAGISTRATE MANVI

ಸಂ/ಕಂದಾಯ/ನೀ.ಮಾ.ಯ.ದೇವಸ್ಥಾನ/ /2025-26 ದಿನಾಂಕ:31-03-2026

-:: ಹರಾಜು ಪ್ರಕಟಣೆ ::-

ವಿಷಯ: ಮಾನ್ವಿ ತಾಲ್ಲೂಕಿನ ನೀರಮಾನ್ವಿ ಗ್ರಾಮದ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದ ಮಳಿಗೆ ಹರಾಜು ಕುರಿತು.

ಉಲ್ಲೇಖ: 1)ಮಾನ್ಯ ಉಚ್ಚನ್ಯಾಯಾಲಯ ಕಲಬುರಗಿ ಪೀಠ ಕಲಬುರಗಿ ರವರ ಆದೇಶ ಸಂಖ್ಯೆ: WP No:03341/2024 02-04-2024.
2) ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಇವರಿಗೆ ಬರೆದ ಪತ್ರದ ದಿನಾಂಕ:27-01-2026
3) ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಇವರ ಪತ್ರದ ದಿನಾಂಕ:28-01-2026
4) ಈ ಕಾರ್ಯಾಲಯದಿಂದ ಶ್ರೀಸುರೇಶ ಉಪ್ಪಾರ ತಂದೆ ಭೀಮಣ್ಣ ಸಾ॥ ನೀರಮಾನವಿ ಇವರಿಗೆ ನೋಟೀಸ್ ಜಾರಿ ಮಾಡಿದ ದಿನಾಂಕ:10-02-2026

ಮಾನ್ವಿ ತಾಲ್ಲೂಕಿನ ನೀರಮಾನ್ವಿ ಗ್ರಾಮದ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನದ ಮಳಿಗೆ ಹರಾಜು ಕುರಿತು ಉಲ್ಲೇಖ (1) ರ ಮೂಲಕ ಮಾನ್ಯ ಉಚ್ಚನ್ಯಾಯಾಲಯ ಕಲಬುರಗಿ ಪೀಠ ಕಲಬುರಗಿ ರವರ ಆದೇಶ ಸಂಖ್ಯೆ: WP No:03341/2024 ದಿನಾಂಕ:02-04-2024 ರಂದು ಮಳಿಗೆ ಹರಾಜಿಗೆ ಸಂಬಂಧಿಸಿದಂತೆ, ಅರ್ಜಿದಾರರು ಮತ್ತು ಪ್ರತಿವಾದಿಯರು ಕೋರಿಕೆಗಳನ್ನು ಪರಿಶೀಲಿಸಿ, ಮುಂದಿನ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಜಿಲ್ಲಾಧೀಕಾರಿಗಳು ರಾಯಚೂರು ಇವರಿಗೆ ನಿರ್ದೇಶಿಸಿರುತ್ತಾರೆ.

ಉಲ್ಲೇಖ(2)ರ ಮೂಲಕ ಹೊಸದಾಗಿ ಹರಾಜು ಪ್ರಕ್ರಿಯೆ ಕೈಗೊಳ್ಳಲು ಮಾರ್ಗದರ್ಶನ ನೀಡಲು ಕೋರಲಾಗಿತ್ತು. ಆದರಂತೆ ಉಲ್ಲೇಖ(2) ರ ಮೂಲಕ ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಇವರು ಮಳಿಗೆ ಹರಾಜು ಕುರಿತು ನಿಯಮಾನುಸಾರ ಹರಾಜು ಪ್ರಕ್ರಿಯೆ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

ಉಲ್ಲೇಖ(4) ರ ಮೂಲಕ ಶ್ರೀಸುರೇಶ ಉಪ್ಪಾರ ತಂದೆ ಭೀಮಣ್ಣ ಸಾ॥ ನೀರಮಾನವಿ ಇವರಿಗೆ ಸದರಿ ಮಳಿಗೆ ಹರಾಜು ಕುರಿತು ನಿಯಮಾನುಸಾರ ಹರಾಜು ಪ್ರಕ್ರಿಯೆ ಮಾಡಬೇಕಾಗಿರುವುದರಿಂದ ಸದರಿ ನೋಟೀಸ್ ಜಾರಿಯಾದ ತಕ್ಷಣದಿಂದ ಸದರಿ ಮಳಿಗೆಯನ್ನು ಬಂದು ಮಾಡಿ ಕಂದಾಯ ನಿರೀಕ್ಷಕರು ಮಾನವಿ ಹಾಗೂ ಕಾರ್ಯದರ್ಶಿಗಳು, ಶ್ರೀ ರೇಣುಕಾ ಯಲ್ಲಮ್ಮದೇವಿ ದೇವಸ್ಥಾನ ನೀರಮಾನವಿ ಇವರಿಗೆ ಹಸ್ತಾಂತರ ಮಾಡಲು ಸೂಚಿಸಿ ನೋಟೀಸ್ ಜಾರಿ ಮಾಡಲಾಗಿರುತ್ತದೆ.

ಸದರಿ ಮಳಿಗೆ ಹರಾಜು ಪ್ರಕ್ರಿಯೆಯನ್ನು ದಿನಾಂಕ:06-4-2026 ರಂದು ಬೆಳಿಗ್ಗೆ 10-30 ರಂದು ತಹಶೀಲ್ ಕಾರ್ಯಾಲಯದ ಸಭಾಂಗಣದಲ್ಲಿ ತೆಗೆದುಕೊಳ್ಳಲಾಗುವುದು. ಈ ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಈ ಕೆಳಗೆ ನಮೂದಿಸಿದ ಷರತ್ತುಗಳಿಗೆ ನಡೆದುಕೊಳ್ಳತಕ್ಕದ್ದು, ಸಾರ್ವಜನಿಕ ಹರಾಜಿನಲ್ಲಿ ಹೆಚ್ಚಿನ ಮೊತ್ತಕ್ಕೆ ಒಪ್ಪಿಸಿದವರಿಗೆ ಹರಾಜು ಅನುಮತಿಯನ್ನು ಅಂಗೀಕರಿಸಲಾಗುತ್ತದೆ. ಹರಾಜು ಆದ ನಂತರ ಈ ಕಾರ್ಯಾಲಯದಿಂದ ಪ್ರಮಾಣಪತ್ರ ಪಡೆಯಲು ಸೂಚಿಸಿದೆ. ಹರಾಜು ಪಡೆದವರು ಹರಾಜಿನ ದಿನದಂದು ಹರಾಜಿನ ಹಣದಲ್ಲಿ ಶೇ.75% ಮೊತ್ತವನ್ನು ಸ್ಥಳದಲ್ಲಿಯೇ ಪಾವತಿಸತಕ್ಕದ್ದು. ಈ ಕೆಳಗೆ ನಮೂದಿಸಿದ ವಿವರಗಳ ಹರಾಜು ಮಂಜೂರು ಪಡೆದವರು ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು. ಒಂದು ವೇಳೆ ಯಾವುದಾದರೂ ಉಲ್ಲಂಘನೆ ಕಂಡು ಬಂದಲ್ಲಿ ಹರಾಜಿನ ಅನುಮತಿಯನ್ನು ರದ್ದುಪಡಿಸಿ ಪರ್ಯಾಯ ವ್ಯವಸ್ಥೆಯ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಹರಾಜಿನ ವಿವರ: ಮಳಿಗೆ ಹರಾಜು (ಹರಾಜು ದಿನಾಂಕ ದಿಂದ ಒಂದು ವರ್ಷದವರೆಗೆ). **ಠೇವಣಿ ಮೊತ್ತ:** ರೂ.2,00,000/-. **ದಿನಾಂಕ & ಸಮಯ:** ಬೆಳಿಗ್ಗೆ 10-30 ಗಂಟೆಗೆ

ಸಹಿ/- ಅಧ್ಯಕ್ಷರು,
ಶ್ರೀ ರೇಣುಕಾ ಯಲ್ಲಮ್ಮದೇವಿ ದೇವಸ್ಥಾನ ಸಮಿತಿ
ನೀರಮಾನ್ವಿ ಹಾಗೂ ತಹಶೀಲ್ದಾರರು ಮಾನ್ವಿ

DIP/RCR/04/KSMC&A/06/2026-27

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ

ಸಂಖ್ಯೆ: ಶಿಮನಪಾಶಿ/ಕಾ.ವಿ/ಟೆಂಡರ್/57/2025-26 ದಿನಾಂಕ: 31.03.2026

ಟೆಂಡರ್ ಪ್ರಕಟಣೆ

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆಕ್ಟ್ 1999 ರ ನಿಯಮದಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟಲ್ ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್ ಸೈಟ್ **www.kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದು

1) ಕೆಪಿಪಿ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:02.05.2026 (ಸಂಜೆ: 4.00 ಗಂಟೆಗೆ). 2) ಕೆಪಿಪಿ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.05.2026 (ಸಂಜೆ 4.30 ಗಂಟೆಗೆ). 3) ಕೆಪಿಪಿ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಆರ್ಥಿಕ್ ಬಿಡ್ ತೆರೆಯುವ ದಿನಾಂಕ: 05.05.2026 (ಸಂಜೆ 4.30 ಗಂಟೆಗೆ)

ಕ್ರ ಸಂ	ಇಂಡೆಂಟ್ ಸಂಖ್ಯೆ	ಕಾಮಗಾರಿ/ಸೇವೆಯ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ ರೂ.
1.	56311	Restoration and continuation work of Poura Karmika Housing Block no.09 and 11 in Shivamogga City Corporation limits	314.00	3,98,000/-
2.	55923	Restoration and continuation work of Poura Karmika Housing Block no.04,06,16 in Shivamogga City Corporation limits	478.00	6,06,000/-
3.	56966	Restoration and continuation work of Poura Karmika Housing Block no.01 and 14 in Shivamogga City Corporation limits	294.00	3,73,000/-

ಸೂಚನೆ: 1. ಟೆಂಡರ್ ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ವಾ.ಸಾ.ಸಂ.ಇ./ಶಿ/ಸಂ.21.04/
ರ್ಝೀಂಕಾರ್/2026-27

ಸಹಿ/-
ಕಾರ್ಯಪಾಲಕ ಅಭಿಯಂತರರು ಮಹಾನಗರ ಪಾಲಿಕೆ, ಶಿವಮೊಗ್ಗ

ಕರ್ನಾಟಕ ಸರಕಾರ
ಪುರಸಭೆ ಕಾರ್ಯಾಲಯ, ಬಂಕಾಪುರ ಜಿಲ್ಲೆ॥ ಹಾವೇರಿ

E-mail : ka.bankapura.tmc@gmail.com Phone No : 08378-25123

ಕ್ರ.ಸಂ: ಪುಸಬ/ತಾಂ.ವಿ/ಎಸ್.ಎಫ್.ಸಿ ವಿಶೇಷ/ವಹಿ/2025-26 ದಿನಾಂಕ : 01-04-2026

ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಬಂಕಾಪುರ ಪುರಸಭೆ ವ್ಯಾಪ್ತಿಯ ಸನ 2022-23 & 2024-25 ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಿದ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ತಿದ್ದುಪಡಿ ಅಧಿನಿಯಮ 2000 ರ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ-ಪ್ರೊಕ್ಯೂರ್‌ಮೆಂಟ್ ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಬಿಡ್ಡ್ ಡಾಕ್ಯೂಮೆಂಟ್ ನಿಬಂಧನೆಗೊಳಪಟ್ಟು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಗುತ್ತಿಗೆದಾರರು https://kppp.karnataka.gov.in ಗೆ ನೇರವಾಗಿ ಲಾಗ್-ಇನ್ ಆಗಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ.

(1) ಗುತ್ತಿಗೆದಾರರು ನೇರವಾಗಿ http://kppp.karnataka.gov.in ಗೆ ಲಾಗ್-ಇನ್ ಆಗಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **30-04-2026** ಸಮಯ ಸಾಯಂಕಾಲ 17-30 ಗಂಟೆವರೆಗೆ ಮಾತ್ರ. (2) ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ : **02-05-2026** ರಂದು 11-00 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನದಂದು.

ಅ. ನಂ.	ಟೆಂಡರ್ (ಇಂಡೆಂಟ್) ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಗುತ್ತಿಗೆದಾರರ ದರ್ಜೆ	ಕಾಮಗಾರಿ ಅವಧಿ	ಮಿಸಲಾತಿ
ಸನ್ 2022-23 ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ							
1	DMA/2025-26/OW/WORK_INDENT55401	315.00	266.47	400000.00	2ನೇ ದರ್ಜೆ ಹಾಗೂ ಮೇಲ್ಪಟ್ಟು	11 ತಿಂಗಳು	Others
2	DMA/2025-26/OW/WORK_INDENT55413	385.00	308.39	463000.00	2ನೇ ದರ್ಜೆ ಹಾಗೂ ಮೇಲ್ಪಟ್ಟು	11 ತಿಂಗಳು	Others
ಸನ್ 2024-25 ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ							
3	DMA/2025-26/OW/WORK_INDENT56826	305.42	251.89	400000.00	2ನೇ ದರ್ಜೆ ಹಾಗೂ ಮೇಲ್ಪಟ್ಟು	11 ತಿಂಗಳು	Others

ಹೆಚ್ಚಿನ ಮಾಹಿತಿಯನ್ನು ಪುರಸಭೆ ಕಛೇರಿ ವೇಳೆಯಲ್ಲಿ ಹಾಗೂ http://www.bankapurtown.mrc.gov.in ನಿಂದ ಪಡೆಯಬಹುದಾಗಿದೆ.

ಸಹಿ/- ಅಧ್ಯಕ್ಷರು, ಪುರಸಭೆ, ಬಂಕಾಪುರ
ಸಹಿ/- ಮುಖ್ಯಾಧಿಕಾರಿ, ಪುರಸಭೆ, ಬಂಕಾಪುರ

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/22/2026-27

ರಿಜ್ವಿ ಆಟಕ್ಕೆ ಮಂಕಾದ ಮುಂಬೈ | ಅಕ್ಷರ್ ಪಡೆಗೆ ಎರಡನೇ ಗೆಲುವು | ಸೂರ್ಯ ಹೋರಾಟ ವ್ಯರ್ಥ

ದಿಲ್ಲಿಯಲ್ಲಿ ರಿಜ್ವಿ ದರ್ಬಾರ್!

ಹೊಸದಿಲ್ಲಿ: ಒತ್ತಡದ ಸಮಯದಲ್ಲಿ ಮತ್ತೊಮ್ಮೆ ತಂಡದ ಕೈ ಹಿಡಿದ ಸಮೀರ್ ರಿಜ್ವಿ ತಮ್ಮ ಸಮಯೋಚಿತ ಬ್ಯಾಟಿಂಗ್‌ನೊಂದಿಗೆ ದಿಲ್ಲಿ ತಂಡಕ್ಕೆ ಸತತ ಎರಡನೇ ಗೆಲುವು ತಂದಿಟ್ಟರು. ತಂಡದ ಸಾಂಘಿಕ ಬೌಲಿಂಗ್ ಮಾಡಿದ ನಂತರ ಗುರಿ ಪೇರಿಸುವಾಗ ಮಿಂಚಿದ ದಿಲ್ಲಿ ಎರಡನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು 6 ವಿಕೆಟ್‌ಗಳಿಂದ ಸೋಲಿಸಿತು.

ದಿಲ್ಲಿಯ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರಿಜ್ವಿಯದ್ದೇ ಆಟ ನಡೆಯಿತು. ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡ ಅಕ್ಷರ್ ಪಡೆ ಮಾರಕ ದಾಳಿ ಸಂಘಟಿಸಿತು. ರೋಹಿತ್ ಶರ್ಮ, ರಿಕೆಲ್ಟನ್, ಸೂರ್ಯ ಹೀಗೆ ಬ್ಯಾಟಗರ ದಂಡೇ ಇದ್ದ ತಂಡವನ್ನು ಕರಾರುವಾಕ್ಕಾಗಿ 162 ರನ್‌ಗಳಿಗೆ ತಡೆದು ನಿಲ್ಲಿಸಿತು. ಮುಂಬೈ ಪರ ಸೂರ್ಯಕುಮಾರ್ ಯಾದವ್ 51 ರನ್ ಗಳಿಸಿ ಹೋರಾಡಿದರು. ಇತ್ತ ದಿಲ್ಲಿ ಪರ ಮುಖೇಶ್ 2 ವಿಕೆಟ್ ಪಡೆದುಕೊಂಡರು.

ಗುರಿ ಬೆನ್ನತ್ತಿದ ದಿಲ್ಲಿಗೆ ನಾಗಾಲೋಟ. ಮೊದಲಿಗೆ ದೀಪಕ್ ಚಾಹರ್ ಅವರ ಮಾರಕ ದಾಳಿಗೆ ವಿಕೆಟ್ ಕಳೆದುಕೊಂಡರೂ ನಂತರ ರಿಜ್ವಿ ಗೆಲ್ಲಿಸುವ ಜವಾಬ್ದಾರಿ ವೈಗೆತ್ತಿಕೊಂಡರು. ಅವರಿಗೆ ನಿಸ್ಸಂಕಾ ಸಾಥ್ ಸಿಕ್ಕ ನಂತರ ತಂಡ 18.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 164 ರನ್ ಗಳಿಸಿ ಗೆದ್ದುಕೊಂಡಿತು.

ಪಂದ್ಯಶ್ರೇಷ್ಠ ಮತ್ತೊಮ್ಮೆ ರಿಜ್ವಿ ಪಡೆದುಕೊಂಡರೆ, 2 ವಿಕೆಟ್ ಪಡೆದ ಮುಖೇಶ್ ಪಂದ್ಯದ ಬೆಸ್ಟ್ ಬೌಲರ್ ಅನ್ನಿಸಿಕೊಂಡರು. ಸೂರ್ಯ 52 ರನ್ ಬಾರಿಸಿ ಹೋರಾಟ ನಡೆಸಿದ ಏಕೈಕ ಆಟಗಾರ ಎನ್ನಿಸಿಕೊಂಡರು. ಉಳಿದಂತೆ ನಿಸ್ಸಂಕಾ ಮತ್ತು ರೋಹಿತ್ ಶರ್ಮ ಕೂಡ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ.

ಸಮೀರ್ ಅಬ್ಬರ: ಗುರಿ ಬೆನ್ನತ್ತುವಾಗ ದಿಲ್ಲಿಗೆ ರಾಹುಲ್ ವಿಕೆಟ್ ಕಳೆದುಕೊಂಡ ಆಘಾತ. ನಿತಿಶ್ ರಾಣಾ ವಿಕೆಟ್ ಮುಂಬೈಗೆ ರನೌಟ್ ಮೂಲಕ ಉಡುಗೊರೆ ಸಿಕ್ಕಂತೆ ಸಿಕ್ಕಿತು. ಅಲ್ಲಿ ಪಂದ್ಯದಲ್ಲಿ ಮುನ್ನಡೆ ಸಾಧಿಸಿದ್ದ ಮುಂಬೈ ಇಂಡಿಯನ್ಸ್ ಅದೇ ಮುಂದುವರಿಸಲು ಶಕ್ತವಾಗಲಿಲ್ಲ. ನಾಲ್ಕನೇ ವಿಕೆಟ್‌ಗೆ ಜೊತೆಯಾದ ನಿಸ್ಸಂಕಾ ಮತ್ತು ರಿಜ್ವಿ ಅಬ್ಬರದ ಬ್ಯಾಟಿಂಗ್ ಶುರು ಮಾಡಿದರು. ಸಮೀರ್ ಸೆಟ್ ಆದರು. ನಿಸ್ಸಂಕಾ ವಿಕೆಟ್ ಒಪ್ಪಿಸಿದರು, ಇವರಿಬ್ಬರ ಜೊತೆಯಾಟ 66 ರನ್ ಗಳಿಸಿತು. ಅದರಲ್ಲಿ ಸಮೀರ್ 25 ರನ್ ಮಾತ್ರ ಗಳಿಸಿದರು.



ಔಪಚಾರಿಕತೆ ಮುಗಿಸಿಕೊಂಡಿದ್ದ ಸಮೀರ್ ನಂತರ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಬಂದ ಬೌಲರ್‌ಗಳನ್ನೆಲ್ಲಾ ದಂಡಿಸುತ್ತಾ ಬಂದರು. ಮುಂಬೈ ಕಡೆಯಿಂದ ಪಂದ್ಯ ಕಸಿದರು. ಅವರಿಗೆ ಮಿಲ್ಲರ್ ಅಚ್ಚುಕಟ್ಟಾದ ಸಾಥ್ ಕೊಟ್ಟರು. ಮುಂದಿನ 28 ಬಾಲ್‌ಗಳಲ್ಲಿ ರಿಜ್ವಿ 65 ರನ್ ಚಚ್ಚಿದರು. 90 ರನ್‌ಗಳಿಸಿದ್ದಾಗ ಬಾಷ್‌ಗೆ ಕ್ಯಾಚ್ ಆದರು. ಅಲ್ಲಿಗೆ ಪಂದ್ಯ ಮುಂಬೈ ಕಡೆಯಿಂದ ಹೋಗಿತ್ತು. ಉಳಿದ ಔಪಚಾರಿಕತೆಯನ್ನು ಮಿಲ್ಲರ್ ಸಂಪನ್ನಗೊಳಿಸಿದರು. ದಿಲ್ಲಿ 6 ವಿಕೆಟ್ ಜಯ ಸಾಧಿಸಿತು.

ಮುಂಬೈಗೆ ಸೂರ್ಯ ಆಸರೆ: ಬ್ಯಾಟಿಂಗ್‌ಗಿಳಿದ



ಮುಂಬೈ ಇಂಡಿಯನ್ಸ್‌ಗೆ ಆರಂಭಿಕ ಆಘಾತ. 9 ರನ್ ಗಳಿಸಿದ್ದ ರಯಾನ್ ರಿಕೆಲ್ಟನ್ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ತಿಲಕ್ ವರ್ಮಾ ಶೂನ್ಯ ಸುತ್ತಿದರು. ಸಂಕಷ್ಟಕ್ಕೆ ಸಿಲುಕಿದ ಮುಂಬೈಗೆ ಸೂರ್ಯ ಹಾಗೂ ರೋಹಿತ್ ಕೊಂಚ ಹೊತ್ತು ಆಸರೆಯಾದರು. 35 ರನ್ ಗಳಿಸಿದ್ದ ರೋಹಿತ್ ಶರ್ಮ ವಿಕೆಟ್ ಒಪ್ಪಿಸಿದರು. ಸೂರ್ಯ ನಿಧಾನವಾಗಿ ಅರ್ಧಶತಕ ಬಾರಿಸಿದರು. ರುದರ್‌ಫೋರ್ಡ್ 5 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ನಮನ್ ಧಿರ್ 28 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು. ಸೂರ್ಯ 51 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ದಿಲ್ಲಿ ಪರ ಮುಖೇಶ್ 2 ವಿಕೆಟ್ ಪಡೆದರು.

ಸ್ಕೋರ್ ಬೋರ್ಡ್

ಮುಂಬೈ 20 ಓವರ್‌ಗಳಲ್ಲಿ 162/6

ರಿಕೆಲ್ಟನ್	ಸಿ ಅಕ್ಷರ್ ಬಿ ಮುಖೇಶ್	9
ರೋಹಿತ್	ಸಿ ನಿತಿಶ್ ಬಿ ಅಕ್ಷರ್	35
ತಿಲಕ್	ಸಿ ಮತ್ತು ಬಿ ಮುಕೇಶ್	0
ಸೂರ್ಯ	ಎಲ್‌ಬಿ ಬಿ ಲುಂಗಿ	51
ರುದರ್‌ಫೋರ್ಡ್	ಸಿ ಮುಖೇಶ್ ಬಿ ವಿಪ್ರಾಜ್	5
ನಮನ್	ಸಿ ಸ್ಟಬ್ಸ್ ಬಿ ನಟರಾಜನ್	28
ಸ್ಯಾಂಟ್ನರ್	ನಾಟೌಟ್	18
ಬಾಷ್	ನಾಟೌಟ್	11
ಇತರೆ		5

ಬೌಲಿಂಗ್ ವಿವರ

ಮುಖೇಶ್	3-0-26-2
ಲುಂಗಿ	4-0-34-1
ಅಕ್ಷರ್	4-0-22-1
ವಿಪ್ರಾಜ್	3-0-24-1
ಕುಲ್ದೀಪ್	3-0-31-0
ನಟರಾಜನ್	3-0-24-1

ದಿಲ್ಲಿ 18.1 ಓವರ್‌ಗಳಲ್ಲಿ 164/4

ರಾಹುಲ್	ಸಿ ರಿಕೆಲ್ಟನ್ ಬಿ ಚಾಹರ್	1
ನಿಸ್ಸಂಕಾ	ಸಿ ಮಯಾಂಕ್ ಬಿ ಸ್ಯಾಂಟ್ನರ್	44
ನಿತಿಶ್	ರನೌಟ್	0
ರಿಜ್ವಿ	ಸಿ ವರ್ಮಾ ಬಿ ಬಾಷ್	90
ಮಿಲ್ಲರ್	ನಾಟೌಟ್	21
ಸ್ಟಬ್ಸ್	ನಾಟೌಟ್	3
ಇತರೆ		5

ಬೌಲಿಂಗ್ ವಿವರ

ಚಾಹರ್	3-0-20-1
ಬೂಮ್ರಾ	4-0-21-0
ಸ್ಯಾಂಟ್ನರ್	3-0-22-1
ಶಾರ್ದೂಲ್	3-0-41-0
ಮಯಾಂಕ್	2-0-20-0
ಬಾಷ್	3.1-0-39-1

ಜುರೇಲ್ ಮಿಂಚಿನಾಟ | ಜೈಸ್ವಾಲ್ ಅಬ್ಬರ

ಆರ್‌ಆರ್ 210/6

ಅಹಮದಾಬಾದ್: ಯಶಸ್ವಿ ಜೈಸ್ವಾಲ್, ವೈಭವ್ ಸೂರ್ಯವಂಶಿ ಮತ್ತು ಧ್ರುವ್ ಜುರೇಲ್ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಗುಜರಾತ್ ತಂಡವನ್ನು ದಂಡಿಸಿರುವ ರಾಜಸ್ಥಾನ ರಾಯಲ್ಸ್ ತಂಡವು 200ಕ್ಕೂ ಅಧಿಕ ಸ್ಕೋರ್ ನಿರ್ಮಿಸಿದೆ. ಪಂದ್ಯಾವಳಿಯ 9ನೇ ಪಂದ್ಯದಲ್ಲಿ ರಾಜಸ್ಥಾನ ಮತ್ತು ಗುಜರಾತ್ ತಂಡಗಳು ಮುಖಾಮುಖಿಯಾಗಿದ್ದವು. ಅಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ ಇಬ್ಬರು ಯುವಕರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರದ ಆರಂಭ ಪಡೆಯಿತು. ಮಧ್ಯಮ ಕ್ರಮಾಂಕದಲ್ಲಿ ಜುರೇಲ್ ಅವರ ಆಸರೆ ಪಡೆಯಿತು. ಹೆಟ್ಮೇರ್ ಅವರ ಚಿಕ್ಕ-ಚೊಕ್ಕ ಪ್ರದರ್ಶನದೊಂದಿಗೆ ತಂಡ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 210 ರನ್ ಗಳಿಸಿದೆ.



ಆರಂಭಿಕರ ಅರ್ಭಟ: ಟಾಸ್ ಗೆದ್ದು ಬ್ಯಾಟಿಂಗ್‌ಗಿಳಿದ ರಾಜಸ್ಥಾನ ಎಂದಿನಂತೆ ಸ್ಫೋಟಕ ಆರಂಭ ಪಡೆಯಿತು. ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಮೊದಲನಿಂದಲೂ ಬಿರುಸಿನ ಬ್ಯಾಟಿಂಗ್ ಮಾಡುವತ್ತ ಸಾಗಿತ್ತು. ಒಂದು ಹಂತದಲ್ಲಿ ವೈಭವ್ ಸೆಟ್ ಆಗಲುಸ್ವಲ್ಪಸಮಯತೆಗೆದುಕೊಂಡರೆ, ಜೈಸ್ವಾಲ್ ಹೊಡೆಯದೊಂದಿಗೆ ಇನ್ನಿಂಗ್ಸ್ ಆರಂಭಿಸಿದರು. ಇಬ್ಬರ ಆಟಕ್ಕೆ ಗುಜರಾತ್ ತಂಡದ ಬೌಲಿಂಗ್ ಪಡೆ ತತ್ತರಿಸಿತು. ಸ್ವಲ್ಪ ಸಮಯದ ನಂತರ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದ ವೈಭವ್ 5 ಬೌಂಡರಿ ಹಾಗೂ 1 ಸಿಕ್ಸರ್‌ಗಳೊಂದಿಗೆ 31 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಜೈಸ್ವಾಲ್ 36 ಬಾಲ್‌ಗಳಲ್ಲಿ 6 ಬೌಂಡರಿ 3 ಸಿಕ್ಸರ್‌ಗಳೊಂದಿಗೆ 55 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಜುರೇಲ್ ಮಿಂಚಿನಾಟ: ಧ್ರುವ್ ಜುರೇಲ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. ಮೂರನೇ ಕ್ರಮಾಂಕಕ್ಕೆ ಬಡ್ತಿ ಪಡೆದ ಅವರು, ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಂಡ ನಂತರ ಬಿರುಸಿನ ಆಟ ಶುರು ಮಾಡಿದರು. ಮಧ್ಯಮ ಕ್ರಮಾಂಕದಲ್ಲಿ ರಿಯಾನ್ 8, ಹೆಟ್ಮೇರ್ 18 ರನ್ ಮತ್ತು ಫೆರಾರಿಯಾ 1 ರನ್‌ಗೆ ವಿಕೆಟ್ ಕಳೆದುಕೊಂಡರು. ಇಷ್ಟಾದರೂ ಒಂದು ಬದಿಯಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದ ಜುರೇಲ್ 42 ಬಾಲ್ ಮಾತ್ರ ಎದುರಿಸಿ 5 ಬೌಂಡರಿ ಮತ್ತು 5 ಸಿಕ್ಸರ್‌ಗಳೊಂದಿಗೆ 75 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಇದರೊಂದಿಗೆ ಸ್ಕೋರ್ ಹಿಗ್ಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಗಿಲ್ ಅಲಭ್ಯ: ಗುಜರಾತ್ ಜೇಂಟ್ಸ್ ತಂಡದ ನಾಯಕ ಶುಭಮನ್ ಗಿಲ್ ಗಾಯದ ಕಾರಣದಿಂದಾಗಿ ರಾಜಸ್ಥಾನ ವಿರುದ್ಧದ ಪಂದ್ಯದಿಂದ ಹೊರಗುಳಿದರು. ಅವರ ಬದಲಿಗೆ ತಂಡದ ಪ್ರಮುಖ ಆಟಗಾರ ರಶೀದ್ ಖಾನ್ ಅವರನ್ನು ಹಂಗಾಮಿ ನಾಯಕರನ್ನಾಗಿ ನೇಮಿಸಲಾಗಿತ್ತು.



ಕಿರುಸುದ್ದಿ

ಪಂಜಾಬ್‌ಗೆ ಸತತ ಎರಡನೇ ಗೆಲುವು

ಚೆನ್ನೈ: ಯುವ ಬ್ಯಾಟರ್ ಪ್ರಿಯಾಂಶ್ ಆರ್ಯ ಅವರ ಸ್ಫೋಟಕ ಬ್ಯಾಟಿಂಗ್ ನಂತರ ನಾಯಕನಾಟವಾಡಿದ ಶ್ರೇಯಸ್ ಅಯ್ಯರ್ ಪ್ರತಿಷ್ಠಿತ ಲೀಗ್‌ನಲ್ಲಿ ಸತತ ಪಂಜಾಬ್ ತಂಡಕ್ಕೆ ಸತತ ಎರಡನೇ ಗೆಲುವು ತಂದುಕೊಟ್ಟರು. ಚೆನ್ನೈ ಎರಡನೇ ಸೋಲು ಅನುಭವಿಸಿತು. ಆಯುಷ್ ಮಾತ್ರೆ ಅವರ ಸ್ಫೋಟಕ ಬ್ಯಾಟಿಂಗ್ ನಂತರ ದುಬೆ ಮತ್ತು ಸರ್ಫರಾಜ್ ಖಾನ್ ಅವರ ಕರಾರುವಾಕ್ ಬ್ಯಾಟಿಂಗ್‌ನಿಂದಾಗಿ ಚೆನ್ನೈ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 209 ರನ್ ಗಳಿಸಿತು. ಪಂಜಾಬ್ ಪರ ವಿಜಯ್‌ಕುಮಾರ್ 2 ವಿಕೆಟ್ ಪಡೆದುಕೊಂಡಿದ್ದರು. ಗುರಿ ಬೆನ್ನತ್ತಿದ ಶ್ರೇಯಸ್ ಪಡೆ ಪ್ರಿಯಾಂಶ್ ಆರ್ಯ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಬಿರುಸಿನ ಆರಂಭ ಪಡೆದು ಪಂದ್ಯ ಕಸಿದುಕೊಂಡಿತು. ಅವರ ವಿಕೆಟ್ ಬಿದ್ದ ನಂತರ ಶ್ರೇಯಸ್ ಅಯ್ಯರ್ ನಾಯಕನಾಟದೊಂದಿಗೆ ಅಬ್ಬರಿಸಿ 18.4 ಅನ್ನುವಷ್ಟರಲ್ಲಿ 210 ರನ್ ಗಳಿಸುವಂತೆ ಮಾಡಿದರು. ಚೆನ್ನೈ 5 ವಿಕೆಟ್ ಪಡೆದುಕೊಂಡಿತ್ತು. ಪ್ರಿಯಾಂಶ್ ಆರ್ಯ 11 ಬಾಲ್‌ಗಳಲ್ಲಿ 39 ರನ್ ಗಳಿಸಿ ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದುಕೊಂಡರು. ಪ್ರಭಸಿಮ್ರನ್ ಕೂಡ 43 ರನ್‌ಗಳ ಕೊಡುಗೆ ನೀಡಿದರು. ಮೂರನೇ ಕ್ರಮಾಂಕದಲ್ಲಿ ಕೂಪರ್ 36, ಶ್ರೇಯಸ್ ಅಯ್ಯರ್ 50 ರನ್ ಗಳಿಸಿ ಗೆಲುವಿನ ರೂವಾರಿ ಅನ್ನಿಸಿಕೊಂಡರು. ಚೆನ್ನೈ ಪರ ಮಾತ್ ಹೆನ್ರಿ ಹಾಗೂ ಕಂಬೋಜ್ ತಲಾ 2 ವಿಕೆಟ್ ಪಡೆದುಕೊಂಡರು.

ಲಖನೌಗೆ ಹೈದರಾಬಾದ್ ಸವಾಲು

ಹೈದರಾಬಾದ್: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಭಾನುವಾರದ ಮೊದಲನೇ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಹಾಗೂ ಲಖನೌ ಸೂಪರ್ ಜೇಂಟ್ಸ್ ತಂಡಗಳು ಮುಖಾಮುಖಿಯಾಗಲಿವೆ.

ಮೊದಲಪಂದ್ಯದಲ್ಲಿ ಸೋತರೂ ಎರಡನೇ ಪಂದ್ಯದಲ್ಲಿ ಗೆಲುವು ಸಾಧಿಸಿದ ಹೈದರಾಬಾದ್ ತನ್ನ ಮೊದಲನೇ ತವರು ಪಂದ್ಯವನ್ನಾಡಲಿದೆ. ಇತ್ತ ಮೊದಲ ಪಂದ್ಯದಲ್ಲಿ ಗೆಲುವಿನ ಆಟವಾಡಿದರೂ ಕೊನೆಯಲ್ಲಿ ಭಾರೀ ನಿರಾಸೆ ಅನುಭವಿಸಿದ ಲಖನೌ ತನ್ನ ಮೊದಲ ಜಯದ ಹುಡುಕಾಟದಲ್ಲಿದೆ. ಪಂತ್, ಮಾಕ್ರರಂ, ಮಾರ್ಷ್, ಪೂರಣ್ ಸೇರಿದಂತೆ ಪ್ರಮುಖ ಆಟಗಾರರನ್ನು ಲಖನೌ ತಂಡ ಹೊಂದಿದೆ. ಇತ್ತ ಹೈದರಾಬಾದ್‌ನಲ್ಲೂ ಅಭಿಷೇಕ್ ಶರ್ಮ, ಟ್ರಾವಿಸ್ ಹೆಡ್, ಕ್ಲಾಸೆನ್ ಅಂತಹ ಪ್ರಮುಖ ಆಟಗಾರರಿದ್ದಾರೆ. ಉಭಯ ತಂಡಗಳಲ್ಲೂ ಬ್ಯಾಟಿಗರ ಪಡೆಗಳಿವೆ. ಹೈದರಾಬಾದ್‌ನ ಬ್ಯಾಟಿಂಗ್ ಪ್ರಾಬಲ್ಯ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಪಂದ್ಯದ ಸಮಯ: ಮಧ್ಯಾಹ್ನ 3:30

ಪಾಯಲ್‌ಗೆ ಚಿನ್ನದ ಪದಕ

- ವಿಶ್ವ ಆರ್ಚರಿ ಪ್ಯಾರಾ ಸಿರೀಸ್‌ನಲ್ಲಿ ಭಾರತೀಯರ ಮಿಂಚಿನಾಟ
- ದೇಶಕ್ಕೆ ಒಟ್ಟು 13 ಪದಕ
- ಅಂಕಪಟ್ಟಿಯಲ್ಲಿ ಮೊದಲನೇ ಸ್ಥಾನ

ಹೊಸದಿಲ್ಲಿ: ವಿಶ್ವ ಆರ್ಚರಿ ಪ್ಯಾರಾ ಸಿರೀಸ್‌ನಲ್ಲಿ ಭಾರತದ ಯುವ ಪ್ಯಾರಾ ಆರ್ಚರಿ ತಾರೆ ಪಾಯಲ್ ನಾಗ್ ಭಾರೀ ಸಂಚಲನ ಮೂಡಿಸಿ ಚಿನ್ನದಪದಕ ಗೆದ್ದಿದ್ದಾರೆ. ಬ್ಯಾಂಕಾಕ್‌ನಲ್ಲಿನಡೆದ ಈ ಸ್ಪರ್ಧೆಯಲ್ಲಿ, ನಾಲ್ಕು ಅಂಗವಿಕಲತೆಯನ್ನು ಎದುರಿಸುತ್ತಿರುವ 18 ವರ್ಷದ ಪಾಯಲ್, ವಿಶ್ವ ನಂ.1 ಹಾಗೂ ತನ್ನದೇ ಸಹ ಆಟಗಾರ್ತಿ ಶೀತಲ್ ದೇವಿ ಅವರನ್ನು ಸೋಲಿಸಿ ಗಮನ ಸೆಳೆದಿದ್ದಾರೆ. ಶನಿವಾರದಂದು ಮಹಿಳೆಯರ ಕಂಪೌಂಡ್ ಫೈನಲ್‌ನಲ್ಲಿ ಪಾಯಲ್ 139-136 ಅಂತರದಲ್ಲಿ ಜಯ ಸಾಧಿಸಿ, ತನ್ನ ಅದ್ಭುತ ಅಭಿಯಾನವನ್ನು ಚಿನ್ನದೊಂದಿಗೆ ಮುಕ್ತಾಯಗೊಳಿಸಿದರು. ಸ್ಪರ್ಧೆಯ ಮೊದಲ ಎಂಡ್‌ನಲ್ಲೇ ಪರಿಪೂರ್ಣ 10ರ ಗುರಿಯನ್ನು ಹೊಡೆದು ಮುನ್ನಡೆ ಪಡೆದ ಅವರು, ಎರಡನೇ ಎಂಡ್ ನಂತರ 54-54 ಸಮಬಲದ ಬಳಿಕ ಮೂರನೇ ಎಂಡ್‌ನಲ್ಲಿ ಮುನ್ನಡೆ ಸಾಧಿಸಿದರು. ಅಂತಿಮ ಎಂಡ್‌ನಲ್ಲಿ ಎರಡು 10ಗಳೊಂದಿಗೆ ದೃಢ ಆಟದ ಮೂಲಕ ಗೆಲುವು ತಮ್ಮದಾಗಿಸಿಕೊಂಡರು.

ಇದು ಕಳೆದ ಒಂದೇ ವರ್ಷದೊಳಗೆ ಶೀತಲ್ ದೇವಿ ವಿರುದ್ಧ ಪಾಯಲ್ ಅವರ ಎರಡನೇ ಜಯವಾಗಿದೆ. 2025 ಜನವರಿಯಲ್ಲಿ ಜೈಪುರದಲ್ಲಿ ನಡೆದ ಪ್ಯಾರಾ



ನ್ಯಾಷನಲ್ಸ್‌ನಲ್ಲಿ ಕೂಡ ಅವರು ಶೀತಲ್ ಅವರನ್ನು ಸೋಲಿಸಿದ್ದರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೇವಲ ಎರಡನೇ ಟೂರ್ನಿಯಲ್ಲಿ ಭಾಗವಹಿಸುತ್ತಿರುವ ಪಾಯಲ್, ಒತ್ತಡದ ಸಂದರ್ಭದಲ್ಲೂ ತಾಳ್ಮೆಯಿಂದ ಆಡಿದುದು ವಿಶೇಷವಾಗಿದೆ.

ಸೋಲಿನಿಂದ ಹೊರಬರುವುದೇ ಚೆನ್ನೈ? | ಆತ್ಮವಿಶ್ವಾಸದಲ್ಲಿ ಆರ್‌ಸಿಬಿ

ಸೂಪರ್ ತಂಡ ರಾಯಲ್ ಸಮರ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 19ನೇ ಆವೃತ್ತಿಗೆ ರಾಯಲ್ ಎಂಟ್ರಿ ಕೊಟ್ಟಿರುವ ಚಾಂಪಿಯನ್ ಬೆಂಗಳೂರು ಗೆಲುವಿನ ವಿಶ್ವಾಸದೊಂದಿಗೆ ಕಣಕ್ಕಿಳಿಯಲು ಅಣಿಯಾಗಿದೆ. ಗೆಲುವಿನ ಶುಭಾರಂಭ ಪಡೆದಿರುವ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸೋಲುಗಳಿಂದ ಹೈರಾಣಾಗಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಭಾನುವಾರದ ಎಲ್-ಕ್ಲಾಸಿಕೋ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಗೆಲುವಿನ ಇಂಗಿತದೊಂದಿಗೆ ಗೆಲುವಿನ ಸರಪಳಿ ಹೊತ್ತು ತರುತ್ತಿರುವ ಬೆಂಗಳೂರು ಶನಿವಾರ ಅಭ್ಯಾಸದಲ್ಲಿ ಮತ್ತೊಮ್ಮೆ ಆತ್ಮವಿಶ್ವಾಸ ವ್ಯಕ್ತಪಡಿಸಿತು. ಮಾಧ್ಯಮದೊಂದಿಗೆ ಮಾತನಾಡಿದ ತಂಡದ ಉಪನಾಯಕ ಜಿತೇಶ್ ಶರ್ಮ ನಾವು ಎಂದಿನಂತೆ ನಮ್ಮ ಸ್ವಭಾವಿಕ ಆಟ ಆಡಲು ಸಿದ್ಧ ಎಂದರು.

ಇಂದಿನ ಪಂದ್ಯ



ಶನಿವಾರದಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಆರ್‌ಸಿಬಿ ಬಂದಿಳಿಯಿತು. ಸಂಜೆ ಹೊತ್ತಿನಲ್ಲಿ ವಿರಾಟ್ ಕೊಹ್ಲಿ, ರಜತ್ ಪಾಟಿದಾರ್ ಸೇರಿದಂತೆ ವಿವಿಧ ಆಟಗಾರರು ನೆಟ್‌ನಲ್ಲಿ ಶ್ರಮಿಸಿದರು. ಕೋಚಿಂಗ್ ಸ್ಟಾಫ್ ಪಿಚ್ ಬಗ್ಗೆ ಲೆಕ್ಕಾಚಾರ ಹಾಕುತ್ತಿದ್ದರು. ರೋಚಕ ಹಣಾಹಣಿಗೆ ಪಿಚ್ ಕೂಡ ಸಜ್ಜಾಗಿ ನಿಂತಿತ್ತು. ಮೈದಾನದೆಲ್ಲೆಡೆ ಕ್ರಿಕೆಟ್ ಹಬ್ಬದ ವಾತಾವರಣ ಮತ್ತೊಮ್ಮೆ ಸೃಷ್ಟಿಯಾಗಿತ್ತು.

ಮೈದಾನದಲ್ಲಿ ಕಾಣಿಸಿಕೊಂಡ ಹ್ಯಾಜೆಲ್ವುಡ್: ಬೆಂಗಳೂರು ತಂಡದ ಪ್ರಮುಖ ಬೌಲರ್ ವೇಗಿ ಜೋಶ್ ಹ್ಯಾಜೆಲ್ವುಡ್ ಮೈದಾನದಲ್ಲಿ ಕಾಣಿಸಿಕೊಂಡರು. ಕಳೆದ ಪಂದ್ಯದಲ್ಲಿ ಜೋಶ್ ಇಲ್ಲದೆ ಆಡಿದ್ದರೂ ಭರ್ಜರಿ ಪ್ರದರ್ಶನ ನೀಡಿತ್ತು ಆರ್‌ಸಿಬಿ. ಶನಿವಾರದಂದು ಅವರು ಮೈದಾನಕ್ಕೆ ಬಂದರು. ಗಾಯದ ಕಾರಣದಿಂದಾಗಿ ಮೊದಲಿನ ಪಂದ್ಯಗಳಲ್ಲಿ ಅಲಭ್ಯರಾಗಿದ್ದಾರೆ ಎಂಬ ಸುದ್ದಿಯಿದ್ದರೂ, ಎಷ್ಟು ಪಂದ್ಯಕ್ಕೆ ಅಲಭ್ಯರಾಗಿದ್ದಾರೆ ಎಂಬ ಪ್ರಶ್ನೆಗೆ ಉತ್ತರ ಇರಲಿಲ್ಲ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡುವಾಗ ಜಿತೇಶ್ ಶರ್ಮ, ಈ ಬಗ್ಗೆ ಇನ್ನೂ ಸ್ಪಷ್ಟ ನಿರ್ಧಾರವಾಗಿಲ್ಲ. ಮ್ಯಾನೇಜ್‌ಮೆಂಟ್ ಏನು ಹೇಳುತ್ತೆ ನೋಡಬೇಕು ಎಂದರು.

ಅಭ್ಯಾಸಕ್ಕಿಳಿಯದ ಚೆನ್ನೈ: ಮೂರುದಿನಗಳಲ್ಲಿ ಎರಡು ಪಂದ್ಯಗಳನ್ನಾಡುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡ ಶನಿವಾರದಂದು ಅಭ್ಯಾಸ ಮಾಡಲಿಲ್ಲ. ಶುಕ್ರವಾರದಂದು ಪಂಜಾಬ್ ವಿರುದ್ಧ ಸೋತಿರುವ ಸಿಎಸ್‌ಕೆ ಪಂದ್ಯವನ್ನು ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಆಡಿತ್ತು. ಭಾನುವಾರದಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲಿದೆ. ಶನಿವಾರದಂದು ಪ್ರಯಾಣದಲ್ಲಿದ್ದ ಚೆನ್ನೈ ಅಭ್ಯಾಸ ಮಾಡಲಿಲ್ಲ. ಸತತ ಎರಡು ಸೋಲುಗಳ ನಿರಾಶೆ ಹೊತ್ತಿಕೊಂಡು ಬರುತ್ತಿರುವ ತಂಡಕ್ಕೆ ಗೆಲುವೊಂದೇ ಹಾದಿಯಾಗಿದೆ.

ಎಂದಿನಂತೆ ನಾವು ಸಿದ್ಧ

ಚೆನ್ನೈನ ಚಾಲೆಂಜ್‌ಗಳ ಬಗ್ಗೆ ಮಾತನಾಡುತ್ತಾ, ಜಿತೇಶ್ ಶರ್ಮ ಅವರು ನಮ್ಮ ಆಟವಾಡುವುದಕ್ಕೆ ನಾವು ಸಿದ್ಧ. ಟಿ20 ಕ್ರಿಕೆಟ್‌ನಲ್ಲಿ ಏಳು ಮತ್ತು ಬೀಳು ಇದ್ದದ್ದೆ. ಹೀಗಿರುವಾಗ ಯಾವುದೇ ತಂಡವೂ ಸ್ವಂತ ಪ್ರದರ್ಶನ ಮೇಲೆ ಗಮನ ಹರಿಸುತ್ತದೆ. ನಾವು ಕೂಡ ಅಷ್ಟೇ. ತಂಡದ ಪ್ರದರ್ಶನ ಮತ್ತು ಸಾಮರ್ಥ್ಯ ತಕ್ಕಂತೆ ಕೆಲವು ಯೋಜನೆ ಹಾಕಿಕೊಳ್ಳುತ್ತೇವೆ. ಆಟಗಾರರು ಹೆಚ್ಚಿನ ಶ್ರಮಕ್ಕೆ ಯತ್ನಿಸುತ್ತಾರೆ ಎಂದು ಹೇಳಿದರು.

ನಮ್ಮಲ್ಲಿ ಹಾಲಿ ಚಾಂಪಿಯನ್ಸ್ ಎಂಬ ವಿಶ್ವಾಸವಿದ್ದರೂ, ಇದು ಹೊಸ ಆವೃತ್ತಿ ಗೆಲ್ಲಲೇಬೇಕು ಎಂಬ ಮನಸ್ಥಿತಿ ಇದೆ. ನಮ್ಮ ಮ್ಯಾನೇಜ್‌ಮೆಂಟ್ ಕೂಡ ಹಾಗೆ, ನಾವು ಡಿಫೆಂಡ್ ಮಾಡಿಕೊಳ್ಳುತ್ತಿಲ್ಲ. ಟ್ರೋಫಿಯನ್ನು ಚೇಸ್ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರಂತೆ ನಾವು ಗೆಲುವಿನ ಹಂಬಲದೊಂದಿಗೆ ಮೈದಾನಕ್ಕಿಳಿಯುತ್ತೇವೆ.

■ **ಜಿತೇಶ್ ಶರ್ಮ, ಆರ್‌ಸಿಬಿ ಉಪನಾಯಕ**

ಪಿಚ್ ಹೇಗಿದೆ?

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಿಚ್ ಸಿದ್ಧವಾಗಿತ್ತು. ಬೌಂಡರಿಗಳ ರೇಖೆ ಅಲ್ಪ ಹತ್ತಿರ ಇರುವುದರಿಂದ ಚಿನ್ನಸ್ವಾಮಿ ಕ್ರೀಡಾಂಗಣ ಯಾವಾಗಲೂ ಬ್ಯಾಟಿಂಗ್ ಸ್ನೇಹಿ ಪಿಚ್. ಹೆಚ್ಚಿನ ಬೌನ್ಸ್ ಇರುತ್ತೆ, ಬ್ಯಾಟ್‌ಗೆ ನೇರವಾಗಿ ಬರುತ್ತದೆ. ಸ್ಪಿನ್ನರ್‌ಗಳು ಮತ್ತು ವೇಗಿಗಳು ಅಲ್ಪ ಲಾಭ ಪಡೆಯಬಹುದು. ಇಬ್ಬನಿ ಕಾಟವೂ ಹೆಚ್ಚು ಇರಲ್ಲ. ಹೀಗಾಗಿ ಮೊದಲು ಬೌಲಿಂಗ್ ಮಾಡುವ ತಂಡ ಗೆಲ್ಲುವ ಸಾಧ್ಯತೆ ಹೆಚ್ಚು ಅನ್ನುತ್ತಾರೆ ಎಕ್ಸಪರ್ಟ್‌ಗಳು.

ಪಂದ್ಯದ ಸಮಯ: ಸಂಜೆ 7:30



ಚೆಸ್: ಜಾವೊಖಿರ್ ಅಗ್ರಸ್ಥಾನ

ಹೊಸದಿಲ್ಲಿ: ಸೈಪ್ರಸ್‌ನಲ್ಲಿ ನಡೆಯುತ್ತಿರುವ ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಜಾವೊಖಿರ್ ಸಿಂದಾರೊವ್ ತಮ್ಮ ಅದ್ಭುತ ಪ್ರದರ್ಶನ ಮುಂದುವರಿಸಿ ಐದನೇ ಸುತ್ತಿನ ಬಳಿಕ 4.5 ಅಂಕಗಳೊಂದಿಗೆ ಮುನ್ನಡೆಯಲ್ಲಿದ್ದಾರೆ. ಅವರು ಬಲಿಷ್ಠ ವಿರುದ್ಧ ಜಯ ಸಾಧಿಸಿ ನಿರಂತರ ಮೂರನೇ ಗೆಲುವು ದಾಖಲಿಸಿದರು.

ಸಿಂದಾರೊವ್ ಮಧ್ಯಭಾಗದಲ್ಲಿ ಸೂಕ್ತ ಸಮಯದಲ್ಲಿ ತಮ್ಮ ಚಾಣಾಕ್ಷ್ಯತೆಯಿಂದ ಆಟದ ನಿಯಂತ್ರಣ ಪಡೆದರು. 14ನೇ ನಡೆಯಲ್ಲಿ ಎನ್‌ಎಕ್ಸ್‌ಬಿ4 ಮೂಲಕ ಎದುರಾಳಿಯ ರಾಣಿ ಮೇಲೆ ನಿಗಾ ಇಟ್ಟರು. ನಂತರ 16ನೇ ನಡೆಯಲ್ಲಿ ಸಿ-5 ಮೂಲಕ ಮಧ್ಯಭಾಗವನ್ನು ಮುಕ್ತಗೊಳಿಸಿದರು. ಮುಂದೆ ಎಫ್-6, ಎಚ್-6 ಮತ್ತು ಜಿ-5 ನಡೆಗಳ ಮೂಲಕ ಎದುರಾಳಿ ಮೇಲೆ ಒತ್ತಡ ಹೆಚ್ಚಿಸಿದರು. ಕೊನೆಗೆ 41ನೇ ನಡೆಯಲ್ಲಿ ಜಿಎಕ್ಸ್‌ಎಚ್-4 ಮೂಲಕ



ನಿರ್ಣಾಯಕ ಮುನ್ನಡೆ ಪಡೆದು ಗೆಲುವು ಸಾಧಿಸಿದರು.

ಅತ್ತ ಭಾರತದ ಆರ್. ಪ್ರಜ್ಞಾನಂದ ಅಂಡ್ರೇ ಎಸಿಪೆಂಕೋ ವಿರುದ್ಧ ಸಮಬಲ ಸಾಧಿಸಿ ನಿರಂತರ ಎರಡನೇ ಡ್ರಾ ಮಾಡಿಕೊಂಡರು. ಇಬ್ಬರೂ ಆಟಗಾರರು ಸ್ಪಷ್ಟಮುನ್ನಡೆಪಡೆಯಲು ಸಾಧ್ಯವಾಗದೆ ಸಮಬಲದಲ್ಲಿ ಆಟ ಮುಗಿಸಿದರು. ಮಹಿಳಾ ವಿಭಾಗದಲ್ಲಿ ದಿವ್ಯಾ ದೇಶಮುಖ್ ನಾಲ್ಕನೇ ಸುತ್ತಿನ ಸೋಲಿನ ನಂತರ ಟಾನ್ ಝೋಂಗ್ ವಿರುದ್ಧ ಸಮಬಲ ಸಾಧಿಸಿ ಮರುಸ್ಥಿರತೆ ಕಂಡುಕೊಂಡರು. ಎದುರಾಳಿಯ ಒತ್ತಡವನ್ನು ಸಮರ್ಥವಾಗಿ ನಿಭಾಯಿಸಿ ಕೊನೆಯಲ್ಲಿ ಡ್ರಾ ಮಾಡಿಕೊಂಡರು.

ಬಾಕ್ಸಿಂಗ್: ವಿಶ್ವನಾಥ್‌ಗೆ ಅಚ್ಚರಿಯ ಗೆಲುವು


ಹೊಸದಿಲ್ಲಿ: ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಭರ್ಜರಿ ಪ್ರದರ್ಶನ ಮುಂದುವರಿದಿದ್ದು, ಹವಾಲ್ದಾರ್ ವಿಶ್ವನಾಥ್ ಸುರೇಶ್ ವಿಶ್ವ ಚಾಂಪಿಯನ್ ಹಾಗೂ ವಿಶ್ವ ನಂ.1 ಸಾಂಝುರ್ ತಶ್ಕೆನ್‌ಬಾಯ್ ವಿರುದ್ಧ 5-0 ಅಂತರದಲ್ಲಿ ಗೆದ್ದು ಸೆಮಿಫೈನಲ್ ಪ್ರವೇಶಿಸಿದರು.



ಮಹಿಳೆಯರ 65 ಕೆಜಿ ವಿಭಾಗದಲ್ಲಿ ಅಂಕುಶಿತಾ ಬೊರೊ ಕಜಾಕಿಸ್ತಾನದ ಲೋರಾ ಯೆಸೆಂಕೆಲ್ದಿ ವಿರುದ್ಧ 4-1 ಅಂತರದಲ್ಲಿ ಜಯ ಸಾಧಿಸಿ ಅಂತಿಮ ನಾಲ್ವರಿಗೆ ಪ್ರವೇಶಿಸಿದರು. ಮುಂದಿನ ಸೆಮಿಫೈನಲ್‌ನಲ್ಲಿ ಅವರು ಚೈನೀಸ್ ತೈಪೆಯ ನಿಯೆನ್-ಚಿನ್ ಚೆನ್ ವಿರುದ್ಧ ಸೆಣಸಲಿದ್ದಾರೆ. ಪುರುಷರ ವಿಭಾಗದಲ್ಲಿ ನರೇಂದರ್ ಕೂಡ ಉತ್ತಮ ಆಟ ಮುಂದುವರಿಸಿ ಯುಎಇಯ ಒರ್ಖಾನ್ ಅಗಾಯೇವ್ ವಿರುದ್ಧ 5-0 ಅಂತರದಲ್ಲಿ ಗೆದ್ದು ಸೆಮಿಫೈನಲ್‌ಗೆ ಅರ್ಹತೆ ಪಡೆದರು. ಮುಂದಿನ ಪಂದ್ಯದಲ್ಲಿ ಅವರು ಚೀನಾದ ಬಾಯಿಕೆವುಜಿ ದನಾಬಿಯೆಕೆ ವಿರುದ್ಧ ಕಣಕ್ಕಿಳಿಯಲಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5944

ಎಡದಿಂದ ಬಲಕ್ಕೆ
1.ಪುರದ ನಡುವೆ ಹೂವಿನ ಶರವಿದೆ (4)
3.ಸಿಟ್ಟಿನಿಂದ ಕೂಡಿದ ವದನ (4)
5.ಪಾರದರ್ಶಕ ಖನಿಜ ಶಿಲೆಯಿದು (3)
6.ಮಂದವಾಗಿ ಪ್ರಕಾಶಿಸು (3)
8.ಕಳಾಹೀನವಾಗುವುದು-ಬಣ್ಣಗೆಡು (3)
10.ಆಶ್ರಯ ಕೋರು (3)
11.ಕಲ ಕಡೆಯಲ್ಲಿರುವ ತುಂಡು ತಿರುಗಿದೆ (3)
15.ಲಕ್ಷ್ಮಿಯ ಒಡೆಯ ಈ ವಿಷ್ಣು (3)
16.ಒಂಬತ್ತು ಬಗೆಯ ಕಾಳುಕಡ್ಡಿಗಳು (4)
17.ಈತ ಸುಖವನ್ನು ಬಯಸುವವನು (4)

ಮೇಲಿನಿಂದ ಕೆಳಕ್ಕೆ
1.ಮುಂದೆ ಚಲಿಸುವವನು-ನಾಯಕ (4)
2.ರಣದ ನಡುವೆ ಅಡಗಿದ ಆಸ್ತಿ (3)
3.ಕರಿ ಕಡೆಯಲ್ಲಿಟ್ಟುಕೊಂಡು ಮಾರುವುದು (3)
4.ಆನೆ-ಕಿವಿ ಸೇರಿ ಚರ್ಮರೋಗವಾಯ್ತು (4)
7.ಆಶ್ರಯ ಕೋರು (3)
9.ಕಣಿ ಕಡೆಯಲ್ಲಿ ತಿರುಗಿ ವ್ಯಾಪಾರಿಯಾದ (3)
10.ಇದು ಜೀವಿತ ಕಾಲಾವಧಿ (4)
12.ಆಯುಧಗಳನ್ನಿಡುವಂಥಹ ಕಟ್ಟಡ (4)
13.ಸಾಧಾರಣ-ವಿಶೇಷವಲ್ಲದ್ದು (3)
14.ಕುಚೋದ್ಯವಿಲ್ಲಿ ತಲೆಕೆಳಗಾಗಿದೆ (3)

5943 ಉತ್ತರ

ಎಡದಿಂದ ಬಲಕ್ಕೆ:
2.ಮೋಹನಮಾಲೆ 5.ವಿರಹ
6.ಬಾಡಿಗೆ 7.ಮನೋಗತ
8.ರಾಗಿಬೀಸು 10.ಆವೇದನೆ
12.ಜಮಖಾನೆ 14.ಜಾಳಿಗೆ
15.ತಟಾಕ 17.ರಿಪುಕದನ

ಮೇಲಿನಿಂದ ಕೆಳಕ್ಕೆ :
1.ಬಾವಿ 2.ಮೋಹನಾಂಗ
3.ಗಿರಿಬಾಲೆ 4.ಬೇಗೆ
7.ಆರಾಮ 9.ಸುಮ್ಮನೆ
11.ದನುಜಾರಿ 13.ಮನೆತನ
14.ಗೆಜ್ಜೆ 16.ಕತ್ತೆ

ಕಿರುಸುದ್ದಿ

ಅಹವಾಲು ಸ್ವೀಕಾರ

ಗದಗ: ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ನಿರ್ದೇಶನದಂತೆ ಕರ್ನಾಟಕ ಲೋಕಾಯುಕ್ತ ಗದಗ ಕಚೇರಿಯ ಪೊಲೀಸ್ ಅಧಿಕಾರಿಗಳು ಏ.10 ರಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 1ರವರೆಗೆ ತಹಶೀಲ್ದಾರ್ ಕಾರ್ಯಾಲಯ ಶಿರಹಟ್ಟಿಯಲ್ಲಿ ಲೋಕಾಯುಕ್ತ ಜನ ಸಂಪರ್ಕ ಸಭೆ ಮತ್ತು ಸಾರ್ವಜನಿಕರಿಂದ ಅಹವಾಲು ಸ್ವೀಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲಾಗುವುದು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರಿಕೆಟ್ ಟೂರ್ನಮೆಂಟ್

ನರೇಗಲ್ಲ: ಪಟ್ಟಣದ 3ನೇ ವಾರ್ಡ್‌ನ ಆಶ್ರಯ ಕಾಲೋನಿ ಹಾಗೂ ಬುಲ್ಡೋಜರ್ ನಗರದ ನಿವಾಸಿಗಳ ಆಶ್ರಯದಲ್ಲಿ ರೋಣ ಮತಕ್ಷೇತ್ರದ ಶಾಸಕ ಜಿ. ಎಸ್. ಪಾಟೀಲ ಅವರ ಜನ್ಮದಿನದ ಪ್ರಯುಕ್ತ ಸಾವಿರ ಕೆರೆಗಳ ಸರದಾರ ಟ್ರೋಫಿ ಎನ್ನುವ 7 ಸೈಡ್ ಓಪನ್ ಹಾರ್ಡ್ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಏ.8 ರಿಂದ ಆಯೋಜಿಸಲಾಗಿದೆ ಎಂದು ಆಯೋಜಕ ತಂಡದ ಸದ್ದಾಂ ನಶೇಖಾನ್ ಮಾಹಿತಿ ನೀಡಿದರು.

ಈ ಕುರಿತು ಪ್ರಕಟಣೆ ನೀಡಿರುವ ಅವರು, ರೋಣ ಮತಕ್ಷೇತ್ರದಲ್ಲಿ ಅಂತರ್ಜಲ ಅಭಿವೃದ್ಧಿ, ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಒದಗಿಸಿದ ಹಾಗೂ ಅವರ ಆರಂಭದ ದಿನಗಳಿಂದ ಇಲ್ಲಿಯವರೆಗೆ ಸಾವಿರ ಕೆರೆಗಳನ್ನು ನಿರ್ಮಿಸಿ ಸಾಧನೆ ಮಾಡಿರುವ ಶಾಸಕ ಜಿ. ಎಸ್. ಪಾಟೀಲರ ಜನ್ಮದಿನದ ಅಂಗವಾಗಿ ಸಾವಿರ ಕೆರೆಗಳ ಸರದಾರ ಟ್ರೋಫಿ ಎನ್ನುವ ಟೈಟಲ್‌ನಲ್ಲಿ 7ಸೈಡ್ ಹಾರ್ಡ್ ಟೆನ್ನಿಸ್ ಕ್ರಿಕೇಟ್ ಟೂರ್ನಾಮೆಂಟ್ ಅನ್ನು ಆಯೋಜನೆ ಮಾಡಲಾಗಿದೆ. ಶಾಸಕರು ನೀರಿಗೆ, ಕೃಷಿ ಭೂಮಿಗೆ ನೀಡಿರುವ ಮಹತ್ವವನ್ನು ಅನಾವರಣ ಮಾಡುವ ಪಂದ್ಯಾವಳಿ ಇದಾಗಿದೆ ಎಂದು ಮಾಹಿತಿ ನೀಡಿದರು.

50ಕಿಮೀ ಕ್ಕಿಂತ ಹೆಚ್ಚಿನ ದೂರದಿಂದ ಬರುವ ಪ್ರತಿ ತಂಡಕ್ಕೂ ಉಚಿತ ಪ್ರವೇಶ ನೀಡಲಾಗಿದೆ. ಪ್ರಥಮ ಬಹುಮಾನ 30 ಸಾವಿರ, ದ್ವಿತೀಯ ಬಹುಮಾನ 20 ಸಾವಿರ, ತೃತೀಯ ಬಹುಮಾನ 10 ಸಾವಿರ ಹಾಗೂ ಚತುರ್ಥ ಬಹುಮಾನ 5 ಸಾವಿರವಿದೆ. ಸರಣಿಯ ಉತ್ತಮ ಬ್ಯಾಟ್ಸಮನ್, ಬೌಲರ್, ಸರ್ವೋತ್ತಮ ಆಟಗಾರರಿಗೆ ಸೈಕಲ್ ಬಹುಮಾನವಿದೆ. ಉತ್ತಮ ತಂಡ, ಮ್ಯಾನ್ ಆಫ್ ದಿ ಮ್ಯಾಚ್ ಪ್ರಶಸ್ತಿಗಳನ್ನು ಸಹ ನೀಡಲಾಗುತ್ತದೆ. ಉಪಹಾರದ ವ್ಯವಸ್ಥೆಯನ್ನು ಮಾಡಲಾಗಿದೆ. ಪಾಲ್ಗೊಳ್ಳುವ ತಂಡದವರು 9886427170, 7204241472, 8880729118, 8431534305 ನಂಬರ್‌ಗಳಿಗೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ನಾಲ್ಕು ದಿನಗಳು ನಡೆಯುವ ಈ ಪಂದ್ಯಾವಳಿಯನ್ನು ಶಾಸಕ ಜಿ. ಎಸ್. ಪಾಟೀಲರು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ರೋಣ ತಾಲೂಕು ಗ್ಯಾರಂಟಿ ಅಧ್ಯಕ್ಷ ಮಿಥುನ್ ಜಿ. ಪಾಟೀಲ, ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಅಕ್ಷಯ ಐ. ಪಾಟೀಲ ಪಾಲ್ಗೊಳ್ಳಲಿದ್ದಾರೆ ಎಂದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	3806-7449
ಅಜವಾನ	3569-8869
ಅಲಸಂದಿ	2677-6238
ಕಡಲೆ	1429-5446
ಉದ್ದು	1609-4517
ಸಾಸವಿ	4012-5256
ಗೋವಿನಜೋಳ	1169-1750
ಹೆಸರು	517-9250
ಹುರಳಿ	3337-4410
ಒಣಮೆಣಸಿನಕಾಯಿ	1099-56055
ಜೋಳ	1312-5165
ನವಣಿ	2527-2609
ಕುಸಬಿ	4419-5453
ಸೂರ್ಯಕಾಂತಿ	5260-6670
ತೊಗರಿ	3017-6014
ಹವೀಜ	3300-8569
ಮಡಕಿ	9999-9999
ಸಜ್ಜಿ	1847-1847
ಸಬ್ಬಸಗಿ	5569-7539
ಗೋಧಿ	1139-5259
ಹತ್ತಿ	7100-7601
ಔಡಲ	4600-4950
ಬೆಲ್ಲ	4100-5176



ಗದಗ: ತಾಲೂಕಿನ ಲಕ್ಕುಂಡಿಯ ಪ್ಯಾಟಿ ಹನುಮಂತ ದೇವರ ದೇವಸ್ಥಾನದಲ್ಲಿ ಹನುಮ ಜಯಂತಿ ಸಂಭ್ರಮದಿಂದ ಆಚರಿಸಲಾಯಿತು. ಹನುಮ ಮಾಲಾ ಸೇವಾ ಸಮಿತಿ ಆಶ್ರಯದಲ್ಲಿ ನಡೆದ ಜಯಂತಿಯನ್ನು ಮುತ್ತೈದೆಯರು ಕುಂಭ ಮೆರವಣಿಗೆ ಮಾಡಿ ದೇವಸ್ಥಾನಕ್ಕೆ ಆಗಮಿಸಿದರು. ತೊಟ್ಟಿಲು ಪೂಜೆ ನೆರವೇರಿಸಿ ಜೋಗುಳ ಪದ ಹಾಡಿದರು.

ಸ್ಲಂ ಪ್ರದೇಶದ ಅಭಿವೃದ್ಧಿಯಲ್ಲಿ ತಾರತಮ್ಯ: ಮಾನ್ವಿ

ಗದಗ: ಅವಳಿ ನಗರದಲ್ಲಿ 80ಕ್ಕೂ ಅಧಿಕ ಕೊಳಗೇರಿ ಪ್ರದೇಶಗಳಿದ್ದು ಇದರಲ್ಲಿ 48 ಗುಡಿಸಲು ಪ್ರದೇಶಗಳನ್ನು ಸ್ಲಂ ಕಾಯ್ದೆ 1973ರ ಪ್ರಕಾರ ಸ್ಲಂ ಎಂದು ಘೋಷಣೆ ಮಾಡಲಾಗಿದೆ. ಆದರೆ ಈ ಸ್ಥಳಗಳಿಗೆ ಮೂಲಸೌಲಭ್ಯ ಒದಗಿಸುವಲ್ಲಿ ನಗರಸಭೆ ಸಂಪೂರ್ಣ ವಿಫಲವಾಗಿದೆ ಎಂದು ಜಿಲ್ಲಾ ಸ್ಲಂ ಸಮಿತಿ ಅಧ್ಯಕ್ಷ ಇಮ್ತಿಯಾಜ್ ಮಾನ್ವಿ ಟೀಕಿಸಿದರು. ನಗರದ ಕೊಳಗೇರಿಗಳ ಅಭಿವೃದ್ಧಿ ವಿಚಾರದಲ್ಲಿ ನಗರಸಭೆ ತಾರತಮ್ಯ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಸ್ಲಂ ಜನಾಂದೋಲನ-ಕರ್ನಾಟಕ ಹಾಗೂ ಜಿಲ್ಲಾ ಸ್ಲಂ ಸಮಿತಿ ಪದಾಧಿಕಾರಿಗಳು ಪೌರಾಯುಕ್ತರಿಗೆ ಮನವಿ ಸಲ್ಲಿಸಿ ಮಾತನಾಡಿ, ಫಲಾನುಭವಿಗಳ ಪಟ್ಟಿ ತಯಾರಿಸುವ ಸಂದರ್ಭದಲ್ಲಿ ನಗರಸಭೆ ಸಿಬ್ಬಂದಿ ಮಾಡಿರುವ ಎಡವಟ್ಟುಗಳಿಂದಾಗಿ 348 ವಸತಿರಹಿತ ಕುಟುಂಬಗಳು ಈಗಲೂ ತೊಂದರೆ ಅನುಭವಿಸುವಂತಾಗಿದೆ ಎಂದು ದೂರಿದರು. ಸ್ಥಳೀಯ ಶಾಸಕರು 2019ರಲ್ಲಿ ಎಲ್ಲಾ 348 ಕುಟುಂಬಗಳಿಗೆ ಮನೆ ಮಂಜೂರಾತಿ ಪತ್ರಗಳನ್ನು ಹಂಚಿಕೆ ಮಾಡಿದ್ದಾರೆ. ಆದರೆ ಮನೆ ಹಂಚಿಕೆ ಮಾಡುವ ಸಂದರ್ಭದಲ್ಲಿ ನೈಜ ಫಲಾನುಭವಿಗಳನ್ನು ಕಡೆಗಣಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮಹಿಳಾ ಸಮಿತಿ ಅಧ್ಯಕ್ಷೆ ಪರ್ವಿನಾಬಾನು ಹವಾಲ್ದಾರ, ಮುಖಂಡ ಶರಣಪ್ಪ ಸೂಡಿ ಮಾತನಾಡಿ, ನಗರದ ಸಾವಿರಾರು ಸ್ಲಂ ನಿವಾಸಿಗಳೊಂದಿಗೆ ಶೀಘ್ರವೇ ನಗರಸಭೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಸ್ಲಂ ಸಮಿತಿ ಕಾರ್ಯದರ್ಶಿ ಅಶೋಕ ಕುಸಬಿ, ಉಪಾಧ್ಯಕ್ಷ ಅಶೋಕ ಕುಡತಿನ್ನಿ, ಮುಖಂಡರಾದ ಇಬ್ರಾಹಿಂ ಮುಲ್ಲಾ, ಮೌಲಾಸಾಬ ಗಚ್ಚಿ, ಫೈರುಜಾ ನಾಗನೂರ, ಶಿವಪ್ಪ ಹಾತಲಗೇರಿ, ಮೆಹಬೂಬಸಾಬ ಬಳ್ಳಾರಿ, ಖಾಜಾಸಾಬ ಇಸ್ಮಾಯಿಲನವರ, ಗೌಸಸಾಬ ಅಕ್ಕಿ, ಸಾಕ್ರುಬಾಯಿ ಗೋಸಾವಿ ಇದ್ದರು.



ನರಗುಂದ: ಪಟ್ಟಣದ ಸೋಮಾಪೂರ ಓಣಿಯ ಮಾರುತಿ ದೇವಸ್ಥಾನದಲ್ಲಿ ಹನುಮ ಜಯಂತಿಯ ನಿಮಿತ್ತ ಎಲೆ ಪೂಜೆ, ಅಭಿಷೇಕ, ತೊಟ್ಟಿಲೋತ್ಸವ ಹಾಗೂ ಪಲ್ಲಕ್ಕಿ ಉತ್ಸವ ನೆರವೇರಿತು. ಅಶ್ವಿನಿ ವೆಂಕರೆಡ್ಡಿಯವರ, ರೂಪಾ ಯಡ್ರಾಂವಿ, ಮಂಜುಳಾ ಪಾಟೀಲ, ಪ್ರೇಮಾ ತಿಗಡಿ, ಕವಿತಾ ಪಾಟೀಲ, ಅರ್ಚನಾ ವೆಂಕರೆಡ್ಡಿಯವರ, ಮಂಜುಳಾ ತಳವಾರ, ಗೌರಮ್ಮ ತಳವಾರ, ಬಸನಗೌಡ ಪಾಟೀಲ, ಶ್ರೀನಿವಾಸ ವೆಂಕರೆಡ್ಡಿಯವರ, ಶ್ರೀನಿವಾಸ ಕುರಹಟ್ಟಿ, ಮಹಾಂತೇಶ ಪಾಟೀಲ ಇತರರಿದ್ದರು.

ನೀರಿನ ಸಮಸ್ಯೆ ನೀಗಿಸಲು ಕ್ರಮ

ಶಿರಹಟ್ಟಿ: ಬೇಸಿಗೆಯಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ತಹಶೀಲ್ದಾರ್ ರಾಘವೇಂದ್ರ ರಾವ್ ಹೇಳಿದರು.

ಸ್ಥಳೀಯ ತಹಶೀಲ್ದಾರ್ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ತಾಲೂಕಿನ ಎಲ್ಲಾ ಗ್ರಾಮಗಳಲ್ಲೂ ಸಮರ್ಪಕ ಕುಡಿಯುವ ನೀರು ಪೂರೈಸಲು ಸಕಲ ಸಿದ್ಧತೆ ಮಾಡಲಾಗಿದೆ. ಅಂತರ್ಜಲ ಮಟ್ಟ ಕುಸಿದ ಗ್ರಾಮಗಳಲ್ಲಿ ರೈತರ ಕೊಳವೆ ಬಾವಿ, ಬೋರವೆಲ್‌ಗಳ ಸಹಾಯದಿಂದ ನೀರಿನ ಗುಣಮಟ್ಟವನ್ನು ಆರೋಗ್ಯ ಇಲಾಖೆಯಿಂದ ಪರೀಕ್ಷಿಸಿ ಜನರಿಗೆ ಪೂರೈಸಲಾಗುತ್ತಿದೆ. ಯಾವುದೇ ಕಾರಣಕ್ಕೂ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮತ್ತು ದನಕರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ಜಾಗೃತಿವಹಿಸಲು ಎಲ್ಲಾ ಗ್ರಾಪಂ ಪಿಡಿಒಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ ಎಂದರು.

ಪ್ರಾಮಾಣಿಕ ಪ್ರಯತ್ನ

ಈ ಬಾರಿ ಎಲ್ಲಾ ಗ್ರಾಮಗಳಿಗೂ ಶುದ್ಧ ಕುಡಿಯುವ ನೀರು ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ಆದರೂ ಜಲ್ಲಿಗೇರಿ, ವರವಿ, ಜಲ್ಲಿಗೇರಿ ತಾಂಡಾ, ಚೌಡಾಳ, ನವೆಬಾವನೂರ, ಕುಸಲಾಪೂರ, ಶಿವಾಜಿನಗರ, ಮಾಗಡಿ, ಮಾಚೇನಹಳ್ಳಿ, ಚನ್ನಪಟ್ಟಣ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಸೃಷ್ಟಿಯಾಗಬಹುದು ಎಂದು ಅಂದಾಜಿಸಲಾಗಿದ್ದು, ಗ್ರಾಪಂ ಬೋರವೆಲ್‌ನಿಂದ ನೀರು ಪೂರೈಸಲು ಸಾಧ್ಯವಾಗದಿದ್ದರೆ ರೈತರ ಬಾವಿ, ಬೋರವೆಲ್ ನೀರನ್ನು ಕೇಳಿ ಪಡೆದುಕೊಂಡು ಜನರಿಗೆ ಸಮರ್ಪಕವಾಗಿ ನೀರು ಪೂರೈಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಹಶೀಲ್ದಾರ್ ರಾಘವೇಂದ್ರ ರಾವ್ ಹೇಳಿದರು.



ಸ್ವಯಂ ಜನಗಣತಿ ಕಾರ್ಯ ಆರಂಭ

ಶಿರಹಟ್ಟಿ: ಭಾರತ ಜನಗಣತಿ-2027ರ ಕಾರ್ಯ ಈಗಾಗಲೇ ಪ್ರಾರಂಭವಾಗಿದ್ದು, ತಾಲೂಕಿನಲ್ಲಿ ಸ್ವಯಂ ಜನಗಣತಿ ಕಾರ್ಯವು ಏ.1 ರಿಂದ 15ರ ವರೆಗೆ ನಡೆಯಲಿದ್ದು, ಸಾರ್ವಜನಿಕರು ತಮ್ಮ ಮೊಬೈಲ್ ಮೂಲಕ www. se.census.gov.in ಆ್ಯಪ್‌ನಲ್ಲಿ ಮನೆ. ಕುಟುಂಬದ ಜನಗಣತಿ ಮಾಹಿತಿ ದಾಖಲಿಸುವ ಮೂಲಕ ಸ್ವಯಂ ಜನಗಣತಿಗೆ ಸಹಕಾರ ನೀಡಬೇಕು ಎಂದು ತಹಶೀಲ್ದಾರ್ ಮತ್ತು ತಾಲೂಕಿನ ಗ್ರಾಮೀಣ ಭಾಗದ ಚಾರ್ಜ್ ಅಧಿಕಾರಿ ರಾಘವೇಂದ್ರ ರಾವ್ ಹೇಳಿದರು.

ಸ್ಥಳೀಯ ತಹಶೀಲ್ದಾರ್ ಕಚೇರಿ ಸಭಾಭವನದಲ್ಲಿ ಶನಿವಾರ ಭಾರತ ಜನಗಣತಿ 2027ರ ಕುರಿತು ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ತಾಲೂಕಿನ ಗ್ರಾಮೀಣ ಭಾಗದಲ್ಲಿ 150 ರಿಂದ 200 ಮನೆಗಳಿಗೆ 1 ಬ್ಲಾಕ್‌ನಂತೆ ತಾಲೂಕಿನಲ್ಲಿ ಒಟ್ಟು 127 ಬ್ಲಾಕ್ ರಚಿಸಲಾಗಿದೆ. ಪ್ರತಿ ಬ್ಲಾಕ್ ಗೆ ಒಬ್ಬ ಗಣತಿದಾರ, 6 ಬ್ಲಾಕ್ ಗೆ ಒಬ್ಬ ಮೇಲ್ವಿಚಾರಕರಂತೆ ಒಟ್ಟು 171 ಗಣತಿದಾರರು ಮತ್ತು 21 ಜನ ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು. ಪಟ್ಟಣದಲ್ಲಿ 32 ಬ್ಲಾಕ್ ರಚನೆ ಮಾಡಿದ್ದು, ಒಟ್ಟು 32 ಜನ ಗಣತಿದಾರರು ಮತ್ತು 10 ಜನ ಮೇಲ್ವಿಚಾರಕರು ಸೇರಿ 42 ಜನರನ್ನು ನೇಮಿಸಲಾಗಿದೆ. ಪಟ್ಟಣದಲ್ಲಿ ಪಪಂ ಮುಖ್ಯಾಧಿಕಾರಿಗಳ ಗಣತಿ ಚಾರ್ಜ್ ಇರುತ್ತದೆ ಎಂದು ಹೇಳಿದರು.

ವಿವಿಧ ಬೇಡಿಕೆ ಈಡೇರಿಕೆಗೆ ಕ್ರಮ: ಲಮಾಣಿ

ಲಕ್ಷ್ಮೇಶ್ವರ: ಪಟ್ಟಣದ ಶ್ರೀ ವೀರಗಂಗಾಧರ ಸರ್ಕಾರಿ ಪ್ರೌಢಶಾಲೆಯಲ್ಲಿ ಹೆಚ್ಚುವರಿ ಕೊಠಡಿ ನಿರ್ಮಾಣ ಕಾಮಗಾರಿಯನ್ನು ರಾಜ್ಯ ವಲಯ ವಿಶೇಷ ಅಭಿವೃದ್ಧಿ ಯೋಜನೆ ಕಾರ್ಯಕ್ರಮದಡಿಯಲ್ಲಿ ಸುಮಾರು 11.88 ಲಕ್ಷ ರೂ.ಗಳ ಕಾಮಗಾರಿಗೆ ಶಾಸಕ ಡಾ.ಚಂದ್ರು ಲಮಾಣಿ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಶಾಸಕರು, ಸರ್ಕಾರಿ ಶಾಲೆಗಳಲ್ಲಿನ ಮೂಲಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರದಿಂದ ಅನುದಾನಕ್ಕಾಗಿ ವಿಶೇಷ ಪ್ರಯತ್ನಗಳನ್ನು ಮಾಡಲಾಗುತ್ತಿದ್ದು, ಅದರಂತೆ ಪ್ರಾಥಮಿಕ, ಪ್ರೌಢಶಾಲೆ ಮತ್ತು ಕಾಲೇಜುಗಳಿಗೆ ಆದ್ಯತೆ ಅನುಸಾರ ಅನುದಾನವನ್ನು ಮಂಜೂರಿ ಮಾಡಿಸಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಮುಖ್ಯವಾಗಿ ಸರ್ಕಾರಿ ಶಾಲೆಗಳಲ್ಲಿ ಸಾಕಷ್ಟು ಗುಣಮಟ್ಟದ ಶಿಕ್ಷಣ ದೊರೆಯುತ್ತಿದ್ದು, ಅದಕ್ಕೆ ತಕ್ಕಂತೆ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದ ಅವರು, ಶ್ರೀ ವೀರಗಂಗಾಧರ ಸರ್ಕಾರಿ ಪ್ರೌಢಶಾಲೆಯ ಹೆಚ್ಚುವರಿ ಕೊಠಡಿ ನಿರ್ಮಾಣ ಕಾಮಗಾರಿಗೆ ಇದೀಗ ಚಾಲನೆ ನೀಡಲಾಗಿದ್ದು, ಈ ಶಾಲೆಯ ಕಂಪೌಂಡ್ ಗೋಡೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು ಎಂದರು.

ಈ ವೇಳೆ ರಾಜ್ಯ ಪ್ರಶಸ್ತಿಗೆ ಭಾಜನರಾದ ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ನಾಣಕೀ ನಾಯಕ್ ಅವರನ್ನು ಶಿಕ್ಷಕರ ವತಿಯಿಂದ ಸನ್ಮಾನಿಸಲಾಯಿತು. ಎಸ್.ಕೆ.ಹವಾಲ್ದಾರ, ಮುಖ್ಯೋಪಾಧ್ಯಾಯ ಬಿ.ಸಿ.ಪಟ್ಟೇದ, ಎ.ಎನ್.ಮುಳಗುಂದ, ಎಚ್.ಎಂ.ಗುತ್ತಲ್, ಎಸ್.ಡಿ.ಲಮಾಣಿ, ಎಂ.ಆರ್.ಹಿರೇಮಠ ಎಸ್.ಜಿ.ಅಂಗಡಿ, ಎನ್.ಎನ್.ಸುಣಗಾರ, ಎಸ್.ಎಸ್.ರಾಥೋಡ, ಎ.ಎಂ.ಅಕ್ಕಿ, ಪಿ.ಎಸ್.ಪುರಾಣಿಕಮಠ, ಯು.ಎಸ್.ನೇಕಾರ, ಎಸ್.ಬಿ.ಪೂಜಾರ, ಮುಖಂಡ ವಿಜಯಕುಮಾರ ಹತ್ತಿಕಾಳ, ಬಿಜೆಪಿ ನಗರ ಘಟಕದ ನೂತನ ಅಧ್ಯಕ್ಷ ವಿಜಯ ಕುಂಬಾರ, ನೂತನ ಪ್ರಧಾನ ಕಾರ್ಯದರ್ಶಿ ಪ್ರವೀಣ ಬೋಮಲೆ, ಗಂಗಾಧರ ಮೆಣಸಿನಕಾಯಿ, ಸೋಮೇಶ ಉಪನಾಳ, ಗಿರೀಶ ಚೌರಡ್ಡಿ, ಬಸವರಾಜ ಚಕ್ರಸಾಲಿ, ಈರಪ್ಪ ಹಾದಿಮನಿ, ಆರ್.ಐ. ಹಬಸಿ, ಆರ್.ಎಚ್ ನಾಯ್ಕರ್, ಎ.ಎಂ.ಕುಂಬಾರ, ಚಂದ್ರು ಮಾಗಡಿ, ಎನ್.ಬಿ.ರಡ್ಡೇರ, ರಾಜು ಅಂದಲಗಿ ಸೇರಿದಂತೆ ಅನೇಕರಿದ್ದರು.



ಹನುಮ ಜಯಂತಿ: ವಿಶೇಷ ಪೂಜೆ

ಮುಂಡರಗಿ: ಪಟ್ಟಣದ ಶಿರಡಿ ಸಾಯಿಬಾಬಾ ದೇವಸ್ಥಾನದಲ್ಲಿ ಹನುಮನ ಜಯಂತಿ ನಿಮಿತ್ತ ಹನುಮನ ಮೂರ್ತಿಗೆ ವಿಶೇಷ ಪೂಜಾ ಅಭಿಷೇಕ ಸೇರಿದಂತೆ ವಿವಿಧ ಸೇವಾ ಕೈಂಕರ್ಯಗಳು ಸಂಭ್ರಮದಿಂದ' ಕಾರ್ಯಕ್ರಮಗಳು ಜರುಗಿದವು.

ಹನುಮ ಜಯಂತಿ ಅಂಗವಾಗಿ ವಿಶೇಷ ಪೂಜಾ ಕಾರ್ಯಕ್ರಮಗಳು ಸಾಯಿ ಬಾಬಾ ಮೂರ್ತಿಗೆ ಮಂಗಲ ಸ್ನಾನ ಆರತಿ, ಕಾಕಡಾರತಿ, ಅಭಿಷೇಕ, ಮಹಾಭಿಷೇಕ, ಕ್ಷೀರಾಭಿಷೇಕ, ಬಿಲ್ವಾರ್ಚನೆ, ಕುಂಕುಮಾರ್ಚನೆ, ದುಪಾರ್ಚನೆ, ಅಲಂಕಾರ, ನೈವೇದ್ಯ, ಬೆಳಗ್ಗೆ ಶ್ರೀ ಸತ್ಯನಾರಯಣ ಪೂಜೆ, ಆರತಿ, ಮಹಾಮಂಗಳಾರತಿ, ಮಹಾಪ್ರಸಾದ , ಸೂರ್ಯಾಸ್ಥಕ್ಕೆ ದೂಪಾರತಿ, ಸಂಜೆ ಶೇಜಾರತಿ ನೆರವೇರಿದವು. ದೇವಸ್ಥಾನದಲ್ಲಿ ಹನುಮನ ಮೂರ್ತಿಯನ್ನು ತೊಟ್ಟಿಲಲ್ಲಿ ಹಾಕಿ ಮಹಿಳೆಯರು ವಿವಿಧ ದೇವರ ಹೆಸರು ಭಕ್ತಿಯಿಂದ ಕೂಗಿ ತೊಟ್ಟಿಲು ತೂಗಿ ಜೋಗುಳ ಪದ ಹಾಡಿದರು. ಪೂಜಾ ಕೈಂಕರ್ಯಗಳುನ್ನು ವ್ಹಿ.ಚಿ.ಜೋಶಿ ಭಟ್ಟರು ನಡೆಸಿಕೊಟ್ಟರು. ಪಾನಕ, ಮಜ್ಜಿಗೆ, ಕೋಸಂಬರಿ, ಮಹಾ ಪ್ರಸಾದ ವಿತರಿಸಲಾಯಿತು. ಹುಲ್ಲಿಗೆಮ್ಮ ಭಜಂತ್ರಿ ಅವರು ಭಕ್ತಿಗೀತೆ ಹಾಡಿದರು. ಈ ಸಂಧರ್ಭದಲ್ಲಿ ಸುಮಿತ್ರಾ ಕಪ್ಪಟಕರ, ಸುರೇಶ ಬೋಸ್ಲೆ, ಭರಮಪ್ಪ ಪುಟ್ಟಣನವರ, ಮಂಜುಳಾ ಸಜ್ಜನರ,ಸಂಜನಾ ಕಪಟಕರ,ಸವಿತ್ರಿ ಭಜಂತ್ರಿ,ಸೇಹ್ನಾ ಭಜಂತ್ರಿ, ಯಲ್ಲಪ್ಪ ಕವಲೂರ ಮುಂತಾದವರಿದ್ದರು.



ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸೇವೆ: ಕಿರಣ್

ಗದಗ: ಇವನಾರವನೆಂದೆನಿಸದೇ ಇವನಮ್ಮವ ಎಂದೆನಿಸುವ ಬಸವೇಶ್ವರ ತತ್ವವನ್ನು ಅಳವಡಿಸಿಕೊಂಡು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸೇವೆಯನ್ನು ತಲುಪಿಸುವುದೇ ನನ್ನ ಗುರಿ ಎಂದು ಯುಪಿಎಸ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಹಾಗೂ ದೇಶಕ್ಕೆ 53ನೇ ಶ್ರೇಣಿ ಗಳಿಸಿದ ಕಿರಣ್ ಕಮತೆ ಹೇಳಿದರು.

ನಗರದ ತೋಂಟದಾರ್ಯ ಮಠದ ಜಾತ್ರಾ ಮಹೋತ್ಸವದ ಮಹಾರಥೋತ್ಸವದ ವೇದಿಕೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಬೆಂಗಳೂರಿನಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಲೇ ಯುಪಿಎಸ್‌ಸಿ ಪರೀಕ್ಷೆಯ ಕನಸು ಹೊತ್ತು ಲಾಕ್‌ಡೌನ್ ಪೂರ್ವದಲ್ಲೇ ತಯಾರಿ ಆರಂಭಿಸಿದೆ. ಯುಪಿಎಸ್‌ಸಿಯ ಯಾವುದೇ ಹಂತದಲ್ಲಿ ಫೇಲಾದರೂ ಮತ್ತೆ ಮೊದಲಿನಿಂದ ಶುರು ಮಾಡಬೇಕು. ಹಾಗಾಗಿ ಇದು ಕ್ಲಿಷ್ಟಕರ ಪರೀಕ್ಷೆಯಾಗಿದ್ದು ನಾನು ಐದು ಬಾರಿ ಪ್ರಯತ್ನಿಸಿ ತೇರ್ಗಡೆ ಹೊಂದದೇ ಇದ್ದರೂ ಆರನೇ ಹಾಗೂ ಕೊನೆಯ ಬಾರಿ ಸತತ ಪರಿಶ್ರಮದಿಂದ ಪ್ರಾಥಮಿಕ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನ ಪಾಸಾಗಿ ಕರ್ನಾಟಕಕ್ಕೆ ನಂ.1 ಹಾಗೂ ದೇಶಕ್ಕೆ 53ನೇ ಶ್ರೇಣಿ ಪಡೆದೆ. ನನ್ನ ಕನಸಿಗೆ ಮಾರ್ಗದರ್ಶನ ನೀಡಿದ ತಂದೆ-ತಾಯಿಗಳು ಹಾಗೂ ಮಿತ್ರರಿಗೆ ನಾನು ಋಣಿಯಾಗಿದ್ದು, ತೋಂಟದಾರ್ಯ ಮಠದ ಆಶೀರ್ವಾದವೂ ನನ್ನ ಬೆನ್ನಿಗಿದೆ ಎಂದರು.

ನ್ಯೂಯಾರ್ಕಿನ ವಿಶ್ವಸಂಸ್ಥೆಯ ವಿಶ್ವರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮ ಸಮಿತಿಯಿಂದ 2025ನೇ ಸಾಲಿನ ಇಕ್ವೆಟಪ್ರಶಸ್ತಿ ಪುರಸ್ಕೃತ ಬೀಬಿ ಫಾತಿಮಾ ಸಂಘದ ಅಧ್ಯಕ್ಷೆ ಬೀಬಿಜಾನ್ ಹಳೇಮನಿ ಹಾಗೂ ಕೆ.ಎಲ್.ಇ ಸಂಸ್ಥೆಗೆ ನೂತನ ಸದಸ್ಯರಾಗಿ ಆಯ್ಕೆಯಾದ ಮಂಜುನಾಥ ಮುನವಳ್ಳಿ ಅವರನ್ನು ಸನ್ಮಾನಿಸಲಾಯಿತು. ಬೀದರನ ಭಾತಂಬ್ರಾ ವಿರಕ್ತಮಠದ ಡಾ.ಗುರುಬಸವ ಸ್ವಾಮಿಗಳಿಗೆ ಸಮಾಜಸೇವಾರತ್ನ ಹಾಗೂ ಸಂಖ ವಿರಕ್ತಮಠದ ಶಿವಲಿಂಗೇಶ್ವರ ಸ್ವಾಮೀಜಿಗೆ ಬಸವಚೇತನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜನವರು, ಕಲಬುರ್ಗಿ ರೋಜಾ ಹಿರೇಮಠದ ಕೆಂಚಬಸವ ಶಿವಾಚಾರ್ಯ ಸ್ವಾಮೀಜಿ, ರಟಕಲ್ಲ ಹಿರೇಮಠದ ರೇವಣಸಿದ್ಧ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮಾಜಿ ಸಚಿವ ಎಸ್.ಎಸ್. ಪಾಟೀಲ, ಸಂಸದ ಐ.ಜಿ. ಸನದಿ, ತೋಂಟದಾರ್ಯ ಮಠದ ಆಡಳಿತಾಧಿಕಾರಿ ಪ್ರೊ.ಎಸ್.ಎಸ್. ಪಟ್ಟಣಶೆಟ್ಟರ, ದೆಹಲಿ ಜಾಟವಾ ಸಮಾಜದ ಪ್ರಮುಖರು ಉಪಸ್ಥಿತರಿದ್ದರು. ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷರಾದ ವಿನಾಯಕ ಮಾನ್ವಿ ಸ್ವಾಗತಿಸಿದರು.



ಶಿವಾನಂದರಿಗೆ ಪ್ರಶಸ್ತಿ ದೊರೆತಿರುವುದು ಜಿಲ್ಲೆಗೆ ಹೆಮ್ಮೆ: ರಾಜು ಹೆಬ್ಬಳ್ಳಿ

ಗದಗ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ಪ್ರತಿವರ್ಷ ಪತ್ರಕರ್ತರ ಸಾಧನೆಗಳನ್ನು ಗುರುತಿಸಿ ಪ್ರಶಸ್ತಿ ನೀಡುತ್ತಾ ಅವರನ್ನು ಪ್ರೋತ್ಸಾಹಿಸುತ್ತಿದೆ. ಅದೇ ರೀತಿ 2024ನೇ ಸಾಲಿನ ತನಿಖಾ ವರದಿಗೆ ಜಿಲ್ಲೆಯ ಹಿರಿಯ ವರದಿಗಾರ ಶಿವಾನಂದ ಹಿರೇಮಠಗೆ ಟಿ.ಕೆ.ಮಲಗೊಂಡ ತನಿಖಾ ವರದಿ ನೀಡಿ ರಾಜ್ಯ ಘಟಕ ಗೌರವಿಸಿದೆ ಎಂದು ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ರಾಜು ಹೆಬ್ಬಳ್ಳಿ ಹೇಳಿದರು.



ನಗರದಲ್ಲಿ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದಿಂದ ಸನ್ಮಾನಿಸಿ ಮಾತನಾಡಿ, ತನಿಖಾ ವರದಿಗಳಿಗೆ ಹೆಸರು ವಾಸಿಯಾದ ಅವರಿಗೆ ಈ ಪ್ರಶಸ್ತಿ ಬಂದಿರುವುದು ಸಂಘಕ್ಕೆ ಮತ್ತು ಜಿಲ್ಲೆಗೆ ಹೆಮ್ಮೆ ಪಡುವ ವಿಷಯವಾಗಿದೆ. ಅವರು ಸಂಶೋಧನಾತ್ಮಕ ವರದಿಗಳನ್ನು ಹೆಚ್ಚು ಆಸಕ್ತಿವಹಿಸಿ ಬರೆಯುತ್ತಾರೆ. ಇನ್ನೂ ಹೆಚ್ಚಿನ ಪ್ರಶಸ್ತಿಗಳು ಶಿವಾನಂದ ಅವರಿಗೆ ಒಲಿದು ಬರಲಿ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶರಣು ದೊಡ್ಡೂರು, ಕಾರ್ಯಕಾರಿಣಿ ಸದಸ್ಯ ವೆಂಕಟೇಶ ಇಮರಾಪೂರ ಮಾತನಾಡಿದರು. ರಾಜ್ಯ ಕಾರ್ಯಕಾರಿಣಿ ಅರುಣ ಹಿರೇಮಠ, ಮೌನೇಶ ಬಡಿಗೇರ, ಅನೀಲ ತೆಂಬದಮನಿ, ಸುನೀಲ ತೆಂಬದಮನಿ, ರಾಮು ವಗ್ಗಿ, ಮುತ್ತು ಜಡಿ, ಮಹಾಲಿಂಗೇಶ ಹಿರೇಮಠ, ಪರಶುರಾಮ ಹಳ್ಳದ ಇದ್ದರು.

ಕನ್ನಡ ಬೆಳೆಯಲು ಸರ್ಕಾರಿ ಶಾಲೆಗಳ ಪಾತ್ರ ಪ್ರಮುಖ: ಚನ್ನವೀರ ಶ್ರೀ

ಲಕ್ಷ್ಮೇಶ್ವರ: ಕನ್ನಡ ಬೆಳೆಯಲು ಸರ್ಕಾರಿ ಶಾಲೆಗಳ ಮಹತ್ವ ದೊಡ್ಡದು. ಶಿಕ್ಷಣ ಪ್ರೇಮಿಗಳು ಸರ್ಕಾರಿ ಶಾಲೆಗಳನ್ನು ಗುರುತಿಸಿ ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಎಂದು ಹೂವಿನಶಿಗ್ಲಿ ವಿರಕ್ತಮಠದ ಚನ್ನವೀರ ಸ್ವಾಮೀಜಿ ಹೇಳಿದರು.

ಶಿಗ್ಲಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಮಾದರಿ ಪ್ರಾಥಮಿಕ ಮತ್ತು ಪ್ರೌಢಶಾಲೆನಲ್ಲಿ ವಿದ್ಯಾರ್ಥಿಗಳಿಗೆ ಬೆಂಗಳೂರಿನ ನೋವೆಲ್ ಹೋಪ್ ಫೌಂಡೇಶನ್ ವತಿಯಿಂದ ವಿದ್ಯಾರ್ಥಿಗಳಿಗೆ ಉಚಿತ ತಟ್ಟೆಗಳು, ನೀರಿನ ಸ್ಟಿಲ್ ಬಾಟಲ್‌ಗಳ ವಿತರಣಾ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿ, ವಿದ್ಯಾರ್ಥಿಗಳ ಓದಿನ ಕಡೆಗೆ ಹೆಚ್ಚು ಒತ್ತು ಕೊಡಬೇಕು. ಒಳ್ಳೆಯ ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು ಎಂದರು.

ಶಾಲಾ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕ ಆರ್.ಎಸ್. ಬುರಡಿ ವಿದ್ಯಾರ್ಥಿಗಳಿಗೆ ತಟ್ಟೆಗಳು ನೀರಿನ ಸ್ಟಿಲ್ ಬಾಟಲ ಗಳನ್ನು ವಿತರಣೆ ಮಾಡಿ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಣ ನೀಡುವಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ನಾಣಕಿ ನಾಯ್ಕ ಮಾತನಾಡಿದರು. ಜಿಲ್ಲೆಯ ಒಟ್ಟು 17 ಸರ್ಕಾರಿ ಶಾಲೆಗಳ 2,482 ವಿದ್ಯಾರ್ಥಿಗಳಿಗೆ ಬೆಂಗಳೂರಿನ ನೋವೆಲ್ ಹೋಪ್ ಫೌಂಡೇಶನ್ ವತಿಯಿಂದ ನೀರಿನ ಸ್ಟಿಲ್ ಬಾಟಲ್ ಹಾಗೂ ಊಟದ ಪ್ಲೇಟ್ ವಿತರಣೆ ನಡೆಯಿತು . ಬೆಂಗಳೂರಿನ ನೋವೆಲೋ ಹೋಪ್ ಫೌಂಡೇಶನ್ ಸಂಸ್ಥೆಯ ಸೀನಿಯರ್ ಸಿಎಸ್‌ಆರ್ ಎಕ್ಸಿಕ್ಯೂಟಿವ್ ದೀಪಕ್ ಅವರಿಗೆ ಸನ್ಮಾನಿಸಲಾಯಿತು. ಎಸ್‌ಡಿಎಂಸಿ ರಾಮಣ್ಣ ಬೂದಿಹಾಳ ಅಧ್ಯಕ್ಷತೆ ವಹಿಸಿದ್ದರು. ಬಿ.ಎಸ್. ಹರ್ಲಾಪುರ, ಶರಣಬಸವಗೌಡ ಪಾಟೀಲ, ಶಾಲೆಯ ಮುಖ್ಯ ಶಿಕ್ಷಕಿ ಎನ್.ವಿ. ಕುಲಕರ್ಣಿ, ಮಂಜುನಾಥ್ ಬದಿ, ಎಸ್.ಬಿ. ಅಣ್ಣಿಗೇರಿ, ತಿಪ್ಪನಾಯಕ್ ಎಲ್, ಆದೇಶ ಹುಲಗೂರ, ವಿರೂಪಾಕ್ಷಪ್ಪ ಶಿರಹಟ್ಟಿ, ಆರ್.ಡಿ. ಕಲಾಗಯರ, ದೀಪಾ ಬಸ್ಮಿ, ಜ್ಯೋತಿ ಗಾಯಕವಾಡ, ಮಾಲಂಬಿ ಗುತ್ತಲ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಮರಳು ಅಕ್ರಮ ಸಾಗಾಟ: ವಶ



ಲಕ್ಷ್ಮೇಶ್ವರ: ಪಟ್ಟಣದ ಪೊಲೀಸ್ ಠಾಣೆ ವ್ಯಾಪ್ತಿಯ ಅಮರಾಪುರ ಗ್ರಾಮದ ರಸ್ತೆಯಲ್ಲಿ ಟ್ರ್ಯಾಕ್ಟರ್‌ನಲ್ಲಿ ಚಾಲಕನು ತನ್ನ ಸ್ವಂತ ಲಾಭಗೋಸ್ಕರ ಸರ್ಕಾರಿ ಸ್ವತ್ತಾದ ಮರಳನ್ನು ಅನಧಿಕೃತವಾಗಿ, ಯಾವುದೇ ಪಾಸ್ ಪರ್ಮಿಟ್ ಇಲ್ಲದೇ ಅಕ್ರಮವಾಗಿ ಟ್ರ್ಯಾಕ್ಟರ್‌ದಲ್ಲಿ ತುಂಬಿಕೊಂಡು ಅಮರಾಪುರ ಗ್ರಾಮದಿಂದ ಲಕ್ಷ್ಮೇಶ್ವರ ಕಡೆಗೆ ಸಾಗಾಟ ಮಾಡಲು ಬರುತ್ತಿದ್ದಾಗ ಪಿಎಸ್‌ಐ ನಾಗರಾಜ ಗಡದ ಅವರ ಪೊಲೀಸರ ತಂಡ ದಾಳಿ ಮಾಡಿ ಮರಳಿನ ಟ್ರ್ಯಾಕ್ಟರನ್ನು ವಶಕ್ಕೆ ಪಡೆದುಕೊಂಡಿದ್ದು ದಂಡವನ್ನು ವಿಧಿಸಿದ್ದಾರೆ

ಟ್ರ್ಯಾಕ್ಟರದಲ್ಲಿ ಸುಮಾರು 1 ಕ್ಯುಬಿಕ್ ಮೀಟರ್‌ನಷ್ಟು ಮರಳು ಇದ್ದು, ಮರಳು ತುಂಬಿದ ಟ್ರ್ಯಾಕ್ಟರ್ ಸದ್ಯ ಲಕ್ಷ್ಮೇಶ್ವರ ಪೊಲೀಸರ ವಶದಲ್ಲಿದ್ದು ಹಿರಿಯ ಭೂ ವಿಜ್ಞಾನಿಗಳು, ಗಣಿ ಮತ್ತು ಭೂ-ವಿಜ್ಞಾನ ಇಲಾಖೆ ಗದಗ ಅವರಿಗೆ ಮಾಹಿತಿ ನೀಡಿದ್ದಾರೆ.

ಶ್ರೀ ರಾಮನ ಆದರ್ಶ ಅಳವಡಿಸಿಕೊಳ್ಳಿ

ನರಗುಂದ: ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಶ್ರೀ ರಾಮನ ಆದರ್ಶಗಳನ್ನು ಅಳವಡಿಸಕೊಳ್ಳಬೇಕು. ಅಂದಾಗ ಮನುಷ್ಯನ ಜೀವನ ಸುಂದರವಾಗಿ ನಿರ್ಮಾಣಗೊಳ್ಳುತ್ತದೆ ಎಂದು ಬನಹಟ್ಟಿ ಪ್ರೌಢಶಾಲೆ ಮುಖ್ಯಶಿಕ್ಷಕ ಎಸ್.ವೈ. ಪಾಟೀಲ ಹೇಳಿದರು.

ತಾಲೂಕಿನ ಶಿರೋಳ ಗ್ರಾಮದ ಯಚ್ಚರಸ್ವಾಮಿಗಳ ಗವಿಮಠದಲ್ಲಿ ನಡೆದ 30ನೇ ಮಾಸಿಕ ಶಿವಾನುಭವ ಗೋಷ್ಠಿ ಹಾಗೂ ಶ್ರೀ ರಾಮ ಜಯಂತಿ ಮತ್ತು ಹನುಮ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತೀಯ ಕಿಸಾನ ಸಂಘದ ಜಿಲ್ಲಾಧ್ಯಕ್ಷ ಎಸ್.ಎಸ್. ಪಾಟೀಲ ಮಾತನಾಡಿ, ಮನುಷ್ಯನಿಗೆ ಸಂಸ್ಕಾರಯುತವಾಗಿ ಬದುಕುವುದನ್ನು ಮಠ ಮಂದಿರಗಳು ಕಲಿಸುತ್ತದೆ ಎಂದರು. ಕೊಪ್ಪಳದ ವಿಶ್ವಕರ್ಮ ಸಮಾಜದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಕಾಶ ಅರ್ಕಸಾಲಿ ಮಾತನಾಡಿದರು. ಅಭಿನವ ಯಚ್ಚರ ಸ್ವಾಮೀಜಿ, ಪ್ರಭಾಕರ ಉಳ್ಳಾಗಡ್ಡಿ, ಮಲ್ಲಣ್ಣ ಚಿಕ್ಕನರಗುಂದ, ಬಸವರಾಜ ಕುಪ್ಪಸ್ತ, ಎಸ್.ವೈ. ಮುಲ್ಕಿಪಾಟೀಲ, ಬಾಪುಗೌಡ ತಿಮ್ಮನಗೌಡ್ರ, ವಿಠ್ಠಲ ಶಾಲದಾರ, ಗುರುದೇವಿ ಶಾನವಾಡಮಠ ಹಾಗೂ ದುರ್ಗಾದೇವಿ ಮಹಿಳಾ ಭಜನಾ ಮಂಡಳಿ, ಮರಡಿ ಮಾರುತಿ ಸಂತ ಭಜನಾ ಮಂಡಳಿ ಇದ್ದರು. ಸುನೀಲ ಕಳಸದ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.



ಒಳಪಂಗಡಗಳು ಒಂದಾಗಲಿ: ಗುಡಿಮನಿ



ಲಕ್ಷ್ಮೇಶ್ವರ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಒಳಪಂಗಡಗಳು ಒಂದಾಗಿ ಸಾಗಬೇಕು ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಶರಣಬಸವ ಗುಡಿಮನಿ ಹೇಳಿದರು.

ಅವರು ಪಟ್ಟಣದ ಜಗದ್ಗುರು ವೀರಗಂಗಾಧರ ಸಮುದಾಯ ಕಲ್ಯಾಣ ಮಂಟಪದಲ್ಲಿ ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸದಸ್ಯತ್ವ ಅಭಿಯಾನದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಿನ್ನಾಭಿಪ್ರಾಯಗಳನ್ನು ಮರೆತು ಸಮಾಜ ಕಟ್ಟುವಲ್ಲಿ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಸಲಹಾ ಸಮಿತಿ ಸದಸ್ಯ ಚಂದ್ರು ಬಾಳಿಹಳ್ಳಿಮಠ ಮಾತನಾಡಿ, ವೀರಶೈವ ಲಿಂಗಾಯತದ ಬಗ್ಗೆ ಯಾವುದೇ ಗೊಂದಲವಿಲ್ಲ, ಒಗ್ಗೂಡಿಸುವ ಕಾರ್ಯದಲ್ಲಿ ತೊಡಗಿದ್ದೇವೆ. ಸಮಾಜದ ಎಲ್ಲ ಒಳ ಪಂಗಡಗಳನ್ನು ಒಗ್ಗೂಡಿಸುವುದು ಅತ್ಯಂತ ಮುಖ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಕಾರ್ಯದರ್ಶಿ ಮುರುಗೇಂದ್ರ ಬಡ್ನಿ , ಉಪಾಧ್ಯಕ್ಷ ಬಸವರಾಜ ಅಂಗಡಿ, ಖಜಾಂಚಿ ಚನವೀರಪ್ಪ ಹುಣಸಿಕಟ್ಟಿ , ನಿರ್ದೇಶಕ ಬಾಪೂಜಿ ಪಾಟೀಲ, ಚನ್ನಪ್ಪ ಜಗಲಿ, ಪ್ರವೀಣ ಬಾಳಿಕಾಯಿ, ಸುನೀಲ ಮಹಾಂತಶೆಟ್ಟರ, ಮಂಜುನಾಥ ಚಾಕಲಬ್ಬಿ , ಶಿವಲಿಂಗಪ್ಪ ಅಣ್ಣಿಗೇರಿ, ಸಂತೋಷ ಜಾವೂರ, ಎಂ.ಎಸ್. ಹಿರೇಮಠ ಇತರರಿದ್ದರು.

ಹನುಮ ಜಯಂತಿ: ತೊಟ್ಟಿಲೋತ್ಸವ

ಲಕ್ಷ್ಮೇಶ್ವರ: ಗುರುವಾರ ಹನಮಜಯಂತಿ ಅಂಗವಾಗಿ ಪಟ್ಟಣ ಸೇರಿ ತಾಲೂಕಿನಾದ್ಯಂತ ಹನಮಂತದೇವರ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಅಲಂಕಾರ, ಅಭಿಷೇಕ, ತೊಟ್ಟಿಲೋತ್ಸವ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಶ್ರದ್ಧಾ ಭಕ್ತಿಯಿಂದ ನೆರವೇರಿಸಲಾಯಿತು.

ಪಟ್ಟಣದ ಪೇಟೆ ಆಂಜನೇಯ ದೇವಸ್ಥಾನದಲ್ಲಿ ವಿಶೇಷ ಪೂಜೆಯೊಂದಿಗೆ ಅಲಂಕರಿಸಲಾದ ಬೆಳ್ಳಿಯ ತೊಟ್ಟಿಲಲ್ಲಿ ಹನುಮಂತದೇವರ ಉತ್ಸವ ಮೂರ್ತಿಯನ್ನಿರಿಸಿ ಮಹಿಳೆಯರು, ಮಕ್ಕಳು ಸೇರಿ ತೊಟ್ಟಿಲು ಪೂಜೆ ಮಾಡಿ ಜೋಗುಳ ಪದ ಹಾಡಿದರು.

ಈ ವೇಳೆ ಮಾತನಾಡಿದ ಅರ್ಚಕ ಮುರಘೇಂದ್ರಸ್ವಾಮಿ ಹಿರೇಮಠ ಅವರು ಸೇವೆ, ತ್ಯಾಗ, ನಿಷ್ಠೆ ಹಾಗೂ ಭಕ್ತಿಗೆ ಮತ್ತೊಂದು ಹೆಸರೇ ಹನಮಂತ ದೇವರು. ಎಲ್ಲದರಲ್ಲಿಯೂ ಮಿಗಿಲಾದ ಅಧಮ್ಯ ಶಕ್ತಿ ಹೊಂದಿದ್ದರೂ ಭಕ್ತಿ, ವಿನಯ ಶೀಲತೆ, ಸಂಪನ್ನ-ಸದ್ಗುಣಗಳನ್ನು ಹನಮಂತ ಹೊಂದಿದ್ದ. ರಾಮನ ಭಕ್ತ ಹನುಮಂತ ತನ್ನ ಶ್ರದ್ಧೆ, ಭಕ್ತಿ, ನಿಷ್ಠೆಯಿಂದ ಇಂದು ಜಗತ್ತಿಗೆ ಆದರ್ಶನಾಗಿದ್ದಾನೆ ಎಂದರು.

ಮಹಿಳಾ ರುದ್ರಬಳಗದ ಸದಸ್ಯರಾದ ಪರಮೇಶ್ವರಿ, ಪ್ರಭಾ ಪುರಾಣಿಕಮಠ, ಜ್ಯೋತಿ, ಜಯಶ್ರೀ, ಆರತಿ, ವಿಜಯಲಕ್ಷ್ಮೀ, ಅಮೃತಾ ಬಾಳಿಹಳ್ಳಿಮಠ, ಪಾರ್ವತಿ ಕಳ್ಳಿಮಠ, ಶಾಂತಾ ಗುಳಗಣ್ಣವರ, ಗೌರಮ್ಮ ಮರಡೂರಮಠ, ವಿಜಯಲಕ್ಷ್ಮೀ ವಿರಕ್ತಮಠ ಅವರಿಂದ ರುದ್ರಪಠಣ, ಮಾರುತಿ ಆಂಜನೇಯ ಭಜನಾ ಸಂಘದಿಂದ ಭಜನೆ ಮತ್ತು ಕೃಷ್ಣ ಕ್ಷತ್ರಿ ಕುಟುಂಬದಿಂದ ಮಂಗಳವಾದ್ಯ ನೆರವೇರಿತು.



ಕಿರುಸುದ್ದಿ

ಹಂಪಿ ವಿರೂಪಾಕ್ಷೇಶ್ವರ ತೆಪ್ಪೋತ್ಸವ ಅದ್ಧೂರಿ



ವಿಜಯನಗರ: ದಕ್ಷಿಣಕಾಶಿ ಖ್ಯಾತಿಯ ಹಂಪಿ ವಿರೂಪಾಕ್ಷೇಶ್ವರ ಸ್ವಾಮಿ ತೆಪ್ಪೋತ್ಸವ ಶನಿವಾರ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ವಿರೂಪಾಕ್ಷೇಶ್ವರ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿರುವ ಮನ್ಮಥ ಹೊಂಡದಲ್ಲಿ ವಿದ್ಯುತ್ ಅಲಂಕೃತ ತೆಪ್ಪದಲ್ಲಿ ವಿರೂಪಾಕ್ಷೇಶ್ವರ ಹಾಗೂ ಪಂಪಾದೇವಿ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ವಿಶೇಷ ಪೂಜೆ ಸಲ್ಲಿಸಲಾಯಿತು.

ಶ್ರೀ ವಿದ್ಯಾರಣ್ಯ ಭಾರತಿ ಶ್ರೀಗಳು ವಿಶೇಷ ಪೂಜೆ ನೆರವೇರಿಸಿದರು. ಬಳಿಕ ಐದು ಸುತ್ತು ತೆಪ್ಪೋತ್ಸವ ಪ್ರದಕ್ಷಿಣೆ ಹಾಕಲಾಯಿತು. ವಿಜಯನಗರ, ಬಳ್ಳಾರಿ, ಕೊಪ್ಪಳ, ರಾಯಚೂರು ಹಾಗೂ ದಾವಣಗೆರೆ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಭಕ್ತರು ಆಗಮಿಸಿದ್ದರು.

ನೀರಾವರಿ ಕ್ಷೇತ್ರದ ಕೊಡುಗೆ ಕುರಿತು ಸಂವಾದಕ್ಕೆ ಬನ್ನಿ

ಬಾಗಲಕೋಟೆ: ನೀರಾವರಿ ಕ್ಷೇತ್ರಕ್ಕೆ ಕಾಂಗ್ರೆಸ್ಸಿನ ಸರ್ಕಾರಗಳ ಕೊಡುಗೆ ಮತ್ತು ಬಿಜೆಪಿ, ಕಾಂಗ್ರೆಸ್ಸೇತರ ಸರ್ಕಾರಗಳ ಕೊಡುಗೆ ಕುರಿತು ಸಂವಾದ ಏರ್ಪಡಿಸಲು ಸಂಸದ ಬಸವರಾಜ ಬೊಮ್ಮಾಯಿ ಅವರು ಒತ್ತಾಯಿಸಿದರು.



ಬಸವರಾಜ ಬೊಮ್ಮಾಯಿ ಆಗ್ರಹ

ನಗರದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಮಹಾರಾಷ್ಟ್ರ- ಆಂಧ್ರದಲ್ಲಿ ಇಲ್ಲದ ಎ, ಬಿ ಸ್ಕೀಮನ್ನು ಇಲ್ಲಿ ಏಕೆ ತಂದಿದ್ದೀರಿ ಎಂದು ನಾನು ನೀರಾವರಿ ಸಚಿವನಾಗಿ ಹೇಳಿದ್ದೆ. 'ಎ 'ನೂ ಇಲ್ಲ, ಬಿ ನೂ ಇಲ್ಲ, ಅದು ಒಂದೇ ಸ್ಕೀಂ. ಅದು ಕೃಷ್ಣಾ ಸ್ಕೀಂ. ಅದನ್ನು ಮಾಡಲು ತೀರ್ಮಾನ ಮಾಡಿ, ನಾವು ಮುಳವಾಡ ಲಿಫ್ಟ್ ಪೂರ್ಣಗೊಳಿಸಿದ್ದೇವೆ. ಚಿಮ್ಮಲಗಿ ಯೋಜನೆ ಮಾಡಿ ನೀರು ಹರಿಸಿದ್ದೇವೆ ಎಂದು ವಿವರಿಸಿದರು.

ಕಾಂಗ್ರೆಸ್ಸೇತರ ಸರ್ಕಾರಗಳ ಮತ್ತು ಬಿಜೆಪಿ ಕೊಡುಗೆ ಅತಿ ಹೆಚ್ಚು. ಸಿದ್ದರಾಮಯ್ಯನವರ ಬಾದಾಮಿ ಕ್ಷೇತ್ರದ ಕೆರೂರು ಏತ ನೀರಾವರಿ ನಾವೇ ಮಾಡಿದ್ದು. ಬಹಳ ವರ್ಷದ ಬೇಡಿಕೆ ಇದ್ದ ವಿಜಯಪುರದ ರೇವಣಸಿದ್ಧೇಶ್ವರ ನೀರಾವರಿ ಯೋಜನೆಯನ್ನೂ ನಾವೇ ಮಾಡಿದ್ದೇವೆ ಎಂದು ತಿಳಿಸಿದರು. ಕೆರೆ ತುಂಬಿಸುವ ಯೋಜನೆಯನ್ನು ನಾವೇ ಮಾಡಿದ್ದು. ಬಾಗಲಕೋಟೆಗೆ ಅವಶ್ಯಕತೆಗೆ ಅನುಗುಣವಾಗಿ ನೀರು ಕೊಡಲು ಅವಕಾಶವಿದೆ. ಅವರು ಇದೆಲ್ಲದರ ವಿಚಾರವಾಗಿ ಸವಾಲೆಸೆದಿದ್ದಾರೆ. ಸಂವಾದಕ್ಕೆ ಬರಲಿ ಎಂದು ತಿಳಿಸಿದರು.

ಸುಟ್ಟ ಸ್ಥಿತಿಯಲ್ಲಿ ಮಹಿಳೆಯ ಶವ ಪತ್ತೆ: ಕೊಲೆ ಶಂಕೆ

ಕಲಬುರಗಿ: ಜಿಲ್ಲೆಯ ಕಮಲಾಪುರ ತಾಲೂಕಿನ ಕಲ್ಮೂಡ ಗ್ರಾಮದ ಸಮೀಪದಲ್ಲಿ ಸುಟ್ಟ ಸ್ಥಿತಿಯಲ್ಲಿ ಅಪರಿಚಿತ ಮಹಿಳೆಯ ಶವ ಪತ್ತೆಯಾಗಿರುವ ಘಟನೆ ಆತಂಕಕ್ಕೆ ಕಾರಣವಾಗಿದೆ. ಸುಮಾರು 23 ವರ್ಷದ ಮಹಿಳೆಯ ಶವ ಸಂಪೂರ್ಣವಾಗಿ ಸುಟ್ಟ ಸ್ಥಿತಿಯಲ್ಲಿ ಕಂಡು ಬಂದಿದ್ದು, ದೇಹದ ಬಹುತೇಕ ಭಾಗಗಳು ದಹನಗೊಂಡಿದ್ದು ಕೇವಲ ಕಾಲು ಭಾಗ ಮಾತ್ರ ಉಳಿದಿರುವುದು ತಿಳಿದು ಬಂದಿದೆ. ಈ ಹಿನ್ನೆಲೆಯಲ್ಲಿ ಮಹಿಳೆಯನ್ನು ಬೇರೆಡೆ ಕೊಲೆ ಮಾಡಿ ಬಳಿಕ ಶವವನ್ನು ಇಲ್ಲಿ ತಂದು ಸುಟ್ಟು ಹಾಕಿರುವ ಶಂಕೆ ವ್ಯಕ್ತವಾಗಿದೆ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆಯೇ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಎಸ್‌ಪಿ ಸೇರಿದಂತೆ ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಸ್ಥಳ ಪರಿಶೀಲನೆ ನಡೆಸಿ ಸಾಕ್ಷ್ಯ ಸಂಗ್ರಹ ಕಾರ್ಯ ಕೈಗೊಂಡಿದ್ದಾರೆ. ಈ ಸಂಬಂಧ ಕಮಲಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆಯನ್ನು ಆರಂಭಿಸಿದ್ದಾರೆ. ಮೃತ ಮಹಿಳೆಯ ಗುರುತು ಪತ್ತೆ ಹಾಗೂ ಘಟನೆಯ ನಿಜಸ್ವರೂಪ ತಿಳಿದುಕೊಳ್ಳಲು ಮುಂದಿನ ಕ್ರಮ ಕೈಗೊಳ್ಳಲಾಗಿದೆ.

ಬಿಜೆಪಿಯವರು ನುಡಿದಂತೆ ನಡೆದಿಲ್ಲ: ಸಿಎಂ ಸಿದ್ದರಾಮಯ್ಯ

ಕಾಂಗ್ರೆಸ್ ಬಡವರ ಪರ

ಬಾಗಲಕೋಟೆ: ಪ್ರಧಾನಿ ನರೇಂದ್ರ ಮೋದಿಯವರು 2014ರಲ್ಲಿ ಹೇಳಿದ್ದನ್ನೂ ಇನ್ನೂ ಜಾರಿ ಮಾಡಿಲ್ಲ. ಒಳ್ಳೆಯ ದಿನಗಳು ಬರುತ್ತವೆ ಎಂದಿದ್ದರು ಬರಲಿಲ್ಲ, ಬಡತನ ಹೋಗುತ್ತದೆ, ನಿರುದ್ಯೋಗ ಹೋಗಲಾಡಿಸಲಾಗುತ್ತದೆ, ರೈತರ ಆದಾಯ ದುಪ್ಪಟ್ಟಾಗುತ್ತದೆ ಎಂದೆಲ್ಲಾ ಹೇಳಿದ್ದರು. ಒಳ್ಳೆ ದಿನಗಳು ಬರಲಿಲ್ಲ, ರೈತರ ಆದಾಯವೂ ಎರಡು ಪಟ್ಟು ಆಗಲಿಲ್ಲ, ವಿದೇಶದಲ್ಲಿರುವ ಕಪ್ಪು ಹಣವನ್ನು ತಂದು ಪ್ರತಿ ಮನೆಗೆ 15 ಲಕ್ಷ ರೂ.ಕೊಡುತ್ತೇನೆ ಎಂದಿದ್ದರು ಅದನ್ನು ಕೊಡಲಿಲ್ಲ, ಎಂದರೆ ನುಡಿದಂತೆ ಬಿಜೆಪಿಯವರು ನಡೆದುಕೊಂಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ಬಾಲಾಜಿ ಮಂದಿರದಲ್ಲಿ ಸಕಲ ಸಮಾಜದ ಮುಖಂಡರ ಸಭೆಯಲ್ಲಿ ಭಾಗವಹಿಸಿ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ ನಡೆಸಿ ಅವರು ಮಾತನಾಡಿದರು.

ಸಾಮಾಜಿಕ ನ್ಯಾಯದಲ್ಲಿ ನಂಬಿಕೆಯಿಟ್ಟು ಕೊಂಡಿರುವ ಪಕ್ಷ ನಮ್ಮದು. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಹಾಗೂ ಎಲ್ಲರಿಗೂ ಸಮಾನ ರಕ್ಷಣೆ ದೊರೆಯಬೇಕು. ದುರ್ಬಲ ವರ್ಗದವರಿಗೆ, ಮಹಿಳೆಯರಿಗೆ, ಮಕ್ಕಳಿಗೆ, ಶಕ್ತಿ ಇಲ್ಲದವರಿಗೆ ಆದ್ಯತೆ ಮೇರೆಗೆ ರಕ್ಷಣೆ ನೀಡಬೇಕೆಂದು ಪೊಲೀಸ್ ಇಲಾಖೆಗೆ ಸೂಚಿಸಲಾಗಿದೆ. ಇದು ನಮ್ಮ ಸರ್ಕಾರದ ಧ್ಯೇಯ ಎಂದರು.

ಕಾಂಗ್ರೆಸ್ ಎಲ್ಲ ಕಾಲದಲ್ಲಿಯೂ ಬಡವರ ಪರವಾಗಿ ಕೆಲಸ ಮಾಡಿಕೊಂಡು ಬಂದಿದೆ. ಬಿಜೆಪಿಯವರು ಕರ್ನಾಟಕದಲ್ಲಿ 9 ವರ್ಷ ಅಧಿಕಾರ ಮಾಡಿದ್ದಾರೆ. ಏನು ಮಾಡಿದ್ದಾರೆ ಎಂದು ಅವರು ಜನರ ಮುಂದೆ ಹೇಳುವುದೇ ಇಲ್ಲ, ಅದರ ಬದಲಿಗೆ ನಮ್ಮ ಸರ್ಕಾರವನ್ನು ಟೀಕೆ, ಅಪಪ್ರಚಾರ ಮಾಡಿಕೊಂಡು ಓಡಾಡಿದ್ದಾರೆ. ಬಿಜೆಪಿ ನುಡಿದಂತೆ ನಡೆದ ಪಕ್ಷವಲ್ಲ ಎಂದರು.



> ಕಾಂಗ್ರೆಸ್ ಸರ್ಕಾರ ಮಹಿಳೆಯರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಸೇರಿದಂತೆ ಶೋಷಿತ ವರ್ಗಗಳ ಏಳಿಗೆಗೆ ಶ್ರಮಿಸುತ್ತಿದೆ. ತಳ ಸಮುದಾಯದವರಿಗೆ ಆರ್ಥಿಕ ಮತ್ತು ಸಾಮಾಜಿಕ ಬಲ ತುಂಬಲು ಯೋಜನೆಗಳನ್ನು ಜಾರಿಗೊಳಿಸಿದೆ.
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ದೇಶದಲ್ಲಿ ರೈತರಿಗೆ ಉಳುವವನೇ ಭೂಮಿಯ ಒಡೆಯ ಎಂದು ಮಾಡಿದ್ದು, ಮಲ ಹೊರುವ ಪದ್ಧತಿ ನಿಷೇಧ, ಸಾಲ ಮನ್ನಾ ಮಾಡಿದ್ದು ಕಾಂಗ್ರೆಸ್ ಸರ್ಕಾರ. ಬಿಜೆಪಿ 28 ಕೋಟಿ ಉದ್ಯೋಗ ಸೃಷ್ಟಿ ಮಾಡಿದ್ದರೆ ನಿರುದ್ಯೋಗ ಸಮಸ್ಯೆಯೇ ಇರುತ್ತಿರಲಿಲ್ಲ, ನಮ್ಮ ಸರ್ಕಾರ ಯುವನಿಧಿ ಯೋಜನೆಯನ್ನು ಜಾರಿ ಮಾಡಿದೆ. ಇದನ್ನು ಬಿಜೆಪಿ ಏಕೆ ಮಾಡಲಿಲ್ಲ ಎಂದರು.

ಅಂತ್ಯೋದಯ,ಸರ್ವೋದಯಮಂತ್ರವನ್ನು ಮಹಾತ್ಮಾ ಗಾಂಧಿ ನೀಡಿದ್ದರು. ರಾಜಕೀಯ ಸ್ವಾತಂತ್ರ್ಯ ಯಶಸ್ವಿಯಾಗಲು ಪ್ರತಿಯೊಬ್ಬರೂ ಸಾಮಾಜಿಕ,ಶೈಕ್ಷಣಿಕವಾಗಿ ಪ್ರಬಲರಾಗಬೇಕು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೂರು ವರ್ಷಗಳಿಂದ ಎಲ್ಲಾ ಗ್ಯಾರಂಟಿಗಳನ್ನು ಸಮರ್ಪಕವಾಗಿ ಜಾರಿ ಮಾಡಿದೆ. ಇದುವರೆಗೆ ರೂ.1.31ಲಕ್ಷ ಕೋಟಿಯನ್ನು ಗ್ಯಾರಂಟಿಗಳಿಗೆ ವ್ಯಯಿಸಲಾಗಿದೆ ಎಂದರು.

ಸಚಿವ ಶಿವಾನಂದ ಪಾಟೀಲ, ಆರ್ .ಬಿ.ತಿಮ್ಮಾಪುರ, ಮುಖಂಡ ಪ್ರಕಾಶ ತಪಶೆಟ್ಟಿ, ಮಲ್ಲಿಕಾರ್ಜುನ ಚರಂತಿಮಠ ಇದ್ದರು.

2028ಕ್ಕೆ ಕಾಂಗ್ರೆಸ್ ಅಧಿಕಾರಕ್ಕೆ ಬರಲ್ಲ: ಎಮ್ಮೆಲ್ಸಿ ಸಿ.ಟಿ.ರವಿ

ಬಾಗಲಕೋಟೆ: ಕಳೆದ ಮೂರು ವರ್ಷಗಳಿಂದ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಹಗರಣ ಸರ್ಕಾರಗಳ ಎಂದು ಬಿಂಬಿತವಾಗಿದೆ. ಅಬಕಾರಿ ಹಗರಣ 6 ಸಾವಿರ ಕೋಟಿ ರೂ., ವಾಲ್ಮೀಕಿ ನಿಗಮ, ಡ್ರಗ್ಸ್, ರೈತರ ಆತ್ಮಹತ್ಯೆಯಂತಹ ವಿಷಯಗಳಲ್ಲಿ ಮುಳಗಿ ಹೋಗಿದೆ. ಇದರಿಂದ ಜನರು ಬೇಸತ್ತು ಹೋಗಿದ್ದಾರೆ. 2028ಕ್ಕೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿಕಾರಿಗಳವರ್ಗಾವಣೆಗೆಲಕ್ಷಾಂತರರೂ.ಲಂಚ, ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ, ಮಿತಿ ಮೀರಿದ ಭ್ರಷ್ಟಾಚಾರ, ಬೆಲೆ ಏರಿಕೆ ಕಾರಣದಿಂದ ಈ ಬಾಗಲಕೋಟೆ ಉಪ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಜನನ ಪತ್ರಕ್ಕೆ 5 ರೂ. ಇದ್ದ ಶುಲ್ಕ 50 ರೂ.ಗೆ, ಆರ್‌ಟಿಸಿ ಉತಾರ 15ರಿಂದ 30 ರೂ., ಡೀಸೆಲ್, ಪೆಟ್ರೋಲ್ ಮೇಲೆ ಸೆಸ್ಸ ಹೆಚ್ಚಳ ಮಾಡಿದೆ. ಸ್ಟ್ಯಾಂಪ್ ಡ್ಯೂಟಿಗಳು ಅಧಿಕಗೊಂಡಿವೆ. ಕಾಂಗ್ರೆಸ್ ಸರ್ಕಾರ ಸಾಮಾಜಿಕ ಅನ್ಯಾಯಕ್ಕೆ ಜನಾಕ್ರೋಶ ಮನೆ ಮಾಡಿದೆ. ನಡುಗಡ್ಡೆ ಸ್ಥಳಾಂತರ ಮಾಡಿಲ್ಲ, ಬಾಗಲಕೋಟೆ ನಗರಸಭೆ ಬಿಡಿಗಾಸು ನೀಡಿಲ್ಲ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಲ್ಲಿ ದಲ್ಲಾಳಿಗಳ ಹಾವಳಿ ಸೇರಿದಂತೆ ದರೋಡೆಕೋರರರ ಸರ್ಕಾರ ಇದಾಗಿದೆ ಎಂದು ದೂರಿದರು.

ಗಣೇಶ ಉತ್ಸವ, ಶಿವಾಜಿ ಜಯಂತಿ ಮೆರವಣಿಗೆ, ಆಚರಣೆ ಮಾಡಲು ಭಯ ಪಡುವಂತಾಗಿದೆ.

ಧಮ್ಕಿ ಹಾಕಿ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡುತ್ತಿದೆ. ಪ್ರತಿ ತಿಂಗಳು 5ಕೆ.ಜಿ ಅಕ್ಕಿ ನೀಡುತ್ತಿರುವುದು ಮೋದಿ ಸರ್ಕಾರ. ಚೀಲ ಮಾತ್ರ ಸಿದ್ದರಾಮಯ್ಯ ಅವರದ್ದು, ಅದರು ಸಹ ಅಪಾರ ಪ್ರಮಾಣದಲ್ಲಿ ಸಾಲ ಮಾಡಿದ್ದಾರೆ. ಧಮ್, ತಾಕತ್ತು ಇದ್ದರೇ ಸಿಎಂ ಸಿದ್ದರಾಮಯ್ಯ ರಾಜ್ಯದ ಮೇಲಿನ 5 ಲಕ್ಷ ಕೋಟಿ ರೂ. ಸಾಲ ತೀರಿಸಲು ಸ್ವಂತ ಹಣದಲ್ಲಿ ಅವರನ್ನು ಸನ್ಮಾನಿಸಿ ಅವರ ಪರವಾಗಿ ನಾವೇ ಜಯ-ಘೋಷಣೆಗಳು ಕೂಗುತ್ತೇವೆ ಎಂದು ಸವಾಲು ಹಾಕಿದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಶಾಸಕ ವಿ.ಸುನೀಲಕುಮಾರ, ವಿ.ಪ ಸದಸ್ಯ ಪಿ.ಎಚ್ .ಪೂಜಾರ, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಟಿ.ಪಾಟೀಲ, ಎಂ.ಡಿ.ಲಕ್ಷ್ಮೀ ನಾರಾಯಣ ಇದ್ದರು.



ಹಾವೇರಿ ವಿವಿಯ ಮೊದಲ ಘಟಿಕೋತ್ಸವ ಸಂಸದ ಬೊಮ್ಮಾಯಿ ಸೇರಿ ಮೂವರಿಗೆ ಗೌಡಾ

ಹಾವೇರಿ: ಇಲ್ಲಿನ ಕೆರಿಮತ್ತಿಹಳ್ಳಿಯಲ್ಲಿರುವ ಹಾವೇರಿ ವಿಶ್ವವಿದ್ಯಾಲಯದ ಮೊದಲ ಘಟಿಕೋತ್ಸವದ ನಿಮಿತ್ತ ಜಿಲ್ಲೆಯ ಮೂವರಿಗೆ ಗೌರವ ಡಾಕ್ಟರೇಟ್ ನೀಡಲು ಹಾವೇರಿ ವಿಶ್ವವಿದ್ಯಾಲಯ ನಿರ್ಧರಿಸಿದೆ.

ಶಿಕ್ಷಣ ಕ್ಷೇತ್ರದಿಂದ ಹುಕ್ಕೇರಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ಸಾಮಾಜಿಕ ಸೇವೆ ಕ್ಷೇತ್ರದಿಂದ ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ ಹಾಗೂ ಸಾಹಿತ್ಯ ಕ್ಷೇತ್ರದಿಂದ ಬಂಡಾಯ ಸಾಹಿತಿ ಸತೀಶ ಕುಲಕರ್ಣಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲು ಆಯ್ಕೆ ಮಾಡಲಾಗಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸುರೇಶ ಜಂಗಮಶೆಟ್ಟಿ ತಿಳಿಸಿದ್ದಾರೆ.







ಏ.6ರಂದು ಘಟಿಕೋತ್ಸವ: ಹಾವೇರಿ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ ಏ.6ರಂದು ಬೆಳಗ್ಗೆ 11 ಗಂಟೆಗೆ ಹಾವೇರಿ ನಗರದ ಜಿ.ಎಚ್. ಕಾಲೇಜು ಸಭಾಂಗಣದಲ್ಲಿ ಜರುಗಲಿದ್ದು, ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಅಧ್ಯಕ್ಷತೆ ವಹಿಸುವರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರು ಉಪಸ್ಥಿತರಿರುವರು. ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷರಾದ ಜಸ್ಟಿಸ್ ಡಾ.ಅಶೋಕ ಹಿಂಚಿಗೇರಿ ಅವರು ಘಟಿಕೋತ್ಸವ ಭಾಷಣ ಮಾಡುವರು.

ಬಿಜೆಪಿಯವರು ರೈತರ ಪರ ಕೆಲಸ ಮಾಡಿದ್ದು ತಿಳಿಸಲಿ: ಮುನಿಯಪ್ಪ

ಬಾಗಲಕೋಟೆ: ಯಡಿಯೂರಪ್ಪ, ಸದಾನಂದ ಗೌಡ, ಜಗದೀಶ ಶೆಟ್ಟರ, ಬಸವರಾಜ ಬೊಮ್ಮಾಯಿ, ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ರೈತರಪರ ಯಾವ ಕೆಲಸ ಮಾಡಿದ್ದಾರೆ ಎಂಬುದನ್ನು ತಿಳಿಸಬೇಕು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ ಸವಾಲು ಹಾಕಿದರು.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಕೊಟ್ಟರೆ ಸರ್ಕಾರ ದಿವಾಳಿಯಾಗುತ್ತೆ, ಅಭಿವೃದ್ಧಿಗೆ ದುಡ್ಡು ದೊರೆಯುವುದಿಲ್ಲ ಎಂದು ಹೇಳುತ್ತಾರೆ. ಆದರೆ, ನಮ್ಮ ಪಕ್ಷ ಗ್ಯಾರಂಟಿಯೊಂದಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯಂತ ಮಹತ್ವದ ಕೆಲಸವನ್ನು ಮಾಡಲು ಮುಂದಾಗಿದೆ. 50ಸಾವಿರ ಕೋಟಿ ಗ್ಯಾರಂಟಿ ಜೊತೆಯಲ್ಲಿಯೇ ಪ್ರತಿವರ್ಷ 1ಲಕ್ಷಕೋಟಿ ರೂ. ಅಭಿವೃದ್ಧಿಗೂ ನಮ್ಮ ಸರ್ಕಾರ ಹಣ ನೀಡುತ್ತಿದೆ ಎಂದು ಹೇಳಿದರು.

ಈಗ ಎದುರಾಗುತ್ತಿರುವ ಅಡುಗೆ ಅನಿಲ ಕೊರತೆಗೆ ಕೇಂದ್ರ ಸರ್ಕಾರದ ದೂರದೃಷ್ಟಿ ಕೊರತೆಯೇ ಕಾರಣ ಎಂದು ಮುನಿಯಪ್ಪ ಕೇಂದ್ರ ಸರ್ಕಾರವನ್ನು ಟೀಕಿಸಿದರು.

ಟ್ರಂಪ್‌ಇರಾನ್‌ಮೇಲೆಯುದ್ಧಸಾರಿದಾಗಲೇ ಕೇಂದ್ರ ಯುದ್ಧದ ಪರಿಣಾಮಗಳನ್ನು ಅರಿತು ಆಗಲೇ ರಷ್ಯಾದೊಂದಿಗೆ ಕಚ್ಚಾ ತೈಲ ಖರೀದಿಗೆ ಮುಂದಾಗಿದ್ದರೆ ಇಂತಹ ಸಮಸ್ಯೆ ಎದುರಾಗುತ್ತಿರಲಿಲ್ಲ ಎಂದು ಕೇಂದ್ರದ ನೀತಿಯ ವಿರುದ್ಧ ಅಸಮಾಧಾನ ಹೊರಹಾಕಿದರು.

ಮಾಜಿ ಸಚಿವ ಎಚ್.ಆಂಜನೇಯ ಮಾತನಾಡಿ, ಒಳ ಮೀಸಲಾತಿಯ ಬಗ್ಗೆ ಕೆಲ ಯುವಕರಲ್ಲಿ ಗೊಂದಲವಿದೆ. ಉದ್ಯೋಗ ಕ್ಷೇತ್ರವೊಂದನ್ನು ಹೊರತುಪಡಿಸಿ ಎಲ್ಲ ರಂಗದಲ್ಲೂ ಒಳಮೀಸಲಾತಿ ಜಾರಿಯಾಗಿದೆ. ಚುನಾವಣೆ ಬಳಿಕ ಈ ಬಗ್ಗೆ ಒಳ್ಳೆಯ ನಿರ್ಧಾರ ಕೈಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಗೆಲ್ಲಿಸಿದರೆ ಯಾವ ಲಾಭವೂ ಆಗುವುದಿಲ್ಲ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿದರೆ ಈ ಭಾಗಕ್ಕೆ ಸಿಎಂ ಅವರು ವಿಶೇಷ ಪ್ಯಾಕೇಜ್ ನೀಡುವ ಮೂಲಕ ಅಭಿವೃದ್ಧಿ ಕಾರ್ಯ ಕೈಗೊಳ್ಳಲಿದ್ದಾರೆ ಎಂದರು.

ಉಪಚುನಾವಣೆಯಲ್ಲಿ ಕಾಂಗ್ರೆಸ್ ಪರವಾದ ಅಲೆಯಿದೆ. ನಮ್ಮ ಅಭ್ಯರ್ಥಿ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರತಿ ಪೊಲೀಸ್ ಠಾಣೆಗಳಲ್ಲಿ ಜಿಮ್ ಮಾಲೀಕರ ಸಭೆ

ಜಿಮ್‌ಗಳಲ್ಲಿ ಸುರಕ್ಷತಾ ಕ್ರಮ ಕೈಗೊಳ್ಳಲು ಸೂಚನೆ

ಹುಬ್ಬಳ್ಳಿ: ಹುಬ್ಬಳ್ಳಿ ಧಾರವಾಡ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಬರುವ ಪ್ರತಿ ಪೊಲೀಸ್ ಠಾಣೆಗಳಿಗೆ ಜಿಮ್‌ಗಳ ಮಾಲೀಕರ ಕರೆಸಿ, ಸಭೆ ನಡೆಸಿದ ಪೊಲೀಸರು ಜಿಮ್‌ಗಳಲ್ಲಿ ನಿಯಮ ಪಾಲಿಸುವಂತೆ ಹಾಗೂ ಸುರಕ್ಷತಾ ಕ್ರಮಗಳ ಕೈಗೊಳ್ಳುವಂತೆ ಸೂಚಿಸಿದ್ದಾರೆ.

ಹುಬ್ಬಳ್ಳಿ ಧಾರವಾಡದಲ್ಲಿ ಜಿಮ್‌ಗಳು ಲವ್ ಜಿಹಾದ್ ಕೇಂದ್ರಗಳಾಗಿ ಮಾರ್ಪಾಡ ಆಗುತ್ತಿವೆ. ಮಹಿಳೆಯರಿಗೆ ರಕ್ಷಣೆ ಇಲ್ಲ ಎಂಬ ಹಿಂದು ಸಂಘಟನೆಗಳು ಹಾಗೂ ಸಾರ್ವಜನಿಕರು ಆರೋಪ ಮಾಡಿದ್ದರು. ಅಷ್ಟೇ ಅಲ್ಲದೇ ಶುಕ್ರವಾರ ಹುಬ್ಬಳ್ಳಿ ಹಾಗೂ ಇತ್ತೀಚೆಗೆ ಧಾರವಾಡದಲ್ಲಿ ಲವ್ ಜಿಹಾದ್ ಯತ್ನ ಮಾಡಿದ್ದಾರೆ ಆರೋಪಗಳು ಜಿಮ್ ತರಬೇತುದಾರರ ವಿರುದ್ಧ ಕೇಳಿ ಬಂದಿದ್ದವು.

ಈ ಹಿನ್ನೆಲೆ ಹೊಸದಿಗಂತ ಪತ್ರಿಕೆಯು ಶನಿವಾರ ಲವ್ ಜಿಹಾದ್ ಕೇಂದ್ರಗಳಾದ ಜಿಮ್ ಗಳು: ಆರೋಪ, ಮಹಿಳೆಯರಿಗೆ ನಗರದಲ್ಲಿನ ಜಿಮ್‌ಗಳು ಎಷ್ಟು ಸುರಕ್ಷಿತ? ಎಂಬ ಶೀರ್ಷಿಕೆ ಯಡಿ ವಿಶೇಷ ವರದಿ ಪ್ರಕಟಿಸಿತ್ತು. ಈ ಹಿನ್ನೆಲೆ ಎಚ್ಚೆತ್ತುಕೊಂಡಿರುವ ಪೊಲೀಸ್ ಇಲಾಖೆ ಜಿಮ್ ಗಳಲ್ಲಿ ಕಡ್ಡಾಯವಾಗಿ ನಿಯಮ ಪಾಲಿಸುವಂತೆ, ಸುರಕ್ಷತಾ ಕ್ರಮ ಕೈಗೊಳ್ಳುವಂತೆ ಜಿಮ್‌ಗಳ ಮಾಲೀಕರೊಂದಿಗೆ ಸಭೆ ಕರೆದು ಸೂಚಿಸಿದ್ದಾರೆ.

ಜಿಮ್‌ಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳು: ಮಹಿಳಾ ಸದಸ್ಯರು ಜಿಮ್‌ಗೆ ಆಗಮಿಸಿದರೆ ಅವರಿಗೆ ಪ್ರತ್ಯೇಕವಾಗಿ ಮಹಿಳಾ ತರಬೇತುದಾರರ ನೇಮಿಸಬೇಕು, ಕರ್ನಾಟಕ ಅಂಗಡಿಗಳ ಹಾಗೂ ವಾಣಿಜ್ಯ ಸಂಸ್ಥೆಗಳ ನಿಯಮಗಳ 1963 ರ ಅಡಿ ಎಲ್ಲಾ ಜಿಮ್ ಗಳು ಮಹಾನಗರ ಪಾಲಿಕೆಯಡಿ ನೋಂದಣಿ ಮಾಡಿಸಿ, ಲೈಸೆನ್ಸ್ ಪಡೆಯಬೇಕು. ಜಿಮ್ ಗಳಲ್ಲಿ ಸಿಸಿಟಿವಿ ಕ್ಯಾಮೆರಾ ಕಡ್ಡಾಯವಾಗಿ ಅಳವಡಿಸಬೇಕು, ಕನಿಷ್ಠ ಆರು ತಿಂಗಳಗಳ ಡಿವಿಆರ್ ವಿಡಿಯೋ ಬ್ಯಾಕಪ್ ಇಟ್ಟುಕೊಳ್ಳುವುದು, ಜಿಮ್ ಸದಸ್ಯರ ನೋಂದಣಿ ಮಾಡಿಸುವುದು, ಅಪರಿಚಿತರು ಜಿಮ್‌ಗೆ ಬರುವ ಮಹಿಳೆಯರ ಫೋಟೋ ಹಾಗೂ ವಿಡಿಯೋ ಅನುಮತಿ ಇಲ್ಲದ ತೆಗೆಯದಂತೆ ನಿರ್ಬಂಧಿಸುವುದು, 20 ಲಕ್ಷಕ್ಕೂ ಹೆಚ್ಚು ವಹಿವಾಟು ನಡೆದರೆ ಜಿಎಸ್‌ಟಿ ನೋಂದಣಿ ಮಾಡಿಸುವುದು ಸೇರಿದಂತೆ ಇನ್ನಿತರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಿದ್ದಾರೆ.



ಲವ್ ಜಿಹಾದ್ ಕೇಂದ್ರಗಳಾದ ಜಿಮ್‌ಗಳು: ಆರೋಪ

ಮಹಿಳೆಯರಿಗೆ ನಗರದಲ್ಲಿನ ಜಿಮ್‌ಗಳು ಎಷ್ಟು ಸುರಕ್ಷಿತ?



ಈ ಕುರಿತು ಹೊಸದಿಗಂತ ಏ.4 ರಂದು ವರದಿ ಪ್ರಕಟಿಸಿದ್ದು ಉಲ್ಲೇಖನೀಯ.

> ಪೊಲೀಸರು ಸಭೆ ಮಾಡಿ ನಿಮಯ ಪಾಲಿಸಲು ಹಾಗೂ ಸುರಕ್ಷತಾ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ. ಜಿಮ್ ಗಳಲ್ಲಿ ಸುರಕ್ಷತಾ ಕ್ರಮಗಳ ಕೈಗೊಳ್ಳುವುದು ನಮ್ಮ ಕರ್ತವ್ಯವಾಗಿದೆ.
> ■ ಸುನೀಲ್ ಜಂಗಾನಿ , ಎಬಿಸಿ ಫಿಟ್ನೆಸ್ ಜಿಮ್ ಮಾಲೀಕ

> ಜಿಮ್‌ಗಳ ಮಾಲೀಕರ ಠಾಣೆಗಳಿಗೆ ಕರೆಸಿ ಸಭೆ ಮಾಡಿ ಕಡ್ಡಾಯವಾಗಿ ನಿಯಮ ಪಾಲಿಸುವಂತೆ ಹಾಗೂ ಸುರಕ್ಷತಾ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.
> ■ ಶೃತಿ ಎನ್. ಡಿಸಿಪಿ ಕಾನೂನು ಸುವ್ಯವಸ್ಥೆ

ಗೋವುಗಳ ಸಾಗಾಟಕ್ಕೆ ಗ್ರಾಮಸ್ಥರ ತಡೆ: ಕಳ್ಳರು ಪರಾರಿ

ಭಟ್ಕಳ: ಇಲ್ಲಿಯ ಜಾಲಿ ಪಟ್ಟಣ ಪಂಚಾಯತ್ ವ್ಯಾಪ್ತಿಯ ತಲಗೇರಿಯ ವಿವೇಕಾನಂದ ನಗರದಲ್ಲಿ ಶನಿವಾರ ಬೆಳಗಿನ ಜಾವ ಗೋ ಕಳ್ಳರ ಅಟ್ಟಹಾಸಕ್ಕೆ ಸಾರ್ವಜನಿಕರೇ ತಡೆ ಒಡ್ಡಿದ್ದು, ಜಾನುವಾರು ಸಹಿತ ಕಾರನ್ನು ವಶಪಡಿಸಿಕೊಳ್ಳಲಾಗಿದೆ. ಗೋಕಳ್ಳರು ಸ್ಥಳದಿಂದ ಪರಾರಿಯಾದ ಘಟನೆ ನಡೆದಿದೆ.

ಏ.4ರಂದು ಬೆಳಗಿನ ಜಾವ 3.45 ಗಂಟೆಯ ಸುಮಾರಿಗೆ ಬಿಳಿ ಬಣ್ಣದ ಸ್ವಿಫ್ಟ್ ಕಾರಿನಲ್ಲಿ ಗೋವನ್ನು ಹಿಂಸಾತ್ಮಕ ರೀತಿಯಲ್ಲಿ ಹಾಕಿ ಕಾಲುಗಳನ್ನು ಕಟ್ಟಿ ಹಗ್ಗವನ್ನು ಕುತ್ತಿಗೆಗೆ ಬಿಗಿದು ಇನ್ನೇನು ಕಾರು ಹೊರಡಬೇಕೆನ್ನುವಷ್ಟರಲ್ಲಿ ಗೋವುಗಳು ಕೂಗಿಕೊಂಡಿದ್ದು, ಗ್ರಾಮಸ್ಥರಿಗೆ ಕೇಳಿಸಿದೆ. ಏನಾಗಿದೆ ಎಂದು ಬಂದು ನೋಡುವಷ್ಟರಲ್ಲಿ ಕಾರು ಬಿಟ್ಟು ಗೋಕಳ್ಳರು ಪರಾರಿಯಾಗಿದ್ದಾರೆ.

ಅಷ್ಟರಲ್ಲಿ ಒಟ್ಟಾದ ಗ್ರಾಮಸ್ಥರು ಗೋವುಕಳ್ಳರನ್ನು ಪತ್ತೆ ಹಚ್ಚಲು ಪ್ರಯತ್ನಿಸುತ್ತಿರುವಾಗ ಪಕ್ಕದ ಅರಣ್ಯ ಪ್ರದೇಶದಲ್ಲಿ ಅವಿತು ಇನ್ನೊಂದು ಗ್ಯಾಂಗ್‌ನ್ನು ಕರೆಯಿಸಿಕೊಂಡು ಪರಾರಿಯಾಗುವ ಹಂತದಲ್ಲಿರುವಾಗ ಗ್ರಾಮಸ್ಥರು ಪೊಲೀಸರಿಗೆ ಕರೆ ಮಾಡಿ ಬರುವಷ್ಟರಲ್ಲಿ ಗೋ ಕಳ್ಳರ ತಂಡ ಕಾರು ಹಾಗೂ ತಾವು ತಂದಿದ್ದ ಬೈಕ್ ಬಿಟ್ಟು ಪರಾರಿಯಾಗಿದ್ದಾರೆ.



ಪೊಲೀಸರು ಕಾರನ್ನು ಪರಿಶೀಲಿಸಿದಾಗ ಕಾರಿನ ಒಳಗೊಂದು ನಂಬರ್ ಪ್ಲೇಟ್ ಪತ್ತೆಯಾಗಿದ್ದು, ಇದು ನಿರಂತರವಾಗಿ ಗೋವು ಕಳವು ಮಾಡುವ ಗ್ಯಾಂಗ್‌ನ ಕೃತ್ಯ ಎನ್ನುವುದು ಸಾಬೀತಾಗುತ್ತದೆ ಎಂದು ಗ್ರಾಮಸ್ಥರು ದೂರಿದ್ದಾರೆ. ಪ್ರೀತಿಯಿಂದ ಗೋವುಗಳನ್ನು ಈ ರೀತಿಯಾಗಿ ಕದ್ದೊಯ್ದು ಹತ್ಯೆ ಮಾಡುವುದರ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಸಾರ್ವಜನಿಕರು ಗೋಕಳ್ಳರಿಗೆ ಕಠಿಣ ಶಿಕ್ಷೆಯಾಗಬೇಕು, ಪೊಲೀಸರು ರಾತ್ರಿ ಗಸ್ತನ್ನು ಹೆಚ್ಚಿಸಿ ಇಂತಹ ಕೃತ್ಯವನ್ನು ತಡೆಯಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲಿಸಿದ್ದು, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲೂ ಸಹ ಗೋ ಕಳ್ಳರನ್ನು ಪತ್ತೆ ಹಚ್ಚಿ ಬಂಧಿಸಬೇಕೆಂಬ ಆಗ್ರಹ ಕೇಳಿ ಬಂದಿದೆ.

ಪ್ರವಾಸಿ ತಾಣಕ್ಕೆ ಪ್ರವಾಸಿಗರ ದಂಡು

ಗೋಕರ್ಣ: ಅಡುಗೆ ಅನಿಲದ ಅಭಾವ, ಪೆಟ್ರೋಲ್ ಕೊರತೆ ಭೀತಿಯ ನಡುವೆಯು ವಾರಾಂತ್ಯದ ರಜೆಗೆ ಪ್ರವಾಸಿ ತಾಣಕ್ಕೆ ಪ್ರವಾಸಿಗರ ದಂಡೆ ಹರಿದು ಬರುತ್ತಿದೆ.

ಶುಕ್ರವಾರ ಸಂಜೆಯಿಂದಲೇ ಪ್ರವಾಸಿಗರು ಆಗಮಿಸುತ್ತಿದ್ದು, ಶನಿವಾರ ಮತ್ತಷ್ಟು ಹೆಚ್ಚಾಗಿದೆ. ಇಲ್ಲಿನ ಬಹುತೇಕ ಹೊಟೇಲ್‌ನವರು ವಾಣಿಜ್ಯ ಸಿಲಿಂಡರ್ ಸಿಗದೆ ತೊಂದರೆ ಅನುಭವಿಸುತ್ತಿದ್ದು, ಹಲವರು ಬಂದ್ ಮಾಡಿದ್ದಾರೆ. ಕೆಲವರು ಕಟ್ಟಿಗೆ ಒಲೆ ಮತ್ತಿತರ ಬದಲಿ ವ್ಯವಸ್ಥೆಯೊಂದಿಗೆ ಊಟ ಮತ್ತಿತರ ಸಿಮೀತ ತಿಂಡಿ ತಿನಿಸುಗಳನ್ನ ತಯಾರಿಸುತ್ತಿದ್ದಾರೆ. ಆದರೆ, ಜನ ಪ್ರವಾಹ ಹೆಚ್ಚಾದರೆ ಅಗತ್ಯಕ್ಕೆ ತಕ್ಕಂತೆ ಆಹಾರ ತಯಾರಿಕೆಗೆ ತೊಡಕಾಗಬಹುದು ಎನ್ನಲಾಗಿದೆ.

ಓಂ, ಕುಡ್ಲೆ, ಮುಖ್ಯ ಕಡಲತೀರ, ದುಬ್ಬನಸಶಿ ಕಡಲತೀರ ಹಾಗೂ ಪೇಟೆ ಭಾಗದ ವಸತಿ ಗೃಹಗಳು ಭರ್ತಿಯಾಗಿದೆ. ಹೀಗೆ ಜನಜಂಗುಳಿಗೆ ತಕ್ಕಂತೆ ಹೊಟೇಲ್‌ನವರಿಗೆ ಆಹಾರ ತಯಾರಿಕೆಯೂ ಸವಾಲಾಗಲಿದೆ.

ವಾಹನ ದಟ್ಟಣೆ: ಇಲ್ಲಿನ ಎಲ್ಲಾ ಪ್ರಮುಖ ಮಾರ್ಗದಲ್ಲಿ ವಾಹನ ದಟ್ಟಣೆ ಉಂಟಾಗಿದ್ದು, ಪಾದಾಚಾರಿಗಳು ಸಂಚರಿಸಲು ತೊಡಕಾಗುತ್ತಿದೆ. ಪ್ರವಾಸಿಗರ ವಾಹನಗಳಿಗೆ ಇಂಧನ ಭರ್ತಿಗೆ ಪೆಟ್ರೋಲ್ ಬಂಕ್‌ಗಳಲ್ಲಿ ಸರದಿ ಸಾಲು ನೆರೆದಿದೆ. ಪ್ರಸ್ತುತ ಪೆಟ್ರೋಲ್, ಡೀಸೆಲ್‌ಗಳ ಸಾಕಷ್ಟು ಸಂಗ್ರಹವಿದ್ದು ಯಾವುದೇ ತೊಂದರೆಯಾಗಿಲ್ಲ, ಇದರಂತೆ ಸಿ.ಎನ್.ಜಿ ಇಂಧನ ಸಹ ಸಂಗ್ರಹವಿದೆ. 2500 ಲೀಟರ್‌ಗೂ ಹೆಚ್ಚು ಪೆಟ್ರೋಲ್, ಮೂರುಸಾವಿರಕ್ಕೂ ಅಧಿಕ ಡಿಸೇಲ್ ಪ್ರತಿ ವಾರಂತ್ಯದ ರಜೆ ಸಮಯದಲ್ಲಿ ಖಾಲಿಯಾಗುತ್ತಿತ್ತು. ಹಾಲಿ ಇದೇ ಪ್ರಮಾಣದಲ್ಲಿ ದಾಸ್ತಾನು ಇದೆ. ಆದರೆ, ಇದೇ ರೀತಿ ಮತ್ತೆರಡು ದಿನ ಪ್ರವಾಸಿಗರು ಹೆಚ್ಚಾದರೆ ಅಭಾವವಾಗುವ ಸಾಧ್ಯತೆಯಿದೆ.



ಮಕ್ಕಳಿಗೆ ಪರೀಕ್ಷೆಗಳು ಮುಗಿದಿರುವುದರಿಂದ ಕುಟುಂಬ ಸಮೇತರಾಗಿ ಇಲ್ಲಿನ ಪ್ರಮುಖ ಮಂದಿರಗಳಿಗೆ ಭೇಟಿ ನೀಡುವ ಭಕ್ತರು ಹೆಚ್ಚಾಗಿದ್ದಾರೆ. ಮಹಾಗಣಪತಿ, ಮಹಾಬಲೇಶ್ವರ ಮಂದಿರದಲ್ಲಿ ದೇವರ ದರ್ಶನಕ್ಕೆ ಸರದಿ ಸಾಲೇ ನೆರದಿದೆ. ಮಹಾಬಲೇಶ್ವರ ಮಂದಿರದ ಅಮೃತಾನ್ನ ಪ್ರಸಾದ ಭೋಜನ ಶಾಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಭಕ್ತರು ಪ್ರಸಾದ ಸ್ವೀಕರಿಸುತ್ತಿದ್ದಾರೆ.

ಬಹುತೇಕ ವಿದೇಶಿ ಪ್ರವಾಸಿಗರು ತಮ್ಮ ದೇಶಕ್ಕೆ ಮರಳಿದ್ದು, ಬೆರಳೆಣಿಕೆಯ ವಿದೇಶಿಗರು ಇದ್ದಾರೆ. ಪ್ರತಿ ವರ್ಷ ಇಲ್ಲಿಗೆ ಭೇಟಿ ನೀಡುವ ವಿದೇಶಿಗರು ಮಾರ್ಚ, ಏಪ್ರಿಲ್ ತಿಂಗಳಲ್ಲಿ ವಾಪಸ್ ಆಗುವ ಸಮಯವಾಗಿದ್ದು, ಅದರಂತೆ ಈ ವರ್ಷವು ಸ್ವದೇಶಕ್ಕೆ ತೆರಳಿದ್ದಾರೆ.

ಜಾನುವಾರು ಸಂತೆಗೆ ಜೀವಕಳೆ | ಎತ್ತುಗಳಿಗೆ ಎಲ್ಲಿಲ್ಲದ ಬೇಡಿಕೆ


ಜಾನುವಾರು ಮಾರಾಟ ಬಲು ಜೋರು

▸ ರುದ್ರಗೌಡ ಪಾಟೀಲ

ಗದಗ: ಮುಂಗಾರು ಹಂಗಾಮು ಆರಂಭವಾದರೆ ಸಾಕು ನಗರದ ಎಪಿಎಂಸಿ ಆವರಣದಲ್ಲಿರುವ ಜಾನುವಾರು ಸಂತೆಗೆ ಮತ್ತೆ ಜೀವಕಳೆ ಬಂದಂತಾಗಿದೆ. ಅದರಲ್ಲೂ ಮುಂಗಾರು ಪೂರ್ವ ಮಳೆ ಆದರೆ ಸಾಕು ರೈತರ ಜೀವನಾಡಿ ಎತ್ತುಗಳಿಗೆ ಎಲ್ಲಿಲ್ಲದ ಬೇಡಿಕೆ ಬಂದಿದೆ.

ರೈತರಜೀವನಾಡಿ ಎತ್ತುಗಳಿಗೆ ಹೇಳಿಕೊಳ್ಳುವ ಬೇಡಿಕೆ ಮತ್ತು ಬೆಲೆ ಇಲ್ಲದಂತಾಗಿತ್ತು. ಆದರೆ, ಪ್ರಸಕ್ತ ವರ್ಷ ಮುಂಗಾರು ಆರಂಭಕ್ಕೂ ಮುನ್ನ ಮಳೆರಾಯ ದರ್ಶನ ನೀಡಿದ ಹಿನ್ನೆಲೆಯಲ್ಲಿ ರೈತರ ಮುಖದಲ್ಲಿ ಮತ್ತೆ ಮಂದಹಾಸ ಮೂಡಿದಂತಾಗಿದೆ. ಹೀಗಾಗಿ ಎತ್ತುಗಳ ವ್ಯಾಪಾರ ಜೋರಾಗಿ ನಡೆಯುತ್ತಿದೆ.

ಕೃಷಿ ಚಟುವಟಿಕೆಗೆ ಎತ್ತುಗಳೇ ಜೀವಾಳ: ಆಧುನಿಕ ಯುಗದಲ್ಲಿ ಸಹ ಟ್ರ್ಯಾಕ್ಟರ್ ಹಾಗೂ ಹಲವಾರು ಯಂತ್ರಗಳ ಬಳಕೆ ಮಾಡುವ ಸಂದರ್ಭದಲ್ಲಿಯೂ ರೈತರ ಆಪ್ತಮಿತ್ರ ಎತ್ತುಗಳ ಬೇಡಿಕೆ ಕಡಿಮೆಯಾಗಿಲ್ಲ, ಹೆಚ್ಚು ಜಮೀನು ಹೊಂದಿದವರು ಮಾತ್ರ ಟ್ರ್ಯಾಕ್ಟರ್‌ಗಳ ಮೊರೆ ಹೋಗುತ್ತಾರೆ. ಆದರೆ, ಕಡಿಮೆ ಜಮೀನು ಇರುವವರು ಎತ್ತುಗಳ ಮೂಲಕ ಉಳುಮೆ ಮಾಡುತ್ತಾರೆ. ಕೆಲವು ಭಾಗದಲ್ಲಿ ಟ್ರ್ಯಾಕ್ಟರ್‌ಗಳು ಇದ್ದರು ಸಹ ಎತ್ತುಗಳ ಮೂಲಕ ಬಿತ್ತನೆ ಮಾಡಿ ದರೆ ಉತ್ತಮ ಫಸಲು ಬರುತ್ತದೆ ಎಂಬುದು ರೈತರ ಅಭಿಪ್ರಾಯವಾಗಿದೆ. ತಂತ್ರಜ್ಞಾನ ಎಷ್ಟೇ ಮುಂದುವರಿದರು ಎತ್ತುಗಳ ಬೇಡಿಕೆ ಕಡಿಮೆಯಾಗುವುದಿಲ್ಲ ಎನ್ನುತ್ತಾರೆ ರೈತರು.



ಪ್ರತಿ ಜೋಡಿ ಎತ್ತುಗಳ ಪರೀಕ್ಷೆ: ಜಾನುವಾರು ಸಂತೆ ಅಂದರೆ ಸಾಕು ಅಲ್ಲಿ ವಿವಿಧ ಎತ್ತುಗಳ ಜೋಡಿಗಳನ್ನು ಕಾಣಬಹುದು. ಸಂತೆಯಲ್ಲಿ ದಲ್ಲಾಲರು ರೈತರು ಇಷ್ಟ ಪಟ್ಟ ಎತ್ತುಗಳನ್ನು ಪರೀಕ್ಷೆ ಮಾಡುತ್ತಾರೆ. ಎತ್ತುಗಳ ಹಲ್ಲು, ಕಾಲು, ಅಂಗಾಗಳ ಪರೀಕ್ಷೆ ಮಾಡಲಾಗುತ್ತದೆ. ಚಕ್ಕಡಿಗೆ ಎತ್ತುಗಳನ್ನು ಹೂಡಿ ನಾಲ್ಕು ಮಂದಿ ಚಕ್ಕಡಿಯಲ್ಲಿ ಕುಳಿತು ಅವುಗಳ ಪರೀಕ್ಷೆ ಮಾಡುತ್ತಾರೆ. ನಂತರ ಎತ್ತು ಖರೀದಿಸಲು ರೈತರು ಮುಂದಾಗುತ್ತಾರೆ.

ಪಳಗಿದ ಎತ್ತುಗಳ ಹುಡುಕಾಟ: ನೂರಾರು ಸಂಖ್ಯೆಯಲ್ಲಿ ಎತ್ತುಗಳು ನಗರದ ಸಂತೆಗೆ ಆಗಮಿಸಿದ್ದ ಪರಿಣಾಮ ಯಾವ ಎತ್ತುಗಳನ್ನು ಖರೀದಿ ಮಾಡಬೇಕು, ಯಾವುಗಳನ್ನು ಬಿಡಬೇಕು ಎಂಬ ಗೊಂದಲದಲ್ಲಿ ರೈತರು ಮುಳುಗಿದ್ದರು. ಒಂದು ಜೊತೆ ಎತ್ತುಗಳ ಬೆಲೆ ಬರೋಬ್ಬರಿ 50 ಸಾವಿರದಿಂದ 1ಲಕ್ಷ 50 ಸಾವಿರ ರೂ. ವರೆಗೂ ಮಾರಾಟವಾಗುತ್ತಿದೆ.

ವಿವಿಧ ಸಲಕರಣೆ ಮಾರಾಟ: ನಗರದ ಎಪಿಎಂಸಿ ಆವರಣದಲ್ಲಿ ನಡೆಯುತ್ತಿರುವ ಜಾನುವಾರ ಸಂತೆಯಲ್ಲಿ ಎತ್ತುಗಳಿಗೆ ಬೇಕಾದ ವಿವಿಧ ರೀರಿಯ ಹಗ್ಗಾ, ಗಂಟೆ, ಬಾರಕೋಲ, ಕರಿ ದಾರ ಸೇರಿದಂತೆ ವಿವಿಧ ವಸ್ತುಗಳ ಮಾರಾಟ ಜೋರಾಗಿತ್ತು. ಹಾಗೆ ಜಾನುವಾರ ಸಂತೆಯಲ್ಲಿ ಬಿಸಿಲಿನಿಂದ ಜೋಡಿ ಎತ್ತುಗಳ ಸಾಕಷ್ಟು ಕಷ್ಟ ಪಡುತ್ತದೆ. ಹೀಗಾಗಿ ಎಪಿಎಂಸಿ ಆವರಣದಲ್ಲಿ ಎತ್ತುಗಳಿಗೆ ನೆರಳಿನ ವ್ಯವಸ್ಥೆ ಮಾಡಲು ಅವಕಾಶ ಮಾಡಬೇಕು ಎಂದು ಮಾಲೀಕರು ಒತ್ತಾಯಿಸಿದ್ದಾರೆ.

> ನಮ್ಮ ಜಮೀನಿನಲ್ಲಿ ಎತ್ತುಗಳ ಮೂಲಕವೇ ಉಳುಮೆ ಕಾರ್ಯ ಮಾಡಿ ಉತ್ತಮ ಬೆಳೆ ತೆಗೆಯುತ್ತಿದ್ದೇವೆ. ನಗರದ ಜಾನುವಾರ ಸಂತೆಯಲ್ಲಿ ಉತ್ತಮ ತಳಿಯ ಎತ್ತುಗಳನ್ನು ಖರೀದಿ ಮಾಡಲು ಬಂದಿದ್ದೇವೆ. ಕೃಷಿ ಚಟುವಟಿಕೆ ಚುರುಕುಗೊಂಡ ಹಿನ್ನೆಲೆಯಲ್ಲಿ ಉಳುಮೆ ಎತ್ತುಗಳಿಗೆ ಬೇಡಿಕೆ ಹೆಚ್ಚಾಗಿದೆ. ಉತ್ತಮ ತಳಿಯ ಎತ್ತುಗಳಿಗೆ ದುಬಾರಿ ಬೆಲೆ ಕೊಟ್ಟು ಖರೀದಿ ಮಾಡುತ್ತಿದ್ದೇವೆ.
> ■ ಹನುಮಂತ ಹೊನ್ನೂರ, ರೈತ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ನಾಳೆ ವಿದ್ಯುತ್ ವ್ಯತ್ಯಯ

ಕಾರವಾರ: ಕಾರವಾರ ಉಪವಿಭಾಗದ ವ್ಯಾಪ್ತಿಯಲ್ಲಿ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಶಿರವಾಡ ಫೀಡರಿನ ವಿವಿಧ ಪ್ರದೇಶಗಳಲ್ಲಿ ಏ.6ರಂದು ಬೆಳಗ್ಗೆ 9.30 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ, ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ರಾಷ್ಟ್ರೀಯ ಜಲಸಾರಿಗೆ ದಿನಾಚರಣೆ

ಕಾರವಾರ: 63ನೇ ರಾಷ್ಟ್ರೀಯ ಜಲಸಾರಿಗೆ ದಿನಾಚರಣೆ ಕಾರ್ಯಕ್ರಮ ಏ.5 ರಂದು ಬೆಳಗ್ಗೆ 11 ಗಂಟೆಗೆ ಕಾರವಾರದ ಕರ್ನಾಟಕ ಜಲಸಾರಿಗೆ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಽಕಾರಿಗಳ ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಭಾಗವಹಿಸಲಿದ್ದು, ಕರ್ನಾಟಕ ಜಲಸಾರಿಗೆ ಮಂಡಳಿಯ ಮುಖ್ಯ ಕಾರ್ಯನಿರ್ವಾಣಾಧಿಕಾರಿ ಬಾಲಚಂದ್ರ ಹೆಚ್.ಸಿ. ಅಧ್ಯಕ್ಷತೆ ವಹಿಸಲಿದ್ದಾರೆ.ಗ್ರಾಸಿಮ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಘಟಕ ಮುಖ್ಯಸ್ಥ ಕುಶ್ ಶರ್ಮಾ, ಕ್ಯಾಸೆಲ್ ಎಕ್ಸ್‌ಪೋರ್ಟ್ಸ್ ಪ್ರೈ.ಲಿಮಿಟೆಡ್ ನಿರ್ದೇಶಕ ಪ್ರಹ್ಲಾದ ರೆಡ್ಡಿ, ಬಂದರು ಅಧಿಕಾರಿ ಕ್ಯಾಪ್ಟನ್ ಜೋಸೆಫ್ ಮಿಲ್ರಾಯ್ ಫೆಲಿಕ್ಸ್ ಮೊರೇಸ್, ಕರ್ನಾಟಕ ಜಲಸಾರಿಗೆ ಮಂಡಳಿ ನಿರ್ದೇಶಕ ಸುವರ್ಣ ದೊಡ್ಡಮನಿ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ಕಚೇರಿ ಉದ್ಘಾಟಿಸಿದ ಶಾಸಕ ಸತೀಶ್ ಸೈಲ್



ಕಾರವಾರ: ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಆಡ್ವೈಟೈಸಿಂಗ್ ಲಿಮಿಟೆಡ್ ಕಾರವಾರ ಶಾಖಾ ಕಚೇರಿಯನ್ನು ಶನಿವಾರ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಆಡ್ವೈಟೈಸಿಂಗ್ ಲಿಮಿಟೆಡ್ ಅಧ್ಯಕ್ಷ ಹಾಗೂ ಶಾಸಕ ಸತೀಶ್ ಸೈಲ್ ಉದ್ಘಾಟಿಸಿದರು.ನಂತರ ಮಾತನಾಡಿದ ಅವರು, ರಾಜ್ಯಾದ್ಯಂತ ಹಲವು ಜಿಲ್ಲೆಗಳಲ್ಲಿ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಆಡ್ವೈಟೈಸಿಂಗ್ ಲಿಮಿಟೆಡ್ ಶಾಖೆಯನ್ನು ಒಳಗೊಂಡಿದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಿ ಅಧಿಕೃತವಾಗಿ ಕಚೇರಿ ಮಾಡಬೇಕು ಎಂಬ ಉದ್ದೇಶದಿಂದ ಇಂದು ಕಾರವಾರದಲ್ಲಿ 15 ನೇ ಶಾಖಾ ಕಚೇರಿಯನ್ನು ಆರಂಭಿಸಲಾಗಿದೆ. ಈ ಸಂಸ್ಥೆಯ ಮೂಲಕ ಜಾಹೀರಾತುಗಳನ್ನು ಪ್ರಕಟಿಸಲಾಗುತ್ತದೆ. ಕರಾವಳಿ ಉತ್ಸವ, ಹಂಪಿ ಉತ್ಸವ ಸೇರಿದಂತೆ ರಾಜ್ಯದಲ್ಲಿ ಪ್ರಮುಖ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಂಸ್ಥೆಯು ಆಯೋಜಿಸಿದ್ದು, ಸಂಸ್ಥೆ ದಿನೇ ದಿನೇ ಅಭಿವೃದ್ಧಿಯ ಹೆಜ್ಜೆ ಇಡುತ್ತಿದ್ದು, ಹೆಮ್ಮರವಾಗಿ ಬೆಳೆಯುತ್ತಿದೆ ಎಂದರು. ಕಾರವಾರದಲ್ಲಿ ಸಂಸ್ಥೆಯ ಸ್ವಂತ ಕಟ್ಟಡ ನಿರ್ಮಾಣ ಮಾಡುವ ಉದ್ದೇಶದಿಂದ ಈಗಾಗಲೇ ಕರ್ನಾಟಕ ಹೌಸಿಂಗ್ ಬೋರ್ಡ್‌ಗೆ ಜಾಗಕ್ಕಾಗಿ ಅರ್ಜಿ ಸಲ್ಲಿಸಲಾಗಿದೆ. ಮುಂದಿನ ದಿನಗಳಲ್ಲಿ ಸ್ವಂತ ಕಟ್ಟಡವನ್ನು ನಿರ್ಮಿಸಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಕೆಎಂಸಿಎ ಯ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಶಾಖೆಯ ಮ್ಯಾನೇಜರ್ ರಾಘವೇಂದ್ರ ಶಾಸ್ತ್ರಿ, ಸಿಬ್ಬಂದಿಗಳು ಮತ್ತಿತರರು ಉಪಸ್ಥಿತರಿದ್ದರು.



ಸಿದ್ದಾಪುರ: ತಾಲೂಕಿನ ಹಾರ್ಸಿಕಟ್ಟಾ ಸಮೀಪದ ಹೊಸಗದ್ದೆಯ ಸರಸ್ವತಿ ನಿಲಯದ ಆವಾರಣಲ್ಲಿ ಶುಕ್ರವಾರ ಸರಸ್ವತಿ ಕಲಾಟ್ರಸ್ಟ್‌ನ 5ನೇ ವರ್ಷದ ವಾರ್ಷಿಕೋತ್ಸವ, ಗೌರವ ಸನ್ಮಾನ ಹಾಗೂ ಯಕ್ಷಗಾನ ಪ್ರದರ್ಶನ ನಡೆಯಿತು.



ಸಿದ್ದಾಪುರ: ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಯುವ ರೆಡ್ ಕ್ರಾಸ್, ರೋವರ್ಸ್ ಮತ್ತು ರೇಂಜರ್ಸ್ ಘಟಕಗಳು ಹಾಗೂ ತಾಲೂಕು ಸರ್ಕಾರಿ ಆಸ್ಪತ್ರೆಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರವು ಯಶಸ್ವಿಯಾಗಿ ಜರುಗಿತು.

ಯಕ್ಷಗಾನ ಕಲಾವಿದರ ಕೊಡುಗೆ ಅಪಾರ

ಸಿದ್ದಾಪುರ: ಯಕ್ಷಗಾನ ಕಲಾವಿದರ ಮಾತಿನ ಶೈಲಿ, ಶಬ್ದ ಪ್ರಯೋಗಗಳು ಅತ್ಯಂತ ಪ್ರೌಢವಾಗಿರುತ್ತವೆ. ಗ್ರಾಮೀಣ ಭಾಗದಲ್ಲಿ ಸಂಸ್ಕೃತಿ, ಸಂಸ್ಕಾರ ಉಳಿದುಕೊಂಡು ಬರಲು ಯಕ್ಷಗಾನ ಕಲೆಯ ಕೊಡುಗೆಯೂ ಗಣನೀಯವಾದುದು. ಯಕ್ಷಗಾನವನ್ನು ಆರಾಧಿಸುವುದರೊಂದಿಗೆ ಅದರ ಮಹತ್ವವನ್ನು ಮುಂದಿನ ಪೀಳಿಗೆಗೆ ತಿಳಿಸಿಕೊಡುವ ಕಾರ್ಯ ಅನೇಕ ಕಡೆ ಆಗುತ್ತಿರುವುದು ಸಂತಸದಾಯಕ ಎಂದು ಸಿದ್ದಾಪುರ ಶಿಕ್ಷಣ ಪ್ರಸಾರಕ ಸಮಿತಿ ಅಧ್ಯಕ್ಷ ಡಾ.ಶಶಿಭೂಷಣ ಹೆಗಡೆ ದೊಡ್ಮನೆ ಹೇಳಿದರು. ತಾಲೂಕಿನ ಹಾರ್ಸಿಕಟ್ಟಾ ಸಮೀಪದ ಹೊಸಗದ್ದೆಯ ಸರಸ್ವತಿ ನಿಲಯದ ಆವಾರಣಲ್ಲಿ ಶುಕ್ರವಾರ ಸರಸ್ವತಿ ಕಲಾಟ್ರಸ್ಟ್‌ನ 5ನೇ ವರ್ಷದ ವಾರ್ಷಿಕೋತ್ಸವ, ಗೌರವ ಸನ್ಮಾನ ಹಾಗೂ ಯಕ್ಷಗಾನ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು. ಕಾರ್ಯಕ್ರಮ ಸಂಘಟಕರಾದ ಹೊಸಗದ್ದೆಯ ಪಿ.ವಿ.ಹೆಗಡೆ ಅವರು ಓರ್ವ ಶ್ರಮಜೀವಿಯಾಗಿ ಯಕ್ಷಗಾನ ಕಲೆಯನ್ನು ಆರಾಧಿಸುತ್ತ ಬರುತ್ತಿರುವುದು ಮಾದರಿಯಾಗಿದೆ. ಇಂತವರ ಕಲಾಸೇವೆಯಿಂದಲೇ ಕಲಾಪ್ರಕಾರಗಳು ಜೀವಂತವಾಗಿವೆ ಎಂದು ಹೇಳಿದರು.ಅಧ್ಯಕ್ಷತೆ ವಹಿಸಿ ಮಾತನಾಡಿದ ರಾಜ್ಯಪ್ರಶಸ್ತಿ ಪುರಸ್ಕೃತ ಹಿರಿಯ ಯಕ್ಷಗಾನ ಕಲಾವಿದ ಗೋಡೆ ನಾರಾಯಣ ಹೆಗಡೆ ಮಾತನಾಡಿದರು.ಸನ್ಮಾನ: ಸಿದ್ದಾಪುರ ಟಿಎಂಎಸ್ ಅಧ್ಯಕ್ಷ ಆರ್.ಎಂ.ಹೆಗಡೆ ಬಾಳೇಸರ ಹಾಗೂ ಹಿರಿಯ ಯಕ್ಷಗಾನ ಭಾಗವತ ಮಂಜುನಾಥ ಪರಮೇಶ್ವರ ಹೆಗಡೆ ಉಲ್ಲಾಳಗದ್ದೆ ಅವರಿಗೆ ಗೌರವ ಸನ್ಮಾನ ಹಾಗೂ ಉದಯೋನ್ಮುಖ ಕಲಾವಿದ ಶ್ರೀವತ್ಸ ಹೆಗಡೆ ಗುಡ್ಡೆದಿಂಬ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.



ಸಿದ್ದಾಪುರ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಿಸಿ ಟ್ರಸ್ಟ್ ಸಿದ್ದಾಪುರ ಇದರ ಕಚೇರಿ ವ್ಯಾಪ್ತಿಯ 50 ವಾತ್ಸಲ್ಯ ಫಲಾನುಭವಿಗಳಿಗೆ ಶುಕ್ರವಾರ ಮಾತೃಶ್ರೀ ಹೇಮಾವತಿ ಅಮ್ಮನವರ ಹುಟ್ಟು ಹಬ್ಬದ ಪ್ರಯುಕ್ತ ಹಣ್ಣು ಹಂಪಲನ್ನು ವಿತರಿಸಿ ಮಾಸಾಶನ ಫಲಾನುಭವಿ ಯೋಗಕ್ಷೇಮ ವಿಚಾರಿಸಲಾಯಿತು. ತಾಲೂಕು ಯೋಜನಾಧಿಕಾರಿ ಗಿರೀಶ ಜೆ.ಪಿ., ವಲಯದ ಮೇಲ್ವಿಚಾರಕರು, ಕೃಷಿ ಮೇಲ್ವಿಚಾರಕರು, ಜ್ಞಾನ ವಿಕಾಸ ಸಮನ್ವಯಾಧಿಕಾರಿಗಳು, ಸೇವಾ ಪ್ರತಿನಿಧಿಗಳು ಇದ್ದರು.

ಜನಸ್ಪಂದನಾ ಕಾರ್ಯಕ್ರಮ | ಶಾಸಕ ಸತೀಶ ಸೈಲ್ ಹೇಳಿಕೆ

ಸಾರ್ವಜನಿಕ ಸಮಸ್ಯೆಗೆ ಶೀಘ್ರ ಪರಿಹಾರ

ಕಾರವಾರ: ಸಾರ್ವಜನಿಕರು ಕೆಲಸ ಕಾರ್ಯಗಳಿಗೆ ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ಹೊಗಲಾಡಿಸಿ, ಶೀಘ್ರದಲ್ಲಿ ಅವರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಜನಸ್ಪಂದನಾ ಕಾರ್ಯಕ್ರಮದ ಮೂಲಕ ಸಾಧ್ಯವಾಗಲಿದೆ ಎಂದು ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಆಡ್ವೈಟೈಸಿಂಗ್ ಲಿಮಿಟೆಡ್ ಅಧ್ಯಕ್ಷ ಹಾಗೂ ಶಾಸಕ ಸತೀಶ್ ಸೈಲ್ ಹೇಳಿದರು.

ಅವರು ಶನಿವಾರ ತಾಲೂಕು ಆಡಳಿತ, ತಾಪಂ, ಹಾಗೂ ವಿವಿಧ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಚಿತ್ತಾಕುಲಾ ಗ್ರಾಮ ಪಂಚಾಯತಿಯಲ್ಲಿ ನಡೆದ, ಜನಸ್ಪಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಳೆಗಾಲದಲ್ಲಿ ರೋಗಗಳು ಹರಡುವ ಸಾಧ್ಯತೆ ಹೆಚ್ಚಾಗಿದ್ದು, ಸಾರ್ವಜನಿಕರ ಅನುಕೂಲಕ್ಕಾಗಿ ಅಗತ್ಯ ಪ್ರಮಾಣದಲ್ಲಿ ಔಷಧಿ ದಾಸ್ತಾನು ಮಾಡಿಕೊಳ್ಳುವಂತೆ ಮತ್ತು ಆಂಬುಲೇನ್ಸ್‌ಗಳನ್ನು ಸುಸಜ್ಜಿತವಾಗಿಟ್ಟುಕೊಳ್ಳುವಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ ಅವರು ನಾಯಿಗಳಿಂದ ರೇಬಿಸ್ ರೋಗಗಳು ಹರಡುವ ಸಾಧ್ಯತೆ ಹೆಚ್ಚಾಗಿದ್ದು, ನಾಯಿಗಳಿಗೆ ಸಂತಾನಹರಣ ಮತ್ತು ರೇಬಿಸ್ ವ್ಯಾಕ್ಸಿನೇಶನ್ ನೀಡಬೇಕು ಎಂದು ಪಶುಪಾಲನಾ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕಿನಲ್ಲಿ ಬಸ್‌ಗಳ ಕೊರತೆಯ ಸಮಸ್ಯೆ ಕೇಳಿ ಬರುತ್ತಿದ್ದು, ಬಿಇಒ, ಶಾಲೆಯ ಮುಖ್ಯೋಪಧ್ಯಾಯರು, ಪಿಡಿಒ, ವಾಕರಸಾ ಸಂಸ್ಥೆ ಅಧಿಕಾರಿಗಳು ಜಂಟಿಸಭೆ ನಡೆಸಿ ಶಾಲಾ ಮಕ್ಕಳಿಗೆ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಬಸ್ ಸಂಚಾರ ಮಾಡುವಂತೆ ವ್ಯವಸ್ಥೆ ಮಾಡಿ, ಬಸ್‌ಗಳ ಕೊರತೆ ಇದ್ದಲ್ಲಿ ತಮ್ಮ ಗಮನಕ್ಕೆ ತರುವಂತೆ ವಾಕರಸಾ ಸಂಸ್ಥೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಮುಸ್ಲಿಂ ಮೀನುಗಾರರೊಬ್ಬರು ಮಾತನಾಡಿ, ಹಲವು ವರ್ಷಗಳಿಂದ 100 ಕ್ಕೂ ಹೆಚ್ಚು ಮುಸ್ಲಿಂ ಕುಟುಂಬದವರು ಮೀನುಗಾರಿಕೆ ಮಾಡುಕೊಂಡು ಬರುತ್ತಿದ್ದು, ನಮಗೆ ಸರ್ಕಾರದಿಂದ ದೊರೆಯುವ ಯಾವುದೇ ಸೌಲಭ್ಯವಾಗಲಿ ದೊರೆಯುತ್ತಿಲ್ಲ ಹಾಗೂ ಸಹಕಾರ ಸಂಘಗಳಲ್ಲಿ, ಸೊಸೈಟಿಯಲ್ಲಿ ಹೆಸರನ್ನು ನೋಂದಣಿ ಮಾಡಿಕೊಳುತ್ತಿಲ್ಲ ಎಂದರು. ಈ ಕುರಿತಂತೆ ಪ್ರತಿಕ್ರಿಯಿಸಿದ ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕ ಪ್ರತೀಕ್ ಶೆಟ್ಟಿ, ಈಗಾಗಲೇ ಹೊಸದಾಗಿ ಸೊಸೈಟಿ ಸ್ಥಾಪಿಸಲು ಅರ್ಜಿ ಬಂದಿದ್ದು, ಕೂಡಲೇ ಅವರನ್ನು ಸೊಸೈಟಿಯಲ್ಲಿ ನೋಂದಣಿ ಮಾಡಿಕೊಳ್ಳಲಾಗುವುದು,ಸರ್ಕಾರದಿಂದಮೀನುಗಾರರಿಗೆ ಪ್ರೋತ್ಸಾಹ ನೀಡುತ್ತಿದ್ದು, ವ್ಯಾಪಾರ ಮಾಡಲು ಸಬ್ಸಿಡಿ ವಾಹನಗಳು, ಮೀನು ಕೃಷಿಗೆ ಸಾಲ, ಮಹಿಳೆಯರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ. ಮೀನುಗಾರಿಕೆ ತೆರಳಿ ಮೃತ ಪಟ್ಟರೆ ಸಂಕಷ್ಟ ಪರಿಹಾರ ಮೊತ್ತ ರೂ.10 ಲಕ್ಷ ನೀಡಲಾಗುತ್ತದೆ ಹಾಗೂ ಅಂಗವಿಕಲತೆ ಹೊಂದಿದವರಿಗೆ 4 ಲಕ್ಷ ಪರಿಹಾರ ನೀಡಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಽಕಾರಿ ವೀರನಗೌಡ ಪಿ. ಏನಗಗೌಡರ, ತಹಶಿಲ್ದಾರರು ನಿಶ್ಚಲ್ ನರೋನಾ, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ರವಿ ನಾಯ್ಕ, ತಾಲೂಕು ಮಟ್ಟದ ಅಧಿಕಾರಿಗಳು, ಸಾರ್ವಜನಿಕರು ಮತ್ತಿತರರು ಭಾಗವಹಿಸಿದ್ದರು.



ಅಧಿಕಾರಿಗಳಿಗೆ ಸೂಚನೆ

ಸದಾಶಿವಗಡದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಇರುವ ಸ್ಕ್ರಾಪ್ ಅಂಗಡಿಗಳಿಂದ ಇಡೀ ಸದಾಶಿವಗಡವೇ ಸ್ವಚ್ಛತೆವಿಲ್ಲವೆಂಬಂತೆ ಭಾಸವಾಗುತ್ತಿದ್ದು, ಕೂಡಲೇ ಅಂಗಡಿ ಮಾಲೀಕರಿಗೆ ಕಾಪೌಂಡ್ ನಿರ್ಮಿಸಿಕೊಂಡು ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಸೂಚಿಸಿ ಇಲ್ಲವಾದ್ದಲ್ಲಿ, ನೋಟಿಸ್ ನೀಡಿ ಬಂದ್ ಮಾಡಿಸುವಂತೆ ಪಿಡಿಒ ಮತ್ತು ಪೊಲೀಸ್ ಇಲಾಖೆಗೆ ಸೂಚಿಸಿದರು.

ದೂರು ಸ್ವೀಕಾರ

ಬೀದಿ ದೀಪ ಅಳಡಿಸುವ ಬಗ್ಗೆ, ರಸ್ತೆ, ಚರಂಡಿ ದುರಸ್ತಿ, ಸ್ಮಶಾನ ಅಭಿವೃದ್ಧಿ, ಖಾಯಂ ವೈದ್ಯರ ನೇಮಕಾತಿ, ಪಿಡಿಒ ನೇಮಕಾತಿ, ಕೆರೆ ಅಭಿವೃದ್ಧಿ, ಅಪಘಾತಕ್ಕೆ ಕಾರಣವಾಗುವ ಮರಗಳ ತೆರವು, ಬಸ್ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ, ಅಂಗನವಾಡಿ ಕಟ್ಟಡ ನಿರ್ಮಾಣ, ಮೀನು ಮಾರುಕಟ್ಟೆ ಅಭಿವೃದ್ಧಿ ಇತರೆ ಸಮಸ್ಯೆಗಳ ಕುರಿತು ದೂರುಗಳನ್ನು ಸ್ವೀಕರಿಸಲಾಯಿತು.

ನಾಯಕತ್ವ ಗುಣ ಬೆಳವಣಿಗೆಗೆ ಕಲಿಕಾ ಶಿಬಿರ ಸಹಾಯಕ: ರೂಪಾಲಿ

ಅಂಕೋಲಾ: ವಿಶ್ವದ ಅತಿದೊಡ್ಡ ರಾಜಕೀಯ ಪಕ್ಷವಾಗಿ ಗುರುತಿಸಿಕೊಂಡಿರುವ ಭಾರತೀಯ ಜನತಾ ಪಕ್ಷಕ್ಕೆ ಕಾರ್ಯಕರ್ತರೇ ಅತಿ ದೊಡ್ಡ ಆಸ್ತಿಯಾಗಿದ್ದು, ಕಾರ್ಯಕರ್ತರಲ್ಲಿ ಜ್ಞಾನವನ್ನು ಹೆಚ್ಚಿಸಿ ರಾಷ್ಟ್ರಪ್ರೇಮ ಜಾಗೃತಗೊಳಿಸುವ ಮೂಲಕ ನಾಯಕತ್ವದ ಗುಣ ಬೆಳೆಸಿಕೊಳ್ಳುವ ದಿಶೆಯಲ್ಲಿ ಕಲಿಕಾ ಶಿಬಿರಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ ಹೇಳಿದರು.

ಭಾರತೀಯ ಜನತಾ ಪಕ್ಷ ಉತ್ತರ ಕನ್ನಡ ಜಿಲ್ಲಾ ಘಟಕದ ವತಿಯಿಂದ

ಪಂಡಿತ ದೀನ ದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾ ಅಭಿಯಾನದ ಪ್ರಯುಕ್ತ ಅಂಕೋಲಾ ಮಂಡಲದ ಕಾರ್ಯಕರ್ತರಿಗಾಗಿ ಅವರ್ಸಾದ ಕಾತ್ಯಾಯಿನಿ ಸಭಾಭವನದಲ್ಲಿ ಆಯೋಜಿಸಲಾಗಿರುವ ಎರಡು ದಿನಗಳ ಪ್ರಶಿಕ್ಷಣ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ತಳಮಟ್ಟದಿಂದ ನಡೆಯುವ ಪಕ್ಷ ಕಟ್ಟುವ ಕೆಲಸ ಪಕ್ಷದ ಸಿದ್ಧಾಂತಕ್ಕೆ

ಬದ್ಧವಾಗ ಶಿಸ್ತಿನಿಂದ ನಡೆಯಬೇಕು, ಉತ್ತಮ ಸಮಾಜವನ್ನು ರೂಪಿಸುವ ಜೊತೆಗೆ

ದೇಶವನ್ನು ಸುಭದ್ರ ಮತ್ತು ಸುರಕ್ಷಿತವಾಗಿರಿಸುವ ಜವಾಬ್ದಾರಿ ಭಾರತೀಯ ಜನತಾ ಪಕ್ಷದ ಪ್ರತಿ ಕಾರ್ಯಕರ್ತನದಾಗಿರಬೇಕು ಎಂದರು. ಪಕ್ಷದ ಸಾಧನೆ ಜನಸಾಮಾನ್ಯರಿಗೆ ತಲುಪಿಸುವ ಕೆಲಸ ತಳಮಟ್ಟದಿಂದ ನಡೆಯಬೇಕಿದ್ದು

ಪ್ರತಿಯೊಬ್ಬ ಕಾರ್ಯಕರ್ತರು ಆ ಕುರಿತು ಅರಿವು ಹೊಂದಿರಬೇಕು ಕಲಿಕಾ ಶಿಬಿರದಿಂದ ಕಾರ್ಯಕರ್ತರ ಸಾಮರ್ಥ್ಯ ಹೆಚ್ಚಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಬಿಜೆಪಿ ಪ್ರಭಾರ ಮಂಡಲಾಧ್ಯಕ್ಷ ಸಂಜಯ ನಾಯ್ಕ ಮಾತನಾಡಿ, ಭಾರತೀಯ ಜನತಾ ಪಕ್ಷ ಜನ ಸೇವೆಯ ಸಿದ್ಧಾಂತದ ಪಕ್ಷವಾಗಿದ್ದು ಕಾರ್ಯಕರ್ತರಲ್ಲಿ ಸೇವಾ ಮನೋಭಾವ ಹೆಚ್ಚಿಸಲು ಪ್ರಶಿಕ್ಷಣ ವರ್ಗ ಸಹಕಾರಿಯಾಗಿದೆ

ಕಲಿಕೆಯಿಂದ ಪಕ್ಷ ನಿಷ್ಠೆ, ಪ್ರಾಮಾಣಿಕತೆ ಹೆಚ್ಚಲಿದೆ ಎಂದರು.

ಮಂಡಲ ಪ್ರಭಾರಿ ಸುಬ್ರಾಯ ದೇವಾಡಿಗ, ಜಿಲ್ಲಾ ಕಾರ್ಯದರ್ಶಿ ನಿತ್ಯಾನಂದ ಗಾಂವಕರ, ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾಧ್ಯಕ್ಷ ರಾಜೇಂದ್ರ ನಾಯ್ಕ, ಮಾಧ್ಯಮ ಸಂಚಾಲಕ ಜಗದೀಶ ನಾಯಕ, ಪ್ರಕೋಷ್ಟ ಸಂಚಾಲಕ ರಾಘವೇಂದ್ರ ಭಟ್ಟ ಉಪಸ್ಥಿತರಿದ್ದರು. ಮಂಡಲ ಪ್ರಧಾನ ಕಾರ್ಯದರ್ಶಿ ಚಂದ್ರಕಾಂತ ನಾಯ್ಕ ಸ್ವಾಗತಿಸಿದರು, ಶ್ರೀಧರ ನಾಯ್ಕ ವಂದಿಸಿದರು.



ಕ್ಲಿನಿಕ್ ಮೇಲೆ ಕೆಪಿಎಮ್‌ಇ ಅಧಿಕಾರಿಗಳ ದಾಳಿ

ಮುಂಡಗೋಡ: ತಾಲೂಕಿನಲ್ಲಿ ಅನಧಿಕೃತವಾಗಿ ಕ್ಲಿನಿಕ್ ನಡೆಸುತ್ತಿದ್ದ ಕ್ಲಿನಿಕ್ ಮೇಲೆ ಕೆಪಿಎಮ್‌ಇ ಸಮಿತಿಯ ಅಧಿಕಾರಿಗಳ ತಂಡ ದಾಳಿ ನಡೆಸಿ ಕ್ಲಿನಿಕ್ ಮುಚ್ಚಿಸಿದ ಘಟನೆ ನಡೆದಿದೆ.

ಕೆಪಿಎಮ್ ಇ ಸಮಿತಿಯವರು ಮೊದಲು ಸಾಯಿ ಕ್ಲಿನಿಕ್ ಈ ಕ್ಲಿನಿಕ್‌ಗೆ ಭೇಟಿ ನೀಡಿದಾಗ ಆಯುಷ್ ಪದ್ಧತಿಯಲ್ಲಿ ಕೆಪಿಎಮ್‌ಇ ರಿಜಿಸ್ಟ್ರೇಷನ್ ಆಗಿದ್ದು, ಇಲ್ಲಿ ಡಾ.ಪ್ರವೀಣಾ ಬಿ.ಮೊರೆ ಇದ್ದರು ಅಧಿಕೃತವಾಗಿ ಪದವಿ ಪಡೆದ ವೈದ್ಯರು ಮಾತ್ರ ಕೆಪಿಎಮ್‌ಇ ನೋಂದಣಿ ಮಾಡಿಸಿ ಅವರಿಗೆ ಮಾತ್ರ ರೋಗಿಗಳಿಗೆ ಚಿಕಿತ್ಸೆ ನೀಡಲು ಅನುಮತಿ ನೀಡಬಹುದು. ಯಾವುದೇ ಅನಧಿಕೃತ ವ್ಯಕ್ತಿಗೆ ಚಿಕಿತ್ಸೆ ನೀಡಲು ಅವಕಾಶ ನೀಡಬಾರದು, ಇಲ್ಲವಾದರೆ ಕೆಪಿಎಮ್‌ಇ ರಿಜಿಸ್ಟ್ರೇಷನ್ನು ರದ್ದುಗೊಳಿಸುವುದಾಗಿ ನೋಟೀಸ್ ನೀಡಿ ಎಚ್ಚರಿಕೆ ನೀಡಿದರು. ಲೋಕನಾಥ ಪೈಲ್ಸ್ ಕ್ಲಿನಿಕ್‌ನ ಮೇಲೆ ದಾಳಿ ಮಾಡಿ ದಾಖಲೆ ಪರಿಶೀಲಿಸಿದಾಗ ಕೆಪಿಎಮ್‌ಇ ರಿಜಿಸ್ಟ್ರೇಷನ್ ಇಲ್ಲದಿರುವುದು ಕಂಡು ಬಂತು. ಬಿಇಎಮ್‌ಎಸ್ ಎಂಬ ಪದವಿ ಹೊಂದಿದ ವ್ಯಕ್ತಿ ಡಾ.ಕೃಷ್ಣಾ ಎಂಬುವವನು ಪೈಲ್ಸ್ ಚಿಕಿತ್ಸೆ ಮಾಡುತ್ತಿದ್ದರು. ಅಲೋಪತಿ ಮೆಡಿಸಿನ್, ಅವಧಿ ಮುಗಿದ ಮೆಡಿಸಿನ್, ರಕ್ತ ಸೋಂಕಿದ ಕಾಟನ್ ಸ್ವಾಬ್‌ಗಳನ್ನು ಬಿಎಮ್‌ಡಬ್ಲ್ಯೂ ನಿರ್ವಹಿಸದೇ ತೆರೆದ ಡಸ್ಟಬಿನ್ ತುಂಬಿಸಿ ಇಟ್ಟಿರುವುದು ಕಂಡು ಬಂತು. ಈ ಬಗ್ಗೆ ಅಧಿಕಾರಿಗಳು ಪ್ರಶ್ನಿಸಿದಾಗ ಜೀವತ್ಯಾಜ್ಯ ವಸ್ತುಗಳನ್ನು ಪಪಂ ತ್ಯಾಜ್ಯ ವಿಲೇವಾರಿ ವಾಹನಕ್ಕೆ ಹಾಕುವುದಾಗಿ ಅವರು ತಿಳಿಸಿದರು. ಕೆಪಿಎಮ್‌ಇ ರಿಜಿಸ್ಟ್ರೇಷನ್ ಏಕೆ ಆಗಿಲ್ಲ ವೆಂದಾಗ ಬಿಇಎಮ್‌ಎಸ್ ಪದವಿ ಹೊಂದಿದವರು ಕೆಪಿಎಮ್‌ಇ ಮಾಡಬಾರದೆಂದು ಕೋರ್ಟ್ ಆದೇಶ ಇದೆ ಎಂದು ಉಡಾಫೆ ಉತ್ತರ ನೀಡಿದ್ದಾರೆ. ಇವೆಲ್ಲಾ ಗಂಭೀರ ಪ್ರಕರಣಗಳಾಗಿದ್ದು ಕೆಪಿಎಮ.ಇ ರಿಜಿಸ್ಟ್ರೇಷನ್ ಆಗುವವರೆಗೆ ಕ್ಲಿನಿಕ್ ಅನ್ನು ಬಂದ್ ಮಾಡಲು ಸೂಚಿಸಲಾಯಿತು ಎಂದು ಸಮಿತಿಯವರು ತಿಳಿಸಿದ್ದಾರೆ. ತಾಲೂಕಾ ವೈದ್ಯಾಧಿಕಾರಿ ಡಾ.ನರೇಂದ್ರ ಪವಾರ, ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಸ್ವರೂಪರಾಣಿ ಪಾಟೀಲ, ಡಾ.ಭರತ ಡಿ ಟಿ, ಆರೋಗ್ಯ ಕ್ಷೇತ್ರಾಧಿಕಾರಿ ಶ್ರೀಶೈಲ ಪಟ್ಟಣಶೆಟ್ಟಿ, ಪೊಲೀಸ ಸಿಬ್ಬಂದಿ ದಿನೇಶ್ ನಾಯ್ಕ ಇತರರು ಕಾರ್ಯಾಚರಣೆಯಲ್ಲಿದ್ದರು.

> **ತಾಲೂಕಿನಾದ್ಯಂತ ಅನಧಿಕೃತ ಕ್ಲಿನಿಕ್ ಬಹಳಷ್ಟು ಇವೆ. ವರ್ಷದಲ್ಲಿ ಒಂದೆರಡು ಬಾರಿ ಅಧಿಕಾರಿಗಳು ದಾಳಿ ಮಾಡಿ ನೋಟೀಸ್ ನೀಡಿ ಹೋಗುತ್ತಾರೆ. ಮತ್ತೇ ಎರಡ್ಮೂರು ದಿನದಲ್ಲಿಯೇ ತಮ್ಮ ಕ್ಲಿನಿಕ್ ತೆರೆದುಕೊಳ್ಳುತ್ತಾರೆ. ಹೀಗಾಗಿ ನಕಲಿ ಡಾಕ್ಟರ್, ಅನಧಿಕೃತ ಕ್ಲಿನಿಕ್ ಗಳನ್ನು ಅಧಿಕಾರಿಗಳ ಪತ್ತೆ ಹಚ್ಚಿ ಕಾನೂನು ಕ್ರಮ ಕೈಗೊಳ್ಳಬೇಕು.**
>
> ■ **ಕಿರಣ ಶೇರಖಾನಿ, ಪಪಂ ಮಾಜಿ ಅಧ್ಯಕ್ಷರು**



ಮೇ 16ರಿಂದ ಬೊಮ್ಮಯ್ಯ ದೇವರ, ಪರಿವಾರ ದೇವರುಗಳ ಬಂಡಿಹಬ್ಬ





ಅಂಕೋಲಾ: ತಾಲೂಕಿನ ಬಾಸಗೋಡ ಶ್ರೀಕ್ಷೇತ್ರ ಕೊಗ್ರೆಯ ಬೊಮ್ಮಯ್ಯ ದೇವರು ಮತ್ತು ಪರಿವಾರ ದೇವರುಗಳ ಬಂಡಿಹಬ್ಬ ಮೇ 16ರಂದು ಶನಿವಾರ ಮತ್ತು ಕಿರು ಬಂಡಿಹಬ್ಬ ಮೇ17 ರಂದು ಭಾನುವಾರ ನಡೆಯಲಿದೆ.

ನಾಲ್ಕು ದೇವರುಗಳ ಕಲಶಗಳ ಮೂಲಕ ಗುರುತಿಸಿಕೊಂಡಿರುವ ಕೊಗ್ರೆಯ ಗ್ರಾಮ ದೇವರುಗಳ ಬಂಡಿಹಬ್ಬದ ಪ್ರಕ್ರಿಯೆಗಳು ಮೇ 9ರಂದು ಸಾಸಿ ಹಾಕುವ ಮೂಲಕ ಆರಂಭವಾಗಲಿದ್ದು, ಮೇ 10ರಂದು ನಿಂತಲ್ಲಿ ಕಾಯಿ ಒಡೆಯುವುದು, ಮೇ 11ರಂದು ಆಡುಕಟ್ಟೆ ಸಂಪ್ರದಾಯ, ಮೇ 12ರಂದು ಹಿಚ್ಕಡದ ದೇವರನ್ನು ಕರೆಯುವುದು ,ಮೇ13 ಮತ್ತು ಮೇ 14ರಂದು ಆಡುಕಟ್ಟೆ , ಮೇ 15ರಂದು ಜಾಗ್ರ, ಹಗರಣ ನಡೆಯಲಿದೆ ದೇವರ ವಾರ್ಷಿಕ ಬಂಡಿಹಬ್ಬ ಕಾರ್ಯಕ್ರಮಕ್ಕೆ ಗ್ರಾಮಸ್ಥರು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗಬೇಕು ಎಂದು ಆಡಳಿತಾಧಿಕಾರಿ, ವೈವಾಟಿ ಗಾಂವಕಾರರು, ಗಾಂವಕಾರರು,ಗುನಗರು, ಬಿಡಗುನಗರು, ಕಟಗಿದಾರರು ಮತ್ತು ಗ್ರಾಮಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಕ್ಷೇತ್ರ ಕೊಗ್ರೆ ಬೊಮ್ಮಯ್ಯ ದೇವರು, ರಾಕೇಶ್ವರ ಹಾಗೂ ಬಂಡಾರ ದೇವರ ವರ್ದಂತಿ ಉತ್ಸವ ಏಪ್ರಿಲ್ 14ರಂದು ನಡೆಯಲಿದ್ದು, ಉತ್ಸವದ ಪ್ರಯುಕ್ತ ಮಧ್ಯಾಹ್ನ 12 ಗಂಟೆಗೆ ದೇವರ ಸನ್ನಿಧಿಯಲ್ಲಿ ಮಹಾಪೂಜೆ ನಂತರ ಅನ್ನಸಂತರ್ಪಣೆ ನಡೆಯಲಿದೆ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಯುವಜನತೆ ದುಶ್ಚಟಗಳಿಂದ ದೂರವಿರಲಿ

ಯಲ್ಲಾಪುರ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾತೃಭೂಮಿ ಸೇವಾ ಪ್ರತಿಷ್ಠಾನ ಹಾಗೂ ಪೊಲೀಸ್ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಮಾದಕ ವಸ್ತುಗಳ ವಿರೋಧಿ ಜಾಗೃತಿ ಅಭಿಯಾನ ನಡೆಯಿತು.

ಪಟ್ಟಣದ ಪ್ರಥಮ ದರ್ಜೆ ಕಾಲೇಜಿನಿಂದ ಆರಂಭವಾದ ಬೃಹತ್ ಜಾಗೃತಿ ಜಾಥಾ ಪ್ರಮುಖ ರಸ್ತೆಗಳ ಮೂಲಕ ಸಂಚರಿಸಿತು. ವಿದ್ಯಾರ್ಥಿಗಳು ಫಲಕಗಳನ್ನು ಹಿಡಿದು, ಘೋಷಣೆಗಳನ್ನು ಕೂಗುತ್ತಾ ಸಾರ್ವಜನಿಕರಲ್ಲಿ ಮಾದಕ ವ್ಯಸನ ಪಿಡುಗಿನ ಬಗ್ಗೆ ಜಾಗೃತಿ ಮೂಡಿಸಿದರು.

ಜಾಥಾದ ನಂತರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಆವರಣದಲ್ಲಿ ನಡೆದ ಸಮಾರೋಪದಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರಾಜಶೇಖರ ಮಾತನಾಡಿ, ಮಾದಕ ದ್ರವ್ಯಗಳ ಸೇವನೆಯು ಕೇವಲ ದೈಹಿಕ ಆರೋಗ್ಯವನ್ನು ಹಾಳು ಮಾಡುವುದಿಲ್ಲ, ಬದಲಾಗಿ ಕಾನೂನುಬಾಹಿರ ಚಟುವಟಿಕೆಗಳಿಗೆ ಎಡೆಮಾಡಿಕೊಟ್ಟು ವ್ಯಕ್ತಿಯ ಭವಿಷ್ಯವನ್ನೇ ಅಂಧಕಾರದಲ್ಲಿ ತಳ್ಳುತ್ತದೆ. ವಿದ್ಯಾರ್ಥಿಗಳು ಇಂತಹ ದುಶ್ಚಟಗಳಿಂದ ದೂರವಿದ್ದು, ತಮ್ಮ ಗುರಿಯತ್ತ ಗಮನಹರಿಸಬೇಕು ಎಂದರು.



ಮಾತೃಭೂಮಿ ಸೇವಾ ಪ್ರತಿಷ್ಠಾನದ ಸಂಸ್ಥಾಪಕ ಶ್ರೀರಂಗ ಕಟ್ಟಿ, ಅಧ್ಯಕ್ಷತೆ ವಹಿಸಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಆರ್.ಡಿ. ಜನಾರ್ದನ್ ಮಾತನಾಡಿದರು. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ. ರವಿ ಶೇಷಗಿರಿ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ರವಿ ಭಟ್, ಜಗನ್ನಾಥ ರೇವಣಕರ್ ಸಾಮಾಜಿಕ ಕಾರ್ಯಕರ್ತರು, ಕಾರ್ಯದರ್ಶಿ ಕೃಷ್ಣ ಭಟ್ ನಾಯಕನಕೆರೆ, ಪತ್ರಕರ್ತ ಕೆ.ಎಸ್.ಭಟ್ ಉಪಸ್ಥಿತರಿದ್ದರು. ಭಾಗಿರಥಿ ಪ್ರಾರ್ಥಿಸಿದರು, ಆಶಾ ನಾಯಕ್ ನಿರೂಪಿಸಿದರು.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ : ಡಾ.ಸಂಜು ನಾಯಕ



ಅಂಕೋಲಾ: ರೋಟರಿ ಕ್ಲಬ್ ಅಂಕೋಲಾ ರೂರಲ್ ಮತ್ತು ಶಾಂತಿನಿಕೇತನ ಟ್ರಸ್ಟ್ ಅಂಕೋಲಾ ವತಿಯಿಂದ ಶಾಂತಿ ದಂತ ಚಿಕಿತ್ಸಾಲಯದ ದಂತ ವೈದ್ಯ ಡಾ. ಸಂಜು ನಾಯಕ ಇವರು ಶೆಟಗೇರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ದಂತ ತಪಾಸಣೆ ಹಮ್ಮಿಕೊಂಡಿದ್ದರು. ಶಿಬಿರವನ್ನು ರೋಟರಿ ಅಧ್ಯಕ್ಷೆ ಪುಷ್ಪಲತಾ ನಾಯಕ ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿ, ಎಲ್ಲರೂ ತಮ್ಮ ಆರೋಗ್ಯ ರಕ್ಷಣೆಗೆ ಹೆಚ್ಚಿನ ಮಹತ್ವ ಕೊಡಬೇಕು ಎಂದರು.

ಎಲ್ಲಾ ವಿದ್ಯಾರ್ಥಿಗಳ ಹಲ್ಲನ್ನು ಉಚಿತವಾಗಿ ತಪಾಸಣೆ ಮಾಡಿದ ದಂತ ವೈದ್ಯ ಡಾ. ಸಂಜು ನಾಯಕ ಮಾತನಾಡಿ, ಹಲ್ಲಿನ ರಕ್ಷಣೆ ಚಿಕ್ಕವರಿರುವಾಗ ರೂಢಿ ಮಾಡಿಕೊಂಡರೆ ದೊಡ್ಡವರಾದ ಮೇಲೆ ಹಲ್ಲು ಹುಳುಕು ಆಗುವುದು ತಪ್ಪುತ್ತದೆ. ಹಲ್ಲಿನ ಮಹತ್ವ ಹಾಗೂ ರಕ್ಷಣೆಯ ಬಗ್ಗೆ ವಿಸ್ತಾರವಾಗಿ ತಿಳಿಸಿ ಹೇಳಿದರು. ಶಾಲೆಯ ಮುಖ್ಯೋಪಾಧ್ಯಾಪಕಿ ಪದ್ಮಾವತಿ ಸರ್ವರನ್ನು ಸ್ವಾಗತಿಸಿ ಧನ್ಯವಾದ ಹೇಳಿದರು.

ಈ ಸಂದರ್ಭದಲ್ಲಿ ಶಿಕ್ಷಕಿಯರಾದ ಮಂಗಲಾ, ದೀಪಾ ಮತ್ತು ಮಣಿಕಂಠ ಉಪಸ್ತಿತರಿದ್ದರು.

ಶ್ರೀವೆಂಕಟರಮಣ ದೇವರ ಉತ್ಸವ ಸಂಪನ್ನ

ಅಂಕೋಲಾ: ತಾಲೂಕಿನ ಬೇಳಾಬಂದರ್ ಹಳ್ಳದ ನೀರಿನಲ್ಲಿ ತಾಲೂಕಿನ ದೊಡ್ಡ ದೇವರು ಶ್ರೀವೆಂಕಟರಮಣ ದೇವರ ಉತ್ಸವ ಮೂರ್ತಿಯ ದೋಣಿ ವಿಹಾರ ನಡೆಸುವ ಮೂಲಕ ಅಂಕೋಲಾದ ಸುಪ್ರಸಿದ್ಧ ತೇರು ಉತ್ಸವ ಸಂಪನ್ನಗೊಂಡಿತು.

ದೇವರ ಸಣ್ಣ ತೇರು, ದೊಡ್ಡ ತೇರು ಉತ್ಸವ, ಮೃಗಬೇಟೆಯ ಸಾಂಪ್ರದಾಯಿಕ ವಿಧಿ ವಿಧಾನಗಳು ನೆರವೇರಿಸಿ ಮರುದಿನ ಪಲ್ಲಕಿಯಲ್ಲಿ ವಿರಾಜಮಾನವಾಗಿ ಬೇಳಾದ ಬಂದರು ಪ್ರದೇಶಕ್ಕೆಆಗಮಿಸಿದ ದೇವರ ಉತ್ಸವ ಮೂರ್ತಿಯನ್ನು ಸ್ಥಳೀಯ ಜನರು ಸ್ವಾಗತಿಸಿ ಪೂಜೆ ಸಲ್ಲಿಸಿದರು.

ಬಂದರಿನಲ್ಲಿ ತಳಿರು ತೋರಣಗಳಿಂದ ಅಲಂಕೃತ ದೋಣಿಯಲ್ಲಿ ದೇವರ ಉತ್ಸವ ಮೂರ್ತಿಯನ್ನು ಇರಿಸಿ ಹಳ್ಳದ ನೀರಿನಲ್ಲಿ ದೋಣಿ ವಿಹಾರ, ಜಲಕ್ರೀಡೆ ನಡೆಸಲಾಯಿತು.

ದೋಣಿಯಲ್ಲಿ ಗಾಬೀತಕೇಣಿಗೆ ಆಗಮಿಸಿದ ಉತ್ಸವ ಮೂರ್ತಿಯನ್ನು ಸ್ಥಳೀಯ ಗಾಬೀತ ಸಮಾಜದ ಜನರು ಸಂಭ್ರಮದಿಂದ ಬರಮಾಡಿಕೊಂಡು ಪೂಜೆ ಸಲ್ಲಿಸಿದರು. ದೇವಾಲಯದ ಅರ್ಚಕರು, ಆಡಳಿತ ಕಮಿಟಿಯ ಪ್ರಮುಖರು, ಭಕ್ತಾದಿಗಳು ಪಾಲ್ಗೊಂಡಿದ್ದರು.



ವೆಂಕಟೇಶ್ವರ ದೇವರಿಗೆ ವಿಶೇಷ ಪೂಜೆ



ಬನವಾಸಿ: ಕ್ಷೇತ್ರ ಮಂಜಗುಣಿ ಶ್ರೀ ವೆಂಕಟೇಶ್ವರ ದೇವರ ಜಾತ್ರಾ ದಿನ ಬನವಾಸಿ ದೈವಜ್ಞ ಸಮಾಜದವರಿಂದ ಪ್ರತಿ ವರ್ಷವು ಕೂಡ ಬನವಾಸಿ ಮಧುಕೇಶ್ವರ ದೇವಾಲಯದ ಆವರಣದಲ್ಲಿರುವ ವೆಂಕಟೇಶ್ವರ ದೇವರಿಗೆ ಪೂಜೆಯನ್ನು ಮಾಡುವ ಪದ್ಧತಿಯಂತೆ ಈ ವರ್ಷ ಕೂಡ ವಾರ್ಷಿಕ ಪೂಜೆ ಭಕ್ತಿ ಭಾವದಿಂದ ನೆರವೇರಿತು.

ಮಹಿಳಾ ಮಂಡಳಿ ಅಧ್ಯಕ್ಷೆ ಶೋಭಾ ಶೇಟ್ ಮತ್ತು ಶಶಿಧರ ಸಿ. ಶೇಟ್ ದಂಪತಿ ಪೂಜಾ ಯಜಮಾನಿಕೆ ವಹಿಸಿದ್ದರು. ವೆ. ಮೂ. ಶಶಿಧರ ತೋರಗಲ್ ಪೌರೋಹಿತ್ಯ ನಡೆಸಿಕೊಟ್ಟರು. ಬೆಳಗ್ಗೆ ವಿಶೇಷ ಅಭಿಷೇಕ, ಅಲಂಕಾರ ,ಮಹಾಮಂಗಳಾರತಿ, ಪ್ರಸಾದ ವಿತರಣೆ ನಡೆಯಿತು.

ಬನವಾಸಿ ದೈವಜ್ಞ ಸಮಾಜ, ಯುವಕ ಮಂಡಲ, ಮಹಿಳಾ ಮಂಡಳಿ ಅಧ್ಯಕ್ಷರು ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ವಿವಿಧ ಸಮಿತಿ ಹುದ್ದೆಗೆ ನವೀನ ಕಾಮತ್ ರಾಜೀನಾಮೆ

ದಾಂಡೇಲಿ: ಕೆನರಾ ವೆಲ್ಫೇರ್ ಟ್ರಸ್ಟ್ ಇದರ ದಾಂಡೇಲಿಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿರುವ ಜನತಾ ವಿದ್ಯಾಲಯ ಶಿಕ್ಷಣ ಸಂಸ್ಥೆಯ ಜನತಾ ವಿದ್ಯಾಲಯ ಪ್ರೌಢಶಾಲೆಯ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಹುದ್ದೆಗೆ ಹಾಗೂ ಜನತಾ ವಿದ್ಯಾಲಯ ಶಿಕ್ಷಣ ಸಂಸ್ಥೆಯ ಸುಧಾರಣಾ ಸಮಿತಿ ಹಾಗೂ ಕಾರ್ಯನಿರ್ವಹಣಾ ಸಮಿತಿಯ ಅಧ್ಯಕ್ಷ ಹುದ್ದೆಗೆ ನವೀನ ಕಾಮತ್ ಅವರು ರಾಜೀನಾಮೆಯನ್ನು ನೀಡಿದ್ದಾರೆ.



ಕಳೆದ ಹಲವಾರು ವರ್ಷಗಳಿಂದ ವಿವಿಧ ಸಮಿತಿಗಳ ಅಧ್ಯಕ್ಷರಾಗಿ ಶಾಲೆಯ ಹಾಗೂ ಶಿಕ್ಷಣ ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಗೆ ನವೀನ ಕಾಮತ್ ಅವರು ಅತ್ಯಂತ ಉತ್ಸಾಹದಿಂದ ಸೇವೆಯನ್ನು ಸಲ್ಲಿಸಿ ಶೈಕ್ಷಣಿಕ ಬದ್ಧತೆಯನ್ನು ಸಾದರಪಡಿಸಿದ್ದರು. ದಾಂಡೇಲಿಯ ಜನತಾ ವಿದ್ಯಾಲಯ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಹುದ್ದೆಯಿಂದ ರೀಟಾ ಡಯಾಸ್ ಅವರು ನಿರ್ಗಮಿಸಿದ ಕೆಲವೇ ದಿನಗಳೊಳಗೆ ನವೀನ ಕಾಮತ್ ಅವರು ವಿವಿಧ ಜವಾಬ್ದಾರಿಗಳಿಗೆ ರಾಜೀನಾಮೆಯನ್ನು ಸಲ್ಲಿಸಿದ್ದಾರೆ. ಜನತಾ ವಿದ್ಯಾಲಯ ಶಿಕ್ಷಣ ಸಂಸ್ಥೆಯ ಉನ್ನತಿಗಾಗಿ ನವೀನ ಕಾಮತ್ ಹಾಗೂ ರೀಟಾ ಡಯಾಸ್ ಅವರು ವಿಶೇಷ ಕಾಳಜಿಯಿಂದ ಸೇವೆ ಸಲ್ಲಿಸಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಕಿರುಸುದ್ದಿ

ಎಐಸಿಸಿ ವೀಕ್ಷಕರಾಗಿ ಮಾನೆ ನೇಮಕ

ಹಾನಗಲ್ಲ: ಇಲ್ಲಿನ ಶಾಸಕ ಶ್ರೀನಿವಾಸ ಮಾನೆ ಅವರು ಮುಂಬರುವ ತಮಿಳುನಾಡು ರಾಜ್ಯದ ವಿಧಾನಸಭೆ ಚುನಾವಣೆಗೆ ಎಐಸಿಸಿ ವೀಕ್ಷಕರಾಗಿ ನೇಮಕಗೊಂಡಿದ್ದಾರೆ. ಬೇರೆ, ಬೇರೆ ರಾಜ್ಯಗಳಲ್ಲಿ ನಡೆದ ಚುನಾವಣೆಯಲ್ಲಿ ಉತ್ತಮ ಕಾರ್ಯತಂತ್ರಗಳೊಂದಿಗೆ ಯಶಸ್ವಿಯಾದ ದೇಶದ 27 ನಾಯಕರ ಪಟ್ಟಿಯನ್ನು ಎಐಸಿಸಿ ಬಿಡುಗಡೆ ಮಾಡಿದ್ದು, ಈ ಪಟ್ಟಿಯಲ್ಲಿ ಶ್ರೀನಿವಾಸ ಮಾನೆ ಅವರೂ ಸಹ ಸ್ಥಾನ ಪಡೆದಿದ್ದಾರೆ. ಇತ್ತೀಚೆಗೆ ತಮಿಳುನಾಡು ರಾಜ್ಯದ ತಿರುವನೆಲ್ಲಿ ಪೂರ್ವ ಜಿಲ್ಲೆಯ ಕಾಂಗ್ರೆಸ್ ಜಿಲ್ಲಾಧ್ಯಕ್ಷರ ನೇಮಕದ ಸಂದರ್ಭದಲ್ಲಿ ಎಐಸಿಸಿ ವೀಕ್ಷಕರಾಗಿ ಕಾರ್ಯ ನಿರ್ವಹಿಸಿದ್ದರು.



ಏ. 10ಕ್ಕೆ ಉಚಿತ ಸರ್ವಧರ್ಮ ಸಾಮೂಹಿಕ ವಿವಾಹ

ಹಾವೇರಿ: ಕಾಗಿನೆಲೆ ಕನಕ ಗುರುಪೀಠದ ಹರಿಹರ ತಾಲೂಕಿನ ಬೆಳ್ಳೂಡಿ ಶಾಖಾ ಮಠದಲ್ಲಿ ಏ.10ರಂದು ಜಗದ್ಗುರು ಶ್ರೀ ರೇವಣಸಿದ್ದೇಶ್ವರ ಜಯಂತ್ಯುತ್ಸವ ಅಂಗವಾಗಿ ಅಂದು ಶ್ರೀಮಠದಿಂದ 45 ಜೋಡಿಗಳಿಗೆ ಉಚಿತ ಸಾಮೂಹಿಕ ವಿವಾಹ ಸಮಾರಂಭ ಜರುಗಲಿದೆ.

ಕನಕ ಗುರುಪೀಠದ ಬೆಳ್ಳೂಡಿ ಶಾಖಾ ಮಠದ ಎಲ್ಲ ಸಮಾರಂಭಕ್ಕೆ ಕನಕ ಗುರುಪೀಠದ ಪೀಠಾಧಿಪತಿಗಳಾದ ನಿರಂಜನಾನಂದಪುರಿ ಶ್ರೀಗಳು ಸಾನಿಧ್ಯ ವಹಿಸಲಿದ್ದು, ಅಂದು ನಡೆಯುವ ಕಾರ್ಯಕ್ರಮಕ್ಕೆ ನಾಡಿನ ವಿವಿಧ ಶಾಸಕರು, ಮಠಾಧೀಶರು, ಗಣ್ಯರು ಆಗಮಿಸಲಿದ್ದು, ಹಾವೇರಿ ಜಿಲ್ಲೆಯ ಕುರುಬ ಸಂಘದ ತಾಲೂಕಾ, ಜಿಲ್ಲಾ ಪದಾಧಿಕಾರಿಗಳು ಸಮಾಜದ ಬಂಧುಗಳು ಕನಕಾಭಿಮಾನಿಗಳು ಸಮಾರಂಭಕ್ಕೆ ಆಗಮಿಸಿ ಶ್ರೀಗಳ ಆಶೀರ್ವಾದ ಪಡೆದುಕೊಳ್ಳಬೇಕೆಂದು ಹಾವೇರಿ ಜಿಲ್ಲಾ ಕುರುಬ ಸಂಘದ ಜಿಲ್ಲಾಧ್ಯಕ್ಷ ನಾಗರಾಜ ಆನ್ವೇರಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹನುಮಂತಗೌಡ ಗಾಜೀಗೌಡ್ರ ಪ್ರಕಟಣೆಗೆ ತಿಳಿಸಿದ್ದಾರೆ.

ಇಂದು ಡಾ.ಬಾಬು ಜಗಜೀವನರಾಂ ಜನ್ಮ ದಿನಾಚರಣೆ

ಹಾವೇರಿ: ಡಾ.ಬಾಬು ಜಗಜೀವನರಾಂ ಅವರ 119ನೇ ಜನ್ಮ ದಿನಾಚರಣೆಯನ್ನು ಏಪ್ರಿಲ್ 5 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಡಾ.ಬಾಬು ಜಗಜೀವನರಾಮ್ ಅವರ ಭಾವಚಿತ್ರಕ್ಕೆ ಪೂಜೆ ಹಾಗೂ ಪುಷ್ಪಾರ್ಚಣೆ ಮಾಡುವ ಮೂಲಕ ಸಾಂಕೇತಿಕವಾಗಿ ಆಚರಿಸಲಾಗುವುದು. ಈ ಕಾರ್ಯಕ್ರಮದಲ್ಲಿ ಎಲ್ಲ ಸಮುದಾಯದ ಮುಖಂಡರು ಹಾಗೂ ಸಾರ್ವಜನಿಕರು ಭಾಗವಹಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ಸ್ಪರ್ಶಿಸಿ ವಿದ್ಯಾರ್ಥಿ ಸಾವು

ಬ್ಯಾಡಗಿ: ತಾಲೂಕಿನ ಹೊಸಶೀಡೆನೂರು ಗ್ರಾಮದ ಶಿಕ್ಷಕ ಅಶೋಕ್ ತೆವರಿ ಅವರ ಪುತ್ರ ಅಭಿಷೇಕ್ ತೆವರಿ (22) ಇಂಜಿನಿಯರಿಂಗ್ ಓದುತ್ತಿದ್ದ ವಿದ್ಯಾರ್ಥಿ ಕಳೆದ ಆರು ದಿನಗಳ ಹಿಂದೆ ಸಂಬಂಧಿಕರ ಮದುವೆಗೆ ಬಂದಿದ್ದನು. ಈ ವೇಳೆ ಮನೆಯಲ್ಲಿ ಮಧ್ಯಾಹ್ನ 12 ಗಂಟೆ ಸುಮಾರಿಗೆ ಹೊಸ ಮನೆಯಲ್ಲಿ ಫ್ಯಾನ್ ಜೋಡಿಸಲು ಹೋಗಿದ್ದ ವೇಳೆ ವಿದ್ಯುತ್ ಕಡಿತವಾಗಿದ್ದರಿಂದ ಯುಪಿಎಸ್ ಸಂಪರ್ಕಿಸಲು ಯತ್ನಿಸಿದ ವೇಳೆ ಯುಪಿಎಸ್ ಮುಖಾಂತರ ವಿದ್ಯುತ್ ಸ್ಪರ್ಶಿಸಿ ಸ್ಥಳದಲ್ಲಿಯೇ ಮೃತ ಪಟ್ಟಿರುತ್ತಾರೆ ಎಂದು ತಿಳಿದುಬಂದಿದೆ. ಮೃತರ ಸಾವಿನಲ್ಲಿ ಯಾವುದೇ ಅನುಮಾನವಿಲ್ಲ ಎಂದು ತಂದೆ ನೀಡಿದ ದೂರಿನಲ್ಲಿ ಉಲ್ಲೇಖಿಸಿದ್ದಾರೆ.



ಶವ ಪತ್ತೆ

ಹಾವೇರಿ: ಶಿಗ್ಗಾಂವ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಾರ್ಚ್ 5ರ ಮಧ್ಯರಾತ್ರಿ ಸಮಯದಲ್ಲಿ ರಸ್ತೆ ಮೇಲೆ ನಡೆದುಕೊಂಡು ಹೋಗುತ್ತಿದ್ದ 45 ರಿಂದ 55 ವರ್ಷದ ಪುರುಷನಿಗೆ ವಾಹನ ಚಾಲಕ ನಿರ್ಲಕ್ಷ್ಯತನದಿಂದ ವಾಹನ ಡಿಕ್ಕಿಹೊಡೆಸಿದ್ದು, ಅನಾಮಧೇಯ ವ್ಯಕ್ತಿ ಸ್ಥಳದಲ್ಲಿ ಮೃತಪಟ್ಟಿದ್ದು, ಮೃತ ವ್ಯಕ್ತಿಯ ಗುರುತು ಪತ್ತೆಯಾಗಿರುವುದಿಲ್ಲ. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಮೃತ ವ್ಯಕ್ತಿ 5.2 ಅಡಿ ಎತ್ತರ, ಗೋದಿಗೆಂಪು ಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಕೆಂಪು ಬಣ್ಣದ ತುಂಬು ತೋಳಿನ ಅಂಗಿ, ಅದರ ಕೆಳಗೆ ಇನ್ನೊಂದು ನಿಲಿ ಕರಿ, ಬಿಳಿ ಬಣ್ಣದ ಪಟ್ಟಿಗಳಿರುವ ಚೆಕ್ಸ್ ತುಂಬು ತೊಳಿನ ಅಂಗಿ ಧರಿಸಿದ್ದಾಗಿ ಶಿಗ್ಗಾಂವ ಪೊಲೀಸ್ ಠಾಣೆ ಪೊಲೀಸ್ ಇನ್ಸಪೆಕ್ಟರ್ ಅವರು ತಿಳಿಸಿದ್ದಾರೆ.



ಹಾವೇರಿ: ಭಗವಾನ್ ಶ್ರೀ 1008 ಮಹಾವೀರ ಜಯಂತಿ ಪ್ರಯುಕ್ತ ವೀಣಾ ಚಂದ್ರನಾಥ್ ಕಳಸೂರ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಹಾವೇರಿಯ ಶ್ರೀ ಶಕ್ತಿ ವೃದ್ಧಾಶ್ರಮದ ನಿವಾಸಿಗಳಿಗೆ ಸೀರೆ, ಪಂಜಿ. ಹಣ್ಣು, ಬಿಸ್ಕತ್ ಮುಂತಾದವುಗಳನ್ನು ವಿತರಿಸಲಾಯಿತು ಈ ಸಂದಭದಲ್ಲಿ ಚಂದ್ರನಾಥಕ ಕಳಸೂರ, ಸುನಿಧಿ ಪವನ ಕಳಸೂರ, ಧನಂಜಯ ಕಳಸೂರ ಈರಣ್ಣ ದುಂಡಣ್ಣನವರ ಇತರರು ಉಪಸ್ಥಿತರಿದ್ದರು.

ಸಡಗರದ ಚೌಡೇಶ್ವರಿ ಭೂತನಾಥೇಶ್ವರ ಜಾತ್ರಾ ಮಹೋತ್ಸವ

ಹಾನಗಲ್ಲ: ಇಲ್ಲಿನ ನವನಗರದ ಚೌಡೇಶ್ವರಿ ಭೂತನಾಥೇಶ್ವರ ಜಾತ್ರಾ ಮಹೋತ್ಸವ ಭಕ್ತರ ಸಂಭ್ರಮ, ಸಡಗರದಿಂದ ನಡೆಯಿತು. ಶಾಸಕ ಶ್ರೀನಿವಾಸ ಮಾನೆ ಭಾಗವಹಿಸಿ, ವಿಶೇಷ ಪೂಜೆ ಸಲ್ಲಿಸಿದರು. ಜಾತ್ರಾ ಮಹೋತ್ಸವಗಳು ಕೇವಲ ಧಾರ್ಮಿಕ ಆಚರಣೆಗಳಲ್ಲ. ನಮ್ಮ ಸಂಸ್ಕೃತಿ, ಜನಪದ ಪರಂಪರೆ ಮತ್ತು ಒಗ್ಗಟ್ಟಿನ ಸಂಕೇತಗಳಾಗಿವೆ. ಯುವ ಪೀಳಿಗೆ ನಮ್ಮ ಸಂಪ್ರದಾಯಗಳನ್ನು ಅರಿತು ಮುಂದಿನ ತಲೆಮಾರಿಗೆ ಸಾಗಿಸುವ ಜವಾಬ್ದಾರಿ ಪ್ರದರ್ಶಿಸಬೇಕಿದೆ. ಆಧುನಿಕತೆಯ ಪ್ರಭಾವ ಹೆಚ್ಚಿದ್ದರೂ ಸಹ ಇಂದಿಗೂ ಸಹ ಧಾರ್ಮಿಕ ಆಚರಣೆ, ಸಂಪ್ರದಾಯಗಳು ಜೀವಂತಾಗಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದು ಹೇಳಿದರು. ಪಂಚಗವ್ಯ ಕಲಶ ಪೂಜೆ, ಧರ್ಮ ಧ್ವಜಾರೋಹಣ, ಗಂಗಾಪೂಜೆ, ಅಭಿಷೇಕ, ಕಲಾವೃದ್ಧಿ ಹೋಮ ಸೇರಿದಂತೆ ನಾನಾ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಪುರಸಭೆ ಮಾಜಿ ಅಧ್ಯಕ್ಷ ಪರಶುರಾಮ ಖಂಡೂನವರ, ಮಾಜಿ ಉಪಾಧ್ಯಕ್ಷ ಮಹೇಶ ಪವಾಡಿ, ಮಾಜಿ ಸದಸ್ಯ ವಿರುಪಾಕ್ಷಪ್ಪ ಕಡಬಗೇರಿ, ಮುಖಂಡರಾದ ಗುರುರಾಜ ನಿಂಗೋಜಿ, ಆದರ್ಶ ಶೆಟ್ಟಿ, ಸುರೇಶ ನಾಗಣ್ಣನವರ, ಸಂತೋಷ ಸುಣಗಾರ, ರಾಜಕುಮಾರ ಶಿರಪಂಥಿ, ಉಮೇಶ ಮಾಳಗಿ, ಸುರೇಶ ಭದ್ರಾವತಿ, ಸೋಮು ವಡ್ಡರ, ನಾಗಪ್ಪ ವಡ್ಡರ, ಲೋಹಿತ್ ಜೋಗಿ, ವಿಶಾಲ ಬಾಬಜಿ, ಜಾಫರ್, ಪರಶುರಾಮ ಹರಿಜನ, ವೆಂಕಟೇಶ ಬೆಟಗೇರಿ, ಶರಣ ಹಾಲಗೊಲ್ಲರ, ಹನುಮಂತ ಆಲೆಮಾರಿ, ಪರಶುರಾಮ ಜೋಗಿ, ಆಕಾಶ ವಡ್ಡರ, ಸುರೇಶ ಭದ್ರಾವತಿ ಸೇರಿದಂತೆ ಇನ್ನೂ ಹಲವರು ಇದ್ದರು.



ಭಟ್ಕಳ: ಪಟ್ಟಣದ ಸಾಗರಸ್ತೆಯಲ್ಲಿ ಸುಮಾರು 5 ಕೋಟಿ ರೂ.ವೆಚ್ಚದಲ್ಲಿ ನಿರ್ಮಿಸಲಾಗುವ ಗುರುಭವನ ಕಟ್ಟಡದ ಶಂಕುಸ್ಥಾಪನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ.ಎಸ್ ವೈದ್ಯ ಶನಿವಾರ ಬೆಳಗ್ಗೆ ನೆರವೇರಿಸಿದರು. ತಾಲೂಕು ನೌಕರರ ಸಂಘದ ಅಧ್ಯಕ್ಷ ಎಂ.ಎನ್.ನಾಯ್ಕ, ಕಾರ್ಯದರ್ಶಿ ವೆಂಕಟೇಶ ನಾಯ್ಕ, ತಹಶೀಲ್ದಾರ್ ನಾಗೇಂದ್ರ ಕೋಳಶೆಟ್ಟಿ, ಕ್ಷೇತ್ರಶಿಕ್ಷಣಾಧಿಕಾರಿ ವೆಂಕಟೇಶ ನಾಯಕ, ಪಂಚಾಯತ್ ರಾಜ್ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಗಣೇಶ, ಕ್ಷೇತ್ರ ಸಂಪನ್ಮೂಲ ಅಧಿಕಾರಿ ಪೂರ್ಣಿಮಾ ಮೊಗೇರ, ಪ್ರೌಢಶಾಲೆ ಶಿಕ್ಷಕರ ಸಂಘ, ನೌಕರರ ಸಂಘದ ಪದಾಧಿಕಾರಿಗಳು, ಶಿಕ್ಷಕರು ಇದ್ದರು.

ಜನಗಣತಿ ಕಾರ್ಯಾಗಾರಕ್ಕೆ ಡಿಸಿ ಚಾಲನೆ

ಹಾವೇರಿ: ಇಲ್ಲಿನ ಹುಕ್ಕೇರಿಮಠದ ಶಾಲಾ ಆವರಣದಲ್ಲಿ ಜಿಲ್ಲಾಡಳಿತ, ತಾಲೂಕು ಆಡಳಿತ ಹಾಗೂ ನಗರಸಭೆ ವತಿಯಿಂದ ಭಾರತ ಜನಗಣತಿ-2027ಕ್ಕೆಸಂಬಂಧಿಸಿದಂತೆಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ಮೂರು ದಿನಗಳ ಕಾಲ ಹಮ್ಮಿಕೊಂಡಿರುವ ತರಬೇತಿ ಕಾರ್ಯಾಗಾರಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಕಾರ್ಯಾಗಾರಕ್ಕೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಮಾತನಾಡಿ, ಮೊದಲಹಂತದ ಜನಗಣತಿ ಏ.1ರಿಂದ ಮೇ15ರವರೆಗೆ ಜರುಗಲಿದೆ. ಸಾರ್ವಜನಿಕರು ನೀಡಿದ ಮಾಹಿತಿ ಗೌಪ್ಯವಾಗಿರುತ್ತದೆ ಹಾಗೂ ಯಾವುದೇ ಸೌಲಭ್ಯಗಳು ಕಡಿತವಾಗುವುದಿಲ್ಲ, ಹಾಗಾಗಿ ಸಾರ್ವಜನಿಕರು ಯಾವುದೇ ವದಂತಿಗಳಿಗೆ ಕಿವಿಗೊಡದೆ ನಿಖರ ಮಾಹಿತಿ ನೀಡಬೇಕು ಎಂದರು.



ಸರ್ಕಾರದ ವಿವಿಧ ಯೋಜನೆಗಳ ಜಾರಿಗೆ ಜನಸಂಖ್ಯೆ ಹಾಗೂ ಜನರ ಆರ್ಥಿಕ, ಸಾಮಾಜಿಕ ಸ್ಥಿತಿಗತಿ ಬಹಳ ಮುಖ್ಯವಾಗಿದೆ. ದೇಶದ ಅಭಿವೃದ್ಧಿ ಹಿತದೃಷ್ಟಿಯಿಂದ ಸಾರ್ವಜನಿಕರು ಸ್ವಯಂ ಪ್ರೇರಣೆಯಿಂದ ಜನಗಣತಿಯಲ್ಲಿ ಭಾಗವಹಿಸಬೇಕು ಎಂದರು.

ಈ ವೇಳೆ ತಹಶೀಲ್ದಾರ್ ಶರಣಮ್ಮ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್. ಪಾಟೀಲ, ಪೌರಾಯುಕ್ತ ಎಚ್. ಕಾಂತರಾಜ, ಗುತ್ತಲ ಪಪಂ ಮುಖ್ಯಾಧಿಕಾರಿ ದೇವಾನಂದ ನಾಯಕ ಇತರರಿದ್ದರು.

ದೇಶದ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಹಿರಿದು

ಭಟ್ಕಳ: ಪಟ್ಟಣದ ಸಾಗರ ರಸ್ತೆಯಲ್ಲಿರುವ ಗುರುವಿದ್ಯಾಧಿರಾಜ ಪಿಯು ಕಾಲೇಜಿನ ಸಭಾಂಗಣದಲ್ಲಿ ಸರ್ಕಾರಿ ನೌಕರರ ಸಂಘ ಮತ್ತು ಗುರುಭವನ ಸಮಿತಿಯ ವತಿಯಿಂದ ಏರ್ಪಡಿಸಲಾದ ಗುರುಭವನ ಶಂಕುಸ್ಥಾಪನೆ, ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ.ಎಸ್.ವೈದ್ಯ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು ದೇಶದ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಶಿಕ್ಷಕರು ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಜವಾಬ್ದಾರಿ ಹೊಂದಿದ್ದಾರೆ. ಶಿಕ್ಷಕರ ಬಗ್ಗೆ ನನಗೆ ಅಪಾರವಾದ ಪ್ರೀತಿ, ವಿಶ್ವಾಸ, ಗೌರವ ಇದೆ ಎಂದು ಹೇಳಿದರು.

ತಹಶೀಲ್ದಾರ ನಾಗೇಂದ್ರ ಕೋಳಶೆಟ್ಟಿ, ಕ್ಷೇತ್ರ ಸಂಪನ್ಮೂಲ ಅಧಿಕಾರಿ ಪೂರ್ಣಿಮಾ ಮೊಗೇರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೆಂಕಟೇಶ ನಾಯ್ಕ ಇದ್ದರು.

ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಟೇಶ ನಾಯಕ ಸ್ವಾಗತಸಿದರು. ನೌಕರರ ಸಂಘದ ಕಾರ್ಯದರ್ಶಿ ವೆಂಕಟೇಶ ನಾಯ್ಕ ವರದಿ ವಾಚಿಸಿದರು. ಶಿಕ್ಷಕ ಪರಮೇಶ್ವರ ನಾಯ್ಕ ನಿರೂಪಿಸಿದರು. ಸಚಿವ ಮಂಕಾಳ ವೈದ್ಯರನ್ನು, ಉತ್ತಮ ಸಾಧಕರನ್ನು, ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ನೌಕರರ ಮಕ್ಕಳನ್ನು ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.



ಹಾವೇರಿ ವಿವಿ ಘಟಿಕೋತ್ಸವ: ಸೌಲಭ್ಯ ಒದಗಿಸಲು ಒತ್ತಾಯ

ಹಾವೇರಿ: ಹಾವೇರಿ ವಿಶ್ವವಿದ್ಯಾಲಯದ ಬೆಳವಣಿಗೆ ಹಾಗೂ ಅಭಿವೃದ್ಧಿಗಾಗಿ ಅಗತ್ಯವಿರುವ ಅನುದಾನ, ನೇಮಕಾತಿ, ಅಗತ್ಯ ಮೂಲ ಸೌಲಭ್ಯಗಳನ್ನು ಕಲ್ಪಿಸುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಲು ಒತ್ತಾಯಿಸಿ ಏ.6ರಂದು ರಾಜ್ಯಪಾಲರಿಗೆ ಮನವಿ ಸಲ್ಲಿಸಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಹಾವೇರಿ ವಿಶ್ವವಿದ್ಯಾಲಯ ಹೋರಾಟ ಸಮಿತಿಯು ಒತ್ತಾಯಿಸಿದೆ.

ಈ ಕುರಿತು ಪ್ರಕಟಣೆ ನೀಡಿರುವ ಸಮಿತಿ ಮುಖಂಡರು, ವಿವಿ ಪ್ರಥಮ ಘಟಿಕೋತ್ಸವ ಕಾರ್ಯಕ್ರಮವನ್ನು ಆಯೋಜಿಸಲು ಸಮಸ್ಯೆಗಳಿವೆ ಎಂಬುದನ್ನು ವಿಶ್ವ ವಿದ್ಯಾಲಯದ ಕುಲಪತಿಗಳು ಹಾಗೂ ಅಧಿಕಾರಿಗಳು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ, ಸ್ಥಳೀಯ ಜನಪ್ರತಿನಿಧಿಗಳನ್ನು ಒಳಗೊಳಿಸಿ ವಿಶ್ವಾಸಕ್ಕೆ ತೆಗೆದುಕೊಂಡಿದ್ದರೆ ಹಾಗೂ ಹಾವೇರಿ ಜಿಲ್ಲೆಯ ದಾನಿಗಳು ಮತ್ತು ಸಾರ್ವಜನಿಕರ ಸಹಕಾರವನ್ನು ಪಡೆದುಕೊಂಡಿದ್ದರೆ ಕಂಡಿತವಾಗಿಯೂ ಜರ್ಮನ್ ಟೆಂಟ್ ಹಾಕಲು ಬೇಕಿರುವ ಹಣವನ್ನು ದಾನಿಗಳಿಂದ ಸಂಗ್ರಹಿಸಲು ಸಾಧ್ಯವಾಗುತಿತ್ತು. ಅಲ್ಲದೇ ಕೆಇಬಿ ಅಧಿಕಾರಿಗಳ ಮೂಲಕ ಅಡೆತಡೆಯಾಗಿರುವ ವಿದ್ಯುತ್ ಕಂಬ ಮತ್ತು ಲೈನ್‌ಗಳನ್ನು ಬೇರೆ ಕಡೆ ಹಾಕಿಸಲು ಕೂಡ ಸಾಧ್ಯವಾಗುತ್ತಿತ್ತು. ಹಾಗೆ ಮಾಡುವ ಬದಲು ಘಟಿಕೋತ್ಸವದ ದಿನಾಂಕ ತೀರಾ ಹತ್ತಿರ ಬಂದಾಗ ಈ ರೀತಿ ಸಮಸ್ಯೆಗಳಿವೆ ಎಂದು ಬಿಂಬಿಸುತ್ತಿರುವುದು ಮತ್ತು ಏಕಪಕ್ಷೀಯವಾಗಿ ಘಟಿಕೋತ್ಸವವನ್ನು ಕ್ಯಾಂಪಸ್‌ನಿಂದ ಹೊರಗಡೆ ಮಾಡುತ್ತಿರುವುದು ಸರಿಯಲ್ಲ ಎಂದರು.

ರಾಜ್ಯಪಾಲರಿಗೆ ಮನವಿ ಸಲ್ಲಿಸಲು ಅವಕಾಶ ಕಲ್ಪಿಸದಿದ್ದರೆ ಏ.6ರಂದು ಘಟಿಕೋತ್ಸವ ಕಾರ್ಯಕ್ರಮ ವೇಳೆ ವಿವಿ ಉಳಿಸಿ ಹೋರಾಟ ಸಮಿತಿಯಿಂದ ಪ್ರತಿಭಟನೆ ನಡೆಸಲಾಗುವುದು. ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅವಕಾಶ ನಿರಾಕರಿಸಿರುವುದು ಖಂಡನೀಯಾವುದು, ವಿಶ್ವವಿದ್ಯಾಲಯದ ಆಸಕ್ತಿಯಿರುವ ವಿದ್ಯಾರ್ಥಿಗಳಿಗೆಸದರಿಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅವಕಾಶವನ್ನು ಕಲ್ಪಿಸಲೇಬೇಕು ಎಂದು ವಿವಿ ಉಳಿಸಿ ಹೋರಾಟ ಸಮಿತಿಯ ಮುಖಂಡರಾದ ಬಸವರಾಜ ಪೂಜಾರ, ಪರಿಮಳ ಜೈನ್, ಎಂ ಆಂಜನೇಯ, ಬಸವರಾಜ್ ಎಸ್, ಶಿವಬಸಪ್ಪ ಗೋವಿ, ಉಡಚಪ್ಪ ಮಾಳಗಿ, ಮಂಜುಳಾ ಎಕ್ಕಿ, ಡಾ. ತಿಪ್ಪೇಸ್ವಾಮಿ ಹೊಸಮನಿ, ಮಕಬುಲ್ ಎಂ.ಕೆ, ಅರುಣ ನಾಗಾವತ್, ಖಲಂದರ್ ಅಲ್ಲಿಗೌಡ್ರ, ಚೈತ್ರಾ ಕೊರವರ, ಎಸ್.ಎ.ಪಾಣಿಗಟ್ಟಿ, ಶಶಿಕಲಾ ಅಕ್ಕಿ, ಪುಟ್ಟಪ್ಪ ಹರವಿ, ಎಸ್. ಎಸ್.ಹಿರೇಮಠ, ರಾಜು ಉಪ್ಪಾರ, ಸುಮಾ ಪುರದ, ಶಾರದಾ ಹಿರೇಮಠ, ಗೌರಮ್ಮ ಕುಲಕರ್ಣಿ ಒತ್ತಾಯಿಸಿದ್ದಾರೆ.

ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸೇವೆ: ಕಿರಣ್

ಗದಗ: ಇವನಾರವನೆಂದೆನಿಸದೇ ಇವನಮ್ಮವ ಎಂದೆನಿಸುವ ಬಸವೇಶ್ವರ ತತ್ವವನ್ನು ಅಳವಡಿಸಿಕೊಂಡು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸೇವೆಯನ್ನು ತಲುಪಿಸುವುದೇ ನನ್ನ ಗುರಿ ಎಂದು ಯುಪಿಎಸ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಹಾಗೂ ದೇಶಕ್ಕೆ 53ನೇ ಶ್ರೇಣಿ ಗಳಿಸಿದ ಕಿರಣ್ ಕಮತೆ ಹೇಳಿದರು.

ನಗರದ ತೋಂಟದಾರ್ಯ ಮಠದ ಜಾತ್ರಾ ಮಹೋತ್ಸವದ ಮಹಾರಥೋತ್ಸವದ ವೇದಿಕೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಬೆಂಗಳೂರಿನಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಲೇ ಯುಪಿಎಸ್‌ಸಿ ಪರೀಕ್ಷೆಯ ಕನಸು ಹೊತ್ತು ಲಾಕ್‌ಡೌನ್ ಪೂರ್ವದಲ್ಲೇ ತಯಾರಿ ಆರಂಭಿಸಿದೆ. ಯುಪಿಎಸ್‌ಸಿಯ ಯಾವುದೇ ಹಂತದಲ್ಲಿ ಫೇಲಾದರೂ ಮತ್ತೆ ಮೊದಲಿನಿಂದ ಶುರು ಮಾಡಬೇಕು. ಹಾಗಾಗಿ ಇದು ಕ್ಲಿಷ್ಟಕರ ಪರೀಕ್ಷೆಯಾಗಿದ್ದು ನಾನು ಐದು ಬಾರಿ ಪ್ರಯತ್ನಿಸಿ ತೇರ್ಗಡೆ ಹೊಂದದೇ ಇದ್ದರೂ ಆರನೇ ಹಾಗೂ ಕೊನೆಯ ಬಾರಿ ಸತತ ಪರಿಶ್ರಮದಿಂದ ಪ್ರಾಥಮಿಕ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನ ಪಾಸಾಗಿ ಕರ್ನಾಟಕಕ್ಕೆ ನಂ.1 ಹಾಗೂ ದೇಶಕ್ಕೆ 53ನೇ ಶ್ರೇಣಿ ಪಡೆದೆ. ನನ್ನ ಕನಸಿಗೆ ಮಾರ್ಗದರ್ಶನ ನೀಡಿದ ತಂದೆ-ತಾಯಿಗಳು ಹಾಗೂ ಮಿತ್ರರಿಗೆ ನಾನು ಋಣಿಯಾಗಿದ್ದು, ತೋಂಟದಾರ್ಯ ಮಠದ ಆಶೀರ್ವಾದವೂ ನನ್ನ ಬೆನ್ನಿಗಿದೆ ಎಂದರು.

ನ್ಯೂಯಾರ್ಕಿನ ವಿಶ್ವಸಂಸ್ಥೆಯ ವಿಶ್ವರಾಷ್ಟಗಳ ಅಭಿವೃದ್ಧಿ ಕಾರ್ಯಕ್ರಮ ಸಮಿತಿಯಿಂದ 2025ನೇ ಸಾಲಿನ ಇಕ್ವೇಟಪ್ರಶಸ್ತಿ ಪುರಸ್ಕೃತ ಬೀಬಿ ಫಾತಿಮಾ ಸಂಘದ ಅಧ್ಯಕ್ಷೆ ಬೀಬಿಜಾನ್ ಹಳೇಮನಿ ಹಾಗೂ ಕೆ.ಎಲ್.ಇ ಸಂಸ್ಥೆಗೆ ನೂತನ ಸದಸ್ಯರಾಗಿ ಆಯ್ಕೆಯಾದ ಮಂಜುನಾಥ ಮುನವಳ್ಳಿ ಅವರನ್ನು ಸನ್ಮಾನಿಸಲಾಯಿತು. ಬೀದರನ ಭಾತಂಬ್ರಾ ವಿರಕ್ತಮಠದ ಡಾ.ಗುರುಬಸವ ಸ್ವಾಮಿಗಳಿಗೆ ಸಮಾಜಸೇವಾರತ್ನ ಹಾಗೂ ಸಂಖ ವಿರಕ್ತಮಠದ ಶಿವಲಿಂಗೇಶ್ವರ ಸ್ವಾಮೀಜಿಗೆ ಬಸವಚೇತನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜನವರು, ಕಲಬುರ್ಗಿ ರೋಜಾ ಹಿರೇಮಠದ ಕೆಂಚಬಸವ ಶಿವಾಚಾರ್ಯ ಸ್ವಾಮೀಜಿ, ರಟಕಲ್ಲ ಹಿರೇಮಠದ ರೇವಣಸಿದ್ಧ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮಾಜಿ ಸಚಿವ ಎಸ್.ಎಸ್. ಪಾಟೀಲ, ಸಂಸದ ಐ.ಜಿ. ಸನದಿ, ತೋಂಟದಾರ್ಯ ಮಠದ ಆಡಳಿತಾಧಿಕಾರಿ ಪ್ರೊ.ಎಸ್.ಎಸ್. ಪಟ್ಟಣಶೆಟ್ಟರ, ದೆಹಲಿ ಜಾಟವಾ ಸಮಾಜದ ಪ್ರಮುಖರು ಉಪಸ್ಥಿತರಿದ್ದರು. ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷರಾದ ವಿನಾಯಕ ಮಾನ್ವಿ ಸ್ವಾಗತಿಸಿದರು.



ಗುಣಮಟ್ಟದ ಹಾಲು ಪೂರೈಕೆಗೆ ಎಎಂಎಸ್‌ಯು ಯಂತ್ರ ಸಹಾಯಕ

ಬ್ಯಾಡಗಿ: ತಾಲೂಕಿನ ಬನ್ನಿಹಟ್ಟಿ ಗ್ರಾಮದಲ್ಲಿ ಹಾಲು ಉತ್ಪಾದಕರ ಸಂಘಕ್ಕೆ ಹಾಲಿನ ಗುಣಮಟ್ಟ ನಿಯಂತ್ರಣಕ್ಕೆ ನೂತನ ಎಎಂಎಸ್‌ಯು (ಆಟೋಮೆಟಿಕ್ ಮಿಲ್ಕ್ ಕಲೆಕ್ಷನ್ ಯೂನಿಟ್)ಯಂತ್ರವನ್ನು ಕೆಎಂಎಫ್ ನಿರ್ದೇಶಕ ಪ್ರಕಾಶ್ ಬನ್ನಿಹಟ್ಟಿ ಅವರು ಲೋಕಾರ್ಪಣೆ ಮಾಡಿದರು.

ನಂತರ ಮಾತನಾಡಿ, ರೈತರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಹಾಲು ಉತ್ಪಾದನೆಯನ್ನು ಅಭಿವೃದ್ದಿಪಡಿಸಲು ಗುಣಮಟ್ಟದ ಹಾಲು ಪೂರೈಕೆಗೆ ಇದು ಸಹಕಾರಿಯಾಗಲಿದೆ ಮತ್ತು ರೈತರಿಗೆ ನಮ್ಮ ಹಾಲು ಉತ್ಪಾದಕರ ಸಂಘ ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದು ಹೇಳಿದರು.

ಸಂಘದ ಅಧ್ಯಕ್ಷರಾದ ಕರಬಸವ ಕೆಂಚನಗೌಡ್, ಉಪಾಧ್ಯಕ್ಷರಾದ ಮಂಜುನಾಥ್ ಕೆರೂರ್, ಬಸವರಾಜ್ ಪೂಜಾರ್, ರೈತ ಮುಖಂಡರಾದ ಕಿರಣ ಗಡಿಗೋಳ ಆಡಳಿತ ಮಂಡಳಿ ಸದಸ್ಯರು ಹಾಲು ಉತ್ಪಾದಕರ ಹಾಗೂ ಒಕ್ಕೂಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಸುಗ್ಗಿ ಹಬ್ಬದ ಜಾಗರಣ ಕಾರ್ಯಕ್ರಮ

ಗೋಕರ್ಣ: ಇಲ್ಲಿನ ಭಾವಿಕೊಡ್ಲದ ಹಾಲಕ್ಕಿ ಒಕ್ಕಲಿಗರ ಸುಗ್ಗಿ ಹಬ್ಬದ ಜಾಗರಣ (ಹಗಣ) ಕಾರ್ಯಕ್ರಮ ನಡೆಯಿತು. ಪ್ರಸ್ತುತ ನಡೆಯುತ್ತಿರುವ ವಿದ್ಯಮಾನಗಳ ದೃಶ್ಯ ರೂಪಕಗಳ ಪ್ರದರ್ಶನದಲ್ಲಿ ಬಹುಮುಖ್ಯವಾಗಿ ಇದೇ ಊರಿನ ಹತ್ತಿರದ ಸರ್ಕಾರಿ ಜಾಗದಲ್ಲಿ ನಿರ್ಮಾಣವಾದ ರೆಸಾರ್ಟ ತೆರವು ಕಾರ್ಯಾಚರಣೆಗೆ ವಿರೋಧಿಸಿ ಕೆಲವು ಸ್ವಾಮೀಜಿಗಳು ಪತ್ರಿಕಾಗೋಷ್ಠಿ ನಡೆಸಿರುವುದು, ಮಧ್ಯಪ್ರಾಚ್ಯ ದೇಶದಲ್ಲಿನ ಯುದ್ಧದ ಪರಿಣಾಮ ಅಡುಗೆ ಅನಿಲ ಕೊರತೆಯಿಂದ ಜನರ ಪರದಾಟ, ನಿತ್ಯಾನಂದ ಸ್ವಾಮೀಜಿಯ ಓಡಾಟ,ಅರಣ್ಯ ನಾಶ ಮಾಡಿ ಕಟ್ಟಡ ನಿರ್ಮಾಣ, ಹಲವು ಪೌರಾಣಿಕ ಕಥನಗಳ ದೃಶ್ಯಗಳು ಆಕರ್ಷಕವಾಗಿ ಮೂಡಿಬಂತು. ಇದರ ಜೊತೆ ಸಾಂಪ್ರದಾಯಿಕ ಹಾಡಿನ ಸೊಗಡಿನೊಂದಿಗೆ ಸುಗ್ಗಿ ತಂಡ ಸಾಗಿತ್ತು. ಅಪಾರ ಸಂಖ್ಯೆಯಲ್ಲಿ ಜನರು ಪಾಲ್ಗೊಂಡು ಮನರಂಜನೆಯ ರಸದೌತಣವನ್ನ ಪಡೆದುಕೊಂಡರು. ಇನ್ನೂ ಜನಸ್ತೋಮದ ಮಧ್ಯೆ ಚಿತ್ರ ವಿಚಿತ್ರ ವೇಧಾರಿಗಳ ಓಡಾಟ ಎಲ್ಲರ ಗಮನ ಸೆಳೆಯಿತು.



ಕಾನೂನು ಆಯೋಗದ ಅಧ್ಯಕ್ಷರ ಪ್ರವಾಸ

ಹಾವೇರಿ: ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷರಾದ ಜಸ್ಟಿಸ್ ಡಾ.ಅಶೋಕ ಹಿಂಚಿಗೇರಿ ಅವರು ಏ.5 ಮತ್ತು 6 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಏ.5 ರಂದು ಮಧ್ಯಾಹ್ನ 2.20ಕ್ಕೆ ಬೆಂಗಳೂರಿನಿಂದ ವಂದೇ ಭಾರತ ರೈಲಿನ ಮೂಲಕ ಹೊರಟು, ಸಂಜೆ 6-48ಕ್ಕೆ ಹಾವೇರಿಗೆ ಆಗಮಿಸಿ ನಗರದ ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡಲಿದ್ದಾರೆ..

ಏಪ್ರಿಲ್ 6 ರಂದು ಬೆಳಗ್ಗೆ 11 ಗಂಟೆಗೆ ಹಾವೇರಿ ನಗರದ ಜಿ.ಎಚ್.ಕಾಲೇಜು ಸಭಾಂಗಣದಲ್ಲಿ ಹಾವೇರಿ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3-10ಕ್ಕೆ ಜನಶತಾಬ್ದಿ ರೈಲಿನ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ.

ಮರಳು ಅಕ್ರಮ ಸಾಗಾಟ: ವಶ



ಲಕ್ಷ್ಮೇಶ್ವರ: ಪಟ್ಟಣದ ಪೊಲೀಸ್ ಠಾಣೆ ವ್ಯಾಪ್ತಿಯ ಅಮರಾಪುರ ಗ್ರಾಮದ ರಸ್ತೆಯಲ್ಲಿ ಟ್ರ್ಯಾಕ್ಟರ್‌ನಲ್ಲಿ ಚಾಲಕನು ತನ್ನ ಸ್ವಂತ ಲಾಭಗೋಸ್ಕರ ಸರ್ಕಾರಿ ಸ್ವತ್ತಾದ ಮರಳನ್ನು ಅನಧಿಕೃತವಾಗಿ, ಯಾವುದೇ ಪಾಸ್ ಪರ್ಮಿಟ್ ಇಲ್ಲದೇ ಅಕ್ರಮವಾಗಿ ಟ್ರ್ಯಾಕ್ಟರ್‌ದಲ್ಲಿ ತುಂಬಿಕೊಂಡು ಅಮರಾಪುರ ಗ್ರಾಮದಿಂದ ಲಕ್ಷ್ಮೇಶ್ವರ ಕಡೆಗೆ ಸಾಗಾಟ ಮಾಡಲು ಬರುತ್ತಿದ್ದಾಗ ಪಿಎಸ್‌ಐ ನಾಗರಾಜ ಗಡದ ಅವರ ಪೊಲೀಸರ ತಂಡ ದಾಳಿ ಮಾಡಿ ಮರಳಿನ ಟ್ರ್ಯಾಕ್ಟರನ್ನು ವಶಕ್ಕೆ ಪಡೆದುಕೊಂಡಿದ್ದು ದಂಡವನ್ನು ವಿಧಿಸಿದ್ದಾರೆ

ಟ್ರ್ಯಾಕ್ಟರದಲ್ಲಿ ಸುಮಾರು 1 ಕ್ಯುಬಿಕ್ ಮೀಟರ್‌ನಷ್ಟು ಮರಳು ಇದ್ದು, ಮರಳು ತುಂಬಿದ ಟ್ರ್ಯಾಕ್ಟರ್ ಸದ್ಯ ಲಕ್ಷ್ಮೇಶ್ವರ ಪೊಲೀಸರ ವಶದಲ್ಲಿದ್ದು ಹಿರಿಯ ಭೂ ವಿಜ್ಞಾನಿಗಳು, ಗಣಿ ಮತ್ತು ಭೂ-ವಿಜ್ಞಾನ ಇಲಾಖೆ ಗದಗ ಅವರಿಗೆ ಮಾಹಿತಿ ನೀಡಿದ್ದಾರೆ.

ಶ್ರೀ ರಾಮನ ಆದರ್ಶ ಅಳವಡಿಸಿಕೊಳ್ಳಿ

ನರಗುಂದ: ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಶ್ರೀ ರಾಮನ ಆದರ್ಶಗಳನ್ನು ಅಳವಡಿಸಕೊಳ್ಳಬೇಕು. ಅಂದಾಗ ಮನುಷ್ಯನ ಜೀವನ ಸುಂದರವಾಗಿ ನಿರ್ಮಾಣಗೊಳ್ಳುತ್ತದೆ ಎಂದು ಬನಹಟ್ಟಿ ಪ್ರೌಢಶಾಲೆ ಮುಖ್ಯಶಿಕ್ಷಕ ಎಸ್.ವೈ. ಪಾಟೀಲ ಹೇಳಿದರು.

ತಾಲೂಕಿನ ಶಿರೋಳ ಗ್ರಾಮದ ಯಚ್ಚರಸ್ವಾಮಿಗಳ ಗವಿಮಠದಲ್ಲಿ ನಡೆದ 30ನೇ ಮಾಸಿಕ ಶಿವಾನುಭವ ಗೋಷ್ಠಿ ಹಾಗೂ ಶ್ರೀ ರಾಮ ಜಯಂತಿ ಮತ್ತು ಹನುಮ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತೀಯ ಕಿಸಾನ ಸಂಘದ ಜಿಲ್ಲಾಧ್ಯಕ್ಷ ಎಸ್.ಎಸ್. ಪಾಟೀಲ ಮಾತನಾಡಿ, ಮನುಷ್ಯನಿಗೆ ಸಂಸ್ಕಾರಯುತವಾಗಿ ಬದುಕುವುದನ್ನು ಮಠ ಮಂದಿರಗಳು ಕಲಿಸುತ್ತದೆ ಎಂದರು. ಕೊಪ್ಪಳದ ವಿಶ್ವಕರ್ಮ ಸಮಾಜದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಕಾಶ ಅರ್ಕಸಾಲಿ ಮಾತನಾಡಿದರು. ಅಭಿನವ ಯಚ್ಚರ ಸ್ವಾಮೀಜಿ, ಪ್ರಭಾಕರ ಉಳ್ಳಾಗಡ್ಡಿ, ಮಲ್ಲಣ್ಣ ಚಿಕ್ಕನರಗುಂದ, ಬಸವರಾಜ ಕುಪ್ಪಸ್ತ, ಎಸ್.ವೈ. ಮುಲ್ಕಿಪಾಟೀಲ, ಬಾಪುಗೌಡ ತಿಮ್ಮನಗೌಡ್ರ, ವಿಠ್ಠಲ ಶಾಲದಾರ, ಗುರುದೇವಿ ಶಾನವಾಡಮಠ ಹಾಗೂ ದುರ್ಗಾದೇವಿ ಮಹಿಳಾ ಭಜನಾ ಮಂಡಳಿ, ಮರಡಿ ಮಾರುತಿ ಸಂತ ಭಜನಾ ಮಂಡಳಿ ಇದ್ದರು. ಸುನೀಲ ಕಳಸದ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.



ಒಳಪಂಗಡಗಳು ಒಂದಾಗಲಿ: ಗುಡಿಮನಿ



ಲಕ್ಷ್ಮೇಶ್ವರ: ಅಖಿಲ ಭಾರತ ವೀರಶೈವದ ಲಿಂಗಾಯತ ಮಹಾಸಭಾ ಒಳಪಂಗಡಗಳು ಒಂದಾಗಿ ಸಾಗಬೇಕು ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಶರಣಬಸವ ಗುಡಿಮನಿ ಹೇಳಿದರು.

ಅವರು ಪಟ್ಟಣದ ಜಗದ್ಗುರು ವೀರಗಂಗಾಧರ ಸಮುದಾಯ ಕಲ್ಯಾಣ ಮಂಟಪದಲ್ಲಿ ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸದಸ್ಯತ್ವ ಅಭಿಯಾನದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಿನ್ನಾಭಿಪ್ರಾಯಗಳನ್ನು ಮರೆತು ಸಮಾಜ ಕಟ್ಟುವಲ್ಲಿ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಸಲಹಾ ಸಮಿತಿ ಸದಸ್ಯ ಚಂದ್ರು ಬಾಳಿಹಳ್ಳಿಮಠ ಮಾತನಾಡಿ, ವೀರಶೈವ ಲಿಂಗಾಯತದ ಬಗ್ಗೆ ಯಾವುದೇ ಗೊಂದಲವಿಲ್ಲ, ಒಗ್ಗೂಡಿಸುವ ಕಾರ್ಯದಲ್ಲಿ ತೊಡಗಿದ್ದೇವೆ. ಸಮಾಜದ ಎಲ್ಲ ಒಳ ಪಂಗಡಗಳನ್ನು ಒಗ್ಗೂಡಿಸುವುದು ಅತ್ಯಂತ ಮುಖ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಕಾರ್ಯದರ್ಶಿ ಮುರುಗೇಂದ್ರ ಬಡ್ನಿ , ಉಪಾಧ್ಯಕ್ಷ ಬಸವರಾಜ ಅಂಗಡಿ, ಖಜಾಂಚಿ ಚನವೀರಪ್ಪ ಹುಣಸಿಕಟ್ಟಿ , ನಿರ್ದೇಶಕ ಬಾಪೂಜಿ ಪಾಟೀಲ, ಚನ್ನಪ್ಪ ಜಗಲಿ, ಪ್ರವೀಣ ಬಾಳಿಕಾಯಿ, ಸುನೀಲ ಮಹಾಂತಶೆಟ್ಟರ, ಮಂಜುನಾಥ ಚಾಕಲಬ್ಬಿ , ಶಿವಲಿಂಗಪ್ಪ ಅಣ್ಣಿಗೇರಿ, ಸಂತೋಷ ಜಾವೂರ, ಎಂ.ಎಸ್. ಹಿರೇಮಠ ಇತರರಿದ್ದರು.

ಹನುಮ ಜಯಂತಿ: ತೊಟ್ಟಿಲೋತ್ಸವ

ಲಕ್ಷ್ಮೇಶ್ವರ: ಗುರುವಾರ ಹನುಮಜಯಂತಿ ಅಂಗವಾಗಿ ಪಟ್ಟಣ ಸೇರಿ ತಾಲೂಕಿನಾದ್ಯಂತ ಹನುಮಂತದೇವರ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಅಲಂಕಾರ, ಅಭಿಷೇಕ, ತೊಟ್ಟಿಲೋತ್ಸವ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಶ್ರದ್ಧಾ ಭಕ್ತಿಯಿಂದ ನೆರವೇರಿಸಲಾಯಿತು.

ಪಟ್ಟಣದ ಪೇಟೆ ಆಂಜನೇಯ ದೇವಸ್ಥಾನದಲ್ಲಿ ವಿಶೇಷ ಪೂಜೆಯೊಂದಿಗೆ ಅಲಂಕರಿಸಲಾದ ಬೆಳ್ಳಿಯ ತೊಟ್ಟಿಲಲ್ಲಿ ಹನುಮಂತದೇವರ ಉತ್ಸವ ಮೂರ್ತಿಯನ್ನಿರಿಸಿ ಮಹಿಳೆಯರು, ಮಕ್ಕಳು ಸೇರಿ ತೊಟ್ಟಿಲು ಪೂಜೆ ಮಾಡಿ ಜೋಗುಳ ಪದ ಹಾಡಿದರು.

ಈ ವೇಳೆ ಮಾತನಾಡಿದ ಅರ್ಚಕ ಮುರಘೇಂದ್ರಸ್ವಾಮಿ ಹಿರೇಮಠ ಅವರು ಸೇವೆ, ತ್ಯಾಗ, ನಿಷ್ಠೆ ಹಾಗೂ ಭಕ್ತಿಗೆ ಮತ್ತೊಂದು ಹೆಸರೇ ಹನಮಮಂತ ದೇವರು. ಎಲ್ಲದರಲ್ಲಿಯೂ ಮಿಗಿಲಾದ ಅಧಮ್ಯ ಶಕ್ತಿ ಹೊಂದಿದ್ದರೂ ಭಕ್ತಿ, ವಿನಯ ಶೀಲತೆ, ಸಂಪನ್ನ-ಸದ್ಗುಣಗಳನ್ನು ಹನುಮಂತ ಹೊಂದಿದ್ದ. ರಾಮನ ಭಕ್ತ ಹನುಮಂತ ತನ್ನ ಶ್ರದ್ಧೆ, ಭಕ್ತಿ, ನಿಷ್ಠೆಯಿಂದ ಇಂದು ಜಗತ್ತಿಗೆ ಆದರ್ಶನಾಗಿದ್ದಾನೆ ಎಂದರು.

ಮಹಿಳಾ ರುದ್ರ ಬಳಗದ ಸದಸ್ಯರಾದ ಪರಮೇಶ್ವರಿ, ಪ್ರಭಾ ಪುರಾಣಿಕಮಠ, ಜ್ಯೋತಿ, ಜಯಶ್ರೀ, ಆರತಿ, ವಿಜಯಲಕ್ಷ್ಮೀ, ಅಮೃತಾ ಬಾಳಿಹಳ್ಳಿಮಠ, ಪಾರ್ವತಿ ಕಳ್ಳಿಮಠ, ಶಾಂತಾ ಗುಳಗಣ್ಣವರ, ಗೌರಮ್ಮ ಮರಡೂರಮಠ, ವಿಜಯಲಕ್ಷ್ಮೀ ವಿರಕ್ತಮಠ ಅವರಿಂದ ರುದ್ರಪಠಣ, ಮಾರುತಿ ಆಂಜನೇಯ ಭಜನಾ ಸಂಘದಿಂದ ಭಜನೆ ಮತ್ತು ಕೃಷ್ಣ ಕ್ಷತ್ರಿ ಕುಟುಂಬದಿಂದ ಮಂಗಳವಾದ್ಯ ನೆರವೇರಿತು.



ಕಿರುಸುದ್ದಿ

ಗೋಕಾಕಗೆ ಸತ್ಯಸಾಯಿ ಸೇವಾ ಪ್ರವಾಹಿನಿ ಇಂದು

◆ **ಗೋಕಾಕ:** ಇಲ್ಲಿಯ ಶ್ರೀ ಸತ್ಯಸಾಯಿ ಸೇವಾ ಸಮಿತಿಯಿಂದ ಏ.5ರಂದು ಬೆಳಿಗ್ಗೆ 10.30ಕ್ಕೆ ನಗರಕ್ಕೆ ಆಗಮಿಸಲಿರುವ ಶ್ರೀ ಸತ್ಯಸಾಯಿ ಸೇವಾ ಪ್ರವಾಹಿನಿ ನಗರದ ಲಕ್ಷ್ಮೀ ದೇವಸ್ಥಾನದ ಮುಂಭಾಗದಲ್ಲಿ ಸ್ವಾಗತಿಸಿಕೊಳ್ಳಲಾಗುವದು. ಮಧ್ಯಾಹ್ನ 12 ಗಂಟೆಯಿಂದ 3ಗಂಟೆಯವರೆಗೆ ತಂಬಾಕೆ ಜಿನ್ನಿಂಗ ಫ್ಯಾಕ್ಟರಿ ಆವರಣದಲ್ಲಿ ಭಕ್ತರಿಗೆ ದರ್ಶನ ಹಾಗೂ ಮಹಾಪ್ರಸಾದದ ವ್ಯವಸ್ಥೆ ಮಾಡಲಾಗಿದೆ.



3 ಗಂಟೆಯಿಂದ ರಥವು ಕುಂಭ ಮೇಳ, ವಿವಿಧ ವಾದ್ಯಮೇಳದೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿದ್ದು, ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಸಮೀತಿ ಸಂಚಾಲಕ ಎ ಆರ್ ಕುರಬರ ತಿಳಿಸಿದ್ದಾರೆ.

ಇಂದು ಸತ್ಸಂಗ

◆ **ಕಕಮರಿ:** ಗ್ರಾಮದ ಶ್ರೀ ಗುರುದೇವ ಆಶ್ರಮದಲ್ಲಿ ಏ.5ರಂದು ಸಂಜೆ 4ಗಂಟೆಗೆ ಸತ್ಸಂಗ ಕಾರ್ಯಕ್ರಮ ಜರುಗಲಿದೆ. ಸಾನ್ನಿಧ್ಯ ಪ.ಪೂ. ಆತ್ಮಾರಾಮ್ ಸ್ವಾಮೀಜಿ ವಹಿಸಿಕೊಳ್ಳಲಿದ್ದಾರೆ. ಸಾನಿಧ್ಯ ಅತ್ತಿಗೇರಿ ಪ.ಪೂ. ಅದ್ವೈತಾನಂದ ಸ್ವಾಮೀಜಿ, ಹಾಗೂ ಗಂಗಣ್ಣ ಮಹಾರಾಜರು ಭಾಗವಹಿಸಲಿದ್ದಾರೆ ಸಮಸ್ತ ಗ್ರಾಮಸ್ಥರು ಭಾಗವಹಿಸಬೇಕೆಂದು ಗುರುದೇವಾಶ್ರಮ ಪೀಠಾಧ್ಯಕ್ಷ ಪ.ಪೂ.ಆತ್ಮಾರಾಮ್ ಸ್ವಾಮೀಜಿ ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದ್ದಾರೆ.



ಆಸ್ತಿ ತೆರಿಗೆ ಮೇಲೆ ಶೇ.5% ರಿಯಾಯಿತಿ

◆ **ಬೆಳಗಾವಿ:** ಮಚ್ಚೆ ಪಟ್ಟಣ ಪಂಚಾಯತಿ ವ್ಯಾಪ್ತಿಯ 2026-27ನೇ ಸಾಲಿನ ಆಸ್ತಿ ತೆರಿಗೆ,ವಸತಿ,ವಾಣಿಜ್ಯ, ನಿವೇಶನ ಮತ್ತು ಕೈಗಾರಿಕೆಗಳಿಗೆ ಸರ್ಕಾರದ ಆದೇಶದಂತೆ ಶೇ.3% ಆಸ್ತಿ ತೆರಿಗೆ ಪರಿಷ್ಕರಣೆ ಮಾಡಲಾಗಿದ್ದು ಸಾರ್ವಜನಿಕರು ತೆರಿಗೆ ಪಾವತಿಸಿ ಪಟ್ಟಣದ ಅಭಿವೃದ್ಧಿಗೆ ಸಹಕರಿಸಬೇಕು. ಏ.1 ರಿಂದ 30ರವರೆಗೆ ಆಸ್ತಿ ತೆರಿಗೆ ಮೇಲೆ ಶೇ.5% ರಿಯಾಯಿತಿ ಇರುತ್ತದೆ ಹಾಗೂ ಮೇ.1 ರಿಂದ ಜೂನ 30ರ ವರೆಗೆ ದಂಡ ರಹಿತ ಆಸ್ತಿ ತೆರಿಗೆಯನ್ನು ಪಾವತಿಸಲು ಅವಕಾಶ ಇರುತ್ತದೆ ಹಾಗೂ ಜು.1 ರಿಂದ ಏ.31 2027 ರ ವರೆಗೆ ಆಸ್ತಿ ತೆರಿಗೆ ಮೇಲೆ ಪ್ರತಿ ತಿಂಗಳು ಶೇ.2% ದಂಡ ವಿಧಿಸಲಾಗುವುದು. ಆದರಿಂದ ಆಸ್ತಿ ತೆರಿಗೆ,ನೀರಿನ ತೆರಿಗೆ,ಜಾಹಿರಾತು ತೆರಿಗೆ ಶುಲ್ಕ, ಉದ್ಯಮ ಪರವಾನಿಗೆ ಶುಲ್ಕ ಪಾವತಿಸಲು ಮಚ್ಚೆ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯುವತಿ ಕಾಣೆ

◆ **ಬೆಳಗಾವಿ:** ಖಾಸಬಾಗ ವಡ್ಡರ ಭಾವಣಿ ನಿವಾಸಿಯಾದ ಜ್ಯೋತಿ ಮಲ್ಲಪ್ಪ ಜಂತಿನಕಟ್ಟಿ 29 ವರ್ಷದ ಯುವತಿ ಕಾಣೆಯಾಗಿದ್ದರ ಕುರಿತು ಶಹಾಪೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಹೆಸರು ಜ್ಯೋತಿ ಮಲ್ಲಪ್ಪ ಜಂತಿನಕಟ್ಟಿ, ವಯಸ್ಸು 29,ಎತ್ತರ 5 ಫಿಟ್,ಉದ್ಯೋಗ ಮನೆಗೆಲಸ,ಚಹರೆ ಉದ್ದ ಮುಖ,ಸದೃಡ ದೇಹ,ಗೋದಿಗಪ್ಪು ಮೈಬಣ್ಣ. ಕನ್ನಡ ಮತ್ತು ತೆಲಗು ಮಾತನಾಡುತ್ತಾಳೆ ಹಾಗೂ ಹಸಿರು ಬಣ್ಣದ ನೈಟಿ ಧರಿಸಿರುತ್ತಾಳೆ. ಈ ಯುವತಿ ಕಂಡಲ್ಲಿ ಬೆಳಗಾವಿ ನಗರ ಪೊಲೀಸ್ ಕಂಟ್ರೋಲ್ ರೂಮ್ , ಶಹಾಪೂರ ಪೊಲೀಸ್ ಠಾಣೆ , ಪೊಲೀಸ್ ಇನ್ಸ್ಪೆಕ್ಟರ್, ಶಹಾಪೂರ ಪೊಲೀಸ್ ಠಾಣೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನಿಧನ ಸುದ್ದಿ

ಭೀಮಪ್ಪಾ ಮಲಾಬದಿ

◆ **ಹಲ್ಯಾಳ:** ಗ್ರಾಮದ ಭೀಮಪ್ಪಾ ಮಲಾಬದಿ(57) ನಿಧನರಾಗಿದ್ದಾರೆ. ಮೃತರು ಸಹೋದರರು, ಸಹೋದರಿಯರು,ಇಬ್ಬರು ಪುತ್ರರು,ಪತ್ನಿ, ಹಾಗೂ ಕುಟುಂಬಸ್ಥರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.





ಕಲ್ಲೋಳಿ: ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ಆತಿಥ್ಯದಲ್ಲಿ ಪಟ್ಟಣ ಪಂಚಾಯಿತಿ ವತಿಯಿಂದ ಗಣತಿದಾರರಿಗೆ ಹಾಗೂ ಮೇಲ್ವಿಚಾರಕರಿಗೆ 3 ದಿನಗಳ ತರಬೇತಿ ಕಾರ್ಯಾಗಾರ ನಡೆಯಿತು.

ಗಣತಿದಾರರು, ಮೇಲ್ವಿಚಾರಕರಿಗೆ ತರಬೇತಿ

◆ **ಮೂಡಲಗಿ:** 2027ರ ಜನಗಣತಿ ಸಂಪೂರ್ಣ ಡಿಜಿಟಲ್ ಆಧಾರಿತ ಪ್ರಕ್ರಿಯೆಯಾಗಿದೆ. ಗಣತಿದಾರರಿಗೆ ಮೂರು ಹಂತದಲ್ಲಿ ತರಬೇತಿ ನೀಡಲಾಗುವುದು. ದೋಷಮುಕ್ತ ಹಾಗೂ ಪಾರದರ್ಶಕ ಮಾಹಿತಿ ಸಂಗ್ರಹಣೆಗೆ ತರಬೇತಿ ಸಹಕಾರಿ ಎಂದು ಕಲ್ಲೋಳಿ ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಚಿದಾನಂದ ಮುಗಳಖೋಡ ಹೇಳಿದರು.

ಇತ್ತೀಚಿಗೆ ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ಆತಿಥ್ಯದಲ್ಲಿ ಪಟ್ಟಣ ಪಂಚಾಯಿತಿವತಿಯಿಂದ ಗಣತಿದಾರರಿಗೆ ಹಾಗೂ ಮೇಲ್ವಿಚಾರಕರಿಗೆ ಬುಧವಾರ ನಡೆದ 3 ದಿನಗಳ ತರಬೇತಿ ಕಾರ್ಯಾಗಾರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಾರ್ವಜನಿಕರಿಗೆ ಆನ್‌ಲೈನ್ ಮೂಲಕ ಮಾಹಿತಿ ಸಲ್ಲಿಸಲು ಸ್ವಯಂ-ಗಣತಿ ವ್ಯವಸ್ಥೆ ನೀಡಲಾಗುತ್ತಿದೆ.

ಕಲ್ಲೋಳಿ ಪಟ್ಟಣದ ವ್ಯಾಪ್ತಿಯಲ್ಲಿ 34 ಬ್ಲಾಕ್ ಗಳಿದ್ದು, 34 ಜನ ಗಣತಿದಾರರು, 4 ಜನ ಕಾಯ್ದಿರಿದ ಗಣತಿದಾರರು, 6 ಜನ ಮೇಲ್ವಿಚಾರಕರು, ಒಬ್ಬರು ಕಾಯ್ದಿರಿಸಿದ ಮೇಲ್ವಿಚಾರಕರು. ಕಲ್ಲೋಳಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಹೀಗೆ ಒಟ್ಟು 45 ಜನ ಗಣತಿದಾರರು, ಇಬ್ಬರು ತರಭೇತಿದಾರರನ್ನು ನೇಮಿಸಲಾಗಿದೆ ಎಂದರು. ಎಸ್.ಆರ್ .ಇ.ಎಸ್. ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ಸುರೇಶ ಹನಗಂಡಿ, ಜನಗಣತಿ ತರಭೇತಿದಾರ ಸಿ.ಎಸ್. ಮೋಹಿತೆ ಮತ್ತು ಬಿ.ಎಸ್. ಸತೀಶ ವೇದಿಕೆ ಮೇಲೆ ಇದ್ದರು.



ಬೆಳಗಾವಿ : ನಗರದ ಹಿಂದವಾಡಿಯ ಗೊಮ್ಮಟೇಶ್ ವಿದ್ಯಾ ಪೀಠದಲ್ಲಿ ಕ್ರಾಂತಿ ಮಹಿಳಾ ಮಂಡಳ ಮತ್ತು ಉಮಾ ಸಂಗೀತ ಪ್ರತಿಷ್ಠಾನದ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನ ಆಚರಣೆ ಮಾಡಲಾಯಿತು.

ಆಟೋ ಚಾಲಕರ ಗ್ಯಾಸ್ ಸಮಸ್ಯೆಗೆ ಶೀಘ್ರ ಪರಿಹಾರ

◆ **ಬೆಳಗಾವಿ:** ಮಧ್ಯ ಪ್ರಾಚ್ಯದ ಯುದ್ಧದ ಬಿಸಿ ದೇಶವ್ಯಾಪ್ತಿ ಹರಡಿದೆ, ಆದೇ ರೀತಿ ಬೆಳಗಾವಿ ಜಿಲ್ಲೆಗೂ ಹರಡಿರುವುದರಿಂದ ನಗರ ಸೇರಿದಂತೆ ಜಿಲ್ಲೆಯಲ್ಲಿ ಗ್ಯಾಸ್ ಸಮಸ್ಯೆ ಉಂಟಾಗಿದೆ. ಆಟೋಗಳ ಎಲ್ಪಿಜಿ ಸೇರಿದಂತೆ ಮನೆಗೆ ಬಳಕೆ ಮಾಡುವ ಎಲ್ಪಿಜಿ ಗ್ಯಾಸ್ ಗಳ ಕೊರತೆ ನಿಗಿಸುವುದಕ್ಕೆ ಪ್ರತ್ಯೇಕವಾಗಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹೇಳಿದರು.



ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಆಟೋ ಚಾಲಕರಿಗೆ ಸಿಎನ್ಜಿ ಗ್ಯಾಸ್ ಸಮಸ್ಯೆ ಉಂಟಾಗಿದ್ದು, ಅದನ್ನು ಶೀಘ್ರದಲ್ಲಿಯೇ ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು.

ಬೆಳಗಾವಿ ನಗರದಾದ್ಯಂತ ಒಟ್ಟು 7 ಸಿಎನ್ಜಿ ಗ್ಯಾಸ್ ಪಂಪಗಳಿದ್ದು, ಅವುಗಳಿ ಯಾವುದೇ ರೀತಿಯಲ್ಲಿ ಗ್ಯಾಸ್ ಸರಬರಾಜಿಗೆ ಯಾವುದೇ ತೊಂದರೆ ಇಲ್ಲ, ಅದರಲ್ಲಿ ಜಿಯೋ ಹಾಗೂ ಗೋ ಗ್ಯಾಸ್ ನ ಖಾಸಗಿ ಪಂಪ್ ಗಳಲ್ಲಿ ಸ್ವಲ್ಪಮಟ್ಟಿಗೆ ಗ್ಯಾಸ್ ನ ಸಮಸ್ಯೆ ಉಂಟಾಗಿದೆ. ಇದರಿಂದಾಗಿ ಆಟೋ ಚಾಲಕರಿಗೆ ಆಟೋಗಳಿಗೆ ಗ್ಯಾಸ್ ತುಂಬಿಸಿಕೊಳ್ಳುವುದಕ್ಕೆ ಸರತಿ ಸಾಲಿನಲ್ಲಿ ನಿಂತುಕೊಳ್ಳಬೇಕಾಗುತ್ತಿದೆ.



ಈ ಸಮಸ್ಯೆಯನ್ನು ಪರಿಹರಿಸಲು ಪ್ರತ್ಯಕವಾಗಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಎಲ್ಲಿ ಆಟೋ ಹಾಗೂ ಮನೆಗೆ ಬಳಕೆ ಮಾಡುವ ಗ್ಯಾಸ್ ಗಳ ಕೊರತೆ ಕಂಡು ಬರುತ್ತದೆ ಆ ಭಾಗದಲ್ಲಿನ ವರದಿ ನೀಡಿದ 24 ಗಂಟೆಯಲ್ಲಿಯೇ ಸಾರ್ವಜನಿಕರಿಗೆ ಗ್ಯಾಸ್ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ನೀರಿಗಾಗಿ ನೋಡಲ್ ಅಧಿಕಾರಿಗಳ ನೇಮಕ

◆ **ಬೆಳಗಾವಿ:** ಇತ್ತೀಚಿನ ದಿನಗಳಲ್ಲಿ ಬೆಳಗಾವಿಯಲ್ಲಿಯೂ ಬೇಸಿಗೆಯ ಬಿಸಿ ಏರುತ್ತಿದ್ದಂತೆ ಜಿಲ್ಲಾಲಾದ್ಯಂತ ಕುಡಿಯುವ ನೀರಿನ ಸಮಸ್ಯೆಗಳು ಎದುರಾಗುತ್ತಿವೆ. ಜಿಲ್ಲಾಡಳಿತ ಈಗಿನಿಂದಲೇ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ. ಜಿಲ್ಲೆಯ ಜಲಾಶಯಗಳ ನೀರಿನ ಮಟ್ಟದ ಮೇಲೆ ಕಣ್ಣಿಟ್ಟಿರುವ ಜಿಲ್ಲಾಧಿಕಾರಿ ಮೊಹ್ಮದ್ ರೋಷನ್ ಅವರು, ಜನರಿಗೆ ಹಾಗೂ ಜಾನುವಾರುಗಳಿಗೆ ನೀರಿನ ತೊಂದರೆಯಾಗದಂತೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಿದ್ದಾರೆ.

ಮಾಧ್ಯಮಗಳೊಂದಿಗೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಾತನಾಡಿ, ಬೆಳಗಾವಿಯ 500 ಗ್ರಾ.ಪಂ.ಗಳಲ್ಲಿ ಯಾವುದೇ ಕುಡಿಯುವ ನೀರಿನ ಕೊರತೆಯಿಲ್ಲ. ಈಗಾಗಲೇ ಸಭೆ ನಡೆಸಲಾಗಿದ್ದು, 126 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಸಂಭವಿಸುವ ಸಾಧ್ಯತೆಯಿದೆ. ಆಯಾ ಗ್ರಾ.ಪಂ ವ್ಯಾಪ್ತಿಯಲ್ಲಿ ಸಿಇಒ ಅಧ್ಯಕ್ಷತೆಯಲ್ಲಿ ಸ್ವಂತ ಟ್ಯಾಂಕರ್ ವ್ಯವಸ್ಥೆ ಮಾಡಲಾಗಿದ್ದು, ಖಾಸಗಿ ಬೋರವೆಲ್ 'ಗಳನ್ನು ಗುರುತಿಸಲಾಗಿದೆ ಎಂದು ಹೇಳಿದರು.

ಜಿಲ್ಲೆಯ ಜಲಾಶಯಗಳ ಮಟ್ಟಗಳ ಮೇಲೆ ನಿಗಾವಹಿಸಲಾಗಿದ್ದು, ರೈತರಿಗೆ ಮತ್ತು ಜನರಿಗೆ ಸಮರ್ಪಕ ನೀರು ನೀಡಲು ಕ್ರಮವಹಿಸಲಾಗುತ್ತಿದೆ. ಇನ್ನು ನಗರ ಪ್ರದೇಶದಲ್ಲಿ ಖಾಸಗಿ ಟ್ಯಾಂಕರ್‌ಗಳಿಗೆ ಹೆಚ್ಚಿನ ದರ ತೆಗೆದುಕೊಂಡರೇ ಅವರ ವಿರುದ್ಧ ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಕೆಯನ್ನು ನೀಡಿದ್ದಾರೆ.

ಜಿಲ್ಲಾಯಲ್ಲಿ ಸಾರ್ವಜನಿಕರಿಗೆ ಹಾಗೂ ಜಾನುವಾರುಗಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಯಾಗದಂತೆ ನೋಡಿಕೊಳ್ಳುವುದಕ್ಕೆ ಪ್ರತೆಕವಾಗಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ಮಾದರಿ ಕ್ಷೇತ್ರವನ್ನಾಗಿಸುವೆ: ಜಾರಕಿಹೊಳಿ



◆ **ಗೋಕಾಕ:** ನಗರದ ಜನತೆ ಮತ್ತು ಭಕ್ತರಿಗಾಗಿ ಚೌಡೇಶ್ವರಿ ದೈವಿ ವನನಿರ್ಮಾಣ ಮಾಡಲಾಗುತ್ತಿದೆ. ಗೋಕಾಕ ಮಾದರಿ ಕ್ಷೇತ್ರವನ್ನಾಗಿ ಮಾಡಲು ಶ್ರಮಿಸುತ್ತಿರುವುದಾಗಿ ಶಾಸಕ ರಮೇಶ ಜಾರಕಿಹೊಳಿ ತಿಳಿಸಿದರು.

ಅವರು, ನಗರದ ಕಡಬಗಟ್ಟಿ ರಸ್ತೆಯಲ್ಲಿರುವ ಶ್ರೀ ಚೌಡೇಶ್ವರಿ ದೇವಸ್ಥಾನದ ಪಕ್ಕದಲ್ಲಿ ಸುಮಾರು 1ಕೋಟಿ ರೂಗಳ ವೆಚ್ಚದಲ್ಲಿ ಅರಣ್ಯ ಇಲಾಖೆಯಿಂದ ಶುಕ್ರವಾರದಂದು ಚೌಡೇಶ್ವರಿ ದೈವಿ ವನ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ಗೋಕಾಕ ನಗರ ಹಾಗೂ ತಾಲೂಕಿನಅಭಿವೃದ್ದಿಗಾಗಿ ಅನೇಕಜನಪರ ಕಾರ್ಯಗಳನ್ನು ಮಾಡಲಾಗುತ್ತಿದ್ದು ಜನತೆ ಸಹಕರಿಸುವಂತೆ ಮನವಿ ಮಾಡಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಭಾಕರ ಪ್ರೀಯದರ್ಶಿ, ಸಹಾಯಕ ಅರಣ್ಯ ಸಂಸರಕ್ಷಣಾಧಿಕಾರಿ ವಾಸೀಂರಾಜ ತೆನಗಿ, ಗೋಕಾಕ ವಲಯ ಅರಣ್ಯಾಧಿಕಾರಿ ಆನಂದ ಹೆಗಡೆ, ಸಿಬ್ಬಂದಿಗಳಾದ ಹನಮಂತ ಇಂಗಳಗಿ, ಮಲ್ಲಪ್ಪ ತೇಲಿ, ಹನಮಂತ ಹಮ್ಮನವರ ಸೇರಿದಂತೆ ಅನೇಕರು ಇದ್ದರು.



ಹಲ್ಯಾಳ: ತಮ್ಮ ಮನೆ ಆವರಣದಲ್ಲೆಂದರಲ್ಲಿ ಪ್ರಾಣಿ, ಪಕ್ಷಿ ಸಂಕುಲಕ್ಕೆ ಕುಡಿಯಲು ನೀರು ಮತ್ತು ಆಹಾರ ಕಲ್ಪಿಸಿ ಗ್ರಾಪಂ ಮಾಜಿ ಅಧ್ಯಕ್ಷ ಮುದಕಣ್ಣ ಶೇಗುಣಶಿ ಮಾನವೀಯತೆ ಮೆರೆದಿದ್ದಾರೆ. ಪ್ರಾಣಿ ಪಕ್ಷಿ ಪ್ರೇಮಿಯಾದ ಹಲ್ಯಾಳ ಗ್ರಾ ಪಂ ಮಾಜಿ ಅಧ್ಯಕ್ಷರಾದ ಮುದಕಣ್ಣ ಶೇಗುಣಶಿಯವರು ಎಲ್ಲರಿಗೂ ಮಾದರಿಯಾಗಿದ್ದಾರೆ.

ಕೆರೆ ಅಭಿವೃದ್ಧಿಗೆ ಚನ್ನರಾಜ ಹಟ್ಟಿಹೊಳಿ ಚಾಲನೆ



◆ **ಬೆಳಗಾವಿ:** ಬೆಳಗಾವಿ ಗ್ರಾಮೀಣ ಕ್ಷೇತ್ರದ ಕುಕಡೊಳ್ಳಿ ಗ್ರಾಮದ ಕೆರೆಯ ಅಭಿವೃದ್ಧಿ ಕಾಮಗಾರಿಗೆ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಭೂಮಿ ಪೂಜೆ ನೆರವೇರಿಸಿ, ಚಾಲನೆ ನೀಡಿದರು.

ಸುಮಾರು 1.27 ಕೋಟಿ ವೆಚ್ಚದಲ್ಲಿ ಈ ಕೆರೆಯ ಕಾಯಕಲ್ಪ ನಡೆಯಲಿದ್ದು, ಪ್ರಮುಖವಾಗಿ ಸ್ಟೋನ್ ಪಿಚಿಂಗ್ ಹಾಗೂ ಕಾಲುವೆ (ಕ್ಯಾನಲ್) ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಈ ಮೂಲಕ ಗ್ರಾಮದ ಜಲಮೂಲವನ್ನು ಸಂರಕ್ಷಿಸಿ, ರೈತರಿಗೆ ಹಾಗೂ ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡುವುದು ನಮ್ಮ ಗುರಿಯಾಗಿದೆ ಎಂದು ಚನ್ನರಾಜ ಹಟ್ಟಿಹೊಳಿ ತಿಳಿಸಿದರು.

ಈ ವೇಳೆ ಗ್ರಾಮದ ಹಿರಿಯರು, ಯುವಕರು ಪಕ್ಷದ ಮುಖಂಡ ರು, ಕಾರ್ಯಕರ್ತರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶಿವಶರಣೆ ಅಕ್ಕಮಹಾದೇವಿ ಜಯಂತಿ ಆಚರಣೆ



◆ **ಯಮಕನಮರಡಿ:** ಸ್ಥಳೀಯ ಶೂನ್ಯ ಸಂಪಾದನಾ ಹುಣಸಿಕೊಳ್ಳ ಮಠದಲ್ಲಿ ಶಿವಶರಣೆ ಅಕ್ಕಮಹಾದೇವಿ ಜಯಂತಿ ಆಚರಿಸಲಾಯಿತು. ಸಾನ್ನಿಧ್ಯ ವಹಿಸಿದ್ದ ಶ್ರೀಮಠದ ಉತ್ತರಾಧಿಕಾರಿ ಸಿದ್ದ ಬಸವ ದೇವರು ಮಾತನಾಡಿ, 12ನೇ ಶತಮಾನದಲ್ಲೇ ಶಿವಶರಣೆ ಅಕ್ಕಮಹಾದೇವಿ ಅವರು ಮಹಿಳೆಯರು ಸಬಲೆ ಎಂಬುವುದು ತೋರಿಸಿದ್ದಾರೆ. ಸಾಕಷ್ಟು ವಚನಗಳನ್ನು ರಚಿಸಿದ್ದಾರೆ ಆದೇ ವಚನಗಳ ಸಂಪತ್ತು ಇಂದಿನ ಮಹಿಳೆಯರಿಗೆ ಮಾರ್ಗದರ್ಶನವಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶ್ರೀಮಠದ ಅಕ್ಕನ ಬಳಗದ ಎಲ್ಲ ಮಹಿಳೆಯರು ತೊಟ್ಟಿಲು ಪೂಜೆ ಮಾಡಿ ಜೋಗುಳ ಹಾಡಿ ನಾಮಕರಣ ಮಾಡಿ ಶಿವಶರಣೆ ಅಕ್ಕಮಹಾದೇವಿಯ ಗುಣ ಗಾನವನ್ನು ಮಾಡುವಲ್ಲಿ ಯಶಸ್ವಿಯಾದರು ಎಲ್ಲರಿಗೂ ಶ್ರೀಮಠದಲ್ಲಿ ಮಹಾಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ವಿದ್ಯಾರ್ಥಿಗಳಿಂದಲೇ ದೇಶದ ಭವಿಷ್ಯ ನಿರ್ಮಾಣ: ಶಶಿಕಾಂತ ಗುರೂಜಿ

◆ **ರಾಯಬಾಗ:** ದೇಶದ ಭವಿಷ್ಯವನ್ನು ಕಟ್ಟಿ ಕೊಡುವಲ್ಲಿ ವಿದ್ಯಾರ್ಥಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಶಶಿಕಾಂತ ಗುರೂಜಿ ಹೇಳಿದರು. ಇಂದಿನ ವಿದ್ಯಾರ್ಥಿಗಳು ನಾಳೆಯ ಸಮಾಜದ ದಿಕ್ಕು ತೋರಿಸುವ ನಾಯಕರು ಆಗಿರುವುದರಿಂದ ಅವರು ವಿದ್ಯಾಭ್ಯಾಸದ ಜೊತೆಗೆ ಉತ್ತಮ ಸಂಸ್ಕಾರಗಳನ್ನು ಅಳವಡಿಸಿಕೊಳ್ಳಬೇಕು ಎಂದು ಶಶಿಕಾಂತ ಗುರೂಜಿ ಅಭಿಪ್ರಾಯಪಟ್ಟರು.

ಪಟ್ಟಣದ ವಿಶ್ವಚೇತನ ಆಂಗ್ಲ ಮಾಧ್ಯಮ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು,

ವಿದ್ಯಾರ್ಥಿಗಳು ಪಠ್ಯಕ್ರಮಕ್ಕೆ ಮಾತ್ರ ಸೀಮಿತವಾಗದೆ ಸುತ್ತಮುತ್ತಲಿನ ಸಮಾಜದ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವುಗಳಿಗೆ ಪರಿಹಾರ ಕಂಡುಹಿಡಿಯುವ ಮನೋಭಾವ ಬೆಳೆಸಿಕೊಳ್ಳಬೇಕು. ಶಿಸ್ತು, ಪರಿಶ್ರಮ ಮತ್ತು ದೇಶಪ್ರೇಮ ಇವುಗಳ ಸಮನ್ವಯದಿಂದ ವಿದ್ಯಾರ್ಥಿಗಳು ಉತ್ತಮ ನಾಗರಿಕರಾಗಿ ಬೆಳೆಯಲು ಸಾಧ್ಯವೆಂದು ಹೇಳಿದರು.



ಬೆಳಗಾವಿ ಆರ್ ಎಲ್ ಎಸ್ ಕಾಲೇಜಿನ ದೈಹಿಕ ನಿರ್ದೇಶಕ ಡಾ.ಶಿವಾನಂದ ಬುಲಬುಲಿ ಮಾತನಾಡಿ, ಮಕ್ಕಳು ಶ್ರದ್ಧೆ ಮತ್ತು ಭಕ್ತಿಯಿಂದ ಅಧ್ಯಯನದಲ್ಲಿ ತೊಡಗಿಕೊಂಡರೆ ಜೀವನದಲ್ಲಿ ಯಶಸ್ಸು ಸಾಧಿಸುವುದು ಖಚಿತ ಎಂದು ಹೇಳಿದರು. ಪರಿಶ್ರಮ ಮತ್ತು ಶಿಸ್ತು ವಿದ್ಯಾರ್ಥಿಗಳ ಪ್ರಗತಿಗೆ ಮುಖ್ಯ ಅಸ್ತಿಪಂಜರವಾಗಿದ್ದು, ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯವೆಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಹಾಗೂ ಸೈನಿಕರನ್ನು ಸತ್ಕರಿಸಲಾಯಿತು.

ಕ್ಷೇತ್ರ ಸಮನ್ವಯಾಧಿಕಾರಿ ಬಸವರಾಜಕಾಂಬಳೆ, ಅನಿಲ ಸುತಾರ, ರೂಪಾ ತುರಾಯಿದಾರ, ವಾಸೀಮ್ ಅಕ್ರಂ ಮುಲ್ಲಾ ಮಾತನಾಡಿದರು.

ಸಂಸ್ಥಾಪಕ ಅಧ್ಯಕ್ಷ ಚೈತನ ನಾಯಿಕ, ವಿದ್ಯಾ ನಾಯಿಕ, ರಮೇಶ ಕುಲಕರ್ಣಿ(ಪಟ್ಟು ಸರ್ಕಾರ), ರಾಜು ಹಿಪ್ಪರಗಿ, ನೆಹರು ಮಗದುಮ್ಮ,ಯುವರಾಜ ಮಾನೆ, ಸಂತೋಷ ಪಾಟೀಲ ಸೇರಿದಂತೆ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪಾಲಕರು ಇದ್ದರು.

6ನೇ ತರಗತಿಗೆ ಪ್ರವೇಶ ಪರೀಕ್ಷೆ

◆ **ಬೆಳಗಾವಿ:** 2026-2027 ನೇ ಸಾಲಿನ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಡಾ.ಎ ಪಿ ಜೆ ಅಬ್ದುಲ್ ಕಲಾಮ್ ವಸತಿ ಶಾಲೆಗಳ 6ನೇ ತರಗತಿಯ ಪ್ರವೇಶಕ್ಕಾಗಿ ಪ್ರವೇಶ ಪರೀಕ್ಷೆಯನ್ನು ಏ.12 ರಂದು ಬೆಳಿಗ್ಗೆ 11 ರಿಂದ ಮದ್ಯಾಹ್ನ 1 ಗಂಟೆಯ ವರೆಗೆ ಜರುಗಲಿವೆ. ಅರ್ಜಿದಾರರು ಸಂಬಧ ಪಟ್ಟ ವಸತಿ ಶಾಲೆಗಳಿಂದ ಅಥವಾ ಸಂಬಧಿಸಿದ ತಾಲೂಕು ಮಾಹಿತಿ ಕೇಂದ್ರಗಳಿಂದ ಅಥವಾ https://erp.dom.karnataka.gov.in/adm/Admission/StudentHallticket ಪ್ರವೇಶ ಪತ್ರವನ್ನು ಪಡೆಯಬಹುದಾಗಿದೆ ಎಂದು ಬೆಳಗಾವಿ ಜಿಲ್ಲಾಧಿಕಾರಿಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಪ್ರಕಟಣೆ ತಿಳಿಸಿದೆ.



ಗೋಕಾಕ: ಸಮೃದ್ಧಿ ಕಾಲೇಜ್ ಆಫ್ ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜ್ ಮತ್ತು ತುಕ್ಕಾರ ಸ್ಕೂಲ್ ಆಫ್ ನರ್ಸಿಂಗ ಕಾಲೇಜಿನ ವಾರ್ಷಿಕ ಕ್ರೀಡಾಕೂಟಕ್ಕೆ ಆರ್‌ಟಿಓ ಸದಾಶಿವ ಮರಲಿಂಗಣವರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಡಾ. ಮಹಾಂತೇಶ ಕಡಾಡಿ, ಕಾರ್ಯದರ್ಶಿ ಡಾ.ಮಯೂರಿ ಕಡಾಡಿ, ಪ್ರಾಚಾರ್ಯರುಗಳಾದ ವಿಜಯ ಮಲಕನ್ನವರ, ಡಾ.ಮಹಾಂತೇಶ ನಾಗನೂರಿ, ಡಾ.ಚನ್ನಮಲ್ಲಪ್ಪ ಹಡಗಿನಾಳ, ವ್ಯವಸ್ಥಾಪಕ ಮಹಾದೇವ ಬಂಡ್ರೋಳಿ ಇದ್ದರು.

ಅದ್ದೂರಿ ಪಲ್ಲಕ್ಕಿ ,ರಥೋತ್ಸವಕ್ಕೆ ತೆರೆ



◆ **ಅಳಗವಾಡಿ :** ಕಳೆದ ಮೂರು ದಿನಗಳಿಂದ ನಡೆದ ಹನುಮಾನ ದೇವರ ಪಲ್ಲಕ್ಕಿ ಉತ್ಸವ ಹಾಗೂ ರಥೋತ್ಸವಕ್ಕೆ ಶನಿವಾರ ಸಂಜೆ ಅದ್ದೂರಿಯಾಗಿ ತೆರೆ ಕಂಡಿತು ಹನುಮಾನ ದೇವರಿಗೆ ಪ್ರತಿ ದಿನ ಒಂದೊಂದು ತರಹದ ಅಲಂಕಾರ ಹಾಗೂ ವಿವಿಧ ಕಾರ್ಯಕ್ರಮಗಳು ಜರುಗಿದವು. ಸಾವಿರಾರು ಭಕ್ತರು ದೀರ್ಘದಂಡ ನಮಸ್ಕಾರ ಹಾಕಿ ಹರಕೆ ತೀರಿಸಿ ದೇವರ ದರ್ಶನ ಪಡೆದರು ಭಕ್ತರಿಗೆ ಜಾತ್ರಾ ಮಹೋತ್ಸವದ ಅಂಗವಾಗಿ ನಿತ್ಯ ಅನ್ನ ಸಂತರ್ಪಣೆಯನ್ನು ವ್ಯವಸ್ಥೆ ಅಚುಕಟ್ಟುವಾಗಿ ಮಾಡಿದ್ದರು ಕೊನೆಯ ದಿನ ಸಾವಿರಾರು ಜನ ಸೇರಿ ರಥೋತ್ಸವ ಹಾಗೂ ಪಲ್ಲಕ್ಕಿ ಉತ್ಸವಕ್ಕೆ ಉತ್ತತ್ತಿ ಹಾಗೂ ಕೊಬ್ಬರಿಯನ್ನು ಎಸೆದು ತಮ್ಮ ಇಷ್ಟಾರ್ಥ ಸಿದ್ದಿಗಾಗಿ ಪ್ರಾರ್ಥನೆ ಮಾಡಿದರು . ಈ ಸಂದರ್ಭದಲ್ಲಿ ರೇವಣ್ಣ ಸರವ ದುಂಡಪ್ಪ ಹಾಲಾನಿ ಹನುಮಂತ ಹಣಜೆ ಮಾವೀರ ರಾಮಣ್ಣ ಶಿರಗೂರೆ ಮಹಾದೇವ ಶಿರಗೂರೆ, ಪುಂಡಲೀಕ ಬಿದರಿ, ಭೀಮಪ್ಪ ಹಾಲ್ಲೂಣೆ, ಮಾರುತಿ ಪಡಚೆ,ಗುಂಡು ಹಂಜೆ, ಸಂತ್ರಾಮ ಶಿರಗೂರೆ, ಮಾಯಪ್ಪ ಬನಶಂಕರಿ, ಪಕೀರ ಬಂದಿಕೇರಿ ಚಂದು ಹಂಜೆ,, ಪಾಪು ಬನ್ನಿ , ಕಲ್ಲಪ್ಪ ಮೆಲವಂಕಿ ಹನುಮಂತ ನಾಯಕ ಸಂತೋಷ್ ಚಿಂಚಲಿ ಮುಂತಾದವರು ಉಪಸ್ಥಿತರಿದ್ದರು.

ಫಲಾನುಭವಿಗಳಿಗೆ ಚೆಕ್ ವಿತರಣೆ

◆ **ರಾಯಬಾಗ:** ತಾಲೂಕಿನ ಮುಗಳ ಖೋಡ ಕ್ರಾಸ್, ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿಯಮಿತ ಮುಗಳಖೋಡ, ಬೆಳಗಾವಿ ಹಾಲು ಒಕ್ಕೂಟದ ಕ್ಷೀರ ಸಂಜೀವಿನಿ ಐದನೇ ಯೋಜನೆಯ ಅಡಿಯಲ್ಲಿ ಬೆಕ್ಕೇರಿ ಗ್ರಾಮದಲ್ಲಿ ಹೈನುಗಾರಿಕೆಗೆ ಎಮ್ಮೆ ಆಕಳುಗಳನ್ನು ಖರೀದಿಗೆ 14 ಜನ ಫಲಾನುಭವಿಗಳಿಗೆ ತಲಾ 46,000 ಗಳನ್ನು ವಿತರಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಪ್ರಣಯಣ್ಣ ಪಾಟೀಲಮಾತನಾಡಿ, ಹೈನುಗಾರಿಕೆಯಲ್ಲಿ ಮಹಿಳೆಯರ ಪಾತ್ರ ಮಹತ್ವವಾದದ್ದು,

ಈ ಯೋಜನೆಯನ್ನು ಸದುಪಯೋಗ ಪಡಿಸಿಕೊಂಡು ಆರ್ಥಿಕ ವಾಗಿ ಸಬಲರಾಗಿ ಒಕ್ಕೂಟಕ್ಕೆ ಗುಣಮಟ್ಟದ ಹಾಲನ್ನು ಪೂರೈಸಬೇಕೆಂದು ಹೇಳಿದರು ಇದೇ ಸಂದರ್ಭದಲ್ಲಿ ಮರಣ ಹೊಂದಿದ ಹಸುವಿನ ಮಾಲೀಕರಿಗೆ ರಾಸು ವಿಮೆ ಚೆಕ್ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಬಸಪ್ಪ ನಾಗೇಗೌಡ, ಬೆಳಗಾವಿ ಹಾಲು ಒಕ್ಕೂಟ ವ್ಯವಸ್ಥಾಪಕ ಚಂದ್ರಶೇಖರ್ ಕಂಬಳ, ಸುನಿಲ್ ಜಿಲ್ಲೆದಾರ ವಿಸ್ತರಣಾಧಿಕಾರಿಗಳು, ಗಜೇಂದ್ರ ಕಾಂಬಳೆ ವಿಸ್ತರಣಾಧಿಕಾರಿಗಳು, ಪರಶುರಾಮ ಹಳ್ಳೂರೆ ಹಾಗೂ ಮುಂತಾದವರು ಉಪಸ್ಥಿತರಿದ್ದರು.



ದೇವಾಂಗ ಜ್ಯೋತಿಗೆ ಭವ್ಯ ಸ್ವಾಗತ



◆ **ಯಮಕನಮರಡಿ:** ಗ್ರಾಮಕ್ಕೆ ಆಗಮಿಸಿದ್ದ ದೇವಾಂಗ ಜ್ಯೋತಿಯನ್ನು ಸಮಾಜ ಬಾಂಧವರು ಅದ್ದೂರಿಯಾಗಿ ಸ್ವಾಗತಿಸಿದರು.

ಹಂಪಿ ಹೇಮಕೂಟ ಶ್ರೀ ಗಾಯತ್ರೀ ಪೀಠ ಮಹಾಸಂಸ್ಥಾನ ಟ್ರಸ್ಟ್ ಹಾಗೂ ಕರ್ನಾಟಕ ರಾಜ್ಯ ದೇವಾಂಗ ಸಂಘ ಬೆಂಗಳೂರು ಸಂಯುಕ್ತಾಶ್ರಯದಲ್ಲಿ ಅಖಿಲ ಭಾರತ ದೇವಾಂಗ ನೇಕಾರ ಜಾಗೃತ ಸಮಾವೇಶ 2026 ಹಾಗೂ ದಯಾನಂದ ಮಹಾಪೂರಿ ಸ್ವಾಮೀಜಿ 36 ನೇ ವರ್ಷದ ಪಟ್ಟಾಭಿಷೇಕ ಹಾಗೂ ತುಲಾಭಾರ ಸಮಾರಂಭ ಮೇ 9 ಮತ್ತು 10ರಂದು ಸುಕ್ಷೇತ್ರ ಬಾದಾಮಿ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ನಡೆಯಲಿದ್ದು, ಇದರ ನಿಮಿತ್ತ ರಾಜ್ಯದ ಉದ್ದಕ್ಕೂ ಸಂಚರಿಸುತ್ತಿರುವ ದೇವಾಂಗ ಜ್ಯೋತಿ ಗ್ರಾಮಕ್ಕೆ ಆಗಮಿಸಿತ್ತು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ಬಸವರಾಜ್ ಬಾವನ್ನವರ, ಗೋಪಾಲ ಚಪನಿ, ಉಲ್ಲಾಸ್ ಪಾಟೀಲ, ಶಾಂತರಾಮ್ ಕಾಪಸಿ, ಸಂತೋಷ ಬಾವನ್ನವರ, ಅಭಿಜಿತ್ ಬಾವನ್ನವರ, ಅನಿಲ ಕಡಗಾವಿ, ರಾಜು ನಟ್ಟಿ, ರಾಜು ಲಟ್ಟಿ, ಶ್ರೀಶೈಲ್ ಪಿಟಗಿ , ಸತೀಶ್ ಪಿಟಗಿ , ಉಮೇಶ್ ಹುಕ್ಕೇರಿ . ವಿಠ್ಠಲ್ ಅತ್ತಿಮರದ , ಪ್ರಕಾಶ್ ಅತ್ತಿಮರದ,, ಸಿದ್ದರಾಮಯ್ಯ ದೇವಾಂಗ ಮಠ ಉಪಸ್ಥಿತರಿದ್ದರು.

ಯತ್ನಾಳಗೆ ಬುದ್ದಿಯಿಲ್ಲ: ಶಾಸಕ ಆಸೀಫ್ ಸೇಠ್

◆ **ಬೆಳಗಾವಿ:** ಮುಸ್ಲಿಂ ಮತ ಬಿಜೆಪಿಗೆ ಬೇಡ ಎನ್ನುವ ಯತ್ನಾಳ್‌ಗೆ ಬುದ್ಧಿಯಿಲ್ಲ ಎಂದು ಬೆಳಗಾವಿ ಉತ್ತರ ಮತ ಕ್ಷೇತ್ರದ ಕಾಂಗ್ರೆಸ್ ಶಾಸಕ ಆಸೀಫ್ ಸೇಠ್ ಬಸನಗೌಡ ಪಾಟೀಲ ಯತ್ನಾಳ್ ವಿರುದ್ಧ ವಾಗ್ದಾಳಿ ನಡೆಸಿದರು. ಬೆಳಗಾವಿ ನಗರದ ತಮ್ಮ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಮಗೆ ಮುಸ್ಲಿಂರ ಮತಗಳು ಬೇಡ ಎಂದಿದ್ದಾರೆ. ಇವರ ತಪ್ಪು ಕಲ್ಪನೆಯಿಂದ ದೇಶ ಹಾಳಾಗುತ್ತಿದೆ. ಇವರು ಬೇಡ, ಅವರು ಬೇಡ ಎಂದು ಒಡೆದು ಆಳುತ್ತಿದ್ದಾರೆ ಎಂದರು. ಬಾಗಲಕೋಟೆ ಮತ್ತು ದಾವಣಗೇರೆ ಉಪ ಚುನಾವಣೆ ವಿಚಾರವಾಗಿ ಮಾತನಾಡಿದ ಅವರು, ಎರಡು ಕ್ಷೇತ್ರದಲ್ಲಿ ಉಪಚುನಾವಣೆಯಲ್ಲಿ ಎರಡು ಕಡೆ ನಾವೇ ಗೆಲ್ಲುತ್ತೇವೆ. ಜಿಲ್ಲಾ ಸಚಿವ ಸತೀಶ್ ಜಾರಕಿಹೊಳಿ ಅವರು ಬಾಗಲಕೋಟೆಯಲ್ಲಿ ಇದ್ದಾರೆ. ನಾನು ದಾವಣಗೇರೆ ಹೋಗಿ ಬಂದಿದ್ದೇನೆ ಎಂದು ತಿಳಿಸಿದರು.



ಕಿರುಸುದ್ದಿ

ಕಬ್ಬಿನ ಬಿಲ್ ಬಾಕಿ ಬಿಡುಗಡೆಗೆ ರೈತರ ಆಗ್ರಹ


ಬೆಳಗಾವಿ : ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಸಕ್ಕರೆ ಕಾರ್ಖಾನೆಗಳು ರೈತರ ಬಾಕಿ ಹಣವನ್ನು ಪಾವತಿಸದೆ ಇರುವುದನ್ನು ಖಂಡಿಸಿ, ಬಡ್ಡಿ ಸಮೇತ ತಕ್ಷಣ ಪಾವತಿಸಬೇಕೆಂದು ಆಗ್ರಹಿಸಿ ಭಾರತೀಯ ಕೃಷಿಕ ಸಮಾಜದ ವತಿಯಿಂದ ರೈತರು ಪ್ರತಿಭಟಿಸಿದರು ಬಳಿಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಶನಿವಾರ ಹಲವು ರೈತರು ಭಾಗವಹಿಸಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಕಾರ್ಖಾನೆಗಳ ಮಾಲಿಕರ ವಿರುದ್ಧ ಆಕ್ರೋಶವನ್ನು ಹೊರ ಹಾಕಿದರು. ರೈತರು, ಕಬ್ಬು ಸರಬರಾಜು ಮಾಡಿದ ನಂತರ 15 ದಿನಗಳೊಳಗೆ ಬಿಲ್ ಪಾವತಿಸಬೇಕು ಎಂಬ ನಿಯಮ ಇದ್ದರೂ, ಅನೇಕ ಕಾರ್ಖಾನೆಗಳು ಇದನ್ನು ಪಾಲಿಸದೆ ರೈತರ ಬಾಕಿ ಹಣವನ್ನು ತಿಂಗಳಗಟ್ಟಲೆ ಉಳಿಸಿಕೊಂಡಿರುವುದಾಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು 3500 ಕೋಟಿ ರೂಪಾಯಿ ಸಕ್ಕರೆ ಬಿಲ್ ಬಾಕಿಯಿದ್ದು, ನಮ್ಮ ಬೆಳೆಗೆ ವೈಜ್ಞಾನಿಕ ಬೆಲೆ ನೀಡಿ. ಇಲ್ಲದಿದ್ದರೇ, ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಮುದಕಣ್ಣ ಕಂಕೊಳ್ಳಿ ಅವರು ಎಚ್ಚರಿಕೆಯನ್ನು ನೀಡಿದರು.ಸಕ್ಕರೆ ಕಾರ್ಖಾನೆಗಳು ಸುಮಾರು 3500 ಕೋಟಿ ರೂಪಾಯಿ ಕಬ್ಬಿನ ಬಿಲ್ ಬಾಕಿ ಉಳಿಸಿಕೊಂಡಿವೆ. ಇದೇ ನೀತಿ ಮುಂದುವರೆದರೆ, ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಮತ್ತು ಸಕ್ಕರೆ ಆಯುಕ್ತರ ಕಾರ್ಯಾಲಯಕ್ಕೆ ಮುತ್ತಿಗೆ ಹಾಕಲಾಗುವುದೆಂದು ನವದೆಹಲಿಯ ಭಾರತೀಯ ಕೃಷಿಕ ಸಮಾಜದ ರಾಜ್ಯಾಧ್ಯಕ್ಷ ಮಹಾಂತೇಶ್ ಕಮತ್ ಹೇಳಿದರು.ಈ ವೇಳೆ ರೈತ ಸಂಘಟನೆಯ ಮುಖಂಡರುಗಳು, ಕಬ್ಬು ಬೆಳೆಗಾರ ರೈತರು ಸೇರಿದಂತೆ ಹಲವರು ರೈತರು ಪಾಲ್ಗೊಂಡಿದ್ದರು.

ಕೆರೆಯಲ್ಲಿ ಮೀನುಗಳ ಮಾರಣಹೋಮ: ಆಕ್ರೋಶ

ಬೆಳಗಾವಿ: ಇಲ್ಲಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದಾದ ಕೋಟೆ ಕೆರೆಯಲ್ಲಿ ಹಲವಾರು ಮೀನುಗಳ ಮಾರಣಹೋಮ ನಡೆದಿದೆ. ಈ ಮೀನುಗಳ ಸಾವಿಗೆ ಅಧಿಕಾರಿಗಳ ಮೌನ ಮತ್ತು ನಿರ್ಲಕ್ಷ್ಯದಿಂದಾಗಿ ಕೆರೆಯ ನೀರು ಕಲುಷಿತಗೊಂಡು ಸಾವಿರಾರು ಮೀನುಗಳು ಸಾವನ್ನಪ್ಪಿವೆ. ಕೆಟ್ಟ ವಾಸನೆಯಿಂದಾಗಿ ಪ್ರಾತಃಕಾಲದ ವಾಯುವಿಹಾರಿಗಳು ಮತ್ತು ಸ್ಥಳೀಯ ನಾಗರಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಸಂಬಂಧಿಸಿದ ಇಲಾಖೆಯ ವಿರುದ್ಧ ಜನರು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಬೆಳಗಾವಿಯ ಐತಿಹಾಸಿಕ ಕೋಟೆ ಕೆರೆ ಇದು ಅಭಿವೃದ್ಧಿಯ ಬದಲು ಅವ್ಯವಸ್ಥೆಯ ಆಗರವಾಗಿದೆ. ಇತ್ತೀಚೆಗೆ ಸುರಿದ ಭಾರಿ ಮಳೆಗೆ ಚರಂಡಿಯ ಕೊಳಚೆ ನೀರು ನೇರವಾಗಿ ಕೆರೆಗೆ ನುಗ್ಗಿದ್ದು, ವಿಷಕಾರಿ ನೀರು ಸೇವಿಸಿದ ಜಲಚರಗಳು ಗುಂಪು ಗುಂಪಾಗಿ ಸಾವನ್ನಪ್ಪುತ್ತಿವೆ. ಇದರಿಂದಾಗಿ ಕೆರೆಯ ಸುತ್ತಮುತ್ತಲ ಪ್ರದೇಶದಲ್ಲಿ ವಿಪರೀತ ದುರ್ವಾಸನೆ ಹರಡುತ್ತಿದ್ದು, ಸಾರ್ವಜನಿಕರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುವ ಭೀತಿ ಎದುರಾಗಿದೆ.ಉದ್ಯಾನ ಅಭಿವೃದ್ಧಿಪಡಿಸಬೇಕು. ವಾಕಿಂಗ್ ಟ್ರ್ಯಾಕ್ ಎಲ್ಲ ಹಾಳಾಗಿ ಹೋಗಿದೆ. ಶಾಸಕರು ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಇತ್ತ ಗಮನ ಹರಿಸಿ ಸಮಸ್ಯೆಯನ್ನು ಪರಿಹರಿಸಬೇಕೆಂದು ಸ್ಥಳೀಯರು ಆಗ್ರಹಿಸಿದರು.

ಮುಧೋಳಕ್ಕಿಂದು ರಘುವಿಜಯತೀರ್ಥ ಶ್ರೀಗಳು



ಮುಧೋಳ: ಏ.5ರಂದು ಭಾನುವಾರ ನಗರಕ್ಕೆ ಕೊಡ್ಲಿ ಆರ್ಯ ಅಕ್ಷೋಭ್ಯ ತೀರ್ಥ ಮಠಾಧೀಶ ರಘು ವಿಜಯತೀರ್ಥ ಶ್ರೀಪಾದಂಗಳವರು ದಿಗ್ವಿಜಯ ಮಾಡಲಿದ್ದಾರೆ. ಸಾಯಿನಗರದ ಆನಂದ ಕುಲಕರ್ಣಿ ಜೇರೆ ನಿವಾಸದಲ್ಲಿ ನಡೆಯುವ ಶ್ರೀರಾಮದೇವರ ಪೂಜೆ ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಶ್ರೀಗಳು ಭಾಗ ವಹಿಸಲಿದ್ದಾರೆಂದು ಸಂಘಟಕ ಸಂಜೀವ ಮೋಕಾಶಿ ಪ್ರಸಾದ ಖಾಸನೀಸ ಹಾಗೂ ಭಾರ್ಗವ ಕಟ್ಟಿ ತಿಳಿಸಿದ್ದಾರೆ.

ಆಕ್ಷೇಪಣೆಗೆ ಆಹ್ವಾನ

ಜಮಖಂಡಿ: 2024-25ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಜಮಖಂಡಿ ಮತ್ತು ರಬಕವಿ-ಬನಹಟ್ಟಿ ತಾಲೂಕಿನ ರೈತರು ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ವಿಮೆ ಮಾಡಿಸಿದ ಬೆಳೆ ಹಾಗೂ ಪಹಣಿಯಲ್ಲಿ ದಾಖಲಾದ ಬೆಳೆ ವ್ಯತ್ಯಾಸದಿಂದ 2024ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಮಖಂಡಿ ತಾಲೂಕಿನ 38 ಹಾಗೂ ರಬಕವಿ-ಬನಹಟ್ಟಿ ತಾಲೂಕಿನ 6 ಅರ್ಜಿಗಳು ತಿರಸ್ಕೃತಗೊಂಡಿವೆ. ರೈತರ ವಿವರವನ್ನು ಜಮಖಂಡಿ ತಾಲೂಕಿನ ಕೃಷಿ, ತೋಟಗಾರಿಕೆ ಇಲಾಖೆ ಹಾಗೂ ರೈತ ಸಂಪರ್ಕ ಕೇಂದ್ರ, ಜಮಖಂಡಿ, ಸಾವಳಗಿ ಮತ್ತು ತೇರದಾಳ ಕಚೇರಿಗಳ ಸೂಚನಾ ಫಲಕಗಳ ಮೇಲೆ ಅಳವಡಿಸಲಾಗಿದೆ. 15 ದಿನದೊಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಆಕ್ಷೇಪಣೆಯನ್ನು ಸಂಬಂಧಿಸಿದ ಇಲಾಖೆಗೆ ಸಲ್ಲಿಸಲು ತಾಲೂಕಿನ ಸಹಾಯಕ ಕೃಷಿ ನಿರ್ದೇಶಕ ಸಿದ್ದಪ್ಪ ಬಿ. ಪಟ್ಟಿಹಾಳ ತಿಳಿಸಿದ್ದಾರೆ.



ಬೆಳಗಾವಿ: ನಗರದ ಮಾನವ ಬಂಧುತ್ವ ವೇದಿಕೆಯ ಸಭಾಂಗಣದಲ್ಲಿ, ಬಂಡಾಯ ಸಾಹಿತ್ಯ ಸಂಘಟನೆಯ ಜಿಲ್ಲಾ ಘಟಕ ಆಯೋಜಿಸಿದ್ದ ಬಂಡಾಯ ಸಾಹಿತ್ಯ: ಹೊಸ ತಲೆಮಾರು ಅಭಿಯಾನದ ಅಂಗವಾಗಿ ಸಂಘಟಿಸಲಾಗುವ ರಾಜ್ಯ ಮಟ್ಟದ ವಿಚಾರ ಸಂಕಿರಣದ ಪೂರ್ವಭಾವಿ ಸಭೆ ನಡೆಯಿತು.

ಜಾತ್ರೆಗಳಿಂದ ಪ್ರೀತಿ, ವಿಶ್ವಾಸ ಹೆಚ್ಚಳ : ಕಾಗೇರಿ

ನೇಸರಗಿ: ನಗರ ಪಟ್ಟಣ, ಗ್ರಾಮಗಳಲ್ಲಿ ನಡೆಯುವ ಜಾತ್ರೆಗಳಿಂದ ಆದರಲ್ಲೂ ಗ್ರಾಮದೇವತೆಯ ಜಾತ್ರೆಯನ್ನು ಸಂಭ್ರಮ ಸಡಗರದಿಂದ ಆಚರಿಸಲಾಗುತ್ತದೆ. ಈ ಜಾತ್ರೆಗಳಿಂದ ಜನರಲ್ಲಿ ಪರಸ್ಪರ ಪ್ರೀತಿ ವಿಶ್ವಾಸ ಹೆಚ್ಚಾಗುತ್ತದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. ಅವರು ಶನಿವಾರದಂದು ಸಮೀಪದ ಮದನಬಾವಿ ಗ್ರಾಮದಲ್ಲಿ 11 ವರ್ಷಗಳ ನಂತರ ನಡೆಯುತ್ತಿರುವ ಶ್ರೀ ಗ್ರಾಮದೇವತೆಯ ಅದ್ದೂರಿ ಜಾತ್ರೆಗೆ ಭೇಟಿ ನೀಡಿ, ದೇವಿಯ ದರ್ಶನ ಪಡೆದು ಮಾತನಾಡಿ, ಶ್ರೀ ಗ್ರಾಮದೇವತೆಯೂ ಗ್ರಾಮದ ಎಲ್ಲರಿಗೂ ಸುಖ ಸಂತೋಷ, ಮಳೆ, ಬೆಳೆ, ನೀಡಿ ಜನ ಸದಾ ಸುಖದಿಂದ ಜೀವನ ಮಾಡಲಿ ಎಂದರು. ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಮಾತನಾಡಿ 11 ವರ್ಷಗಳ ನಂತರ ಗ್ರಾಮದೇವತೆ ಜಾತ್ರೆ ನಡೆಯುತ್ತಿರುವದು ನಮಗೆಲ್ಲರಿಗೂ ಸಂತಸ ತಂದಿದ್ದು, ದೂರದ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲರೂ ಇಂದು ಗ್ರಾಮಕ್ಕೆ ಬಂದು ತನು ಮನ ಧನದಿಂದ ಜಾತ್ರೆ ಆಚರಿಸುತ್ತಿದ್ದು ಸಂತಸದ ವಿಷಯ ಎಂದರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಶಿವಪ್ಪ ಗುಜನಾಳ, ಯಲ್ಲನಗೌಡ ದೊಡ್ಡಗೌಡರ, ಅಜ್ಜಪ್ಪ ಹಮ್ಮಿನಿ, ನಿಂಗನಗೌಡ ದೊಡ್ಡಗೌಡರ, ಈರನಗೌಡ ದೊಡ್ಡಗೌಡರ, ಚನಗೌಡ ಹಾದಿಮನಿ, ಬಸವರಾಜ ಬದ್ರಿ, ಸೋಮಪ್ಪ ಕೊಳದೂರ, ಶಂಕರಗೌಡ ಕೊಳದೂರ , ಜಾತ್ರಾ ಕಮಿತಿ ಸದಸ್ಯರು, ಗ್ರಾಮದ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.



ನೇಸರಗಿ: ಸಮೀಪದ ಮದನಬಾವಿ ಗ್ರಾಮದಲ್ಲಿ 11 ವರ್ಷಗಳ ನಂತರ ನಡೆಯುತ್ತಿರುವ ಶ್ರೀ ಗ್ರಾಮದೇವತೆಯ ಅದ್ದೂರಿ ಜಾತ್ರೆಗೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಭೇಟಿ ನೀಡಿ, ದೇವಿಯ ದರ್ಶನ ಪಡೆದು ಮಾತನಾಡಿದರು.

ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಸೂಚನೆ

ಕುಷ್ಠರೋಗ ಮುಕ್ತ ಜಿಲ್ಲೆಯನ್ನಾಗಿಸಿ

ಬೆಳಗಾವಿ : ಜಿಲ್ಲೆಯನ್ನು ಕುಷ್ಠ ರೋಗಮುಕ್ತವನ್ನಾಗಿಸಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ನಿಯಮಿತ ಪತ್ತೆ ಪರೀಕ್ಷೆಗಳು ಅತ್ಯಗತ್ಯವಾಗಿದೆ. ಕುಷ್ಠ ರೋಗಮುಕ್ತ ಜಿಲ್ಲೆಯನ್ನಾಗಿಸುವ ನಿಟ್ಟಿನಲ್ಲಿ ಎಲ್ಲ ಅಧಿಕಾರಿಗಳು ಶ್ರಮಿಸಬೇಕು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಸೂಚನೆ ನೀಡಿದರು.



ಶನಿವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಲಸಿಕಾ ಕಾರ್ಯ ಪಡೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯ ಎಲ್ಲ ಗ್ರಾಮಗಳಲ್ಲಿಯೂ ಕುಷ್ಠರೋಗ ಪತ್ತೆ ಹಚ್ಚುವ ಕಾರ್ಯವಾಗಬೇಕು. ಗ್ರಾಮ ಪಂಚಾಯತಿ ಹಾಗೂ ಶಾಲೆಗಳಲ್ಲಿ ಶಿಬಿರಗಳನ್ನು ಆಯೋಜಿಸಲು ಯೋಜನೆ ಸಿದ್ದತೆ ಮಾಡಿಕೊಳ್ಳಬೇಕು ಎಂದರು. ಜಿಲ್ಲೆಯನ್ನು ಕುಷ್ಠ ರೋಗಮುಕ್ತ ಜಿಲ್ಲೆಯನ್ನಾಗಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿತ್ತಿರುವ ಅಭಿಯಾನ ಯಶಸ್ವಿಗೊಳಿಸಲು ಆರೋಗ್ಯ ಇಲಾಖೆಯಿಂದ ಎಲ್ಲ ಸಿದ್ದತೆಗಳನ್ನು ಕೈಗೊಳ್ಳಬೇಕು.

ಅಭಿಯಾನದ ಯಶಸ್ಸಿಗೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಮತ್ತು ಆಶಾ ಕಾರ್ಯಕರ್ತೆಯರ ಮೂಲಕ ಜಿಲ್ಲೆಯ ಎಲ್ಲ ಗ್ರಾಮಗಳಿಗೆ ಭೇಟಿ ನೀಡಿ ಪರೀಕ್ಷೆ ನಡೆಸುವಂತೆ ತಿಳಿಸಿದರು. ಜಿಲ್ಲೆಯಲ್ಲಿ ಎಚ್‌ಐವಿ ಸೋಂಕಿತರ ಪತ್ತೆ ಕಾರ್ಯವನ್ನು ಚುರುಕುಗೊಳಿಸಬೇಕು. ಈ ಕಾರ್ಯದಲ್ಲಿ ಸರ್ಕಾರೇತರ ಸಂಸ್ಥೆಗಳು ಇಲಾಖೆಯೊಂದಿಗೆ ಸಹಕರಿಸಲು ಹೇಳಿದರು.

ಎಚ್‌ಐವಿ ಸೋಂಕು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಬೇಕು. ಜಿಲ್ಲೆಯಲ್ಲಿ ಎಚ್.ಆಯ್.ವಿ. ಸೋಂಕಿತರನ್ನು ಗುರುತಿಸಿ ಅವರಿಗೆ ಸೂಕ್ತ ಚಿಕಿತ್ಸೆಗೆ ಕ್ರಮವಹಿಸುವುದರ ಜೊತೆಗೆ ಕೌನ್ಸಿಲ್ ಮಾಡಿಸಬೇಕು. ವಿವಿಧ ಇಲಾಖೆಗಳಲ್ಲಿ ಎಚ್‌ಐವಿ ಅರಿವು ಮೂಡಿಸುವ ಕಾರ್ಯವಾಗಬೇಕು. ಈ ನಿಟ್ಟಿನಲ್ಲಿ ಸಮಿತಿ ರಚಿಸಿ ಕಾರ್ಯಕ್ರಮ ಆಯೋಜಿಸಬೇಕು. ವಿವಿಧ ವಸತಿ ನಿಲಯಗಳಲ್ಲಿಯೂ ಜಾಗೃತಿ ಕಾರ್ಯಕ್ರಮ ಆಯೋಜಿಸುವಂತೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ತಿಳಿಸಿದರು.

ಚುರುಕುಗೊಳಿಸಿ

ಅಭಿಯಾನದ ಯಶಸ್ಸಿಗೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಮತ್ತು ಆಶಾ ಕಾರ್ಯಕರ್ತೆಯರ ಮೂಲಕ ಜಿಲ್ಲೆಯ ಎಲ್ಲ ಗ್ರಾಮಗಳಿಗೆ ಭೇಟಿ ನೀಡಿ ಪರೀಕ್ಷೆ ನಡೆಸುವಂತೆ ತಿಳಿಸಿದರು. ಜಿಲ್ಲೆಯಲ್ಲಿ ಎಚ್‌ಐವಿ ಸೋಂಕಿತರ ಪತ್ತೆ ಕಾರ್ಯವನ್ನು ಚುರುಕುಗೊಳಿಸಬೇಕು. ಈ ಕಾರ್ಯದಲ್ಲಿ ಸರ್ಕಾರೇತರ ಸಂಸ್ಥೆಗಳು ಇಲಾಖೆಯೊಂದಿಗೆ ಸಹಕರಿಸಬೇಕು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಆಯ್.ಪಿ. ಗಡಾದ, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಚಾಂದನಿ ದೇವಡಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಬಿ ಬಸರಗಿ, ಜಿಲ್ಲಾ ಆರ.ಸಿ.ಎಚ್ ಅಧಿಕಾರಿ ಡಾ.ಎಸ್. ಎಸ್. ಸಾಯಣ್ಣವರ, ಚಿಕ್ಕೋಡಿ ಅಪರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್. ಗಡೇದ, ಕ್ರೀಡಾ ಇಲಾಖೆ ಉಪನಿರ್ದೇಶಕ ಬಿ.ಶ್ರೀನಿವಾಸ್ ಸೇರಿದಂತೆ ಆರೋಗ್ಯಾಧಿಕಾರಿಗಳು, ಎನ್.ಜಿ.ಓ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪಾಲಿಕೆಯಿಂದ ಆಪರೇಷನ್ ಬೀದಿ ನಾಯಿ

ಬೆಳಗಾವಿ: ಬೆಳಗಾವಿ ನಗರದಲ್ಲಿ ಬೀದಿ ನಾಯಿಗಳು ಹೆಚ್ಚಾಗುತ್ತಿರುವುದರಿಂದ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಬೀದಿ ನಾಯಿಗಳ ಹಾವಳಿಗೆ ಕಡಿವಾಣ ಹಾಕಲು ಮಹಾನಗರ ಪಾಲಿಕೆ ಕಠಿಣ ಕ್ರಮಕ್ಕೆ ಮುಂದಾಗಿದೆ. ನಗರದ ವಿವಿಧ ಭಾಗಗಳಲ್ಲಿ ನಾಗರಿಕರ ಆತಂಕಕ್ಕೆ ಕಾರಣವಾಗಿದ್ದ ಬೀದಿ ನಾಯಿಗಳ ಸಮಸ್ಯೆಯನ್ನು ನಿಯಂತ್ರಿಸಲು ಶನಿವಾರ ಆಪರೇಷನ್ ಬೀದಿ ನಾಯಿ ಹೆಸರಿನಲ್ಲಿ ವಿಶೇಷ ಕಾರ್ಯಾಚರಣೆ ಆರಂಭಿಸಲಾಗಿದೆ.

ಈ ಕಾರ್ಯಾಚರಣೆಯ ಅಂಗವಾಗಿ ನಗರದ ಶೆಟ್ಟಿಗಲ್ಲಿ ಪ್ರದೇಶದಲ್ಲಿ ಪಾಲಿಕೆ ಸಿಬ್ಬಂದಿ ಹಾಗೂ ಸಂಬಂಧಿತ ಇಲಾಖೆ ಅಧಿಕಾರಿಗಳು ಸಂಯುಕ್ತವಾಗಿ ಕಾರ್ಯಾಚರಣೆ ನಡೆಸಿ ಅಪಾಯಕಾರಿ ಹಾಗೂ ಹಿಂಸಾತ್ಮಕವಾಗಿ ವರ್ತಿಸುತ್ತಿದ್ದ ಬೀದಿ ನಾಯಿಗಳನ್ನು ಹಿಡಿದುಕೊಳ್ಳುವ ಕಾರ್ಯ ಕೈಗೊಂಡರು. ಕಾರ್ಯಾಚರಣೆ ವೇಳೆ ಸುರಕ್ಷತಾ ಕ್ರಮಗಳನ್ನು ಪಾಲಿಸಿಕೊಂಡು, ಸ್ಥಳೀಯರ ಸಹಕಾರದೊಂದಿಗೆ ನಾಯಿಗಳನ್ನು ನಿಯಂತ್ರಣಕ್ಕೆ ತರುವ ಪ್ರಯತ್ನ ಮಾಡಲಾಯಿತು. ನಗರದಲ್ಲಿ ಇತ್ತೀಚೆಗೆ ಬೀದಿ ನಾಯಿಗಳ ದಾಳಿಗಳು ಹೆಚ್ಚಾಗಿರುವುದು ಸಾರ್ವಜನಿಕರಲ್ಲಿ ಭೀತಿ ಉಂಟುಮಾಡಿತ್ತು. ವಿಶೇಷವಾಗಿ ವೃದ್ಧರು, ಮಕ್ಕಳು ಹಾಗೂ ಮಹಿಳೆಯರು ಈ ದಾಳಿಗಳಿಗೆ ಗುರಿಯಾಗುತ್ತಿದ್ದ ಹಿನ್ನೆಲೆಯಲ್ಲಿ ನಾಗರಿಕರು ಮಹಾನಗರ ಪಾಲಿಕೆಗೆ ಹಲವು ಬಾರಿ ದೂರು ನೀಡಿ ತಕ್ಷಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದರು. ಶಾಲಾ ಮಕ್ಕಳಿಗೆ ಹಾಗೂ ಬೆಳಗ್ಗೆ-ಸಂಜೆ ನಡೆಯುವವರಿಗೆ ಸುರಕ್ಷತೆ ಕೊರತೆಯಾಗಿದೆ ಎಂಬ ಆತಂಕವೂ ವ್ಯಕ್ತವಾಗಿತ್ತು.

ಜನರ ಒತ್ತಾಯ ಮತ್ತು ದೂರುಗಳನ್ನು ಗಂಭೀರವಾಗಿ ಪರಿಗಣಿಸಿದ ಪಾಲಿಕೆ ಆಡಳಿತ ಇದೀಗ ಕಾರ್ಯಾಚರಣೆ ಆರಂಭಿಸಿದ್ದು, ಮುಂದಿನ ದಿನಗಳಲ್ಲಿ ನಗರದೆಲ್ಲೆಡೆ ಹಂತ ಹಂತವಾಗಿ ಇದೇ ರೀತಿಯ ಕಾರ್ಯಾಚರಣೆ ನಡೆಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜೊತೆಗೆ ಬೀದಿ ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸಲು ಲಸಿಕ, ಶಸ್ತ್ರಚಿಕಿತ್ಸೆ ಸೇರಿದಂತೆ ದೀರ್ಘಕಾಲೀನ ಕ್ರಮಗಳನ್ನೂ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ಈ ಕಾರ್ಯಾಚರಣೆಯಿಂದಾಗಿ ಸ್ಥಳೀಯ ನಿವಾಸಿಗಳು ಸ್ವಲ್ಪ ಮಟ್ಟಿಗೆ ನೆಮ್ಮದಿ ಹೊಂದಿದ್ದು, ಪಾಲಿಕೆಯ ಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಆದಾಗ್ಯೂ, ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ನಿರಂತರ ಕ್ರಮ ಅಗತ್ಯವಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.




ಸೇತುವೆ ಕಾಮಗಾರಿ ವಿಳಂಬ: ಆಕ್ರೋಶ

ಬೆಳಗಾವಿ: ಜಿಲ್ಲೆಯ ನಿಪ್ಪಾಣಿ ತಾಲೂಕಿನ ಬೇನಾಡಿ ಗ್ರಾಮದಲ್ಲಿರುವ ಅವ್ಯವಸ್ಥೆ ಹಾಗೂ ಕಾಳಮ್ಮಾವಾಡಿ ಕಾಲುವೆಯ ಸೇತುವೆ ನಿರ್ಮಾಣದಲ್ಲಿ ಆಗುತ್ತಿರುವ ವಿಳಂಬ ಖಂಡಿಸಿ ರಾಜ್ಯ ರೈತ ಸಂಘಟ ಕಾರ್ಯಕರ್ತರಿಂದ ಜಿಲ್ಲಾಧಿಕಾರಿಗಳಕಚೇರಿ ಎಂದು ಪ್ರತಿಭಟಿಸಿದರು. ನಿಪ್ಪಾಣಿ ತಾಲೂಕಿನಲ್ಲಿರುವ ಬೇನಾಡಿ ಹಾಗೂ ಕಾಳಮ್ಮಾವಾಡಿ ಗ್ರಾಮಗಳಲ್ಲಿ ಅವ್ಯವಸ್ಥೆಯಿಂದ ಇಲ್ಲಿರುವ ಗ್ರಾಮಸ್ಥರು ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆಂದು ಪ್ರತಿಭಟನೆಯಲ್ಲಿ ರೈತರು ಆಕ್ರೋಶ ಹೊರ ಹಾಕಿದರು. ಕಳೆದ 20 ವರ್ಷಗಳಿಂದ ಈ ಎರಡು ಗ್ರಾಮಗಳಲ್ಲಿ ಸರಿಯಾದ ರೀತಿಯಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳು ಮಾಡುತ್ತಿಲ್ಲ, ಹಲವಾರು ಬಾರಿ ಗ್ರಾಮ ಅಧಿಕಾರಿಗಳಿಗೆ ಹಾಗೂ ಸ್ಥಳೀಯ ಶಾಸಕರಿಗೂ ಮನವಿ ಮಾಡಿಕೊಂಡರು ಯಾವುದೇ ಪ್ರಯೋಜನವಾಗಿಲ್ಲ ಎಂದು ಜಿಲ್ಲಾಧಿಕಾರಿಗಳಿಗೆ ಗ್ರಾಮದಲ್ಲಿರು ಅವ್ಯಸ್ಥೆಯ ಬಗ್ಗೆ ತಿಳಿಸಿದರು. ಬೇನಾಡಿ ಗ್ರಾಮದಲ್ಲಿ ಚರಂಡಿ, ರಸ್ತೆ ಯಾವುದೇ ಮೂಲ ವ್ಯವಸ್ಥೆಯಿಲ್ಲ, ಗ್ರಾಮದಲ್ಲಿರುವ ಕಾಲುವೆಯನ್ನು ಕೆಲವರು ಮಧ್ಯದಲ್ಲೇ ಬಂದ್ ಮಾಡಿದ್ದು, ನೀರು ಗ್ರಾಮದಲ್ಲಿ ತುಂಬುತ್ತಿದೆ. ಸುಮಾರು ವರ್ಷಗಳ ಹೋರಾಟದ ಬಳಿಕ ಅಧಿಕಾರಿಗಳು ಸಮಸ್ಯೆ ನಿವಾರಿಸುವ ಭರವಸೆ ನೀಡಿದ್ದಾರೆ.ಆದರೆ, ವರ್ಷ ಕಳೆದರೂ ಯಾವುದೇ ಕಾಮಗಾರಿಯನ್ನು ಕೈಗೆತ್ತಿಕೊಂಡಿಲ್ಲ. ಅಪ್ಪಾಚಿವಾಡಿ ಹತ್ತಿರ ಮಹಾರಾಷ್ಟ್ರದ ಕಾಳಮಾವಾಡಿ ಕಾಲುವೆಯಿಂದ ನೀರು ಬಂದಿದೆ.ಅಲ್ಲಿ 20 ವರ್ಷಗಳೂ ಕಳೆದರೂ ಸೇತುವೆ ನಿರ್ಮಾಣವಾಗುತ್ತಿಲ್ಲ, ಈ ಕೆಲಸವನ್ನು ಕೂಡಲೇ ಆರಂಭಿಸಬೇಕೆಂದು ಬೆಳಗಾವಿ ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ.

ಒಂದು ವೇಳೆ ಕಾಮಗಾರಿಯನ್ನು ಆರಂಭಿಸಿದ್ದರೇ, ನಿಪ್ಪಾಣಿ ನೀರಾವರಿ ಇಲಾಖೆಗೆ ಮುತ್ತಿಗೆ ಹಾಕುವುದಾಗಿ ರೈತ ಸಂಘದ ರಾಜ್ಯ ಕಾರ್ಯದರ್ಶಿ ರಾಜು ಪವಾರ ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿಗಳು ಕೂಡಲೇ ಸಮಸ್ಯೆ ನಿವಾರಣೆಗೆ ಆದೇಶಿಸಿದ್ದು ಇದನ್ನು ಪಾಲಿಸದಿದ್ದರೇ ಗ್ರಾಮ ಪಂಚಾಯಿತಿ ಕಚೇರಿಗೆ ಬೀಗ ಹಾಕಿ ಸರ್ಕಾರಕ್ಕೆ ತಕ್ಕ ಉತ್ತರ ನೀಡುವುದಾಗಿ ರೈತ ಸಂಘದ ರಾಜ್ಯ ಕಾರ್ಯದರ್ಶಿ ಕಿಶನ್ ನಂದಿ ಹೇಳಿದರು.

ಈ ವೇಳೆ ನಿಪ್ಪಾಣಿ ತಾಲೂಕಿನ ಬೇನಾಡಿ ಮತ್ತು ಅಪ್ಪಾಚಿವಾಡಿಯ ರೈತರು ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.



ಮೂಡಲಗಿ ಕೋ-ಆಪರೇಟಿವ್ ಬ್ಯಾಂಕ್‌ಗೆ 1.36ಕೋಟಿ ರೂ. ಲಾಭ



ಮೂಡಲಗಿ : ಮೂಡಲಗಿ ಕೋ.ಆಪರೇಟಿವ್ ಬ್ಯಾಂಕ್ ಪ್ರಧಾನ ಕಛೇರಿಯಲ್ಲಿ ಯು.ಪಿ.ಆಯ್ ಸೇವೆ ಚಾಲ್ತಿಯಲ್ಲಿದ್ದು ಆಧುನಿಕ ತಂತ್ರಜ್ಞಾನದೊಂದಿಗೆ 2026 ನೇ ಮಾರ್ಚ್ ಅಂತ್ಯದಲ್ಲಿ 1.36 ಕೋಟಿ ರೂ. ಲಾಭವನ್ನು ಗಳಿಸಿ ಪ್ರಗತಿಯಲ್ಲಿ ಸಾಗಿದೆ ಎಂದು ಬ್ಯಾಂಕ್ ಅಧ್ಯಕ್ಷ ಸುಭಾಸ ಢವಳೇಶ್ವರ ಅವರು ತಿಳಿಸಿದರು.ಬ್ಯಾಂಕ್‌ನ ಪ್ರಗತಿ ಕುರಿತು ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದರು ಹಳ್ಳೂರ,ರಾಮದುರ್ಗ ಮತ್ತು ಮುಗಳಖೋಡ ಈ ಮೂರು ಶಾಖೆಗಳ ಪ್ರಗತಿಯೊಂದಿಗೆ ಬ್ಯಾಂಕವು ಸದ್ಯ ಶೇರು ಬಂಡವಾಳ 2.71 ಕೋಟಿ ರೂ. ಠೇವುಗಳು 165.24 ಕೋಟಿ ರೂ, ನಿಧಿಗಳು 10.18 ಕೋಟಿ ರೂ. 64.93 ಕೋಟಿರೂ. ಸರಕಾರಿ ಸ್ವಾಮ್ಯದ ಬ್ಯಾಂಕುಗಳಲ್ಲಿ ಹೂಡಿಕೆ ಮಾಡಲಾಗಿದೆ. ವಿವಿಧ ಸಾಲಗಳು 93.23ಕೋಟಿ ರೂ. ವಿತರಿಸಿ, ದುಡಿಯುವ ಬಂಡವಾಳ 182.00 ಕೋಟಿ ರೂ. ಇರುವುದು. ಶೇ.2.78 ಎನ್‌ಪಿಎ ಹಾಗೂ ಶೇ.12.24 ಸಿಆರ್‌ಎಆರ್ ಹೊಂದಿದ್ದು, ಬ್ಯಾಂಕ್ ಸದೃಢತೆಗೆ ಸಾಕ್ಷಿಯಾಗಿವೆ ಮತ್ತು ಸದ್ಯ 5 ಶಾಖೆಗಳು ಹೊಂದಿದ್ದು ಅವು ಪ್ರಗತಿಯತ್ತ ಸಾಗುತ್ತಿವೆ ಎಂದು ತಿಳಿಸಿದರು.

ಬ್ಯಾಂಕ್‌ನ ಉಪಾಧ್ಯಕ್ಷ ನವೀನ ಬಡಗಣ್ಣವರ, ನಿರ್ದೇಶಕರಾದ ಡಾ. ಕೆ. ವಿ. ದಂತಿ, ಎಸ್. ಎಮ್. ಗಾಣಿಗೇರ, ಆರ್. ಬಿ. ನಿರ್ವಾಣಿ, ಆರ್. ಎಲ್. ವಾಲಿ, ಎಚ್. ಸಿ. ಅಂಗಡಿ, ಎಮ. ಕೆ. ತಾಂಬೂಳಿ, ಆರ್. ಎಸ್. ಬೆಳಕೂಡ, ಜಿ.ಎಸ್.ಅಂಬಿ, ಪ್ರಭಾವತಿ ಮುಧೋಳ, ದಾನೇಶ್ವರಿ ಸತರಡ್ಡಿ, ಮಾಲಕ್ಕಾ ಪೋಳ, ಎಸ್.ಬಿ.ಗದಾಡಿ, ಈ.ಬಿ ಪಾಟೀಲ ಪ್ರಧಾನ ವ್ಯವಸ್ಥಾಪಕ ಗೌಡಪ್ಪ ಬುದ್ನಿ ಇದ್ದರು.

ಜಾನಪದ ಕಲೆ ಉಳಿವಿಗೆ ಶ್ರಮಿಸಿ

ಚಿಕ್ಕೋಡಿ: ಗ್ರಾಮೀಣ ಭಾಗದ ಜಾನಪದ ಕಲೆಗಳು ಉಳಿದರೆ, ನಮ್ಮ ನಾಡಿಗೆ ಭೂಷಣವಾಗಿರುತ್ತದೆ ಎಂದು ಯುವ ಧುರೀಣ ಸಂಜಯಗೌಡ ಪಾಟೀಲ ಹೇಳಿದರು. ತಾಲೂಕಿನ ಕುಂಗಟೋಳಿ ಗ್ರಾಮದಲ್ಲಿ ಸಂಗಮೇಶ್ವರ ಭಜನಾ ಕಲಾ ಪೋಷಕ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ 2026ರ ಜಾನಪದ ಸಾಂಸ್ಕೃತಿಕ ಕಲಾಮೇಳ ಉದ್ಘಾಟಿಸಿ ಮಾತನಾಡುತ್ತಾ, ಕಲಾವಿದರನ್ನು ಸರ್ಕಾರ, ಸಂಘ ಸಂಸ್ಥೆಗಳು ಪ್ರೋತ್ಸಾಹ ನೀಡಿ ಬೆಳೆಸಬೇಕು ಎಂದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕಲಾವಿದ ಈರಣ್ಣ ಅಂಗಡಿ ಮಾತನಾಡಿ, ಗ್ರಾಮೀಣ ಮಹಿಳೆಯರು ಹಾಗೂ ರೈತರಿಂದ ಕಾಯಕದ ಜೊತೆಗೆ ಬೆಳೆದು ಬಂದ ಜಾನಪದ ಕಲೆಗಳನ್ನು ಜಾತ್ರೆ, ಹಬ್ಬಗಳಲ್ಲಿ ಆಯೋಜಿಸಿ ಕಲಾವಿದರಿಗೆ ಪ್ರೋತ್ಸಾಹಿಸಬೇಕೆಂದರು.

ಕಲಾಸಾಧಕರಾದ ಈರಣ್ಣ ಅಂಗಡಿ (ಗದಗ), ಪುರುಷೋತ್ತಮ ಕಿತ್ತೂರ (ಪರಕನಟ್ಟಿ), ಕುಮಾರ ಬಡಿಗೇರ (ಕಪ್ಪಲಗುದ್ದಿ), ರಾಧಿಕಾ ಪತ್ತಾರ (ಹಾರೂಗೇರಿ) ಅವರನ್ನು ವಿಶೇಷವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಜಾನಪದ ಸಾಂಸ್ಕೃತಿಕ ಕಲಾಮೇಳದಲ್ಲಿ ಭರತನಾಟ್ಯ, ಜೋಗತಿ ನೃತ್ಯ, ದೀಪ ನೃತ್ಯ, ಸಂಗೀತ ಗಾಯನ, ಗೀತ ಗಾಯನ, ಸುಗ್ಗಿ ಕುಣಿತ ಮುಂತಾದ ಕಲಾ ಪ್ರಕಾರಗಳನ್ನು ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಭರಮಪ್ಪ ನೇಜ, ಮಾರುತಿ ಹಿರೇಕೋಡಿ, ಭರಮಪ್ಪ ಸೋಲಾಪೂರೆ, ಬಸವಣ್ಣೆ ನೇಜ, ಅಜೀತ ಹಂಜಿ ಉಪಸ್ಥಿತರಿದ್ದರು. ಜಿ ಎಮ್ ಬಿಸಲನಾಯಕ ನಿರೂಪಿಸಿ, ಪಂಡಿತ ಕಾಂಬಳೆ ಸ್ವಾಗತಿಸಿ ವಂದಿಸಿದರು.



ಚಿಕ್ಕೋಡಿ ತಾಲೂಕಿನ ಕುಂಗಟೋಳಿ ಗ್ರಾಮದಲ್ಲಿ ಜಾನಪದ ಸಾಂಸ್ಕೃತಿಕ ಕಲಾಮೇಳದಲ್ಲಿ ಕಲಾವಿದರು ಕಲೆಯನ್ನು ಪ್ರದರ್ಶಿದರು.

ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರ ಮುಕ್ತಾಯ

ಅನುಭವ ಆಧಾರಿತದ ಕಲಿಕೆಗೆ ಒತ್ತು

ಮೂಡಲಗಿ: ತರಗತಿಗಳ ನಾಲ್ಕು ಗೋಡೆಗಳ ಮಧ್ಯೆ ಕಲಿಯಲಾಗದ ವಿಷಯಗಳನ್ನು ನಿರಂತರ ಚಟುವಟಿಕೆಗಳೊಂದಿಗೆ ಅನುಭವ ಆಧಾರಿತ ಬದುಕಿನ ಶಿಕ್ಷಣವನ್ನು ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಗಳು ಕಲಿಸುತ್ತವೆ ಎಂದು ರಾಷ್ಟ್ರೀಯ ಸೇವಾ ಯೋಜನೆಯ ಚಿಕ್ಕೋಡಿ ಜಿಲ್ಲಾ ಪ್ರಭಾರಿ ಸಂಯೋಜನಾ ಅಧಿಕಾರಿ ಶಂಕರ ನಿಂಗನೂರ ಹೇಳಿದರು

ಬುಧವಾರ ಇಲ್ಲಿಗೆ ಸಮೀಪದ ದತ್ತು ಗ್ರಾಮ ಪಟಗುಂದಿಯಲ್ಲಿ ಜರುಗಿದ ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಹಾಗೂ ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕದ 2025-26ನೇ ಸಾಲಿನ ವಿಶೇಷ ವಾರ್ಷಿಕ ವಿಶೇಷ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡುತ್ತಿದ್ದರು.

ಅಧ್ಯಕ್ಷತೆಯನ್ನು ವಹಿಸಿದ್ದ ಮೂಡಲಗಿ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಆರ್.ಪಿ. ಸೋನವಾಲ್ಕರ್ ಮಾತನಾಡಿ, ಶಿಬಿರದಲ್ಲಿ ಸ್ವಯಂಸೇವಕಿಯರೇ ಹೆಚ್ಚಿರುವುದನ್ನು ಪ್ರಶಂಸಿಸಿ, ಪ್ರತಿಯೊಬ್ಬರೂ ಒಂದೊಂದು ಸಸಿ ನೆಟ್ಟು ಪೋಷಿಸಿದರೆ ಮುಂದೊಂದು ದಿನ ಇದು ನಾನು ನೆಟ್ಟ ಗಿಡ ಎಂಬ ಹೆಮ್ಮೆ ಮೂಡುತ್ತದೆ ಎಂದು ವಿದ್ಯಾರ್ಥಿಗಳಿಗೆ ಸಸಿ ನೆಡಲು ಪ್ರೇರೇಪಿಸಿದರು.



ನಿವೃತ್ತ ಪ್ರಾಧ್ಯಾಪಕ ಪ್ರೊ ಎಸ್. ಬಿ. ಖೋತ. ಗ್ರಾಮದ ಸುಭಾಸ್ ಪಾಟೀಲ್ ವಿದ್ಯಾರ್ಥಿಗಳಾದ ಸಂಗಪ್ಪ ಕುಲಿಗೋಡ ಹಾಗೂ ಲಕ್ಷ್ಮೀ ಪಾಟೀಲ್ ಮಾತನಾಡಿದರು.

ಇದೇ ಸಂದರ್ಭದಲ್ಲಿ ಶಿಬಿರದ ನೇತೃತ್ವವಹಿಸಿದ್ದ ಎನ್ ಎಸ್ ಎಸ್ ಕಾರ್ಯಕ್ರಮ ಅಧಿಕಾರಿಗಳಾದ ಡಾ. ಪವನ್ ಕುಮಾರ್ ಕೆ., ಲೋಕೇಶ್ ಹಿಡ್ಕಲ್, ಪಿ.ಬಿ. ಚೌಡಕಿ ಹಾಗೂ ವೇದಾ ದೇಶಪಾಂಡೆ ಇವರನ್ನು ಗ್ರಾಮದ ಯುವ ಮುಖಂಡ ಸುಭಾಸ್ ಪಾಟೀಲ್ ಶಾಲು ಹೊದಿಸಿ ಸನ್ಮಾನಿಸಿದರು.

ಕೃಷ್ಣತಾ ಜೋಕಾನಟ್ಟೆ ಶಿಬಿರದ ವರದಿ ವಾಚನ ಮಾಡಿದರು.ಪ್ರಾರಂಭದಲ್ಲಿ ಹನುಮಂತ ತೇರದಾಳ ಪ್ರಾರ್ಥಿಸಿದರು. ಕುಮಾರಿ ಸತ್ಯಮ್ಮ ಸ್ವಾಗತಿಸಿದರು. ಸುಪ್ರೀತಾ ಯಡ್ರಾಂವಿಕಾರ್ಯಕ್ರಮನಿರ್ವಹಿಸಿದರು. ಕೊನೆಗೆ ರೇಶ್ಮಾ ಹುಲಿಕಟ್ಟಿ ವಂದಿಸಿದರು.

ಸಮಾರಂಭದಲ್ಲಿ ಆಡಳಿತಾಧಿಕಾರಿ ಡಾ. ಎಸ್. ಎಲ್. ಚಿತ್ರಗಾರ, ಪ್ರೊ ಎಸ್.ಬಿ. ಖೋತ್, ಅಭಯ್ ಕುಮಾರ್ ಹುದ್ದಾರ, ಸುಭಾಸ್ ಪಾಟೀಲ್, ಡಾ. ಎಸ್.ಬಿ. ಹೊಸೂರು, ತವನಪ್ಪ ಬೋಳಿ, ಕೃಷ್ಣಪ್ಪ ಚೆನ್ನಾಕಟ್ಟಿ, ಡಾ. ಬಸವಂತ ಬರಗಾಲಿ ಎ ಎಸ್. ಮಿಶಿ ನಾಯಿಕ ಎಂ.ಎಸ್. ಕುಂದರಗಿ, ಎಸ್.ಕೆ. ಕೊತ್ತಲ, ಎಸ್.ಎಸ್. ಕುಲಿಗೋಡ, ಸಂತೋಷ ಮುಗಳಿ, ಎಸ್.ಪಿ. ಕಾಂಬಳೆ, ಎನ್.ಸಿ. ಬರವನ್ನವರ, ಎಸ್. ಕೆ. ಅಂಗಡಿ, ಕೆ.ಪಿ. ಡೋಣಿ, ಪಿ.ಬಿ. ಬೆಳಗಲಿ ಮುಂತಾದವರು ಉಪಸ್ಥಿತರಿದ್ದರು.

ಉಗಾರ ಗ್ರಾಪಂ ಶೇ.100ರಷ್ಟು ಕರ ವಸೂಲಾತಿ ಸಾಧನೆ

ಉಗಾರ ಬುದ್ರಕ್: ಬೆಳಗಾವಿ ಜಿಲ್ಲೆಯ ಕಾಗವಾಡ ತಾಲೂಕಿನ ಉಗಾರ ಗ್ರಾಮ ಪಂಚಾಯತಿ 2025-ನೇ ಸಾಲಿನಲ್ಲಿ ಶೇ 100 ಕರ ವಸೂಲಾತಿ ಮಾಡಿದ್ದು, ಗ್ರಾಮದ ಸರ್ವತೋಮುಖ ಅಭಿವೃದ್ಧಿಗಾಗಿ ಈ ಅನುದಾನ ಬಳಕೆಯಾಗಲಿ ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಹೇಳಿದರು.

ಶನಿವಾರ ಉಗಾರ ಬಿಕೆ ಗ್ರಾಮದ ಗ್ರಾಪಂ ಕಾರ್ಯಾಲಯದ ಆವರಣದಲ್ಲಿ ಜಿಲ್ಲಾ ಪಂಚಾಯತ, ತಾಲೂಕ ಪಂಚಾಯತ, ಗ್ರಾಮ ಪಂಚಾಯತ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾಯಕ ಗ್ರಾಮ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕುಡಿಯುವ ನೀರು, ಗ್ರಂಥಾಲಯ, ಅಂಗನವಾಡಿ, ಕೂಸಿನ ಮನೆ ಕೇಂದ್ರ ಅಚ್ಚುಕಟ್ಟಾಗಿ ಕಾರ್ಯನಿರ್ವಾಹಿಸುತಿದ್ದು ಇನ್ನಷ್ಟು ಕಾಳಜಿ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಇಲ್ಲಿನ ಶಾಸಕರ ಮಾದರಿ ಕನ್ನಡ ಗಂಡು ಮತ್ತು ಹೆಣ್ಣು ಮಕ್ಕಳ ಶಾಲೆಗೆ ಭೇಟಿ ನೀಡಿದ ಮನ್ಯರು ಮಕ್ಕಳೊಂದಿಗೆ ಸಂವಾದ ನಡೆಸಿದರು. ಸ್ಮಾರ್ಟ್ ತರಗತಿ ಹಾಗೂ 7 ತರಗತಿ ಪ್ರಶ್ನೆಪತ್ರಿಕೆ, ಉತ್ತರ ಪತ್ರಿಕೆಗಳ ಪರಿಶೀಲಿಸಿದರು. ಇದೇ ವೇಳೆ ಗಣಿತ ಲೆಕ್ಕ ಬಿಡಿಸಿದ ಮಕ್ಕಳಿಗೆ ಗುಲಾಬಿ ಹೂವು ನೀಡಿ ಅಭಿನಂದಿಸಿದರು.



ಕೂಸಿನ ಮನೆಗೆ ಭೇಟಿ: ಶಾಲಾ ಆವರಣದಲ್ಲಿರುವ ನರೇಗಾ ಯೋಜನಯ ಕೂಸಿನ ಮನೆ ಕೇಂದ್ರಕ್ಕೆ ಭೇಟಿ ನೀಡಿ ಆರೈಕೆದಾರರಿಗೆ ಮಕ್ಕಳ ಬಗ್ಗೆ ಕಾಳಜಿ ವಹಿಸುವಂತೆ ತಿಳಿಸಿದರು.

ಎನ್ ಆರ್ ಎಲ್ ಎಂ ಸಂಜೀವಿನಿ ಒಕ್ಕೂಟದ ಕಚೇರಿ ವೀಕ್ಷಣೆ ಹಾಗೂ ಮಹಿಳೆಯರು ತಯಾರಿಸಿದ ಆಹಾರ. ಪದಾರ್ಥ, ಕರ ಕುಶಾಲ ವಸ್ತು ವೀಕ್ಷಣೆ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಸನ್ಮಾನ : 2025-26 ನೇ ಸಾಲಿನಲ್ಲಿ ಕಾಗವಾಡ ತಾಲೂಕಿನ 8 ಗ್ರಾಮ ಪಂಚಾಯತ ವ್ಯಾಪ್ತಿ ಶೇ 100 ಕರ ವಸೂಲಾತಿ ಮಾಡಿ ಜಿಲ್ಲೆಗೆ ಪ್ರತಮ ಸ್ಥಾನ ಪಡೆದ ತಾಲೂಕಿನ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಮ್ಯಾನರು ಸನ್ಮಾನ ಮಾಡಿದರು.

ಈ ವೇಳೆ ಜಿಪಂ ಯೋಜನಾ ನಿರ್ದೇಶಕ ರವಿ ಬಂಗಾರೆಪ್ಪನರ್ವ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ವೀರಣ್ಣ ವಾಲಿ, ಅಥಣಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಶಿವಾನಂದ ಕಲ್ಲಾಪುರ, ಸಹಾಯಕ ನಿರ್ದೇಶಕರಾದ ಎ ಡಿ. ಅನ್ಸಾರಿ, ಶಿವಾನಂದ ಸನಾಳ, ಪಂಚಾಯತ ಅಭಿವೃದ್ಧಿ ಅಧಿಕಾರಿ ನಾಗಪ್ಪ ಕಾಂಬಳೆ ವಿವಿಧ ಇಲಾಖೆಯ ಜಿಲ್ಲಾ, ತಾಲೂಕು ಹಾಗೂ ಗ್ರಾಪಂ ಮಟ್ಟದ ಅಧಿಕಾರಿಗಳು, ಸಿಬ್ಬಂದಿ ಸೇರಿದಂತೆ ಗ್ರಾಮಸ್ಥರು ಇದ್ದರು.

ಕಿರುಸುದ್ದಿ

ಇಂದು ಜಗಜೀವನರಾಂ ಜಯಂತಿ

ಜಮಖಂಡಿ: ಮಾಜಿ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಂ ಅವರ ಏ.5ರಂದು 119ನೇ ಜಯಂತಿ ಕಾರ್ಯಕ್ರಮವನ್ನು ತಹಶೀಲ್ದಾರ್ ಕಾರ್ಯಾಲಯದ ಆವರಣದಲ್ಲಿ ಅರ್ಥಪೂರ್ಣ, ಸರಳವಾಗಿ ಆಚರಿಸಲಾಗುವದು ಎಂದು ತಹಶೀಲ್ದಾರ್ ಅನಿಲ ಬಡಿಗೇರ ಪ್ರಕಟಣೆಗೆ ತಿಳಿಸಿದ್ದಾರೆ.

ರಿಯಾಯತಿ ಸೌಲಭ್ಯ


ಲೋಕಾಪುರ: ಲೋಕಾಪುರ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿರುವ ಸ್ವಯಂ ಘೋಷಿತ ಆಸ್ತಿ ಮಾಲೀಕರು ಏ.1ರಿಂದ 30ರ ವರೆಗೆ ತಮ್ಮ ಆಸ್ತಿಗಳ ವಾರ್ಷಿಕ ತೆರಿಗೆ ಪಾವತಿಸಿದರೆ ಶೇ.5ರಷ್ಟು ರಿಯಾಯತಿ ಸೌಲಭ್ಯ ಒದಗಿಸಲಾಗುವುದು ಎಂದು ಮುಖ್ಯಾಧಿಕಾರಿ ಸಾಬಣ್ಣ ಮಜೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಬು ಜಗಜೀವನರಾಂ ಜಯಂತಿ ಇಂದು

ತೇರದಾಳ: ಹಸಿರು ಕ್ರಾಂತಿಯ ಹರಿಕಾರ, ಭಾರತದ ಮಾಜಿ ಉಪಪ್ರಧಾನಿ ಬಾಬು ಜಗಜೀವನರಾಮರವರ 119ನೇ ಜನ್ಮದಿನಾಚರಣೆಯನ್ನು ತಾಲೂಕಾಡಳಿತವು ತೇರದಾಳ ತಾಲೂಕು ಕಚೇರಿಯಲ್ಲಿ ಏ.5ರಂದು ಭಾನುವಾರ ಬೆಳಗ್ಗೆ 10 ಗಂಟೆಗೆ ಸರಳವಾಗಿ ಆಚರಿಸಲು ನಿರ್ಧರಿಸಲಾಗಿದೆ. ಕಾರಣ ಎಲ್ಲಾ ಸಮಾಜದ ಮುಖಂಡರು ಹಮ್ಮಿಕೊಂಡ ಈ ಮಹಾನುಭಾವರ ಜಯಂತಿಯಲ್ಲಿ ಪಾಲ್ಗೊಂಡು ಅವರಿಗೆ ಗೌರವ ಸಲ್ಲಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ತೇರದಾಳ ತಾಲೂಕಾ ದಂಡಾಧಿಕಾರಿ ವಿಜಯಕುಮಾರ ಕಡಕೋಳ ಈ ಮೂಲಕ ಸಾರ್ವಜನಿಕರಲ್ಲಿ ವಿನಂತಿಸಿಕೊಂಡಿದ್ದಾರೆ.

ಮುಧೋಳಕ್ಕಿಂದು ರಘುವಿಜಯತೀರ್ಥ ಶ್ರೀಗಳು

ಮುಧೋಳ: ಏ.5ರಂದು ಭಾನುವಾರ ನಗರಕ್ಕೆ ಕೊಡ್ಲಿ ಆರ್ಯ ಅಕ್ಷೋಭ್ಯ ತೀರ್ಥ ಮಠಾಧೀಶ ರಘು ವಿಜಯತೀರ್ಥ ಶ್ರೀಪಾದಂಗಳವರು ದಿಗ್ವಿಜಯ ಮಾಡಲಿದ್ದಾರೆ. ಸಾಯಿನಗರದ ಆನಂದ ಕುಲಕರ್ಣಿ ಜೀರೆ ನಿವಾಸದಲ್ಲಿ ನಡೆಯುವ ಶ್ರೀರಾಮದೇವರ ಪೂಜೆ ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಶ್ರೀಗಳು ಭಾಗ ವಹಿಸಲಿದ್ದಾರೆಂದು ಸಂಘಟಕ ಸಂಜೀವ ಮೋಕಾಶಿ ಪ್ರಸಾದ ಖಾಸನೀಸ ಹಾಗೂ ಭಾರ್ಗವ ಕಟ್ಟಿ ತಿಳಿಸಿದ್ದಾರೆ.



ಆಕ್ಷೇಪಣೆಗೆ ಆಹ್ವಾನ


ಜಮಖಂಡಿ: 2024–25ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಜಮಖಂಡಿ ಮತ್ತು ರಬಕವಿ–ಬನಹಟ್ಟಿ ತಾಲೂಕಿನ ರೈತರು ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ವಿಮೆ ಮಾಡಿಸಿದ ಬೆಳೆ ಹಾಗೂ ಪಹಣಿಯಲ್ಲಿ ದಾಖಲಾದ ಬೆಳೆ ವ್ಯತ್ಯಾಸದಿಂದ 2024ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಮಖಂಡಿ ತಾಲೂಕಿನ 38 ಹಾಗೂ ರಬಕವಿ–ಬನಹಟ್ಟಿ ತಾಲೂಕಿನ 6 ಅರ್ಜಿಗಳು ತಿರಸ್ಕೃತಗೊಂಡಿವೆ.

ರೈತರ ವಿವರವನ್ನು ಜಮಖಂಡಿ ತಾಲೂಕಿನ ಕೃಷಿ, ತೋಟಗಾರಿಕೆ ಇಲಾಖೆ ಹಾಗೂ ರೈತ ಸಂಪರ್ಕ ಕೇಂದ್ರ, ಜಮಖಂಡಿ, ಸಾವಳಗಿ ಮತ್ತು ತೇರದಾಳ ಕಛೇರಿಗಳ ಸೂಚನಾ ಫಲಕಗಳ ಮೇಲೆ ಅಳವಡಿಸಲಾಗಿದೆ. ಈ ಕುರಿತು ಆಕ್ಷೇಪಣೆ ಇದ್ದಲ್ಲಿ ಮರು ಪರಿಶೀಲನೆಗೆ ರೈತರು ಪ್ರಕಟಣೆಯ ದಿನಾಂಕದಿಂದ 15 ದಿನದೊಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಆಕ್ಷೇಪಣೆಯನ್ನು ಸಂಬಂಧಿಸಿದ ಇಲಾಖೆಗೆ ಸಲ್ಲಿಸಲು ತಾಲೂಕಿನ ಸಹಾಯಕ ಕೃಷಿ ನಿರ್ದೇಶಕ ಸಿದ್ದಪ್ಪ ಬಿ. ಪಟ್ಟಿಹಾಳ ತಿಳಿಸಿದ್ದಾರೆ.

ನಿಧನ ಸುದ್ದಿ

ನಿಂಗಪ್ಪ ಕಾಸರ

ಲೋಕಾಪುರ: ಪಟ್ಟಣದ ನಿವಾಸಿ ನಿಂಗಪ್ಪ ಗುರುಪಾದಪ್ಪ ಕಾಸರ (81) ಶುಕ್ರವಾರ ನಿಧನರಾಗಿದ್ದಾರೆ. ಮೃತರಿಗೆ ಒರ್ವ ಪುತ್ರ, ನಾಲ್ಕು ಜನ ಪತ್ರಿಯರು, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.





ಗುಳೇದಗುಡ್ಡ: ತಾಲೂಕಿನ ಮಂಗಳಗುಡ್ಡ ಗ್ರಾಮದ ಮಂಗಳಾದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಜಂಗಿ ಕುಸ್ತಿ ಪಂದ್ಯಾವಳಿಯಲ್ಲಿ ಲಕ್ಕುಂಡಿ, ದೋಟಿಹಾಳ, ಕಮತಗಿ, ಸೂಳಿಬಾವಿ, ಶಿರೂರ, ಗುಡೂರ, ನೀಲುಗಲ್ಲ ಸೇರಿದಂತೆ ವಿವಿಧ ಗ್ರಾಮಗಳಿಂದ ಆಗಮಿಸಿದ ಕುಸ್ತಿ ಪಟುಗಳು ಭಾಗವಹಿಸಿದ್ದರು.

ನೇಮಕಾತಿಯಲ್ಲಿ ವಿಶಿಷ್ಟಚೇತನರ ಕಡೆಗಣನೆ: ಆಕೋಶ

ಜಮಖಂಡಿ: ಸ್ಥಳೀಯ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್‌ನ 45 ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ವಿಶಿಷ್ಟಚೇತನರಿಗೆ ಮೀಸಲಾದ ಶಾಸನಬದ್ಧ 4% ಮೀಸಲಾತಿ ಕಡೆಗಣಿಸಿರುವುದು ಸಂವಿಧಾನ ವಿರೋಧಿ ನಡೆಯಾಗಿದೆ. ಈ ಅನ್ಯಾಯದ ವಿರುದ್ಧ ಅರ್ಹ ವಿಕಲಚೇತನ ಅಭ್ಯರ್ಥಿ ಹನುಮಂತ ಎಸ್.ಕಡ್ಲಿ ಅವರು ಹಾಗೂ ಸಾಮಾಜಿಕ ಹೋರಾಟಗಾರ ಗಿರಮಲ್ಲಪ್ಪ ಶಿವಲಿಂಗಪ್ಪ ಕಡಪಟ್ಟಿ ಈಗ ಉಚ್ಚ ನ್ಯಾಯಾಲಯದ ಮೊರೆ ಹೋಗಲು ನಿರ್ಧರಿಸಿದ್ದಾರೆ ಎಂದು ಗಿರಮಲ್ಲಪ್ಪ ಕಡಪಟ್ಟಿ ಪ್ರಕಟಣೆಗೆ ತಿಳಿಸಿದ್ದಾರೆ. ವಿಕಲಚೇತನರ ಪರವಾಗಿ ಕಾನೂನು ಹೋರಾಟದ ನೇತೃತ್ವ ವಹಿಸಿದ್ದಾರೆ. ವಿಕಲಚೇತನರ ಹಕ್ಕುಗಳ ಅಧಿನಿಯಮ 2016 ಮತ್ತು ಸರ್ಕಾರದ 2012ರ ಸುತ್ತೋಲೆಗಳನ್ನು ಬ್ಯಾಂಕ್ ಆಡಳಿತ ಮಂಡಳಿಯು ಬಹಿರಂಗವಾಗಿ ಉಲ್ಲಂಘಿಸುತ್ತಿರುವುದು ದಾಖಲೆ ಸಮೇತ ಸಾಬೀತಾಗಿದೆ ಎಂದು ತಿಳಿಸಿದ್ದಾರೆ. ಈ ನ್ಯಾಯಯುತ ಹೋರಾಟಕ್ಕೆ ಹಿರಿಯರಾದ ಶ್ರೀಶೈಲ ಗುಂಡಗಿ ಅವರು ಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸಿಗಬೇಕಾದ ಉದ್ಯೋಗದ ಹಕ್ಕನ್ನು ಪ್ರಭಾವಿಗಳು ಹಣ ಮತ್ತು ಅಧಿಕಾರದಿಂದ ಹತ್ತಿಕ್ಕುತ್ತಿರುವುದು ಖಂಡನೀಯವಾಗಿದೆ. ಎಂದಿದ್ದಾರೆ. ಅಂಗವಿಕಲರ ಆಯುಕ್ತರ ನೋಟಿಸ್‌ಗೂ ಕ್ಯಾರೆ ಎನ್ನದ ಬ್ಯಾಂಕ್ ಮ್ಯಾನೇಜರ್ ಅವರ ಉತ್ತರಗಳೇ ಈ ಕೇಸ್‌ನಲ್ಲಿ ನಮಗೆ ಪ್ರಬಲ ಸಾಕ್ಷಿಯಾಗಲಿವೆ. ನ್ಯಾಯ ಸಿಗುವವರೆಗೆ ನಮ್ಮ ಈ ಹೋರಾಟ ನಿಲ್ಲದು ಎಂದು ಹಿರಿಯರಾದ ಶ್ರೀಶೈಲ ಗುಂಡಗಿ. ವಿಕಲಚೇತನ ಅಭ್ಯರ್ಥಿ, ಹನುಮಂತ ಎಸ್. ಕಡ್ಲಿ ಮತ್ತು ಸಾಮಾಜಿಕ ಹೋರಾಟಗಾರ ಗಿರಮಲ್ಲಪ್ಪ ಎಸ್. ಕಡಪಟ್ಟಿ, ಈ ಮೂಲಕ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಝುಳಕಿ: ಸಮೀಪದ ಅರ್ಜನಾಳ ಗ್ರಾಮದಲ್ಲಿ ನಡೆದ ಬಲಭೀಮ ದೇವರ ಜಾತ್ರಾ ಮಹೋತ್ಸವ ಪ್ರಯುಕ್ತ ಬೆಳಗ್ಗೆ ತೊಟ್ಟಿಲು ಕಾರ್ಯಕ್ರಮ ನಡೆಯಿತು. ಮೊಸರು ಗಡಗಿ ಗ್ರಾಮದ ಪ್ರಮುಖ ರಸ್ತೆಯಗಳಲ್ಲಿ ಗೊಂಬೆ ಕುಣಿತ ಹಾಗೂ ಸಕಲ ವಾದ್ಯ ವೈಭವಗಳೊಂದಿಗೆ ಮೆರವಣಿಗೆ ನಡೆಯಿತು. ನಂತರ ದೇವಾಸ್ಥಾನಕ್ಕೆ ತಲಪಿತು. ಜಾತ್ರಾ ಕಮಿಟಿ ಹಾಗೂ ಸದಸ್ಯರು ಹಾಗೂ ಸಮಸ್ತ ಗ್ರಾಮಸ್ಥರು ಉಪಸ್ಥಿತರಿದ್ದರು.

ಹಿಂದುತ್ವ ಉಳಿವಿಗೆ ಚರಂತಿಮಠ ಗೆಲ್ಲಿಸಿ

ಬಾಗಲಕೋಟೆ: ಹಿಂದೂ ಸೋಗಿನಲ್ಲಿ ಮತ ಕೇಳಿ ಮುಸ್ಲಿಂ ಒಲೈಕೆಗೆ ಹಣ ನೀಡುವ ದೇಶದ್ರೋಹಿಗಳನ್ನು ರಕ್ಷಿಸುವ ಸರಕಾರಕ್ಕೆ ತಕ್ಕ ಉತ್ತರ ನೀಡಲು ಹಿಂದೂ ರಕ್ಷಕ ವೀರಣ್ಣ ಚರಂತಿಮಠ ಅವರನ್ನು ಬಹು ಅಂತರದ ಮತದಿಂದ ಗೆಲ್ಲಿಸಿ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಉಪಚುನಾವಣೆ ನಿಮಿತ್ತ ಕಿರುಸೂರು.ಬೆಣ್ಣೂರ, ಬೆನಕಟ್ಟಿ ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರವಾಗಿ ಮತಯಾಚನೆ ಮಾಡಿ ಮಾತನಾಡಿದ ಅವರು ಬಾಗಲಕೋಟೆಯಲ್ಲಿ ಹಿಂದೂಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಮುಕ್ತವಾಗಿ ಒಂದು ಮೆರವಣಿಗೆ ಮಾಡಲಾಗದ ಪರಿಸ್ಥಿತಿಯನ್ನು ಕಾಂಗ್ರೆಸ್ ತಂದು ಇಟ್ಟಿದೆ. ಕಲ್ಲು, ಚಪ್ಪಲಿಗಳನ್ನು ಎಸೆಯುವವರನ್ನು ಬಂಧಿಸದೇ ಮತಕ್ಕಾಗಿ ರಕ್ಷಣೆ ನೀಡುವ ಕೆಲಸ ಮಾಡುತ್ತಿದ್ದಾರೆ. ಹಿಂದುತ್ವ ಗೆಲ್ಲಬೇಕೆಂದರೆ ಹಿಂದೂಗಳು ಒಗ್ಗಟ್ಟಾಗಬೇಕು. ಹಿಂದುತ್ವದ ರಕ್ಷಕರಾದ ವೀರಣ್ಣ ಚರಂತಿಮಠ ಅವರನ್ನು ಗೆಲ್ಲಸಬೇಕು ಎಂದರು.

ಅಭಿಮಾನಿಗಳು ಹೂವಿನ ಮಳೆ ಸುರಿಸಿ ಮಹಿಳೆಯರು ಆರತಿ ಬೆಳಗಿ ಆತ್ಮೀಯವಾಗಿ ಗ್ರಾಮಕ್ಕೆ ಸ್ವಾಗತಿಸಿದರು. ಇದೇ ವೇಳೆ ನಡೆದ ಬೈಕ್ ರ್ಯಾಲಿಯಲ್ಲಿಯೂ ಭಾಗವಹಿಸಿದರು.

ಶಾಸಕ ಸಿದ್ದು ಸವದಿ ಹಾಗೂ ಮಾಜಿ ಶಾಸಕ ದೊಡ್ಡನಗೌಡರ ಪಾಟೀಲ ಅವರು ಸೇರಿದಂತೆ ಮುಖಂಡರು ಪಾಲ್ಗೊಂಡಿದ್ದರು.



ಸಂಸದ ಗದ್ದಿಗೌಡರ ಭರ್ಜರಿ ಮತಯಾಚನೆ

ಬಾಗಲಕೋಟೆ: ಉಪಚುನಾವಣೆಯ ಹಿನ್ನೆಲೆಯಲ್ಲಿ ಸಂಸದ ಪಿ.ಸಿ.ಗದ್ದಿಗೌಡರ ಮತ್ತು ರಮೇಶ ಜಿಗಜಿಣಗಿ ಅವರು ಗ್ರಾಮಗಳಲ್ಲಿ ಸಂಚರಿಸಿ ವೀರಣ್ಣ ಚರಂತಿಮಠ ಅವರ ಪರ ಮತಯಾಚನೆ ಮಾಡಿದರು.

ಹಿರೇಮ್ಯಾಗೇರಿ, ಚಿಕ್ಕಮ್ಯಾಗೇರಿ, ಬೊಮ್ಮನಗಿ, ಸುತಗುಂಡಾರ, ಹಂದಗರಗಲ್ಲ ಗ್ರಾಮಗಳಲ್ಲಿ ಮತ ಪ್ರಚಾರ ಮಾಡಿದರು ಈ ವೇಳೆ ಗ್ರಾಮದ ಮುಖಂಡರನ್ನು ಭೇಟಿ ಮಾಡಿ ಸಂವಾದ ನಡೆಸಿ ?ಮೂರು ವರ್ಷಗಳಲ್ಲಿ ಬಾಗಲಕೋಟೆಗೆ ಆದ ದುಸ್ಥಿತಿ ಮತ್ತು ಬಿಜೆಪಿ ಅಭಿವೃದ್ಧಿ ಕಾರ್ಯಗಳನ್ನು ಮನವರಿಕೆ ಮಾಡಿ ವೀರಣ್ಣ ಚರಂತಿಮಠ ಅವರನ್ನು ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಬೆಲೆ ಹೆಚ್ಚಳ, ಹಿಂದೂ ಮೆರವಣಿಗೆಗಳ ಮೇಲೆ ಕಲ್ಲು ತೂರಾಟ, ಮಹಿಳೆಯರಿಗೆ ಅಸುರಕ್ಷಿತೆ ಕಾಂಗ್ರೆಸ್ ಸರಕಾರದಲ್ಲಿ ತಾಂಡವಾಡುತ್ತಿದೆ. ಸುಸ್ಥಿರ ರಾಜ್ಯ ನಿರ್ಮಾಣಕ್ಕಾಗಿ ಬಿಜೆಪಿ ಬೆಂಬಲಿಸಿ ಎಂದರು.

ಜಿ.ಎನ್ ಪಾಟೀಲ್, ಡಾ.ದೇವರಾಜ ಪಾಟೀಲ್, ಸಿದ್ರಾಮ ಮೇಟಿ, ಹಣಮಂತ ಬೆಳಗಲ್ಲ, ಸಂಗಣ್ಣ ಸೂಡಿ, ಕವಿರಾಜ ಬೆನಕಟ್ಟಿ, ಪ್ರಕಾಶ ಸರಗಣಾಚಾರಿ, ಶಿವು ಹೊಸಗೌಡರ, ಸುಭಾಷಚಂದ್ರ ರಾಮೋಡಗಿ, ಸಂಗು ಕೋಲಕಾರ ಸೇರಿದಂತೆ ಬಿಜೆಪಿ ಮುಖಂಡರು ಇದ್ದರು.



ಕಾಂಗ್ರೆಸ್ ಅಭ್ಯರ್ಥಿ ಗೆಲುವು ಖಚಿತ: ಸವದಿ

ಬಾಗಲಕೋಟೆ : ಗೋವಿನಜೋಳದರ ಕುಸಿತಕ್ಕೆ ಕಾರಣವಾಗಿರುವ ಕೇಂದ್ರ ಸರ್ಕಾರದ ಮೇಲೆ ಆಕ್ರೋಶಗೊಂಡಿರುವ ರೈತರು ಈ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗೆಲ್ಲಿಸುವ ಮೂಲಕ ಕೇಂದ್ರಕ್ಕೆ ತಕ್ಕಪಾಠ ಕಲಿಸಲು ಸಿದ್ಧರಾಗಿದ್ದಾರೆ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಇಥೆನಾಲ್ ಖರೀದಿಯಲ್ಲಿ ಅನುಸರಿಸುತ್ತಿರುವ ಮಲತಾಯಿ ಧೋರಣೆಯಿಂದ ರಾಜ್ಯದ ರೈತರಿಗೆ ಅನ್ಯಾಯವಾಗುತ್ತಿದೆ. ಇದರಿಂದ ರೈತರು ಕೇಂದ್ರದ ಮೇಲೆ ಆಕ್ರೋಶಗೊಂಡಿದ್ದಾರೆ ಎಂದರು.

ಗುಜರಾತಿನಲ್ಲಿ ಶೇ.100ರಷ್ಟು, ಉತ್ತರ ಪ್ರದೇಶದಲ್ಲಿ ಸುಮಾರು ಶೇ.70ರಷ್ಟು ಹಾಗೂ ಮಹಾರಾಷ್ಟ್ರದಲ್ಲಿ ಶೇ.65ರಷ್ಟು ಎಥನಾಲ್ ಖರೀದಿಗೆ ಅವಕಾಶ ನೀಡಿರುವ ಕೇಂದ್ರ, ಕರ್ನಾಟಕಕ್ಕೆ ಕೇವಲ ಶೇ.27ರಷ್ಟು ಎಥೆನಾಲ್ ಖರೀದಿಗೆ ಅವಕಾಶ ನೀಡಿದೆ. ಇದರಿಂದ ಗೋವಿನಜೋಳದ ಬೆಲೆ ಕುಸಿತವಾಗಿದ್ದು ರೈತರಿಗೆ ಆರ್ಥಿಕವಾಗಿ ನಷ್ಟವುಂಟಾಗುತ್ತಿದೆ ಎಂದರು.

ಕೆಲ ವರ್ಷಗಳ ಹಿಂದೆ ರೈತರ ಆದಾಯವನ್ನು ದ್ವಿಗುಣಗೊಳಿಸುತ್ತೇವೆ ಎಂದು ಹೇಳಿದ್ದ ಕೇಂದ್ರ ಸರ್ಕಾರ ಎಲ್ಲ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬಿನಿಂದ ಎಥೆನಾಲ್ ತಯಾರಿಸುವಂತೆ ಹೇಳಿತು. ಆದರಂತೆ ಬಹುತೇಕ ಸಕ್ಕರೆ ಕಾರ್ಖಾನೆಗಳು ಕಬ್ಬಿನಿಂದ ಎಥನಾಲ್ ತಯಾರಿಸುತ್ತಿವೆ ಆದರೆ ಇಲ್ಲಿ ರೈತರು ಹಾಗೂ ಸಕ್ಕರೆ ಕಾರ್ಖಾನೆ ಮಾಲೀಕರಿಗಿಂತ ಇಂಧನ ಕಂಪನಿಗಳಿಗೆ ಹೆಚ್ಚು ಲಾಭವನ್ನು ಒದಗಿಸಲು ಕೇಂದ್ರ ಮುಂದಾಗಿ ಖಾಸಗಿ ಕಂಪನಿಯವರ ಆದಾಯವನ್ನು ದ್ವಿಗುಣಗೊಳಿಸಿ ರೈತರಿಗೆ ಅನ್ಯಾಯವೆಸಗಿದೆ ಎಂದು ಆರೋಪಿಸಿದರು.

ಪ್ರತಿಯೊಂದು ಹಂತದಲ್ಲಿಯೂ ರೈತರಿಗೆ ಅನ್ಯಾಯ ಎಸಗುತ್ತಿರುವ ಕೇಂದ್ರದ ವಿರುದ್ಧ ಸಾರ್ವಜನಿಕರು ಈ ಚುನಾವಣೆ ಮೂಲಕ ತಕ್ಕ ಉತ್ತರ ನೀಡಿಲಿದ್ದಾರೆ ಎಂದರು.

ಈ ವೇಳೆ ಮಾಜಿ ಶಾಸಕ ಆನಂದ ನ್ಯಾಮಗೌಡ, ಸರನಾಡಗೌಡ ಸೇರಿದಂತೆ ಇತರರು ಇದ್ದರು.



ವಿದ್ಯಾರ್ಥಿಗಳ ಬೆಳವಣಿಗೆಗೆ ಕೌಶಲ್ಯ ಅವಶ್ಯ

ಮುಧೋಳ: ಇಂದಿನ ಆಧುನಿಕ ಕಾಲಘಟ್ಟದಲ್ಲಿ ಮಹಿಳೆಯರಲ್ಲಿ ಕೌಶಲ್ಯಗಳ ಅವಶ್ಯಕತೆ ತುಂಬಾ ಇದೆ. ಸಂವಹನ ಕೌಶಲ್ಯ, ಆಲಿಸುವಿಕೆ, ನಾಯಕತ್ವ ಗುಣ, ಸಮಯದ ನಿರ್ವಹಣೆ, ಸಮೂಹ ಕೌಶಲ್ಯ, ಅಭಿವ್ಯಕ್ತಗೊಳಿಸುವುದು ಹಾಗೂ ಈಮೇಲ್, ಪಿಪಿಟಿ ತಯಾರಿಕೆಯಂತಹ ಮುಂತಾದ ಕೌಶಲ್ಯಗಳು ಇಂದಿನ ಸ್ಪರ್ಧಾತ್ಮಕ ಯುಗಕ್ಕೆ ಅತ್ಯವಶ್ಯಕವಾಗಿವೆ. ಜೊತೆಗೆ ಉಪಜೀವನಕ್ಕಾಗಿ ಮೃದು ಕೌಶಲ್ಯಗಳ ತರಬೇತಿಯನ್ನು ಪಡೆದುಕೊಳ್ಳುವುದು ಅವಶ್ಯಕವಾಗಿದೆ ಎಂದು ಗುರುಪಾದಯ್ಯ ಹಿರೇಮಠ ಹೇಳಿದರು.

ನಗರದ ದಾನಮ್ಮದೇವಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಿಳಾ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಘಟಕ, ವೃತ್ತಿ ಮಾರ್ಗದರ್ಶನ ಘಟಕ ಹಾಗೂ ವಿದ್ಯಾರ್ಥಿನಿ ಕ್ಷೇಮಪಾಲನ ಘಟಕ ಆಯೋಜನೆ ಮಾಡಿದ್ದ 10 ದಿನಗಳ ಮೃದು ಕೌಶಲ್ಯಗಳ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ.ಎಂ.ಎಂ.ಹಿರೇಮಠ ಮಾತನಾಡಿ, ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಮೃದು ಕೌಶಲ್ಯಗಳ ತರಬೇತಿ ಸಹಕಾರಿಯಾಗಲಿದೆ. ಇದರಂತೆ ಪ್ರತಿ ವರ್ಷ ತಮ್ಮ ಉಪಜೀವನಕ್ಕೆ ಸಹಕಾರಿಯಾಗುವ ತರಬೇತಿಗಳನ್ನು ಮಹಾವಿದ್ಯಾಲಯದಿಂದ ನಿಡಲಾಗುವುದೆಂದು ಹೇಳಿದರು.

ಪ್ರೊ.ಜಿ.ಎ.ಮೇತ್ರಿ, ಪ್ರೊ.ಎ.ಎನ್.ಬಾಗೇವಾಡಿ, ಪ್ರೊ.ಬಿ.ಎನ್.ಬಾರಕೇರ, ಐಕ್ಯೂಎಸಿ ಘಟಕದ ಸಂಯೋಜಕ ಪ್ರೊ.ಎ.ಎನ್.ಬಾಗೇವಾಡಿ, ವೃತ್ತಿ ಮಾರ್ಗದರ್ಶನ ಘಟಕದ ಕಾರ್ಯಾಧ್ಯಕ್ಷ ಪ್ರೊ.ಜಿ.ಎ.ಮೇತ್ರಿ, ವಿದ್ಯಾರ್ಥಿನಿ ಕ್ಷೇಮ ಪಾಲನ ಘಟಕದ ಕಾರ್ಯಾಧ್ಯಕ್ಷ ಪ್ರೊ.ಬಿ.ಎನ್.ಬಾರಕೇರ ಹಾಗೂ ಮಹಾವಿದ್ಯಾಲಯದ ಸಿಬ್ಬಂದಿ, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡು ಮಾತನಾಡಿದ ಪ್ರಾಚಾರ್ಯರಾದ ಪ್ರೊ. ಎಮ್.ಎಮ್.ಹಿರೇಮಠರವರು ನಮ್ಮದು ವೈಜ್ಞಾನಿಕ ತಳಹದಿಯ ಮೇಲೆ ಹಿರಿಯರು ಕಟ್ಟಿಕೊಟ್ಟಿರುವ ಸನಾತನ ಸಂಸ್ಕೃತಿ ಇದೆ. ಇಂತಹ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಹೋಗೋಣ, ಆ ದಾರಿಯಲ್ಲಿ ತಾವೆಲ್ಲರು ಕಂಕಣ ಬದ್ಧರಾಗಿ ವೀರನಾರಿಯರ ಪಥದಲ್ಲಿ ಸಾಗಿ ಬದುಕನ್ನು ಸಾರ್ಥಕ ಪಡಿಸಿಕೊಳ್ಳಿ ಎಂದು ಹೇಳಿದರು.

ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ಪಿ.ವ್ಹಿ. ಮನಗೂಳಿ ಅತಿಥಿಗಳನ್ನು ಪರಿಚಯಿಸಿ ಸ್ವಾಗತಿಸಿದರು. ಪ್ರೊ ಎಸ್.ಡಿ.ಅಂಬಿಗೇರ ವಂದಿಸಿದರು. ಪ್ರೊ. ಮಲ್ಲಿಕಾರ್ಜುನ ಎಮ್ ನಿರೂಪಿಸಿದರು ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಎಲ್ಲಾ ಬೋಧಕ–ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ಎಲ್ಲ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



ಹೇಮರಡ್ಡಿ ಮಲ್ಲಮ್ಮ ದೇವಸ್ಥಾನಕ್ಕೆ ಜನಾರ್ದನ ರೆಡ್ಡಿ ಭೇಟಿ

ಇಳಕಲ್: ಮಾಜಿ ಸಚಿವ ಹಾಗೂ ಗಂಗಾವತಿ ವಿಧಾನಸಭಾ ಕ್ಷೇತ್ರದ ಶಾಸಕ ಗಾಲಿ ಜನಾರ್ದನ ರೆಡ್ಡಿ ಅವರು ಶನಿವಾರ ಚಿಕ್ಕ ಓತಗೇರಿ ಗ್ರಾಮದಲ್ಲಿ ನೂತನವಾಗಿ ಉದ್ಘಾಟನೆಗೊಂಡ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನಕ್ಕೆ ಆಗಮಿಸಿ ದರ್ಶನ ಪಡೆದರು.

ಗ್ರಾಮದಲ್ಲಿ ನೂತನವಾಗಿ ಉದ್ಘಾಟನೆಗೊಂಡ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನಕ್ಕೆ ಗಾಲಿ ಜನಾರ್ಧನ್ ರೆಡ್ಡಿ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿ ತಾಯಿಯ ಆಶೀರ್ವಾದ ಪಡೆದರು.

ಗ್ರಾಮಸ್ಥರನ್ನು ಉದ್ದೇಶಿಸಿ ಮಾತನಾಡಿದ ಜನಾರ್ದನ್ ರೆಡ್ಡಿ ಅವರು ಮನುಕುಲಕ್ಕೆ ಒಳಿತನ್ನು ಬಯಸಿದ ಮಹಾನ ದೇವತೆ ಶಿವಶರಣೆ ಹೇಮರಡ್ಡಿ ಮಲ್ಲಮ್ಮನವರ ದರ್ಶನ ಪಡೆದಿದ್ದು ನನ್ನ ಪುಣ್ಯ, ಸುಂದರವಾಗಿ ದೇವಸ್ಥಾನ ನಿರ್ಮಾಣವಾಗಿದೆ ಆ ತಾಯಿ ಗ್ರಾಮಸ್ಥರು ಎಲ್ಲರಿಗೂ ಒಳಿತನ್ನ ಮಾಡಲಿ ಎಂದು ಮಾತನಾಡಿದರು.

ಚಿಕ್ಕ ಓತಗೇರಿ ಗ್ರಾಮಸ್ಥರು ಮಾಜಿ ಸಚಿವರಿಗೆ ಸತ್ಕರಿಸಿ ಗೌರವಿಸಿದರು. ಮನೋಹರಗೌಡ ಗೌಡರ, ಗ್ರಾಮದವರಾದ ಮಲ್ಲನಗೌಡ ಮರಿಗೌಡರ, ಗೋವಿಂದ ಗೌಡರ, ಶರಣಪ್ಪ ಗುಡಿಹಾಳ, ಗ್ಯಾನಪ್ಪ ಕಂದಕೂರ, ಮಹಾಂತೇಶ ಕಂದಕೂರ, ಶಿವಪ್ಪ ಮೂಲಿಮನಿ, ಬಸವರಾಜ ಕಂದಕೂರ, ಆಶೋಕ ಕಂದಕೂರ, ಆಯ್ಯನಗೌಡ ಮೂಲಿಮನಿ, ಶಶಿಧರ್ ತಾರಿವಾಳ, ವೆಂಕನಗೌಡ ಮರಿಗೌಡರ, ಈರನಗೌಡ ಗೌಡರ ಓತಗೇರಿ ಮತ್ತು ವರದಿಗಾರ ಶರಣಗೌಡ ಕಂದುಕುರ ಹಾಗೂ ಗ್ರಾಮದ ಗುರುಹಿರಿಯರು ಉಪಸ್ಥಿತರಿದ್ದರು.



ಜನರಿಗೆ ಸುಳ್ಳು ಹೇಳುತ್ತಿರುವ ಸಿಎಂ: ಶಾಸಕ ರಾಜುಗೌಡ

ಬಾಗಲಕೋಟೆ: ಸಿಎಂ ಸಿದ್ದರಾಮಯ್ಯ ಜನರಿಗೆ ಸುಳ್ಳು ಹೇಳುವ ಕೆಲಸ ಮಾಡುತ್ತಿದ್ದಾರೆ. ತಮ್ಮ ಸರ್ಕಾರ ಯಾವುದೇ ಸಾಧನೆ ಮಾಡಿಲ್ಲ ಅಂತ ಗೊತ್ತಿದೆ. ಅದನ್ನು ತಿರುಚಿ ಹೇಳುತ್ತಿದ್ದಾರೆ ಎಂದು ಶಾಸಕ ರಾಜುಗೌಡ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವ ಸತೀಶ ಜಾರಕಿಹೊಳಿ ಅವರು ಸುಖಾ ಸುಮ್ಮನೇ ಪ್ರಯತ್ನ ಮಾಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ಸಿಎಂ ಸಿದ್ದರಾಮಯ್ಯ ತಮ್ಮ ಸಿಎಂ ಮಾಡುವುದಿಲ್ಲ, ಇಂದೇ ತಮ್ಮನ್ನು ಸಿಎಂ ಮಾಡುತ್ತೇವೆ ಅಂತ ಹೇಳಲಿ. ನಾವೇ ಖುದ್ದಾಗಿ ತಮ ಪರವಾಗಿ ಮತ ಕೇಳುತ್ತೇವೆ ಎಂದರು. ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಿದ್ದು ಬಿಜೆಪಿ ಸರ್ಕಾರ. ದಲಿತರಿಗೆ ನ್ಯಾಯ ಕೊಡುವ ಕೆಲಸ ಕಾಂಗ್ರೆಸ್ ಎಂದಿಗೂ ಮಾಡಿಲ್ಲ, ಸುಳ್ಳುಗಳನ್ನು ಹೇಳಿ ಚುನಾವಣೆ ಗೆಲ್ಲುವ ತಂತ್ರ ಮಾಡುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ಮಾಜಿ ಸಚಿವ ಶ್ರೀರಾಮುಲು ಮಾತನಾಡಿ, ಕಾಂಗ್ರೆಸ್ ಸರ್ಕಾರದ ಹಗರಣಗಳು ಪುಸ್ತಕ, ಕ್ಯಾಸೆಟ್ ಬಿಡುಗಡೆ ಮಾಡಬಹುದು ಅಷ್ಟೊಂದು ಇದೆ. ಯುವಕರಿಗೆ ಉದ್ಯೋಗ ಕೊಡುತ್ತೇವೆ ಅಂತ ಹೇಳಿದರು. ಸರ್ಕಾರದಲ್ಲಿ 2,80,000 ಹುದ್ದೆಗಳು ಖಾಲಿ ಇವೆ. ಮೂರು ವರ್ಷದಲ್ಲಿ ಒಂದೇ ಒಂದು ಹುದ್ದೆ ಭರ್ತಿ ಮಾಡಿಲ್ಲ, ಸಿಲೆಂಡರ್, ಪೆಟ್ರೋಲ್, ಡಿಜೇಲ್ ಬೆಲೆ ಹೆಚ್ಚಳ ಮಾಡಿ ಬಡವರಿವರಿಗೆ ಬರೆ ನೀಡಿದ್ದಾರೆ. ಉಳಿದ ರಾಜ್ಯಗಳಿಗ್ಗಿಂತ ಕರ್ನಾಟಕ ರಾಜ್ಯದಲ್ಲಿ ಸೆಸ್ಸ ಹೆಚ್ಚಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಆಶಾ ಕಾರ್ಯಕರ್ತೆಯರ ವೇತನ ಹೆಚ್ಚಳ ಮಾಡಿಲ್ಲ, ಆರ್ಥಿಕ ಹೊರೆ ಹೆಚ್ಚಳ ಮಾಡಿದ್ದಾರೆ. ಉರ್ದು ಶಾಳೆಗಳ ಬಗ್ಗೆ ಕಾಳಜಿ ಇರುವ ಕಾಂಗ್ರೆಸ್ ಸರ್ಕಾರಕ್ಕೆ ಕನ್ನಡ ಶಾಲೆಗಳ ಬಗ್ಗೆ ಕನಿಕರವಿಲ್ಲ ಎಂದು ಕಿಡಿಕಾರಿದರು. ವಿ.ಪ ಸದಸ್ಯ ಪಿ.ಎಚ್.ಪೂಜಾರ ಇದ್ದರು.



ಕಳಸ, ಪಲ್ಲಕ್ಕಿ ಭವ್ಯ ಮೆರವಣಿಗೆ



ಗುಳೇದಗುಡ್ಡ: ಏ.7ರಂದು ನಡೆಯಲಿರುವ ಕೂಡಲಸಂಗಮದ ಸಂಗಮೇಶ್ವರ ದೇವರ ಜಾತ್ರಾಮಹೋತ್ಸವದ ಅಂಗವಾಗಿ ನಡೆಯಲಿರುವ ಹುಚ್ಚಯ್ಯ ರಥದ ಕಳಸ ಹಾಗೂ ಪಲ್ಲಕ್ಕಿ ಮೆರವಣಿಗೆ ಭಜನೆಯೊಂದಿಗೆ ನಗರದ ರೇವಣಸಿದ್ದಪ್ಪ ದೇವರಮನಿ ಅವರ ಮನೆಯಿಂದ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಕೂಡಲಸಂಗಮಕ್ಕೆ ಶನಿವಾರ ಪಾದಯಾತ್ರೆಯ ಮೂಲಕ ತೆರಳಿತು. ಇದಕ್ಕೂ ಮೊದಲು ಕಳಸಕ್ಕೆ ಅಭಿಷೇಕ, ಪೂಜೆ ನಡೆಯಿತು.

ಮೆರವಣಿಗೆಯಲ್ಲಿ ರೇವಣಸಿದ್ದಪ್ಪ ದೇವರಮನಿ, ಮುತ್ತಣ್ಣ ದೇವರಮನಿ, ವೀರುಪಾಕ್ಷ ದೇವರಮನಿ, ಈರಪ್ಪ ಗಡ್ಡಿ, ಶಿವಪ್ಪ ಶ್ಯಾವಿ, ಶೇಖರಪ್ಪ ರಂಜನಗಿ, ಬಿ.ಎನ್.ಪಾಗಿ, ಶರಣಪ್ಪ ಖಂಡಿ, ಈರಪ್ಪ ಬೆಟಗೇರಿ, ಮಹಾಗುಂಡಪ್ಪ ದೇವರಮನಿ, ಶ್ರೀನಿವಾಸ ರಂಜನಗಿ, ಸಂಗಮೇಶ ರಂಜನಗಿ, ಮಹೇಶ ಶ್ಯಾವಿ, ಈರಪ್ಪ ಗಂಜಾಳ, ಈರಣ್ಣ ಸುರಪುರ, ವಿಜಯ ಕಣವಿ, ಮೇಘರಾಜ ಸುರಪುರ, ಬಸವರಾಜ ಬುದರಿ, ಪ್ರಭುಕುಮಾರ ಬುದರಿ, ಬಸಪ್ಪ ಕೊಪ್ಪದ, ಅಮರೇಶ ಗೊಡನ್ನವರ, ಅಶ್ವಿನಿ ದೇವರಮನಿ, ಕೂಡ್ಲೆವ್ವ ರಂಜನಗಿ, ಗಿರಿಜಾ ರಂಜನಗಿ, ಅನ್ನವ್ವ ರಂಜನಗಿ, ಸಂಗಮ್ಮ ಕುಂಟೋಜಿ, ನೀಲಮ್ಮ ಕಲಕೇರಿ, ಶೋಭಾ ಹದ್ಲಿ ಮತ್ತಿತರರು ಇದ್ದರು.

ಏ.15ರ ವರೆಗೆ ಸ್ವಯಂ ಗಣತಿಗೆ ಅವಕಾಶ

ಗುಳೇದಗುಡ್ಡ: ರಾಷ್ಟ್ರೀಯ ಜನಗಣತಿ 2026–27 ಪ್ರಾರಂಭಗೊಂಡಿದ್ದು, ನಿಮ್ಮ ಕುಟುಂಬದ ವಿವರಗಳನ್ನು ನೀವೇ ದಾಖಲಿಸಲು ಏ.1ರಿಂದ 15ರ ವರೆಗೆ ಸ್ವಯಂ ಗಣತಿ ಚಾಲ್ತಿಯಲ್ಲಿ ಇರುತ್ತದೆ. ಗಣತಿದಾರರು ಮನೆಗೆ ಬರುವ ಮೊದಲೇ ಸಾರ್ವಜನಿಕರು ಆನ್‌ಲೈನ್ ಮೂಲಕ ವಿವರಗಳನ್ನು ಭರ್ತಿ ಮಾಡಬಹುದು ಎಂದು ಪುರಸಭೆ ಮುಖ್ಯಾಧಿಕಾರಿ ಅಸ್ಲಂ ಮುಜಾವರ ತಿಳಿಸಿದ್ದಾರೆ. ಈ ಬಗ್ಗೆ ಅವರು ಪ್ರಕಟಣೆ ನೀಡಿ, ಸ್ವಯಂ ಗಣತಿ ಅತ್ಯಂತ ಸರಳ ಮತ್ತು ಸುರಕ್ಷಿತವಾಗಿದ್ದು, ಸಾರ್ವಜನಿಕರು ಈ ವೆಬ್ ಸೈಟ್‌ಗೆ ಭೇಟಿ ನೀಡಿ, ತಮ್ಮ ಮೊಬೈಲ್ ಸಂಖ್ಯೆ ಮತ್ತು ಒಟಿಪಿ ಬಳಸಿ ಲಾಗಿನ್ ಆದಾಗ, ವಾಸಸ್ಥಳದ ನಕ್ಷೆಯಲ್ಲಿ ತಮ್ಮ ಮನೆಯನ್ನು ನಿಖರವಾಗಿ ಗುರುತಿಸ ಬಹುದು. ಸಾರ್ವಜನಿಕರು ಇಲ್ಲಿ ತಮ್ಮ ಕುಟುಂಬದ ವಿವರವನ್ನು ಭರ್ತಿ ಮಾಡಿ, ಸಬ್ಮಿಟ್ ಮಾಡಿದಾಗ ರೆಪರನ್ಸ್ ಐಡಿ ಬರುತ್ತದೆ. ಆ ಐಡಿಯನ್ನು ಸುರಕ್ಷಿತವಾಗಿ ಇಟ್ಟುಕೊಂಡು, ಏ.16ರ ನಂತರ ಮನೆಗೆ ಬರುವ ಗಣತಿದಾರರಿಗೆ ಗಣತಿದಾರರಿಗೆ ತೋರಿಸಿ. ಇದರಿಂದ ನಿಮ್ಮ ಸಮಯ ಉಳಿತಾಯವಾಗುತ್ತದೆ ಎಂದು ತಿಳಿಸಿದ್ದಾರೆ.

ಪತಿ ಪರ ರಾಜೇಶ್ವರಿ ಭರ್ಜರಿ ಪ್ರಚಾರ

ಬಾಗಲಕೋಟೆ: ಭಾರತೀಯ ಜನತಾ ಪಾರ್ಟಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಅವರ ಪತ್ನಿ ರಾಜೇಶ್ವರಿ ಚರಂತಿಮಠ ಅವರು ನವಗರದಲ್ಲಿ ಮನೆ ಮನೆ ತೆರಳಿ ಮತಯಾಚನೆ ಮಾಡಿದರು.


ನವನಗರದ 27–28ನೇ ಸೆಕ್ಟರ್‌ನಲ್ಲಿ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿ ಮಾತನಾಡುತ್ತಾ ಪ್ರಧಾನಿ ನರೇಂದ್ರ ಮೋದಿಯವರು ಮಹಿಳೆಯರ ಸಬಲೀಕರಣಕ್ಕಾಗಿ ಸಾಕಷ್ಟು ಯೋಜನೆಗಳನ್ನು ತಂದಿದ್ದಾರೆ, ರಾಜ್ಯದಲ್ಲಿ ಯಡಿಯೂರಪ್ಪನವರು ಮುಖ್ಯ ಮಂತ್ರಿಗಳಿದ್ದಾಗ ಹೆಣ್ಣುಮಕ್ಕಳಿಗಾಗಿ ಭಾಗ್ಯಲಕ್ಷ್ಮೀ ಬಾಂಡ್ ಯೋಜನೆ ತರುವ ಮೂಲಕ ಮಹಿಳೆಯರಿಗೆ ಆರ್ಥಿಕ ಭದ್ರತೆ ನೀಡಿದ್ದು ಇಂದು ಕೂಡಾ ಮಹಿಳೆಯರು ಮರೆತಿಲ್ಲಾ, ಈಗಾಗಿ ಮಹಿಳೆಯ ಪರವಾಗಿರುವ ಬಿಜೆಪಿ ಮತ ನೀಡಿ ಎಂದರು.

ಶಾಂತಾ ಹನಮಕ್ಕನವರ, ಗೌರಮ್ಮ, ಸೌಮ್ಯ ಸೊಬರದ, ವೀರಣ್ಣ ದಳವಾಯಿ, ಲಕ್ಷ್ಮೀ ಪೀರಶೆಟ್ಟಿ, ವಿಜಯ ಚೆಟ್ಟರಕಿ, ಎಂ.ಬಿ.ಗಟ್ಟದ ಸಾವಳಗಿಮಠ, ಶಿವು ಹನಮಕ್ಕನವರ, ವೀರಕ್ತಮಠ ಸರ, ದಾಸರ ಸರ ಸೇರಿದಂತೆ ಅನೇಕ 'ರು ಇದ್ದರು.



ಬಸವಪ್ರಿಯಾ ಭಕ್ತಿಯ ಸಾಧನೆ ಮಾದರಿ

ರಬಕವಿ–ಬನಹಟ್ಟಿ: ಆಂಧ್ರಪ್ರದೇಶದ ಶ್ರೀಶೈಲಂನ ಮಲ್ಲಿಕಾರ್ಜುನ ದೇವರ ಜಾತ್ರೆಗೆ ಯುವತಿಯೊಬ್ಬಳು ಮರಗಾಲು ಕಟ್ಟಿಕೊಂಡು ಪಾದಯಾತ್ರೆಯ ಮೂಲಕ ತೆರಳಿದ್ದು ಇತಿಹಾಸಲ್ಲಿಯೇ ಮೊದಲು. ಇಂಥ ಬಸವಪ್ರಿಯಾ ಬಂಡಿಯವರ ಭಕ್ತಿಯ ಸಾಧನೆ ನಮಗೆಲ್ಲರಿಗೂ ಮಾದರಿಯಾಗಿದೆ ಎಂದು ರಬಕವಿಯ ಶಂಕರಲಿಂಗ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಬಾಲಚಂದ್ರ ಉಮದಿಯವರು ತಿಳಿಸಿದರು.



ಇಲ್ಲಿನ ಮಲ್ಲಿಕಾರ್ಜುನ ದೇವಸ್ಥಾನದ ಸಮುದಾಯ ಭವನದಲ್ಲಿ ಐದೇಶಿ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡ ಧಾರ್ಮಿಕ ಕಾರ್ಯಕ್ರಮದಲ್ಲಿ ಮರಗಾಲು ಕಟ್ಟಿಕೊಂಡು ಶ್ರೀಶೈಲಕ್ಕೆ ಪಾದಯಾತ್ರೆಯ ಮೂಲಕ ತೆರಳಿದ ಬಸವಪ್ರಿಯಾ ಬಂಡಿಯವರನ್ನು ಸನ್ಮಾನಿಸಿ ಮಾತನಾಡಿದರು.

ರಬಕವಿಯ ಗುರುದೇವ ಬ್ರಹ್ಮಾನಂದ ಮಠದ ಗುರುಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ದೃಢವಾದ ನಿರ್ಧಾರದಿಂದ ಎಲ್ಲವೂ ಸಾಧ್ಯ. ಪ್ರಮಾಣಿಕವಾದ ಭಕ್ತಿಯಿಂದ ನಾವು ಯಾವುದೆ ಸಾಧನೆಯನ್ನು ಮಾಡಬಹುದಾಗಿದೆ. ಇಂದಿನ ದಿನಗಳಲ್ಲಿಯೂ ಸಾವಿರಾರು ಸಂಖ್ಯೆಯಲ್ಲಿ ಯುವಕರು ಪಾದಯಾತ್ರೆಯ ಮೂಲಕ ತೆರಳುತ್ತಿದ್ದಾರೆ. ನಮ್ಮ ದೇಶದ ಸಂಸ್ಕೃತಿ, ಸಂಸ್ಕಾರದ ಕುರಿತು ಯುವಕರಲ್ಲಿ ಇನ್ನಷ್ಟು ಜಾಗೃತಿ ಮುಖ್ಯವಾಗಿದೆಯೆಂದರು.

ಪ್ರಭು ಉಮದಿ, ಡಾ.ಬಸವರಾಜ ಹತಪಕಿ, ಈರಣ್ಣ ಗುಣಕಿ, ಈಶ್ವರ ನಾಗರಾಳ, ಬಸವರಾಜ ದಲಾಲ, ಬಸವರಾಜ ತೆಗ್ಗಿ, ಬಸವರಾಜ ಯಾದವಾಡ, ಶಿವಾನಂದ ಹೊಸಮನಿ, ಶಿವಾನಂದ ಕಡಕೋಳ, ಭೀಮಶಿ ಪಾಟೀಲ ಮತ್ತು ಶಿವಪುತ್ರ ಶ್ರೀಶೈಲ ಪಾದಯಾತ್ರಾ ತಂಡದವರಿದ್ದರು.

ಕಿರುಸುದ್ದಿ

ಬಾಬು ಜಗಜೀವನರಾಂ ಜಯಂತಿ ಇಂದು

ವಿಜಯಪುರ: ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಏ.5ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಆಶ್ರಯದಲ್ಲಿ ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ ರಾಮ್ ಅವರ 119ನೇ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 9 ಗಂಟೆಗೆ ನಗರದ ಸೆಟ್‌ಲೈಟ್ ಬಸ್ ನಿಲ್ದಾಣದ ಹತ್ತಿರ ಇರುವ ಡಾ.ಬಾಬು ಜಗಜೀವನರಾಮ್ ವೃತ್ತದಿಂದ ನಗರದ ಪ್ರಮುಖ ವೃತ್ತಗಳ ಮೂಲಕ ಸಾಗಿ ಕಂದಗಲ್ ಹನುಮಂತರಾಯ ರಂಗಮಂದಿರದವರೆಗೆ ಭಾವಚಿತ್ರದ ಮೆರವಣಿಗೆ ಜರುಗಲಿದೆ. ಸಚಿವ ಎಂ.ಬಿ.ಪಾಟೀಲ ಉದ್ಘಾಟಿಸುವರು. ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅಧ್ಯಕ್ಷತೆ ವಹಿಸಲಿದ್ದಾರೆ. ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಮುಖ್ಯಸ್ಥರು ಹಾಗೂ ನಿರ್ದೇಶಕಿ ಪ್ರೊ. ಲಕ್ಷ್ಮೀದೇವಿ ವೈ. ಅವರು ಉಪನ್ಯಾಸ ನೀಡಲಿದ್ದಾರೆ ಎಂದು ಸಮಾಜ ಕಲ್ಯಾಣ ಇಲಾಖೆಯ ಪ್ರಕಟಣೆ ತಿಳಿಸಿದೆ.

ಚುಟುಕು ಸಾಹಿತ್ಯ ಸ್ಪರ್ಧೆಯಲ್ಲಿ ಪ್ರಥಮ

ಸಿಂದಗಿ: ನಗರದ ಸಾಹಿತಿ, ಶಿಕ್ಷಕಿ, ಶಾಂತಾ ಎಂ. ಮೊಸಲಗಿ ಅವರು ಕರ್ನಾಟಕ ರಾಜ್ಯ ಸಾಹಿತಿಗಳ ಬಳಗ ಕೇಂದ್ರ ಘಟಕ ಕಲಬುರಗಿ (ರಿ) ವತಿಯಿಂದ ನಡೆದ ಚುಟುಕು ಸಾಹಿತ್ಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಈ ಬಳಗದ ಗೌರವಾಧ್ಯಕ್ಷ ಬಾಬುಮಿಯಾ ಫುಲಾರಿ, ಸಂಚಾಲಕ ಮಹಾನಂದಾ ಮುಗಳಿ, ವಿಮರ್ಶಕ ರಾಜಶ್ರೀ ಬಿದರಿ, ಪ್ರಧಾನ ಕಾರ್ಯದರ್ಶಿ ಕುದುರತ್‌ಅಲಿ ಭೂಸನೂರ ಅಭಿನಂದಿಸಿದ್ದಾರೆ.



ಏ.30ರೊಳಗೆ ಆಸ್ತಿ ತೆರಿಗೆ ಪಾವತಿಸಿದರೆ ರಿಯಾಯಿತಿ

ಚಡಚಣ: ಪಟ್ಟಣ ಪಂಚಾಯತಿ ಚಡಚಣ ವ್ಯಾಪ್ತಿಯ ನಾಗರಿಕರು 2026–27ನೇ ಸಾಲಿನ ಆಸ್ತಿ ತೆರಿಗೆಯನ್ನು ಏ.1ರಿಂದ 30ರೊಳಗೆ ಪಾವತಿಸಿದಲ್ಲಿ ಒಟ್ಟು ಮೊತ್ತದಲ್ಲಿ ಶೇ.5 ರಿಯಾಯಿತಿ ಪಡೆಯಬಹುದಾಗಿದೆ ಎಂದು ಪಟ್ಟಣ ಪಂಚಾಯತಿ ಪ್ರಕಟಣೆಯಲ್ಲಿ ತಿಳಿಸಿದೆ. ನಿಗದಿತ ಅವಧಿಯೊಳಗೆ ತೆರಿಗೆ ಪಾವತಿಸಿ ಈ ರಿಯಾಯತಿ ಸದುಪಯೋಗಪಡಿಸಿಕೊಳ್ಳುವಂತೆ ಸಾರ್ವಜನಿಕರಿಗೆ ಮನವಿ ಮಾಡಲಾಗಿದೆ. ಮೇ ಹಾಗೂ ಜೂನ್ ತಿಂಗಳಲ್ಲಿ ಯಾವುದೇ ರೀತಿಯ ರಿಯಾಯಿತಿ ನೀಡಲಾಗುವುದಿಲ್ಲ. ಜುಲೈ ತಿಂಗಳಿಂದ ಬಾಕಿ ಇರುವ ಆಸ್ತಿ ತೆರಿಗೆಯ ಮೇಲೆ ಶೇ.2ರಷ್ಟು ಬಡ್ಡಿ ವಿಧಿಸಲಾಗುವುದು ಎಂದು ತಿಳಿಸಲಾಗಿದೆ. ಆಸ್ತಿ ತೆರಿಗೆ ಪಾವತಿಸಲು ನಾಗರಿಕರು ಪಟ್ಟಣ ಪಂಚಾಯತಿ ಕಚೇರಿಗೆ ಭೇಟಿ ನೀಡಿ ಪಾವತಿ ಮಾಡಬಹುದು. ಈ ಕುರಿತು ಮುಖ್ಯಾಧಿಕಾರಿ ಬಾಬಾಸಾಹೇಬ ತಾವಸೆ, ಅಧ್ಯಕ್ಷ ಮಲ್ಲಿಕಾರ್ಜುನ ಧೋತ್ರೆ ಹಾಗೂ ಉಪಾಧ್ಯಕ್ಷ ಇಲಾಹಿಸಾಬ ನದಾಫ ತಿಳಿಸಿದ್ದಾರೆ.

ನಾಳೆಯಿಂದ ಶಂಕರಲಿಂಗೇಶ್ವರ ಮಹಾರಥೋತ್ಸವ

ಇಂಡಿ: ತಾಲೂಕಿನ ಸುಕ್ಷೇತ್ರ ಲಚ್ಯಾಣದ ಲಿಂಗೈಕ್ಯ ಸಿದ್ದಲಿಂಗ ಮಹಾರಾಜರ ಕಮರಿಮಠದಲ್ಲಿ ಶಂಕರಲಿಂಗೇಶ್ವರ ಮಹಾರಥೋತ್ಸವ ಅಂಗವಾಗಿ ಏ.6ರಿಂದ 11ರ ವರೆಗೆ ವಿವಿಧ ಧಾರ್ಮಿಕ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಏ.6ರಂದು ಜಾನುವಾರ ಜಾತ್ರೆಗೆ ಚಾಲನೆ ನೀಡಲಾಗುವುದು. ಏ.7ರಂದು ಬೆಳಗ್ಗೆ 8 ಗಂಟೆಗೆ ಮಠದ ಆವರಣದಲ್ಲಿ ಜರುಗುವ ಷಟಸ್ಥಲ ಧ್ವಜಾರೋಹಣವನ್ನು ಜಕನೂರಿನ ಸಿದ್ದಲಿಂಗ ದೇವರು ನೇರವೇರಿಸಲಿದ್ದಾರೆ. ನಂತರ 10.30 ಗಂಟೆಗೆ ಸರ್ವ ಧರ್ಮದ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮ ನೆರವೇರುವುದು. ಬಂಥನಾಳ ಹಾಗೂ ಲಚ್ಯಾಣ ಮಠದ ಪೀಠಾಧೀಶ ವೃಷಭಲಿಂಗೇಶ್ವರ ಮಹಾಶಿವಯೋಗಿಗಳು ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಯಾಗಿ ಶಾಸಕ ಯಶವಂತರಾಯಗೌಡ ಪಾಟೀಲ, ಸಿಪಿಐ ಆನಂದ ಮೇತ್ರಿ ಭಾಗವಹಿಸಲಿದ್ದಾರೆ. ಏ.8ರಂದು ಬೆಳಗ್ಗೆ 11 ಗಂಟೆಗೆ ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಅಗ್ನಿ ಶಮನ ಕಾರ್ಯಕ್ರಮ ನಡೆಯಲಿದೆ. ಸಂಜೆ 5 ಗಂಟೆಗೆ ಬಂಥನಾಳದ ಶಂಕರಲಿಂಗೇಶ್ವರ ಶಿವಯೋಗಿಗಳ ಮಹಾರಥೋತ್ಸವ ನೆರವೇರಲಿದೆ. ಏ.9ರಂದು ಬೆಳಗ್ಗೆ 9ಕ್ಕೆ ಪ್ರಸಿದ್ಧ ಜಂಗಿ ಕುಸ್ತಿ ಪಂದ್ಯ ನಡೆಯಲಿದೆ. ಬಳಿಕ ಕಲಾವಿದೆ ವಿದ್ಯಾಶ್ರೀ ಮಸಬಿನಾಳ ಹಾಗೂ ಲಕ್ಷ್ಮಣ ಖಣದಾಲ ಅವರಿಂದ ಗಿ ಗೀ ಪದಗಳು ಜರುಗಲಿವೆ. ಸಂಜೆ 4 ಗಂಟೆಗೆ ಸೋಲಾಪುರದ ಶ್ರೀಮಂತ ಬಾಬಾಸಾಹೇಬ ವಾರದ ಕುಟುಂಬದವರು ಕೊಡಮಾಡಿದ ಬೆಳ್ಳಿ ಗಧೆಯ ಕುಸ್ತಿ ಪಂದ್ಯ ನಡೆಯಲಿದೆ. ಸ್ಥಳೀಯ ಕುಸ್ತಿಪಟು ಚಂದಪ್ಪ ಯಳಮೇಲಿ ಬೆಳ್ಳಿ ಗಧೆಯ ಸೇವೆ ಸಲ್ಲಿಸಲಿದ್ದಾರೆ. ಏ.10ರಂದು ಉತ್ತಮ ರಾಸುಗಳಿಗೆ ಪ್ರಶಸ್ತಿ ಪತ್ರ ವಿತರಿಸಲಾಗುವದು ಎಂದು ಪ್ರಕಟಣೆ ತಿಳಿಸಿದೆ.



ವಿಜಯಪುರ: ಐತಿಹಾಸಿಕ ಪರಂಪರೆ ಉಳಿಸಿ ಅಭಿಯಾನದಡಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್(ನೋಂ) ವಿಜಯಪುರ ಜಿಲ್ಲಾ ಸಮಿತಿಯು ಆಲಮೇಲ ತಾಲೂಕಿನ ಕಡ್ಲೇವಾಡ ಗ್ರಾಮದ ಕಲ್ಯಾಣ ಚಾಳುಕ್ಯರ ಕಾಲದ ಪುರಾತನ ಸೋಮೇಶ್ವರ ದೇವಾಲಯಕ್ಕೆ ಭೇಟಿ ನೀಡಿತು. ಶಾಸನ ತಜ್ಞರಾದ ಡಾ.ದೇವರಕೊಂಡಾರೆಡ್ಡಿ, ಅಭಾಸಾಪ ಪದಾಧಿಕಾರಿಗಳಾದ ವಿವೇಕ ಕುಲಕರ್ಣಿ, ಸುಕಾಂತ ಕುಲಕರ್ಣಿ, ಶ್ರೀರಂಗ ಪುರಾಣಿಕ, ಆನಂದ ಗೋಡಸೆ, ಮಹಾಂತೇಶ, ಶ್ರೀರಂಗ ಕುಲಕರ್ಣಿ, ಪ್ರದೀಪ ಹೂಗಾರ ಇದ್ದರು.

ಆರೋಗ್ಯವೇ ಜೀವನದ ಒಂದು ಭಾಗ್ಯ

ವಿಜಯಪುರ: ಆರೋಗ್ಯವೇ ಜೀವನದ ಒಂದು ಭಾಗ್ಯ, ಆರೋಗ್ಯ ಕಾಯ್ದುಕೊಳ್ಳುವುದು ಅತ್ಯಂತ ಅಗತ್ಯತೆಗಳಲ್ಲಿ ಒಂದು ಎಂದು ಡಾ.ಎಂ.ಬಿ. ಕೋರಿ ಹೇಳಿದರು. ನಗರದ ಬಿಎಲ್‌ಡಿಇ ಸಂಸ್ಥೆಯ ಜ್ಞಾನಯೋಗಿ ಸಿದ್ದೇಶ್ವರ ಸ್ವಾಮೀಜಿ ಶಿಕ್ಷಣ ಮಹಾವಿದ್ಯಾಲಯದ ರೆಡ್ ಕ್ರಾಸ್ ಘಟಕ, ಕ್ರೀಡಾ ವಿಭಾಗ ಮತ್ತು ಬಿಎಲ್‌ಡಿಇ ಸಂಸ್ಥೆಯ ಮೆಡಿಕಲ್ ಕಾಲೇಜಿನ ಸಹಯೋಗದೊಂದಿಗೆ ವೈದ್ಯಕೀಯ ತಪಾಸಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ರಕ್ತದಾನ ಶಿಬಿರ, ಆರೋಗ್ಯ ವೃದ್ಧಿ ಕಾರ್ಯಚಟುವಟಿಕೆಗಳಲ್ಲಿ ರೆಡ್ ಕ್ರಾಸ್ ಚಟುವಟಿಕೆಗಳು ಬಹುಮುಖ್ಯ ಪಾತ್ರ ವಹಿಸುತ್ತಿವೆ ಎಂದರು. ಡಾ.ವಿಶಾಲ ಕೌಲಗಿ ಮಾತನಾಡಿ, ಭಾರತೀಯ ಸಮಾಜದ ಆರೋಗ್ಯದ ಸ್ಥಿತಿಗತಿಯನ್ನು ಗಮನಿಸಿದರೆ ಇಂದಿನ ಯುವಕರಲ್ಲಿಯೇ ಸಕ್ಕರೆ ಕಾಯಿಲೆ, ರಕ್ತದೊತ್ತಡ ಹೃದಯಾಘಾತ, ಉಸಿರಾಟದ ತೊಂದರೆ ಇಂತಹ ಮೊದಲಾದ ರೋಗಗಳು ಹರಡುತ್ತಿರುವುದು ಅತ್ಯಂತ ಅಪಾಯಕಾರಿ ಬೆಳವಣಿಗೆ ಎಂದು ಹೇಳಿದರು. ಇಂತಹ ನೂರಾರು ರೋಗಗಳು ಬರಲು ನಮ್ಮ ಜೀವನ ಶೈಲಿ, ಆಹಾರ ಪದ್ಧತಿ, ಖಿನ್ನತೆ, ಅಧಿಕ ಒತ್ತಡ ಈ ಮೊದಲಾದ ಅಂಶಗಳೇ ಮುಖ್ಯ ಕಾರಣವಾಗಿವೆ ಎಂದರು. ಜೊತೆಗೆ ಇವುಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಪರಿಹಾರ ಕ್ರಮಗಳನ್ನು ತಿಳಿಸಿದರು. ಡಾ. ಸರ್ವದಾ ಕನ್ನೂರ ಮಾತನಾಡಿ, ಮಹಿಳೆಯರಲ್ಲಿ ಹರಡುವ ಗರ್ಭಕಂಠ ಕ್ಯಾನ್ಸರ್ ಬಗ್ಗೆ ಮಾಹಿತಿ ನೀಡಿದರು. ಮತ್ತು ಇದರ ನಿಯಂತ್ರಣಕ್ಕಾಗಿ ಊಕಿಗ ಲಸಿಕೆಯ ಬಗ್ಗೆ ತಿಳಿಸಿಕೊಟ್ಟರು. ಪ್ರಾಚಾರ್ಯ ಡಾ. ಭಾರತಿ ಖಾಸನೀಸ ಮಾತನಾಡಿದರು.



ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಜ್ಞಾನಯೋಗಿ ಸಿದ್ದೇಶ್ವರ ಸ್ವಾಮೀಜಿ ಶಿಕ್ಷಣ ಮಹಾವಿದ್ಯಾಲಯದ ರೆಡ್ ಕ್ರಾಸ್ ಘಟಕ, ಕ್ರೀಡಾ ವಿಭಾಗ ಮತ್ತು ಬಿಎಲ್‌ಡಿಇ ಸಂಸ್ಥೆಯ ಮೆಡಿಕಲ್ ಕಾಲೇಜಿನ ಸಹಯೋಗದಲ್ಲಿ ವೈದ್ಯಕೀಯ ತಪಾಸಣೆ ನಡೆಯಿತು. ಡಾ.ಸಿದ್ದು ಭೂಮಣ್ಣವರ, ಡಾ ಕಾವ್ಯ.ಕೆ, ಸಹ ಪ್ರಾಧ್ಯಾಪಕ ಡಾ. ಎಂ.ಎಸ್.ಹಿರೇಮಠ, ಸಹಾಯಕ ಪ್ರಾಧ್ಯಾಪಕ ಎಂ.ಪಿ.ಕುಪ್ಪಿ, ಪಿ.ಡಿ.ಮುಲ್ತಾನಿ, ಡಾ.ಎಸ್.ಪಿ.ಶೇಗುಣಸಿ, ಸಂಶೋಧನಾ ವಿದ್ಯಾರ್ಥಿನಿ ಸುಜಾತಾ ಮತ್ತಿವಾಡ, ವಿನೋದ ಗಲಗಲಿ, ಸವಿತಾ ಪಾಟೀಲ, ಗಂಗೂಬಾಯಿ, ಸಹಾಯಕ ಪ್ರಾಧ್ಯಾಪಕ ಡಾ.ಬಿ.ಎಸ್ .ಹಿರೇಮಠ, ಸಹಾಯಕ ಪ್ರಾಧ್ಯಾಪಕಿ ಡಾ.ಜೆ.ಎಸ್.ಪಟ್ಟಣಶೆಟ್ಟಿ ಉಪಸ್ಥಿತರಿದ್ದರು.

ಕಾಲುವೆಯಂಚಿನ ಗ್ರಾಮಗಳಿಗೂ ನೀರು ತಲುಪಿಸಲು ರೈತರ ಆಗ್ರಹ

ವಿಜಯಪುರ: ಸಕಾಲಕ್ಕೆ ಕ್ಲೋಜರ್ ಕಾಮಗಾರಿ ನಡೆಸಿ ಕಾಲುವೆ ಕೊನೆ ಭಾಗದ ರೈತರಿಗೆ ನೀರು ತಲುಪುವಂತೆ ಕ್ರಮಕೈಗೊಳ್ಳುವುದು ಸೇರಿದಂತೆ ವಿವಿಧ ರೈತಪರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಖಂಡ ಕರ್ನಾಟಕ ರೈತ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.



ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ, ಲಾಲ್ ಬಹಾದ್ದೂರ್ ಶಾಸ್ತ್ರಿ ಜಲಾಶಯದ ವ್ಯಾಪ್ತಿಗೆ ಬರುವ ಎಲ್ಲ ಕಾಲುವೆಗಳಲ್ಲಿ ತುಂಬಿಕೊಂಡಿರುವ ಹೂಳು ಹಾಗೂ ಗಿಡಗಂಟಿಗಳನ್ನು ತೆರವುಗೊಳಿಸುವ ಕ್ಲೋಸರ್ ಕಾಮಗಾರಿಯನ್ನು ಸಕಾಲಕ್ಕೆ ಪ್ರಾರಂಭಿಸಿ ಸರಾಗವಾಗಿ ಕಾಲುವೆ ಜಾಲಕ್ಕೆ ನೀರು ಹರಿಸಿದಾಗ ಕಾಲುವೆ ಕೊನ ಅಂಚಿನವರೆಗೂ ನೀರು ತಲುಪುವಂತೆ ನೋಡಿಕೊಳ್ಳಬೇಕಾಗಿರುವುದು ಅಗತ್ಯವಾಗಿದೆ ಎಂದರು.

ಆಲಮಟ್ಟಿ ಎಡದಂಡೆ ಕಾಲುವೆಯ 5ನೇ ವಿತರಣಾ ಕಾಲುವೆಯ 2ನೇ ಮತ್ತು 3ನೇ ಲ್ಯಾಟರಲ್ ಗಳನ್ನು ನಿರ್ಮಿಸಿದ ನಂತರ ಇಲ್ಲಿಯವರೆಗೂ ದುರಸ್ತಿ ಕೆಲಸ ಮಾಡಿಲ್ಲ ಇದರಿಂದ ಅಂದಾಜು ಸಾವಿರಾರು ರೈತರ ಜಮೀನುಗಳಿಗೆ ಸಕಾಲಕ್ಕೆ ನೀರು ದೊರೆತಿಲ್ಲ ಇದನ್ನು ಆ ಭಾಗದ ರೈತರು ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ಹೊರಹಾಕಿದರು. ಜಲಾಶಯ ಪ್ರತಿ ವರ್ಷ ಭರ್ತಿಯಾದರೂ ಕೂಡ ಜಿಲ್ಲೆಯ ರೈತರಿಗೆ ಕೇಳಿದ ಸಂದರ್ಭದಲ್ಲಿ ನೀರು ಕೊಡಲಾಗುತ್ತಿಲ್ಲ. ಜಿಲ್ಲೆಯಲ್ಲಿ 2.30 ಲಕ್ಷ ಹೆಕ್ಟರ್ ಪ್ರದೇಶ ನೀರಾವರಿಗೆ ಒಳಪಟ್ಟಿದ್ದರೂ ಕೂಡ ಕಾಲುವೆ ಜಾಲದ ರೈತರಗೋಳು ತಪ್ಪಿಲ್ಲ. ನಾನಾ ಕಾಲುವೆಗಳ ಬಹುತೇಕ ವಿತರಣಾ ಕಾಲುವೆಗಳಲ್ಲಿ ಅಪಾರ ಪ್ರಮಾಣದ ಹೂಳು, ಮುಳ್ಳು-ಕಂಟಿಗಳು ಬೆಳೆದಿವೆ. ನೀರು ಮುಂದೆ ಸಾಗದೆ ಇರುವುದರಿಂದ ಅಲ್ಲೇ ಶೇಖರಣೆಗೊಂಡು ರೈತರ ಜಮೀನುಗಳಿಗೆ ನುಗ್ಗಿ ಬಿತ್ತನೆ ಮಾಡಿದ ಎಲ್ಲ ಬೆಳೆಗಳು ನೀರಿನಲ್ಲಿ ಕೊಳೆತು ಹೋಗಿ ಸಾಕಷ್ಟು ಪ್ರಮಾಣ ಹಾನಿಯಾದ ಉದಾಹರಣೆಗಳಿವೆ. ಸಾಕಷ್ಟು ಹೂಳು ತುಂಬಿಕೊಂಡಿದೆ ಹೀಗಾಗಿ ಕಾಲುವೆಗಳ ಕೊನೆಯಂಚಿನ ಜಮೀನುಗಳಿಗೆ ನೀರು ಸರಾಗವಾಗಿ ಹರಿಯುತ್ತಿಲ್ಲ. ಇದರಿಂದ ಕಾಲುವೆ ನಿರ್ಮಿಸಿದ್ದರೂ ಪ್ರಯೋಜನವಿಲ್ಲದಂತಾಗಿದೆ ಎಂದು ದೂರಿದರು.

ಕಾಲುವೆ ಅಕ್ಕಪಕ್ಕದ ರಸ್ತೆಗಳು ಮುಳ್ಳುಕಂಟಿಗಳಿಂದ ಆವರಿಸಿದ್ದರಿಂದ ರೈತರು ಜಮೀನುಗಳಿಗೆ ಹೋಗಲು ಕೂಡ ಪರದಾಡುವಂತಾಗಿದೆ ಇದು ಪ್ರತಿ ವರ್ಷ ರೈತರಿಗೆ ದೊಡ್ಡ ಸವಾಲಾಗಿದೆ. ಆದ್ದರಿಂದ ಕಾಲುವೆಗಳಿಗೆ ನೀರು ಹರಿಸುವುದನ್ನು ಸ್ಥಗಿತಗೊಳಿಸಿ ತಕ್ಷಣ ಕ್ಲೋಸರ್ ಕಾಮಗಾರಿ ಕೈಗೆತ್ತಿಕೊಳ್ಳಬೇಕು ಆದರೆ ಅಧಿಕಾರಿಗಳು ತಡವಾಗಿ ಟೆಂಡರ್ ಕರೆದು ನೀರು ಹರಿಸುವ ಸಮಯದಲ್ಲಿ ಕಾಮಗಾರಿ ಆರಂಭಿಸುತ್ತಾರೆ ಇದರಿಂದ ಉದ್ದೇಶಿತ ಕ್ಲೋಸರ್ ಕಾಮಗಾರಿ ಪೂರ್ಣಗೊಳ್ಳುವುದಿಲ್ಲ. ಇದರಿಂದ ಕೋಟ್ಯಂತರ ಹಣ ಅನಾವಶ್ಯಕವಾಗಿ ಹಾಳಾಗಿ ಹೋಗುತ್ತಿವೆ. ಆದ ಕಾರಣ ಈ ಭಾರಿ ಕಾಲುವೆಗಳಿಗೆ ನೀರು ಕಾಲುವೆಗಳಿಗೆ ನೀರು ಹರಿಸುವುದನ್ನು ನಿಲ್ಲಿಸಿದ ತಕ್ಷಣ ಕಾಮಗಾರಿ ಪ್ರಾರಂಭಿಸಿ ಕಾಲುವೆ ಕೊನೆ ಅಂಚಿನವರೆಗೂ ನೀರು ತಲುಪುವಂತೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಪ್ರಮುಖರಾದ ಉಮೇಶ ವಾಲೀಕಾರ, ಪಾಂಡು ಹ್ಯಾಟಿ, ಹೊನಕೇರೆಪ್ಪ ತೆಲಗಿ, ಸೋಮೇಶ ನಾಗರಡ್ಡಿ, ಮಲ್ಲನಗೌಡ ಮೇಟಿ, ಮಾಳಪ್ಪ ಪೂಜಾರಿ, ಲಂಕೇಶ ತಳವಾರ, ಸಂಗು ಚಲವಾದಿ, ಸಿದ್ದು ಹಿರೇಮಠ, ಮಲ್ಲಿಕಾರ್ಜುನ ಭಜಂತ್ರಿ, ಮಡಿವಾಳಪ್ಪ ನಾಗರಡ್ಡಿ, ಶ್ರೀಶೈಲ ಕುರಣದ, ವಿಠ್ಠಲ ಬಿರಾದಾರ ಪಾಲ್ಗೊಂಡಿದ್ದರು.

ಡಿಸಿ ಭರವಸೆಗೂ ಮಣಿಯದ ಹೋರಾಟಗಾರರು

ತಾಳಿಕೋಟೆ: ತಾಲೂಕಿನ ಮೈಲೇಶ್ವರ ಗ್ರಾಮದ ಬಳಿ ನಿರ್ಮಿಸಲು ಉದ್ದೇಶಿಸಿರುವ ಪ್ರಜಾಸೌಧ ರದ್ದುಪಡಿಸಿ, ಪಟ್ಟಣದ ವ್ಯಾಪ್ತಿಯಲ್ಲೇ ನಿರ್ಮಿಸಬೇಕೆಂದು ಒತ್ತಾಯಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಶನಿವಾರ 39ನೇ ದಿನಕ್ಕೆ ಕಾಲಿಟ್ಟಿದೆ. ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಕೆ. ಆನಂದ್ ಅವರು ಭೇಟಿ ನೀಡಿ ಮನವಿ ಸ್ವೀಕರಿಸಿದರೂ, ಹೋರಾಟಗಾರರು ತಮ್ಮ ಪಟ್ಟು ಸಡಿಲಿಸದೆ ಧರಣಿ ಮುಂದುವರಿಸಲು ನಿರ್ಧರಿಸಿದ್ದಾರೆ.

ಶನಿವಾರ ನಡೆದ ಧರಣಿಯಲ್ಲಿ ಬೊಮ್ಮನಹಳ್ಳಿ ಗ್ರಾಮಸ್ಥರು ಪಾಲ್ಗೊಂಡು ಹೋರಾಟಕ್ಕೆ ಬೆಂಬಲ ಸೂಚಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಹೋರಾಟ ಸಮಿತಿಯ ಪ್ರಮುಖರು, ಮೈಲೇಶ್ವರದ ಬಳಿ ಗುರುತಿಸಿರುವ ಸ್ಥಳವು ಪಟ್ಟಣದಿಂದ 5 ಕಿ.ಮೀ ದೂರದಲ್ಲಿದೆ. ಇದು ಸಾರ್ವಜನಿಕರಿಗೆ ನಿತ್ಯದ ಕೆಲಸಗಳಿಗೆ ಅತ್ಯಂತ ಅನಾನುಕೂಲವಾಗಿದೆ. ಪಟ್ಟಣದ ಒಳಗಿರುವ ಸರ್ಕಾರಿ ಜಾಗಗಳಲ್ಲೇ ಸೌಧ ನಿರ್ಮಾಣವಾಗಬೇಕು ಎಂದು ಆಗ್ರಹಿಸಿದರು.

ಹೋರಾಟಗಾರರ ಅಹವಾಲು ಆಲಿಸಿದ ಜಿಲ್ಲಾಧಿಕಾರಿ ಕೆ.ಆನಂದ ಅವರು, ಹೋರಾಟಗಾರರು ಸೂಚಿಸಿದ 4 ಸ್ಥಳಗಳಲ್ಲಿ ಲೋಕೋಪಯೋಗಿ ಇಲಾಖೆ (ಪ್ರವಾಸಿ ಮಂದಿರ) ಮತ್ತು ಹೆಸ್ಕಾಂ ವ್ಯಾಪ್ತಿಯ ಜಾಗದ ಬಗ್ಗೆ ಆಯಾ ಇಲಾಖೆಗಳಿಗೆ ಶಿಫಾರಸು ಮಾಡಲಾಗುವುದು. ಮೈಲೇಶ್ವರ ಬಳಿ ನಿಗದಿಯಾಗಿರುವ ಕಾಮಗಾರಿಯನ್ನು ಸದ್ಯಕ್ಕೆ 2 ತಿಂಗಳ ಕಾಲ ಮುಂದೂಡಲಾಗುವುದು. ಹೋರಾಟಗಾರರ ತಂಡವೂ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಸಲಿ ಎಂದು ಸಲಹೆ ನೀಡಿದರು.

ಜಿಲ್ಲಾಧಿಕಾರಿ ತಾತ್ಕಾಲಿಕ ಮುಂದೂಡಿಕೆ ಭರವಸೆಗೆ ಒಪ್ಪದ ಹೋರಾಟಗಾರರು ಮೈಲೇಶ್ವರದ ಸ್ಥಳ ನಿಗದಿ ಆದೇಶ ಸಂಪೂರ್ಣ ರದ್ದಾಗಬೇಕು. ಪಟ್ಟಣದ ಒಳಗಿನ ಜಾಗವೇ ಅಂತಿಮವಾಗುವವರೆಗೆ ನಮ್ಮ ಹೋರಾಟ ನಿಲ್ಲದು ಎಂದು ಬಿಗಿ ನಿಲುವು ತಳೆದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಮಾತನಾಡಿ, ಧರಣಿ ನಡೆಸುತ್ತಿರುವ ಸ್ಥಳವು ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಪ್ರತಿಭಟನೆ ಹಿಂಪಡೆಯುವಂತೆ ವಿನಂತಿಸಿದರು. ಆದರೆ, ಆದೇಶ ಮಾರ್ಪಾಡಾಗದೆ ಸ್ಥಳದಿಂದ ಕದಲುವುದಿಲ್ಲ ಎಂದು ಹೋರಾಟಗಾರರು ಸ್ಪಷ್ಟಪಡಿಸಿದರು. ಸ್ಥಳದಲ್ಲಿ ಉಪವಿಭಾಗಾಧಿಕಾರಿಗಳು, ತಹಶೀಲ್ದಾರರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಭಕ್ತರಲ್ಲಿ ನೆಲೆಸಿದ ಮಲ್ಲಿಕಾರ್ಜುನ ಶ್ರೀಗಳು

ವಿಜಯಪುರ: ಸಮಾಜಮುಖಿ ಕಾರ್ಯಗಳ ಮೂಲಕ ಮಲ್ಲಿಕಾರ್ಜುನ ಸ್ವಾಮಿಗಳು ಭಕ್ತರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ ಎಂದು ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಹೇಳಿದ್ದಾರೆ.

ವಿಜಯಪುರ ತಾಲೂಕಿನ ಹೊನಗನಹಳ್ಳಿ-ಸವನಹಳ್ಳಿಯ ಆತ್ಮಾನಂದ ಆಶ್ರಮದಲ್ಲಿ ನಡೆಯುತ್ತಿರುವ ಪಪೂ ಮಲ್ಲಿಕಾರ್ಜುನ ಸ್ವಾಮಿಗಳ 5ನೇ ಪುಣ್ಯಸ್ಮರಣೆ ಹಾಗೂ ಮೂರ್ತಿ ಪ್ರತಿಷ್ಠಾಪನೆ ಹಾಗೂ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಮಲ್ಲಿಕಾರ್ಜುನ ಸ್ವಾಮೀಜಿ ಜಾತ್ಯತೀತ ತತ್ವಗಳನ್ನು ಅಳವಡಿಸಿಕೊಂಡಿದ್ದರು. ಹಸಿದು ಬಂದವರಿಗೆ ಅನ್ನ ಹಾಕಿದ್ದಾರೆ. ಬಡವರಿಗೆ ನೆರವಾಗಿದ್ದಾರೆ. ಸಮಾಜಮುಖಿ ಕಾರ್ಯಗಳ ಮೂಲಕ ಭಕ್ತಾದಿಗಳ ಮನಸ್ಸನ್ನು ಗೆದ್ದಿದ್ದಾರೆ. ಹೊನಗನಹಳ್ಳಿ–ಸವನಹಳ್ಳಿ ಗ್ರಾಮಗಳು ತಮ್ಮ ಎರಡು ಕಣ್ಣುಗಳಿದ್ದಂತೆ ಎಂದು ಹೇಳುತ್ತಿದ್ದ ಶ್ರೀಗಳು, ನಾಟಕಗಳಲ್ಲಿ ಬಸವಾದಿ ಶರಣರು, ಬೀರದೇವರ ಪಾತ್ರಗಳಲ್ಲಿ ನಟಿಸಿ ಭಾರತೀಯ ಸಂಸ್ಕೃತಿ, ಪರಂಪರೆ, ಸಮಾಜ ಸುಧಾರಕರ ತತ್ವಾದರ್ಶಗಳನ್ನು ಸಮಾಜಕ್ಕೆ ತಲುಪಿಸುವ ಕೆಲಸ ಮಾಡಿದ್ದಾರೆ. ಈ ಕಾರ್ಯಕ್ರಮಕ್ಕೆ ಬಂದಿರುವ ಸಾವಿರಾರು ಭಕ್ತರು ಅವರ ಮೇಲಿರುವ ಭಕ್ತಿಗೆ ಸಾಕ್ಷಿಯಾಗೆದಿ ಎಂದು ಶಾಸಕರು ಹೇಳಿದರು.

ಸ್ವಾಜೀಗಳಿಗೆ ಗೌರವ ಸಮರ್ಪಿಸಿದ ಸುನೀಲಗೌಡ ಪಾಟೀಲ ಅವರನ್ನು ಜಗದ್ಗುರುಗಳು ಆಶೀರ್ವದಿಸಿದರು. ಶ್ರೀಶೈಲ ಡಾ.ಚನ್ನಮಲ್ಲಿಕಾರ್ಜುನ ಪಂಡಿತಾರಾಜ್ಯ ಶಿವಾಚಾರ್ಯರು ಮಹಾ ಭಗವತ್ಪಾದಂಗಳವರು, ಮಮದಾಪುರ ವಿರಕ್ತಮಠದ ಶ್ರೀ ಮುರುಗೇಂದ್ರ ಮಹಾಸ್ವಾಮೀಜಿ, ನಾಗಠಾಣ ಶ್ರೀ ಉದಯಲಿಂಗೇಶ್ವರ ಮಠದ ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯರು, ಮಸೂತಿಯ ಶ್ರೀ ಜಗದೀಶ್ವರ ಹಿರೇಮಠದ ಶ್ರೀ ಪ್ರಭುಕುಮಾರ ಶಿವಾಚಾರ್ಯರು, ಮನಗೂಳಿ ವಿಭೂತಿಪುರಮಠ ಶಾಖಾ ಮಠದ ಡಾ. ಮಹಾಂತಲಿಂಗ ಶಿವಾಚಾರ್ಯರು, ಆತ್ಮಾನಂದ ಆಶ್ರಮದ ಶ್ರೀ ದಯಾನಂದ ಸ್ವಾಮೀಜಿ, ಮುಖಂಡರಾದ ಸೋಮನಾಥ ಕಳ್ಳಿಮನಿ, ಬಸವರಾಜ ರೆಡ್ಡಿ, ನಚಿಕೇತ ಬಿದರಿ, ಮಲ್ಲಿಕಾರ್ಜುನ ಹಳ್ಳಿ, ಹನಮಂತ ಹಚಡದ, ಶಶಿಧರ ಬಿದರಿ, ಸಚೀನ ಬಿದರಿ, ಸಿದ್ದು ಹಂಡಿ, ರಾವುತ ಗಾಣಿಗೇರ, ಶಿವಯ್ಯ ಒಡೆಯರ, ಹೆಸ್ಕಾಂ ಸುಪರಿಂಟೆಂಡೆಂಟ್ ಎಂಜಿನೀಯರ ಸಿದ್ದಣ್ಣ ಬಿಂಜಗೇರಿ, ಹೊನಗನಹಳ್ಳಿ-ಸವನಹಳ್ಳಿ ಗ್ರಾಮಸ್ಥರು, ಯುವಕರು, ಮಹಿಳೆಯರು ಉಪಸ್ಥಿತರಿದ್ದರು.



ಕನ್ನಡ ಸಾಹಿತ್ಯಕ್ಕೆ ಅಕ್ಕಮಹಾದೇವಿ ಕೊಡುಗೆ ಅಪಾರ: ಬಿರಾದಾರ

ಸಿಂದಗಿ: ಬಸವಾದಿ ಶರಣರೊಂದಿಗೆ ಅನುಭವ ಮಂಟಪದಲ್ಲಿ ಚರ್ಚೆ, ಅನುಭಾವ ಹಂಚಿಕೆಯ ಸಂವಾದ ಮಾಡಿ ಸೈ ಎನಿಸಿಕೊಂಡವಳು ಅಕ್ಕಮಹಾದೇವಿ ಎಂದು ಶರಣ ಚಿಂತಕಿ ಜಗದೇವಿ ಬಿರಾದಾರ ಹೇಳಿದರು.

ಸಿಂದಗಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಜರುಗಿದ ಮಹಾಶಿವಶರಣೆ ಅಕ್ಕಮಹಾದೇವಿ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಅಕ್ಕಮಹಾದೇವಿ ಅವರು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಮಹಾಶಿವಶರಣೆ ಅಕ್ಕಮಹಾದೇವಿಯು ಪ್ರಥಮ ಕನ್ನಡ ಕವಯತ್ರಿ ಹಾಗೂ ಅಪ್ರತಿಮ ವಚನಗಾರ್ತಿಯಾಗಿದ್ದಳು. 354 ಅವರ ವಚನಗಳು ದೊರಕಿದ್ದು, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ಅವರದ್ದಾಗಿದೆ ಎಂದರು.

ಈ ವೇಳೆ ನ್ಯಾಯವಾದಿ ವಿ.ಜಿ.ಮಾನವಿ, ಹಿಕ್ಕನಗುತ್ತಿ ಸರಕಾರಿ ಶಾಲೆಯ ಮುಖ್ಯಗುರುಮಾತೆ ಸೈನಾಬಿ ಮಸಳಿ, ಮಹಾನಂದಾ ಬಮ್ಮಣ್ಣಿ, ಸುನಂದಾ ಯಂಪೂರೆ, ಶೋಭಾ ಚಿಗರಿ, ವ?ರ್ಾ ಪಾಟೀಲ, ಅನಸೂಯ ಪರಗೊಂಡ ಮಾತನಾಡಿದರು. ಕಾರ್ಯಕ್ರದಲ್ಲಿ ಕಾನಿಪ ಸಂಘದ ತಾಲೂಕಾಧ್ಯಕ್ಷ ಮಹಾಂತೇಶ ನೂಲಾನವರ, ಡಾ.ಪ್ರಕಾಶ ರಾಗರಂಜಿನಿ, ಶಾಂತು ರಾಣಾಗೋಳ, ಖಾದರ ವಾಲೀಕಾರ, ಜೈಭೀಮ ನಾಟೀಕಾರ, ಪ್ರಭು ಬಿರಾದಾರ, ಎಸ್.ಎಸ್. ಸಾತಿಹಾಳ, ಜಗದೀಶ ಸಿಂಗೆ, ಎಸ್.ಜಿ.ಶಿವಸಿಂಪಿ, ಬಿ.ಎಸ್.ಹಿರೇಮಠ, ಪ್ರಕಾಶ ರಾಠೋಡ ಸೇರಿದಂತೆ ಅನೇಕರು ಇದ್ದರು. ಕಸಾಪ ತಾಲೂಕಾಧ್ಯಕ್ಷ ವಾಯ್ .ಸಿ.ಮಯೂರ ಪ್ರಾಸ್ತಾವಿಕ ಮಾತನಾಡಿದರು. ಕಸಾಪ ಗೌರವ ಕಾರ್ಯದರ್ಶಿ ಆನಂದ ಶಾಬಾದಿ ಸ್ವಾಗತಿಸಿದರು. ಡಾ.ಯಂಕಪ್ಪ ನಾಟೀಕಾರ ನಿರೂಪಿಸಿದರು. ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ವಂದಿಸಿದರು.



ಅಲ್ಲಮಪ್ರಭು ದೇವರ ಜಾತ್ರಾ ಮಹೊತ್ಸವ: ಭವ್ಯ ಮೆರವಣಿಗೆ

ಇಂಡಿ: ತಾಲೂಕಿನ ಇಂಗಳಗಿ ಗ್ರಾಮದ ಅಲ್ಲಮಪ್ರಭು ದೇವರ ಜಾತ್ರಾ ಮಹೊತ್ಸವ ಅಂಗವಾಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಐದುರಿನ ಪಲ್ಲಕ್ಕಿಗಳ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

ಬೆಳಗ್ಗೆ ಗೊಂಬೆ ಕುಣಿತ, ಡೊಳ್ಳು ಕುಣಿತದೊಂದಿಗೆ ಸಕಲ ವಾದ್ಯ ವೈಭವಗಳಿಂದ ಐದೂರಿನ ಪಲ್ಲಕ್ಕಿಗಳ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ಭವ್ಯವಾಗಿ ಜರುಗಿತು. ನಂತರ ಗದ್ದುಗೆ ಹಾಗೂ ಈರಕಾರ ಪೂಜಾರಿಗಳಿಂದ ನುಡಿ ಮುತ್ತುಗಳು(ಹೇಳಿಕೆ) ಜರಗಿದವು. ಹಿಂಗಾರು ಮುಂಗಾರು ಮಳೆ ಬೆಳೆ ಸಮೃದ್ಧವಾಗಲಿವೆ ಎಂದು ಪೂಜಾರಿಗಳು ನುಡಿದರು.

ಪೂಜಾರಿಗಳಿಂದ ಹೇಳಿಕೆಗಳು ಮುಗಿದು ಪಲ್ಲಕ್ಕಿಗಳು ವೇವಸ್ಥಾನದ ಆವರಣ ಪ್ರವೇಶಿಸುತ್ತಿದಂತೆ ಭಕ್ತರಿಂದ ಸಾವಿರಾರು ಟೆಂಗಿನಕಾಯಿ ಸಿಡಗಾಯಿಗಳನ್ನು ಒಡೆದು ಹರಕೆ ತಿರಿಸಿದರು. ಸಾಯಂಕಾಲ 4:30 ಗಂಟೆಗೆ ಆನೇಕ ಗ್ರಾಮಗಳಿಂದ ಆಗಮಿಸಿದ ನೂರಾರು ಸುಪ್ರಸಿದ್ದ ಕುಸ್ತಿ ಪೈಲವಾನರಿಂದ ಜರುಗಿದ ಕುಸ್ತಿ ಕಾಳಗಳನ್ನು ನೊಡುಗರ ಮನ ಸೋರೆಗೊಂಡಿತ್ತು.

ಜಾತ್ರಾ ಉತ್ಸವ ಸಮಿತಿ ಪ್ರಭು ಹೊಸಮನಿ, ಅಣಪ್ಪ ಅಹಿರಸಂಗ, ಸುಭಾಸ ಥೋರಾತ, ಜಕ್ಕಪ್ಪ ಪೂಜಾರಿ, ಬಸವರಾಜ ಜಾಧವ, ಅಶೋಕ ಬಳಬಟ್ಟಿ, ಆನಂದ ಪವಾರ, ಉಮೇಶ ಚವ್ಹಾಣ, ಪ್ರಭು ಚಾಬುಕಸವಾರ, ಗುರು ಕುಂಬಾರ, ಶಿವಾನಂದ ತಾವರಖೇಡ, ಶ್ರೀಶೈಲ ಅರ್ಜುಣಗಿ, ಲಕ್ಕಪ್ಪ ಪೂಜಾರಿ, ಲಕ್ಷ್ಮಣ ಚಾಬುಕಸವಾರ, ಹಸನ ಮುಜಾವರ, ಶ್ರೀಮಂತ ಗುಂದವಾನ, ಸುರ್ಯಕಾಂತ ಕುಂಬಾರ, ಮಾಳಪ್ಪ ಮುಚ್ಚಂಡಿ, ಅರ್ಜುನ ಜಾಧವ, ಭೀಮ ವಾಲಿಕಾರ, ಭೀಮಾಶಂಕರ ಹೊಸಮನಿ, ಉಮೇಶ ಬೆನಕನಹಳ್ಳಿ, ಧರ್ಮು ಚಾಬುಕಸವಾರ, ಮಲ್ಲಿಕಾರ್ಜುನ ಲಿಗಾಡೆ, ಶಿವಪುತ್ರ ಕುಂಬಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಏ.10ರಂದು ಧ್ಯಾನ ಮಂದಿರ ಲೋಕಾರ್ಪಣೆ



ವಿಜಯಪುರ: ತಾಲೂಕಿನ ನಾಗಠಾಣ ಗ್ರಾಮದ ಮೌನೇಶ್ವರ ಮಂದಿರದಲ್ಲಿ ಸಂಜೆ ಸದ್ಗುರು ಸಮರ್ಥ ರಂಗರಾವ ಮಹಾರಾಜರ ದಿವ್ಯ ಮೂರ್ತಿ ಪ್ರತಿಷ್ಠಾಪನೆ, ಧ್ಯಾನ ಮಂದಿರ ಲೋಕಾರ್ಪಣೆಯ ಸಮಾರಂಭದ ಕರಪತ್ರಗಳನ್ನು ಅನಾವರಣ ಜರುಗಿತು.

ಚಂದ್ರಶೇಖರ ಅರಕೇರಿ ಮಾತನಾಡಿ, ವಿಜಯಪುರ ನಗರದಲ್ಲಿ ಏ.10ರಿಂದ 12ರ ವರೆಗೆ ಜರುಗುವ ಸದ್ಗುರು ಸಮರ್ಥ ರಂಗರಾವ ಮಹಾರಾಜರ ಧ್ಯಾನ ಮಂದಿರ ಲೋಕಾರ್ಪಣೆಯ ಕಾರ್ಯಕ್ರಮವನ್ನು ಅತ್ಯಂತ ಅರ್ಥಪೂರ್ಣವಾಗಿ ಆಯೋಜಿಸಲಾಗುತ್ತಿದೆ, ಹಲವಾರು ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದ್ದು, ಈ ಕಾರ್ಯಕ್ರಮದ ಯಶಸ್ವಿಗೆ ಕೈ ಜೋಡಿಸಬೇಕು ಎಂದರು.

ಶಿಕ್ಷಕ ಸಾಹಿತಿ ಸಂತೋಷ ಬಂಡೆ ಮಾತನಾಡಿ, ಸದ್ಗುರು ಸಮರ್ಥ ರಂಗರಾವ ಮಹಾರಾಜರು ಊರು, ಜಾತಿ, ಕುಲಗಳೆಂದು ತಾರತಮ್ಯ ಮಾಡದೇ ಸಾವಿರಾರು ಭಕ್ತರಿಗೆ ನಾಮೋಪದೇಶ, ಆಧ್ಯಾತ್ಮಿಕ ಸಂದೇಶ ನೀಡಿ, ಈ ದೇಶದ ಸತ್ಪ್ರಜೆಗಳನ್ನಾಗಿ ರೂಪಿಸಿದ್ದು ಅದ್ವಿತೀಯ. ಅವರ ತ್ಯಾಗ, ಸಮರ್ಪಣಾ ಸಂಪನ್ನ ಜೀವನವೇ ನಮಗೆಲ್ಲ ದಾರಿದೀಪ. ಅವರ ದಿವ್ಯ ಮೂರ್ತಿ ವಿಜಯಪುರದಲ್ಲಿ ಪ್ರತಿಷ್ಠಾಪನೆ ಆಗುತ್ತಿರುವದು ಹೆಮ್ಮೆಯ ಸಂಗತಿ ಎಂದು ಹೇಳಿದರು. ಮೌನೇಶ ಮಹಾಬಲಾಚಾರ್ಯ, ಕಲ್ಯಾಣಿ ಪತ್ತಾರ, ಶ್ರೀಶೈಲ ಪತ್ತಾರ, ಶ್ರೀಶೈಲ ಕತ್ನಳ್ಳಿ, ಸುಭಾಷ ಪತ್ತಾರ, ರಾಜು ಪತ್ತಾರ, ಅಶೋಕ ಬಡಿಗೇರ ಪಾಲ್ಗೊಂಡಿದ್ದರು.

ರಾಮಚಂದ್ರನ ಆದರ್ಶ ಅಳವಡಿಸಿಕೊಳ್ಳಿ

ಬಸವನಬಾಗೇವಾಡಿ: ವಿಶ್ವ ಹಿಂದು ಪರಿಷದ್ ಬಜರಂಗದಳ ಪ್ರಖಂಡ ಪಟ್ಟಣ ಸಮೀಪದ ಬಳ್ಳಾವೂರದಲ್ಲಿ ನೂತನ ಸಮಿತಿ ರಚಿಸಿದರು.

ಪ್ರಖಂಡದ ಕಾರ್ಯದರ್ಶಿ ಅಶ್ವಿನಕುಮಾರ ಪಟ್ಟಣಶೆಟ್ಟಿ ಮಾತನಾಡಿ, ಪ್ರಭು ಶ್ರೀರಾಮಚಂದ್ರರ ಆದರ್ಶ ಸದ್ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು, ಯುವಕರು ಸಮಾಜದಲ್ಲಿ ನೈತಿಕ ಮೌಲ್ಯಗಳನ್ನು ಹೆಚ್ಚಿಸಿಕೊಳ್ಳಬೇಕು, ಬಳ್ಳಾವುರ ನಗರವನ್ನು ರಾಮ ರಾಜ್ಯದ ಮಾದರಿ ನಗರವನ್ನಾಗಿ ಮಾಡಬೇಕೆಂದು ಹೇಳಿದರು.

ಅಧ್ಯಕ್ಷ ಮಹೇಶ ಸಾಲೋಡಗಿ ಅವರು ವಿಶ್ವ ಹಿಂದು ಪರಿಷತ್ ಬಜರಂಗದಳ ಬಳ್ಳಾವುರ್ ನಗರದ ನೂತನ ಜವಾಬ್ದಾರಿಗಳನ್ನು ಘೋಷಿಸಿ ಮಾತನಾಡಿ ಯುವಕರು ದುಷ್ಟಚಟಗಳಿಂದ ದೂರವಿದ್ದು ಪ್ರಸ್ತುತ ದೇಶದಲ್ಲಿ ನಡೆದಿರುವ ಲವ್ ಜಿಹಾದ್, ಲ್ಯಾಂಡ್ ಜಿಹಾದ್‌ನ್ನು ಯುವಕರು ಒಗ್ಗಟ್ಟಾಗಿ ತಡೆಯಬೇಕು. ಹಿಂದುತ್ವ ಗಟ್ಟಿಗೊಳಿಸಬೇಕೆಂದು ಹೇಳಿದರು.

ಬಸವನಬಾಗೇವಾಡಿ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಶಿವಾನಂದ ಈರಕಾರ ಮುತ್ಯಾ, ಧರ್ಮಾಚಾರ ಜಿಲ್ಲಾ ಪ್ರಮುಖರಾದ ದಯಾನಂದ ಆದಿಗೊಂಡ ಇದ್ದರು.



ಬಡಜನರ ಸೇವೆಯೇ ನಿಜವಾದ ಸೇವೆ



ದೇವರ ಹಿಪ್ಪರಗಿ: ಸತ್ಕಾರ್ಯವೇ ಸೌಭಾಗ್ಯ ಎನ್ನುವಂತೆ ಬಡಜನರ ಸೇವೆ ಮಾಡುವುದು ನಿಜವಾದ ಸೇವೆ ಎನಿಸಿಕೊಳ್ಳುತ್ತದೆ ಎಂದು ವಿಜಯಪುರದ ಬಾಲಾಜಿ ಆಸ್ಪತ್ರೆಯ ಸಂಸ್ಥಾಪಕ ಡಾ.ಶ್ರೀಪಾದ ಕುಲಕರ್ಣಿ ಹೇಳಿದರು.

ಮುಳಸಾವಳಗಿ ಗ್ರಾಮದ ಶ್ರೀಶೈಲ ಮಲ್ಲಿಕಾರ್ಜುನನ ಐದೇಶಿ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಉಚಿತ ನೇತ್ರ ತಪಾಸಣೆ ಮತ್ತು ಮೂಳೆ ಹಾಗೂ ಕೀಲು ತಪಾಸಣೆ ಶಿಬಿರದ ನೇತೃತ್ವ ವಹಿಸಿ ಅವರು ಮಾತನಾಡಿದರು.ಸುಮಾರು 110 ಜನರ ಮೂಳೆ ತಪಾಸಣೆ ಹಾಗೂ 115 ಜನರ ನೇತ್ರ ತಪಾಸಣೆ ಮಾಡಲಾಯಿತು. ನೇತ್ರ ಶಸ್ತ್ರಚಿಕಿತ್ಸೆಗೆ ಅರ್ಹರಾದ 15 ಜನರನ್ನು ಅನುಗ್ರಹ ಆಸ್ಪತ್ರೆಯ ವತಿಯಿಂದ ಉಚಿತವಾಗಿ ಶಸ್ತ್ರಚಿಕಿತ್ಸೆ ಮಾಡಲು ನಿರ್ಧರಿಸಲಾಯಿತು.

ಪಿಕೆಪಿಎಸ್ ಅಧ್ಯಕ್ಷ ಸಂಗನಗೌಡ ಬಿರಾದಾರ, ಅನುಗ್ರಹ ಆಸ್ಪತ್ರೆಯ ಸಂಗನಗೌಡ ಪಾಟೀಲ, ಹಣಮಂತ ಹಿರೂರ, ಜೆ.ಪಿ.ಬಿರಾದಾರ ಮಾತನಾಡಿದರು. ಸಾಹೇಬಗೌಡ ಬಂಥನಾಳ, ವಿರುಪಾಕ್ಷಿ ರೋಡಗಿ, ಶ್ರೀಶೈಲ ಹದರಿ, ಶ್ರೀಶೈಲ ಮಠಪತಿ, ದಾನಯ್ಯ ಮಠಪತಿ, ಮಲ್ಲನಗೌಡ ಬಿರಾದಾರ, ಕಂಠೆಪ್ಪಗೌಡ ಬಿರಾದಾರ, ಸಂಗು ಬಂಥನಾಳ, ಕಿರಣ ಗಬ್ಬೂರ, ನಿತಿನ್ ಉಕುಮನಾಳ, ಸಿದ್ದಲಿಂಗ ಸಾತಿಹಾಳ, ನಾಗರಾಜ ಹದರಿ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.

ಗ್ರಾಮೀಣ ಭಾಗದ ಕಲೆಗೆ ಪ್ರೋತ್ಸಾಹಿಸಿ

ಝಳಕಿ: ಗ್ರಾಮೀಣ ಭಾಗದಲ್ಲಿ ಕಲೆಗೆ ಪ್ರೋತ್ಸಾಹಿಸಿ ಎಂದು ಚಡಚಣ ಪೊಲೀಸ್ ಠಾಣೆಯ ಪಿಎಸ್ಐ ಗೆಜ್ಜಿ ಹೇಳಿದರು. ಸಮೀಪದ ಅರ್ಜನಾಳ ಗ್ರಾಮದಲ್ಲಿ ನಡೆದ ಬಲಭೀಮ ದೇವರ ಜಾತ್ರಾ ಮಹೋತ್ಸವ ನಿಮಿತ್ತವಾಗಿ ಮಾರಿಕಣ್ಣು ಹೋರಿ ಮ್ಯಾಲೆ ಎಂಬ ಸುಂದರ ಸಾಮಾಜಿಕ ನಾಟಕದ ಸಮಾರಂಭದಲ್ಲಿ ಉದ್ಘಾಟಿಸಿ ಮಾತನಾಡಿದರು. ನಿಜವಾದ ಕಲೆಯು ಕಲಾವಿದರಿಂದ ಜೀವನ ಉದ್ಧಾರವಾಗುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಕಲೆಗಳು ನಶಿಸಿ ಹೋಗುತ್ತಿವೆ. ಆದ್ದರಿಂದ ಕಲೆಯನ್ನು ಬೆಳೆಸಿರಿ ಎಂದರು. ಝಳಕಿ ಠಾಣೆ ಪಿಎಸ್ಐ ಮಂಜುನಾಥ ತೀರಕ್ಕನ್ನವರ ಮಾತನಾಡಿ ಇಂದಿನ ಯುವಕರು ಒಳ್ಳೆಯ ಸಾಂಸ್ಕೃತಿಕ ನಾಟಕ ನೋಡುವುದರಿಂದ ನಿಮ್ಮ ಜೀವನ ಉದ್ಧಾರವಾಗುವುದು. ಮೊಬೈಲ್‌ನಿಂದ ಹಾಳಾಗಿ ಕೆಟ್ಟ ಚಟಕ್ಕೆ ಬಲಿಯಾಗದಿರಿ ಎಂದರು. ಚಂದ್ರಯ್ಯ ಸ್ವಾಮೀಜಿ ಹಿರೇಮಠ, ಪಿಕೆಪಿಎಸ್ ಅಧ್ಯಕ್ಷ ನಿರಂಜನ ಪೂಜಾರಿ, ಡಾಕಪ್ಪಗೌಡ ಬಿರಾದಾರ, ಸಣ್ಣಪ್ಪ ತಳವಾರ, ಶಬ್ಬೀರ ಮುಲ್ಲಾ, ಸುನೀಲ ಹೂಗಾರ, ಶಿವಪುತ್ರ ತಳವಾರ, ಬಸಗೂಂಡ ಪಾಟೀಲ, ಶ್ರೀಶೈಲ ಬಿರಾದಾರ, ಚಂದ್ರಕಾಂತ ಮೇತ್ರಿ, ರತ್ನಾಕರ ಕ್ಷತ್ರಿ,ಕಲ್ಲಪ್ಪ ಬುದಿಹಾಳ, ತಿಪ್ಪಣ್ಣ ಬನಸೋಡೆ, ಜಗದೇವ ಬಿರಾದಾರ, ಕಾಶೀರಾಮ ಮಾ.ಕ್ಷತ್ರಿ, ಪಿಂಟು ಕ್ಷತ್ರಿ, ರಾಜು ಮೇತ್ರಿ,ಸಿದ್ದಲಿಂಗ ಮೇತ್ರಿ, ಉಪೇಂದ್ರ ಕ್ಷತ್ರಿ, ಜಗದೇವ ಬಿರಾದಾರ, ಆರ್.ಎಸ್.ಗೋಡೆಕಾರ, ಎನ್.ಟಿ.ಬಿರಾದಾರ ಉಪಸ್ಥಿತರಿದ್ದರು.



ಕಿರುಸುದ್ದಿ

ಮುನಿರಾಬಾದ್ ಠಾಣೆಗೆ ಅಮರೇಗೌಡ ವರ್ಗಾವಣೆ

ಮುನಿರಾಬಾದ್: ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಬಳ್ಳಾರಿ ವಲಯದಿಂದ ಪಿಎಸ್‌ಐ (ಸಿವಿಲ್) ಅಧಿಕಾರಿಗಳ ವರ್ಗಾವಣೆ ಹಾಗೂ ಸ್ಥಳ ನಿಯುಕ್ತಿಗೆ ಸಂಬಂಧಿಸಿದಂತೆ ಮಹತ್ವದ ಆದೇಶ ಹೊರಡಿಸಲಾಗಿದೆ.



ಬಳ್ಳಾರಿ ವಲಯ ಮಟ್ಟದ ಪಿಇಬಿ ಸಭೆಯ ನಿರ್ಣಯದ ಮೇರೆಗೆ, ಹಾಲಿ ಸೇವೆಯಲ್ಲಿರುವ ಮತ್ತು ಅಮಾನತ್ತಿನಲ್ಲಿದ್ದ ಅಧಿಕಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾವಣೆಗೊಳಿಸಲಾಗಿದೆ.ಹಚ್ಚೊಳ್ಳಿ ಪೊಲೀಸ್ ಠಾಣೆಯ (ಕಾನೂನು ಮತ್ತು ಸುವ್ಯವಸ್ಥೆ ವಿಭಾಗ) ಪಿಎಸ್‌ಐ ಆಗಿದ್ದ ಅಮರೇಗೌಡ ಅವರನ್ನು ಕೊಪ್ಪಳ ಜಿಲ್ಲೆಯ ಮುನಿರಾಬಾದ್ ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿದೆ. ಮುನಿರಾಬಾದ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪಿಎಸ್‌ಐ ಸುನಿಲ್ ಎಚ್. ಅವರ ಅಮಾನತ್ತಿನ ಹಿನ್ನೆಲೆಯಲ್ಲಿ ತೆರವಾದ ಹುದ್ದೆಯನ್ನು ಭರ್ತಿಮಾಡಲು ಈ ಕ್ರಮ ಕೈಗೊಳ್ಳಲಾಗಿದೆ.ಮುನಿರಾಬಾದ್ ಪೊಲೀಸ್ ಠಾಣೆಯ ವ್ಯಾಪ್ತಿ ವಿಸ್ತೀರ್ಣವಾಗಿರುವುದರಿಂದ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಅಗತ್ಯತೆಯನ್ನು ಮನಗಂಡು ಈ ವರ್ಗಾವಣೆ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೊಳಗಲ್ಲು, ಸರ್ಕಾರಿ ಶಾಲೆ ದತ್ತು ಪಡೆದ ಶಾಸಕ ಬಿ.ನಾಗೇಂದ್ರ

ಬಳ್ಳಾರಿ: ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಶಕ್ತಿ ತುಂಬುವ ಉದ್ದೇಶದಿಂದ ಬಳ್ಳಾರಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕ ಬಿ.ನಾಗೇಂದ್ರ ಅವರು, ತಾಲ್ಲೂಕಿನ ಕೊಳಗಲ್ಲು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಮಾ.2ರಂದು ದತ್ತು ಪಡೆಯುವ ಮೂಲಕ ಗ್ರಾಮೀಣ ಭಾಗದ ಮಕ್ಕಳ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ಆದ್ಯತೆ ನೀಡಿದ್ದಾರೆ.



ಕ್ಷೇತ್ರ ವ್ಯಾಪ್ತಿಯ ಈ ಶಾಲೆಯನ್ನು ಎಲ್ಲ ಆಯಾಮಗಳಲ್ಲಿ ಅಭಿವೃದ್ಧಿಪಡಿಸಿ, ಬಳ್ಳಾರಿ ಗ್ರಾಮೀಣ ಕ್ಷೇತ್ರದಲ್ಲೇ ಒಂದು ಮಾದರಿ ಶಾಲೆಯನ್ನಾಗಿ ಮಾಡುವ ಸಂಕಲ್ಪ ಮಾಡುವ ಮೂಲಕ ಗಣಸೆಳೆದಿದ್ದಾರೆ. ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಶೈಕ್ಷಣಿಕ ಪ್ರಗತಿಯನ್ನು ಹೆಚ್ಚಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು. ಶಾಲೆಯ ಸಮಗ್ರ ವಿಕಾಸಕ್ಕೆ ಅಗತ್ಯವಿರುವ ಅನುದಾನವನ್ನು ಒದಗಿಸಲಾಗುವುದು. ಶಾಲೆಯಲ್ಲಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಹಾಗೂ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವುದು ಈ ದತ್ತು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಶಾಸಕರ ಈ ವಿಶೇಷ ಕಾಳಜಿ, ಪ್ರಯತ್ನಕ್ಕೆ ಶಾಲೆಯ ಮುಖ್ಯಗುರುಗಳು ಹಾಗೂ ಶಿಕ್ಷಕ ವೃಂದದವರು, ಗ್ರಾಮಸ್ಥರು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. ಈ ಅಭಿವೃದ್ಧಿ ಕಾರ್ಯದಿಂದಾಗಿ ನಮ್ಮೂರಿನ ಶಾಲೆ ಉತ್ತಮ ಶಾಲೆಯಾಗಿ ಹೊರಹೊಮ್ಮಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಶಾಸಕರ ಕಾಳಜಿಯು ಇಡೀ ಸಮಾಜದ ಗಮನ ಸೆಳೆಯುವಂತಿದೆ. ಬಳ್ಳಾರಿ ಗ್ರಾಮಾಂತರ ಭಾಗದಲ್ಲಿ ಶಾಸಕರೊಬ್ಬರು ಈ ರೀತಿ ಶಾಲೆಯನ್ನು ದತ್ತು ಪಡೆಯುತ್ತಿರುವುದು ಇದೇ ಮೊದಲು ಎಂದು ಶಾಲಾ ಆಡಳಿತ ಮಂಡಳಿಯವರು ಹರ್ಷ ವ್ಯಕ್ತಪಡಿಸಿದ್ದಾರೆ.

ಆಂಜನೇಯ ರಥೋತ್ಸವ



ಹೂವಿನಹಡಗಲಿ: ತಾಲೂಕಿನ ಇಟ್ಟಿಗಿ ಗ್ರಾಮದಲ್ಲಿ ಶ್ರೀಆಂಜನೇಯ ಸ್ವಾಮಿ ರಥೋತ್ಸವ ವೈಭವದಿಂದ ಜರುಗಿತು, ಭಕ್ತರು ಕಾಯಿ, ಕರ್ಪುರ ದೇವರಿಗೆ ಅರ್ಪಿಸಿ ಭಕ್ತಿ ಸಮರ್ಪಿಸಿದರು.ರಥವನ್ನು, ತಳಿರು ತೋರಣಗಳಿಂದ ಶೃಂಗರಿಸಿ ಸಂಜೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.ಪಟಾಕ್ಷಿ ಹರಾಜು ಪ್ರಕ್ರಿಯೆ ಕುಂಚೂರು ಕೊಟ್ರೇಶಪ್ಪ ಅವರಿಗೆ 1.76.101 ಆಯ್ಕೆ ಪ್ರಕ್ರಿಯೆ ನಡೆಯಿತು. ನಂತರ ರಥೋತ್ಸವ ವೈಭವದೊಂದಿಗೆ ಜರುಗಿತು ಸ್ಥಳೀಯ ಹಾಗೂ ಸುತ್ತ ಮುತ್ತಲಿನ ಹಳ್ಳಿಯ ಭಕ್ತರು ರಥೋತ್ಸವಕ್ಕೆ ಬಾಳೆ ಹಣ್ಣು ಎಸೆದು ಸಂಭ್ರಮಿಸಿದರು. ದೇವಸ್ಥಾನ ಕಮಿಟಿ ಅಧ್ಯಕ್ಷರಾದ ಕುಂಚೂರು ಮಲ್ಲೆಪ್ಪ, ಸದಸ್ಯರುಗಳಾದ, ಕೆ.ಎಂ.ಚಂದ್ರಶೇಖರ್, ಮಂಜುನಾಥ್ ಬಸಲಿಂಗೌಡ್ರು, ಕೆ.ಎಂ.ನಾಗರಾಜ್, ಕಲ್ಲಪ್ಪ ಚಿಕ್ಕಣ್ಣರ್, ಹುಗ್ಗಿ ಮಂಜಪ್ಪ, ಕೆ.ಎಂ.ವೀರೇಶ, ಕಲ್ಲಳ್ಳಿ ದೊಡ್ಡಿರಪ್ಪ, ಜಿ.ಎಸ್.ಅಜ್ಜಪ್ಪ, ಹಾಗೂ ಸಮಸ್ತ ಭಕ್ತರು ನೆರೆದಿದ್ದರು.



ಸಿಂಧನೂರು: ನಗರಕ್ಕೆ ಶ್ರೀಕೃಷ್ಣದೇವರಾಯ ಸೈನಿಕ ಶಾಲಾ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ಆಂಧ್ರಪ್ರದೇಶದ ಗೌರವಾನ್ವಿತ ಸಚಿವ ನಾರಾ ಲೋಕೇಶ್ ನಾಯ್ಡು ಅವರನ್ನು ಸಿಂಧನೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ ಹಾಗೂ ಬಿಜೆಪಿ ಪಕ್ಷದ ಹಿರಿಯ ಮುಖಂಡ ಕೆ.ಕರಿಯಪ್ಪನವರು ಕನಕದಾಸರ ವೃತ್ತದಲ್ಲಿ ಆತ್ಮೀಯವಾಗಿ ಕಂಬಳಿ ಹಾರ ಹಾಕುವ ಮೂಲಕ ಸನ್ಮಾನಿಸಿ ಗೌರವಿಸಿ ಸ್ವಾಗತಿಸಿದರು. ಪಕ್ಷದ ಮುಖಂಡರು ಗಣ್ಯರು, ಕಾರ್ಯಕರ್ತರು, ಅಭಿಮಾನಿಗಳು ಉಪಸ್ಥಿತರಿದ್ದರು.

ಯಂತ್ರಚಾಲಿತ ತ್ರಿಚಕ್ರ ವಾಹನ ವಿತರಣೆ

ಕುಷ್ಟಗಿ: ದೌರ್ಬಲ್ಯ ಇರುವುದು ದೇಹಕ್ಕೆ, ಮನಸ್ಸಿಗಲ್ಲ, ನಮ್ಮಲ್ಲಿನ ದೌರ್ಬಲ್ಯವನ್ನು ಮೆಟ್ಟಿನಿಂತಾಗ ಮಾತ್ರ ಸಾಧನೆ ಸಾಧ್ಯವಾಗಲಿದೆ ಎಂದು ಶಾಸಕ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ ಹೇಳಿದರು.

ಪಟ್ಟಣದ ತಾಪಂ ಆವರಣದಲ್ಲಿ 2024-25ನೇ ಸಾಲಿನ ರಾಜ್ಯ ಹಣಕಾಸು ಆಯೋಗದ ತಾಪಂ ಅನಿರ್ಬಂಧಿತ ಅನುದಾನದಡಿಯಲ್ಲಿ ಮಂಜೂರಾದ ಉಚಿತ ಯಂತ್ರಚಾಲಿತ ತ್ರಿಚಕ್ರ ವಾಹನ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಸಾಮಾನ್ಯ ವ್ಯಕ್ತಿಗಳಿಂತ ವಿಶೇಷಚೇತನರು ಒಂದು ಹೆಜ್ಜೆ ಮುಂದೆ ಬರಬೇಕು ಎಂದು ಹೇಳಿದರು. ಅಂಗವಿಕಲರಿಗೆ ಅನುಕಂಪ ತೋರುವುದಕ್ಕಿಂತ ಅವಕಾಶ ಒದಗಿಸಬೇಕಿದ್ದು, ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಿ ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಅಂಗವಿಕಲ ಫಲಾನುಭವಿಗಳಿಗೆ ಉಚಿತ ಯಂತ್ರಚಾಲಿತ ತ್ರಿಚಕ್ರ ವಾಹನ ವಿತರಿಸಲಾಗುತ್ತಿದೆ ಎಂದರು. ಅಂಗವಿಕಲರು ಸಮಾಜದ ಮುಖ್ಯವಾಹಿನಿಯಲ್ಲಿ ಮುನ್ನಡೆಯಲು ಸರ್ಕಾರ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದ ಅವರು ಸರ್ಕಾರದಿಂದ ದೊರೆಯುವ ಸೌಲಭ್ಯಗಳು ಅರ್ಹರಿಗೆ ತಲುಪುವಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

ತಾಪಂ ಅಧಿಕಾರಿಗಳು, ಎಂಆರ್‌ಡಬ್ಲ್ಯೂ ಅಧಿಕಾರಿಗಳು, ಪಟ್ಟಣದ ಮುಖಂಡರು, ಗಣ್ಯರಿದ್ದರು. ಎಂಟು ಅರ್ಹ ಫಲಾನುಭವಿಗಳಿಗೆ ತ್ರಿಚಕ್ರ ವಾಹನ ವಿತರಿಸಲಾಯಿತು.



ಕುಷ್ಟಗಿ: ಪಟ್ಟಣದ ತಾಪಂ ಆವರಣದಲ್ಲಿ 2024-25ನೇ ಸಾಲಿನ ರಾಜ್ಯ ಹಣಕಾಸು ಆಯೋಗದ ತಾಪಂ ಅನಿರ್ಬಂಧಿತ ಅನುದಾನದಡಿಯಲ್ಲಿ ಮಂಜೂರಾದ ಉಚಿತ ಯಂತ್ರಚಾಲಿತ ತ್ರಿಚಕ್ರ ವಾಹನ ವಿತರಣೆ ಮಾಡಲಾಯಿತು.

ಪ್ರಾಮಾಣಿಕ ನ್ಯಾಯ ಒದಗಿಸಿ

ಯಲಬುರ್ಗಾ: ಯುವ ವಕೀಲರು ಹಿರಿಯ ವಕೀಲರ ಮಾರ್ಗದರ್ಶನದಲ್ಲಿ ನಡೆದರೆ ಜನಸಾಮಾನ್ಯರಿಗೆ ಪ್ರಾಮಾಣಿಕ ನ್ಯಾಯ ದೊರಕಿಕೊಡುವ ಕಾರ್ಯ ಮಾಡಿದಾಗ ಉತ್ತಮ ಸಮಾಜ ನಿರ್ಮಿಸಲು ಸಾಧ್ಯ ಹೈಕೋರ್ಟ್‌ನ ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಹೇಳಿದರು.

ಪಟ್ಟಣದಲ್ಲಿಶನಿವಾರಏಕಕಾಲಕ್ಕೆನಾಲ್ಕುನ್ಯಾಯಾಲಯ ನಡೆಯುವ ಸಾಮರ್ಥ್ಯದ ನೂತನ ನ್ಯಾಯಾಲಯ ಸಂಕೀರ್ಣ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ನ್ಯಾಯಾಧೀಶರು ಯಾರು ಆಕಾಶದಿಂದ ಇಳಿದು ಬರುವುದಿಲ್ಲ, ನಾವು ಕೂಡ ಬಾರ್ ಅಸೋಸಿಯೇಷನ್‌ನ ಮೂಲಕ ವಕೀಲರಾಗಿ ಸಾಕಷ್ಟು ಅನುಭವ ಪ'ಡ'ದ'ಂಕ'ಒಂಡ'ಂ ನ್ಯಾಯಾಧೀಶ'ರಾಗಿ ಬಂದಿದ್ದೇವೆ ಎಂದರು.

ನ್ಯಾಯಾಲಯ ಉದ್ಘಾಟನೆ | ಹೈ.ನ್ಯಾ.ಪೂಣಚ್ಚ ಸಲಹೆ

ನ್ಯಾಯಾಂಗ ವ್ಯವಸ್ಥೆಯ ಮೇಲೆ ಅಪಾರವಾದ ನಂಬಿಕೆಯಿಟ್ಟುಕೊಂಡು ಸಾಕಷ್ಟು ಜನರು ಬರುತ್ತಾರೆ. ಅವರಿಗೆ ಪ್ರಾಮಾಣಿಕ ನ್ಯಾಯ ದೊರಕಿಸಿಕೊಡುವಲ್ಲಿ ವಕೀಲರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಈ ಏ.4ರಂದು ಯಲಬುರ್ಗಾದಲ್ಲಿ ಇಂತಹ ಗುಣಮಟ್ಟದ ಸಕಲ ಮೂಲಸೌಕರ್ಯವುಳ್ಳ ನೂತನ ನ್ಯಾಯಾಲಯ ಲೋಕಾರ್ಪಣೆಗೊಂಡಿರುವುದು ಐತಿಹಾಸಿಕ ದಿನವಾಗಿದೆ ಇದು ನನಗೆ ಸಂತಸ ತಂದಿದೆ ಎಂದು ಹೇಳಿದರು.

ಹೈಕೋರ್ಟ್‌ನ ನ್ಯಾಯಮೂರ್ತಿ ಹಂಚಾಟೆ ಸಂಜೀವ್ ಕುಮಾರ್ ಮಾತನಾಡಿ, ನ್ಯಾಯಾಂಗದಲ್ಲಿ ನ್ಯಾಯ ವಿಳಂಬವಾಗುತ್ತಿದೆ ಎಂಬ ಭಾವನೆ ಜನಸಾಮಾನ್ಯರಲ್ಲಿದೆ. ಆದರೆ ನ್ಯಾಯಾಲಯಗಳಲ್ಲಿ ಮೂಲಸೌರ್ಯಗಳ ಕೊರತೆಯಿದೆ. ಆದರೂ ಇದೀಗ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಯಾಗಿ ತ್ವರಿತವಾಗಿ ನ್ಯಾಯ ದೊರಕಿಸಿಕೊಡುವಲ್ಲಿ ನ್ಯಾಯಾಂಗ ಮೈಲುಗಲ್ಲಾಗಿದೆ. ರಾಜ್ಯದ ಎಲ್ಲ ಜಿಲ್ಲೆ, ತಾಲೂಕುಗಳಲ್ಲಿ ಇಂತಹ ಮೂಲಸೌಕರ್ಯವುಳ್ಳ ಸುಸಜ್ಜಿತ ನ್ಯಾಯಾಲಯಗಳು ನಿರ್ಮಾಣವಾಗಬೇಕು. ಇಂತಹ ಮೂಲಸೌಕರ್ಯವುಳ್ಳ ನ್ಯಾಯಾಲಯಗಳನ್ನು ನಿರ್ಮಿಸಿಕೊಡುವಂತೆ ಕೇಳಿದರೆ ನ್ಯಾಯಾಂಗದಿಂದ ರೆವಿನ್ಯೂ ಇಲ್ಲ ಎಂದು ಸರ್ಕಾರ ಹೇಳುವುದು ಅಪಾಯಕಾರಿ ಚಿಂತನೆಯಾಗಿದೆ. ಮೂಲಸೌಕರ್ಯವುಳ್ಳ ನ್ಯಾಯಾಲಯವಿದ್ದರೆ ಜನರಿಗೆ ತ್ವರಿತವಾಗಿ ನ್ಯಾಯ ದೊರಕಿಸಿಕೊಡಲು ಹೆಚ್ಚು ಸಹಕಾರಿಯಾಗುತ್ತದೆ ಈ ನಿಟ್ಟಿನಲ್ಲಿ ಸರ್ಕಾರದ ಚಿಂತನೆಯಾಗಬೇಕು ಎಂದರು.



> ಇನ್ನೂ ನೂತನ ನ್ಯಾಯಾಲಯದಲ್ಲಿ ವಕೀಲರ ಭವನ ಹಾಗೂ ಗ್ರಂಥಾಲಯಕ್ಕೆ 3 ಕೋಟಿಯನ್ನು ಮಂಜೂರು ಮಾಡಿಸುತ್ತೇನೆ. ಜತೆಗೆ ಕುಕನೂರನಲ್ಲಿ ಸಹ 9 ಕೊಟಿ ವೆಚ್ಚದಲ್ಲಿ ಇಂತಹ ಗುಣಮಟ್ಟ ನ್ಯಾಯಾಲಯವನ್ನು ಶೀಘ್ರದಲ್ಲೇ ನಿರ್ಮಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.
>
> ■ ಬಸವರಾಜ ರಾಯರೆಡ್ಡಿ, ಶಾಸಕ

ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಶಾಸಕರಾದ ಬಸವರಾಜ ರಾಯರೆಡ್ಡಿ ಮಾತನಾಡಿ, ನಮ್ಮ ದೇಶದ ನ್ಯಾಯಾಂಗ ವ್ಯವಸ್ಥೆ ಅತ್ಯಂತ ಶ್ರೇಷ್ಠವಾಗಿದೆ. ಜನರಿಗೆ ತ್ವರಿತವಾಗಿ ನ್ಯಾಯ ದೊರಕುತಿದೆ. ಇದಕ್ಕೆ ಕಾರಣ ಹೈಕೋರ್ಟ್‌ನ ನ್ಯಾಯಾಮೂರ್ತಿಗಳು ಸೇರಿದಂತೆ ಎಲ್ಲ ನ್ಯಾಯಧೀಶರ ಪ್ರಾಮಾಣಿಕ ಪ್ರಯತ್ನದ ಫಲವಾಗಿ ನ್ಯಾಯ ದೊರೆಯುತ್ತಿದೆ. ಅವರೆಲ್ಲರಿಗೂ ಹೃತೂರ್ವಕವಾದ ನಮನಗಳನ್ನು ಸಲ್ಲಿಸುತ್ತೇನೆ. ಜಿಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಚಂದ್ರಶೇಖರ್ ಸಿ. ಮಾತನಾಡಿ, ನೂತನ ನ್ಯಾಯಾಲಯ ಕಟ್ಟಡ ಲೋಕಾರ್ಪಣೆಯಾಗಿದ್ದಕ್ಕೆ ಸಂತಷ ವ್ಯಕ್ತಪಡಿಸಿದರು.

ವಕೀಲರಸಂಘದತಾಲೂಕಾಧ್ಯಕ್ಷಎಸ್.ಎಸ್.ಹೊಂಬಳ ಪ್ರಾಸ್ತಾವಿಕ ಮಾತನಾಡಿ, ಅತೀ ಹೆಚ್ಚು ನ್ಯಾಯಾಧೀಶರನ್ನು ನೀಡಿದ ಕೀರ್ತಿ ಈ ಯಲಬುರ್ಗಾ ತಾಲೂಕಿಗೆ ಸಲ್ಲುತ್ತದೆ ಎಂದರು. ಎಡಿಸಿ ಸಿದ್ರಾಮೇಶ್ವರ, ಎಸಿ ಕ್ಯಾ.ಮಹೇಶ್ ಮಾಲಗಿತ್ತಿ, ಎಸ್ಪಿ ಡಾ.ರಾಮ್ ಎಲ್.ಅರಸಿದ್ದಿ, ಉಪಾಧ್ಯಕ್ಷ ಎಂ.ಎಸ್.ನಾಯ್ಕರ್, ಪ್ರಧಾನ ಕಾರ್ಯದರ್ಶಿ ಮಹಾಂತೇಶ ಈಟಿ, ಲೋಕೋಪಯೋಗಿ ಇಲಾಖೆ ಕೊಪ್ಪಳ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಹೇಮಂತರಾಜ್ ಹಾಗೂ ಎಇಇ ಬಿ.ಮಲ್ಲಿಕಾರ್ಜುನ, ಸಿವಿಲ್ ನ್ಯಾಯಾಧೀಶರು ಸೇರಿದಂತೆ ಕೊಪ್ಪಳ ಜಿಲ್ಲೆಯ ಎಲ್ಲ ಹಿರಿಯ ಹಾಗೂ ಕಿರಿಯ ವಕೀಲರು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಯಲಬುರ್ಗಾ ಬಾರ್ ಅಸೋಸಿಯೇಷನ್‌ನ ಎಲ್ಲ ಸದಸ್ಯರಿದ್ದರು.

ಟ್ರಾನ್ಸ್‌ಜೆಂಡರ್ ಕಾಯ್ದೆ ತಿದ್ದುಪಡಿ ಹಿಂಪಡೆಯಿರಿ

ರಾಯಚೂರು: ಪ್ರಸ್ತುತ ಜಾಗತೀಕವಾಗಿ ಟ್ರಾನ್ಸ್ ಫೋಬಿಯಾದಂತಹ ಸಮಸ್ಯೆಯನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಭಾರತ ಸರ್ಕಾರ ಟ್ರಾನ್ಸ್‌ಜೆಂಡರಗಳ ಹಕ್ಕುಗಳ ರಕ್ಷಣೆಕಾಯ್ದೆ-2026 ತಿದ್ದುಪಡಿ ತರುವ ಮೂಲಕ ಈ ಸಮುದಾಯಕ್ಕೆ ಸಂವಿಧಾನ ನೀಡಿದ ಹಕ್ಕುಗಳನ್ನು ಕಿತ್ತುಕೊಳ್ಳುವುದಕ್ಕೆ ಮುಂದಾಗಿದೆ ಎಂದು ಟ್ರಾನ್ಸ್‌ಜೆಂಡರ ಪ್ರಮುಖರಾದ ಪ್ರಗತಿ ಲಷ್ಕರ್ ಹೇಳಿದರು.

ಶನಿವಾರ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಟ್ರಾನ್ಸ್‌ಜೆಂಡರ ಹಕ್ಕುಗಳ ರಕ್ಷಣೆ ಕಾಯ್ದೆ-2026 ತಿದ್ದುಪಡಿಯನ್ನು ಹಿಂದೆ ಪಡೆಯುವಂತೆ ಆಗ್ರಹಿಸಿ ನಗರದಲ್ಲಿ ವಿವಿಧ ಸಂಘಟನೆಗಳ ಸಮಹಯೋಗದಲ್ಲಿ ನಗರದಲ್ಲಿ ಪ್ರತಿಭಟನಾ ಮೆರವನಿಗೆಯನ್ನು ಮಾಡಿ ತಹಶೀಲ್ದಾರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದ ನಂತರ ಮಾತನಾಡಿದರು.

ಟ್ರಾನ್ಸ್‌ಜೆಂಡರಗಳ ವಯಕ್ತಿಕ ಹಕ್ಕುಗಳನ್ನು ಕಸಿದುಕೊಳ್ಳುವದಾಗಿದೆ. ಅವರ ವಯಕ್ತಿಕ ಹಾಗೂ ಗೌಪ್ಯತೆಯ ವಿಷಯಗಳನ್ನು ವೈದ್ಯರು ಹಾಗೂ ಅಧಿಕಾರಿಗಳುತಿಳಿದುಬಹಿರಂಗಪಡಿಸುವ ಕೆಲಸಆಗುವುದರಿಂದ ಟ್ರಾನ್ಸ್‌ಜೆಂಡರಗಳ ಗೌರವ ಮತ್ತು ಗೌಪ್ಯತೆಯ ಹಕ್ಕಿನ ಉಲ್ಲಂಘನೆಯಾಗುತ್ತದೆ ಎಂದರು.

ಈ ಮಸೂದೆ ಲಿಂಗತ್ವ ಅಂಲ್ಪಸಂಖ್ಯಾತ ಸಮುದಾಯಗಳ ಗೌರವವನ್ನು ಹಾಳುಮಾಡುತ್ತದೆ. ಲಿಂಗತ್ವ ಅಲ್ಪಸಂಖ್ಯಾತರ ಗುರುತಿನ ಸ್ವಯಂ ನಿರ್ಣಯದ ಹಕ್ಕನ್ನು ಕಸಿದಿಕೊಳ್ಳುತ್ತದೆ. ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳಿಗೆ ಸಂವಿಧಾನ ನೀಡಿರುವ ರಕ್ಷಣೆಗಳಿಗೆ ಧಕ್ಕೆಯನ್ನು ತರುತ್ತದೆ. ಈ ತಿದ್ದುಪಡಿಯನ್ನು ಕೇಂದ್ರ ಸರ್ಕಾರ ಹಿಂದೆ ಪಡೆಯಬೇಕು ಎಂದು ಆಗ್ರಹಿಸಿದರು.

ನಿಜವಾದ ಟ್ರಾನ್ಸ್‌ಜೆಂಡರಗಳನ್ನು ಗುರುತಿಸುವ ನೆಪದಲ್ಲಿ ಹಾಗೂ ನಿಜವಾದ ಹಿಂಸೆಗೆ ಒಳಗಾದ ವ್ಯಕ್ತಿಗಳನ್ನು ಗುರುತಿಸುವ ಹೆಸರಲ್ಲಿ ನಮ್ಮ ಸಮುದಾಯಗಳನ್ನು ವಿಭಜಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಎಂದರು. ಐನಾ ಶೇಖ್, ವೀಣಾ ಸೇರಿದಂತೆ ಇತರರು ಮಾತನಾಡಿದರು. ಎಂ.ಆರ್ .ಬೇರಿ, ಮಹೇಶ ಪಾಟೀಲ ಸೇರಿ ಅನೇಕರು ಭಾಗವಹಿಸಿದ್ದರು.

ನಂತರ ಕನ್ನಡ ಭವನದ ಆವರಣದಲ್ಲಿ ಸಭೆ ಸೇರಿ ಕೇಂದ್ರ ಸರ್ಕಾರ ಈ ತಿದ್ದುಪಡಿಯನ್ನು ಹಿಂದೆ ಪಡೆಯದಿದ್ದರೆ ಹೆಹಲಿ ಚಲೋ ಸೇರಿದಂತೆ ಮುಂದಿನ ಹೋರಾಟದ ಬಗ್ಗೆ ಚರ್ಚಿಸಿದರು.



ಕಾಮಗಾರಿ ವೇಗ ಹೆಚ್ಚಿಸಲು ಕೆಕೆಸಿಸಿಐ ಆಗ್ರಹ

ಕಲಬುರಗಿ: ಪಿಎಂ ಮಿತ್ರ ಮೆಗಾ ಟೆಕ್ಸ್ಟೈಲ್ ಪಾರ್ಕ್‌ನಲ್ಲಿ ನಡೆಯುತ್ತಿರುವ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಲು ಕಲ್ಯಾಣ ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿ (ಕೆಕೆಸಿಸಿಐ) ತಂಡವು ಸ್ಥಳಕ್ಕೆ ಭೇಟಿ ನೀಡಿ ಸರ್ಕಾರಕ್ಕೆ ಕಾಮಗಾರಿಯನ್ನು ವೇಗಗೊಳಿಸುವಂತೆ ಶನಿವಾರ ಆಗ್ರಹಿಸಿದೆ.

ಕೆಕೆಸಿಸಿಐ ಅಧ್ಯಕ್ಷರಾದ ಶರಣಬಸಪ್ಪ ಎಂ.ಪಪ್ಪಾ ಹಾಗೂ ಕಾರ್ಯದರ್ಶಿ ಶಿವರಾಜ್ ವಿ.ಇಂಗಿನಶೆಟ್ಟಿ ನೇತೃತ್ವದಲ್ಲಿ ಸ್ಥಳಕ್ಕೆ ಭೇಟಿ ನೀಡಿದ ತಂಡ, ರಾಜ್ಯ ಸರ್ಕಾರವು ವಿವಿಧ ಇಲಾಖೆಗಳ ಮೂಲಕ ಸುಮಾರು 100 ಕೋಟಿ ಮೌಲ್ಯದ ಕಾಮಗಾರಿಗಳನ್ನು ಪ್ರಾರಂಭಿಸಿರುವುದು ಗಮನಕ್ಕೆ ಬಂದಿದೆ. ಪಾರ್ಕ್‌ಗೆ ಸಂಪರ್ಕ ಕಲ್ಪಿಸುವ 1.5 ಕಿಲೋ. ಮೀಟರ್ ಪ್ರವೇಶ ರಸ್ತೆಯ ಕಾಮಗಾರಿ ಆರಂಭಗೊಂಡಿದ್ದು, ಭೀಮಾ ನದಿಯ ಮೇಲೆ ನಿರ್ಮಾಣವಾಗುತ್ತಿರುವ 280 ಮೀಟರ್ ಉದ್ದದ ಬ್ಯಾರೇಜ್ ಕಾಮಗಾರಿಯಲ್ಲಿ ಈಗಾಗಲೇ 110 ಮೀಟರ್ ಕೆಲಸ ಪೂರ್ಣಗೊಂಡಿದೆ. ಉಳಿದ ಕಾಮಗಾರಿ ಮೇ ಅಥವಾ ಜೂನ್ ಅಂತ್ಯದೊಳಗೆ ಪೂರ್ಣಗೊಳ್ಳುವ ನಿರೀಕ್ಷೆ ವ್ಯಕ್ತವಾಗಿದೆ ಎಂದರು.

2023ರ ಮಾ.28ರಂದು ಉದ್ಘಾಟನೆಯಾದ ಈ ಮಹತ್ವದ ಯೋಜನೆಗೆ ಮೂರು ವರ್ಷಗಳ ನಂತರ ಕಾಮಗಾರಿ ಆರಂಭವಾಗಿರುವುದನ್ನು ಕೆಕೆಸಿಸಿಐ ತೀವ್ರ ಅಸಮಾಧಾನದಿಂದ ಗಮನಿಸಿದೆ. ಕಾಮಗಾರಿ ಆರಂಭವಾದುದು ಸ್ವಾಗತಾರ್ಹವಾದರೂ, ಇಷ್ಟೊಂದು ವಿಳಂಬ ಅಸ್ವೀಕಾರಾರ್ಹ. ಇನ್ನು ಮುಂದೆ ಯಾವುದೇ ಕಾರಣ ಹೇಳದೆ ಕಾಲಬದ್ಧವಾಗಿ ಹಾಗೂ ವೇಗವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದು ಸಂಸ್ಥೆ ಒತ್ತಾಯಿಸುತ್ತಿದೆ ಎಂದರು.

ಪಿಎಂ ಮಿತ್ರ ಪಾರ್ಕ್ ಕಲ್ಯಾಣ ಕರ್ನಾಟಕ ಭಾಗದ ಕೈಗಾರಿಕಾ ಅಭಿವೃದ್ಧಿಗೆ ಮಹತ್ವದ ತಿರುವು ತರುವುದಲ್ಲದೆ ಸಾವಿರಾರು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಾಧ್ಯತೆಯಿದ್ದು, ಈ ಕೂಡಲೇ ನಡೆಯುತ್ತಿರುವ ಎಲ್ಲ ಕಾಮಗಾರಿಗಳನ್ನು ತ್ವರಿತಗೊಳಿಸುವುದು, ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದು,ಪಾರ್ಕ್ ಅನ್ನು ಶೀಘ್ರದಲ್ಲಿ ಕಾರ್ಯಾಚರಣೆಗೆ ತರಬೇಕು ಎಂದು ಸಂಸ್ಥೆ ಆಗ್ರಹಿಸುತ್ತಿದೆ ಎಂದರು.

ಅನುದೀಪ್ ದಂಡೋತಿ, ರವಿಶಂಕರ್ ಜಮಧಾರಖಾನಿ, ಸಂತೋಷ್ ಸುರೇಶ್ ನಂದ್ಯಾಳ, ಅಭಿಜೀತ್ ಪಡಶೆಟ್ಟಿ, ವಿಜಯ್ ಗಿಲ್ಡಾ ಹಾಗೂ ಜಗದೀಶ್ ಗಾಜರೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಪ್ರಾಣಿ ಬಲಿ ತ್ಯಜಿಸಿ: ದಯಾನಂದ ಸ್ವಾಮೀಜಿ

ಹನುಮಸಾಗರ: ಸಮೀಪದ ಕಬ್ಬರಗಿ ಗ್ರಾಮ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಹನುಮಸಾಗರ ಪೊಲೀಸ್ ಠಾಣೆ ವ್ಯಾಪ್ತಿಯ ಕಬ್ಬರಗಿ ಗ್ರಾಮದ ಗ್ರಾಮದೇವತೆ ಮಾಸ್ತೆಮ್ಮದೇವಿ ಜಾತ್ರೆಯು ಏ.5ರಂದು ನಡೆಯಲಿದ್ದು, ಯಾವುದೇ ಪ್ರಾಣಿಗಳ ಬಲಿಯಾಗದಂತೆ ಪಶು ಪ್ರಾಣಿ ಬಲಿ ನಿರ್ಮೂಲನ ಜಾಗೃತಿ ಮಹಾ ಸಂಘ ಮತ್ತು ಬಸವಧರ್ಮ ಜ್ಞಾನ ಪೀಠದ ಅಧ್ಯಕ್ಷ ದಯಾನಂದ ಸ್ವಾಮೀಜಿ ಮನವಿ ಮಾಡಿದ್ದಾರೆ.

ಪ್ರಾಣಿಬಲಿಯು ಕಾನೂನು ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದ್ದು ಯಾವುದೇ ವಯಸ್ಸಿನ ಯಾವುದೇ ಪ್ರಾಣಿ ಅಥವಾ ಪಕ್ಷಿಗಳನ್ನು ಧರ್ಮ ಅಥವಾ ದೇವರ ಹೆಸರಲ್ಲಿ ಧಾರ್ಮಿಕ ಸ್ಥಳಗಳಲ್ಲಿ, ದೇವಾಲಯ - ಜಾತ್ರಾ ಪರಿಸರಗಳಲ್ಲಿ ಹತ್ಯೆ ಮಾಡುವಂತಿಲ್ಲ, ಅಲ್ಲದೆ ಕೋಣ ಹತ್ಯೆ ಮಾಡಿದರೆ ಅಥವಾ ಬಲಿ ನೀಡಿದವರಿಗೆ 3 ರಿಂದ 7 ವರ್ಷಗಳ ವರೆಗಿನ ಜೈಲು ಶಿಕ್ಷೆ ಹಾಗೂ 50 ಸಾವಿರದಿಂದ 10 ಲಕ್ಷಗಳವರೆಗೆ ದಂಡ ವಿಧಿಸಬಹುದಾಗಿದೆ. ಅಲ್ಲದೆ ಪ್ರಾಣಿಬಲಿ ಮಹಾ ಪಾಪ ಕೃತ್ಯವಾಗಿದ್ದು, ಧರ್ಮ ಮತ್ತು ದೈವತ್ವಕ್ಕೆ ಕಳಂಕಪ್ರಾಯವಾಗಿದೆ. ಈ ಹಿನ್ನೆಲೆಯಲ್ಲಿ ಭಕ್ತಾದಿಗಳು ದಯವಿಟ್ಟು ಕೋಣ ಅಥವಾ ಯಾವುದೇ ಪ್ರಾಣಿಗಳ ಬಲಿ,ಹತ್ಯೆ ಮಾಡದೆ ಅಹಿಂಸಾತ್ಮಕವಾಗಿ ಸಾತ್ವಿಕ ರೀತಿಯಲ್ಲಿ ಹಬ್ಬ, ಜಾತ್ರೆಯನ್ನು ಆಚರಿಸಬೇಕು ಎಂದು ಭಕ್ತರು ಮತ್ತು ದೇವಾಲಯ-ಜಾತ್ರಾ ಸಮಿತಿಯವರನ್ನು ವಿನಂತಿಸಿದ್ದಾರೆ.



ಕುಷ್ಟಗಿ ತಾಲೂಕಿನ ಹನುಮಸಾಗರ, ಕಬ್ಬರಗಿ ಸೇರಿದಂತೆ ವಿವಿಧ ಭಾಗಗಳಲ್ಲಿ ಹಾಗೂ ಜಾತ್ರಾ ಪರಿಸರ ಮತ್ತು ಸುತ್ತಮುತ್ತಲಿನ ಊರುಗಳಲ್ಲಿ ಅಹಿಂಸಾ-ಪ್ರಾಣಿ-ದಯಾ-ಅಧ್ಯಾತ್ಮಸಂದೇಶಯಾತ್ರೆಯನ್ನುಕೈಗೊಳ್ಳಲಿದ್ದು ಇದಕ್ಕೆ ಸೂಕ್ತ ಭದ್ರತೆ ವದಗಿಸಬೇಕು ಎಂದು ಪೊಲೀಸರಲ್ಲಿ ವಿನಂತಿಸಿದ್ದಾರೆ.

ಸೇವಾ ನಿವೃತ್ತಿ: ಅಭಿನಂದನಾ ಸಮಾರಂಭ

ಕುಕನೂರ: ಉತ್ತಮ ಶಿಕ್ಷಣ ಪಡೆದವರು ಶಿಕ್ಷಕರಾಗುತ್ತಾರೆ, ದಡ್ಡರು ರಾಜಕಾರಣಿಗಳು ಆಗುತ್ತಾರೆ ಎಂದು ಮಾನವ ಬಂಧುತ್ವ ವೇದಿಕೆಯ ಜಿಲ್ಲಾ ಸಂಚಾಲಕ.ಟಿ. ರತ್ನಾಕರ್ ಹೇಳಿದರು.

ತಾಲ್ಲೂಕಿನ ಬಳಗೇರಿ ಗ್ರಾಮದ ಶಿವಮ್ಮ ಬಸವರೆಡ್ಡಿ ರೆಡೇರ ಸರಕಾರಿ ಪ್ರೌಢ ಶಾಲೆಯಲ್ಲಿ ವೀರಭದ್ರಪ್ಪ ಎಸ್.ಬೆಣಕಲ್

ಮುಖ್ಯೋಪಾಧ್ಯಾಯರು ಇವರ ಸೇವಾ ನಿವೃತ್ತಿ ನಿಮಿತ್ತ ಅಭಿನಂದನಾ ಸಮಾರಂಭದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಉತ್ತಮ ಶಿಕ್ಷಣ ಪಡೆದಿದ್ದಕ್ಕೆ ವೀರಭದ್ರಪ್ಪ ಬೇಣಕಲ್ಲ ರವರು ಉತ್ತಮ ಶಿಕ್ಷಣ ಪಡೆದನು ಶಿಕ್ಷಕನಾಗಿ ಉತ್ತಮ ಜಗತ್ತಿನ ಉತ್ತಮ ನಿರ್ಮಾಣಕ್ಕೆ ಅವರು ಕಾರಣವಾಗಿದ್ದಾರೆ. ನಾವು ಉತ್ತಮ ಶಿಕ್ಷಣ ಪಡೆಲಿಲ್ಲಾ ಅದಕ್ಕೆ ನಾವು ರಾಜಕೀಯ ದಾರಿಯನ್ನು ಹಿಡಿದಿದ್ದೇವೆ ಅವರ ನಿವೃತ್ತ ಜೀವನ ಉತ್ತಮವಾಗಿರಲಿ ಎಂದು ಹೇಳಿದರು.

ಜಿಪಂ ಮಾಜಿ ಸದಸ್ಯರಾದ ಸಿ.ಎಚ್.ಪೊಲೀಸ್ ಪಾಟೀಲ ಮಾತನಾಡಿ, ರಾಷ್ಟ್ರದಲ್ಲಿ ಅತ್ಯುತ್ತಮವಾದ ವೃತ್ತಿ ಅಂದರೆ ಶಿಕ್ಷಕ ವೃತ್ತಿ ಈ ಜಗತ್ತಿನಲ್ಲಿ ಶಿಕ್ಷಕನ ಕೊಡುಗೆ ಅಪಾರವಾಗಿದೆ. ಯಾರಿಗೂ ಸರಿಸಾಟಿ ಇಲ್ಲಾ ಅಂತಹ ವೃತ್ತಿ ಎಂದರು.



ಸಾರ್ವಜನಿಕರ ಶಿಕ್ಷಣ ಇಲಾಖೆ ನಿವೃತ್ತ ಉಪನಿರ್ದೇಶಕ ಎಸ್.ಡಿ.ಗಾಂಜಿ ಮಾತನಾಡಿ, ಬಾಲ್ಯದಲ್ಲಿ ಮಕ್ಕಳನ್ನ ತಿದ್ದುವಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯ ತಮ್ಮ ಮನೆ ಏನಾದರೂ ಚಿಂತೆಯಿಲ್ಲಾ ಮಕ್ಕಳ ಭವಿಷ್ಯ ರೂಪಿಸುವುದೇ ಅವರ ನಿಜವಾದ ಕಾರ್ಯ ಅಂತ ಕಾರ್ಯದಲ್ಲಿ ಭಾಗಿಯಾದ ವ್ಯಕ್ತಿ ವೀರಭದ್ರಪ್ಪ ಬೇಣಕಲ್ಲರವರು ಎಂದು ಹೇಳಿದರು.

ಸಿಡಿಪಿಓ ಬೇಟದಪ್ಪ ಮಳೆಕೊಪ್ಪ, ಬಸವರಾಜ್ ಮೇಟಿ, ಗುದ್ನೇಶ್, ಸುಧಾಕರ್ ದೇಸಾಯಿ, ಬಸವರಾಜ್ ಭಜೇಂತ್ರಿ, ಮಲ್ಲಿಕಾರ್ಜುನಸ್ವಾಮಿ ಶಂಕರಾಗೌಡ್ರು ಪಾಟೀಲ್, ಮಾರುತಿ, ಜಾಕಿರ್ಹುಸೇನ್ ಕುಕನೂರ, ಎಫ್.ಎಂ.ಕಳ್ಳಿ, ಮಹೇಶ್ ಸಬರದ್ ಇದ್ದರು.

ಖಲಂದರ ಕುಟುಂಬಕ್ಕೆ 10 ಲಕ್ಷ ರೂ. ಚೆಕ್ ವಿತರಣೆ

ಯಲಬುರ್ಗಾ: ಮನುಷ್ಯನ ಜೀವನ ನೀರಿನ ಮೇಲೆ ಗುಳ್ಳೆ ಇದ್ದಂತೆ ಯಾವಾಗ ಯಾರಿಗೆ ಏನಾಗುತ್ತದೆಯೋ ಯಾರಿಗೂ ತಿಳಿಯಲು ಸಾಧ್ಯವಿಲ್ಲ ಎಂದು ಕೊಪ್ಪಳ ಅಂಚೆ ಇಲಾಖೆಯ ವಿಭಾಗೀಯ ಅಧೀಕ್ಷಕರಾದ ನಾಗರಾಜ ಪಾಟೀಲರವರು ಹೇಳಿದರು.



ಪಟ್ಟಣದ ತಾಪಂ ಸಭಾಭವನದಲ್ಲಿ ಸ್ಥಳೀಯ ಅಂಚೆ ಇಲಾಖೆಯವರು ಆಯೋಜಿಸಿದ ಅಂಚೆ ಇಲಾಖೆಯ ವಿವಿಧಯೋಜನೆಗಳನ್ನು ಪರಿಚಯಿಸುವ ಕಾರ್ಯಕ್ರಮದಲ್ಲಿ ಟಾಟಾ ಎಐಜಿ ಜೀವ ವಿಮಾ ಯೋಜೆಯಡಿ ಪಾಲಸಿಯನ್ನು ಪಡೆದುಕೊಂಡು ಅಕಾಲಿಕ ಮರಣವನ್ನಪ್ಪಿದ ಬಾಬು ಖಲಂದರರವರ ತಾಯಿಯಾದ ಪಟ್ಟಣದ ಪಾತೀಮಾ ಪಕೀರಸಾಬ ಗೊಂಡಬಾಳ ಅವರಿಗೆ 10 ಲಕ್ಷ ರೂ. ಚೆಕ್‌ನ್ನು ವಿತರಿಸಿ ಮಾತನಾಡಿದರು.

ವರ್ಷಕ್ಕೆ ಕೇವಲ 560 ರೂ,ಗಳನ್ನು ತುಂಬಿ ಟಾಟಾ ಎಐಜಿ ಯೋಜನೆಯಡಿಯಲ್ಲಿ ವಿಮೆ ಸೌಲಭ್ಯವನ್ನು ಅಂಚೆ ಪೇದೆ ಬಸಪ್ಪ ಸವರು ದೊರಕಿಸಿ ಕೊಟ್ಟಿದ್ದನ್ನು ಸ್ಮರಿಸಿದ ಅವರು ನಮ್ಮ ಅಂಚೆ ಇಲಾಖೆಯಿಂದ ಹಲವಾರು ಜನಪೊಯೋಗಿ ಯೋಜನೆಗಳು ಇದ್ದು ಅವುಗಳ ಅನುಷ್ಠಾನಕ್ಕೆ ಸಿಬ್ಬಂದಿಯವರು ಮುತುವರ್ಜಿ ವಹಿಸಬೇಕೆಂದರು.

ಕೊಪ್ಪಳದ ಅಂಚೆ ಇಲಾಖೆಯ ವಿಭಾಗೀಯ ಉಪ ಅಧೀಕ್ಷಕರಾದ ವೆಂಕಟೇಶ ಬದಾಮಿ, ಐಪಿಪಿಬಿಯ ವ್ಯವಸ್ಥಾಪಕರಾದ ಮಾರುತಿ ಹಾಗೂ ಆರ್‌ಡಿಸಿಸಿ ಬ್ಯಾಂಕಿನ ನಿರ್ದೇಶಕರಾದ ಶೇಖರಗೌಡ ಉಳ್ಳಾಗಡ್ಡಿರವರು ಮಾತನಾಡಿ, ಕುಟಂಬ ನಿರ್ವಹಣೆಗೆ ತೊಂದರೆ ಆಗಿದ್ದ ಈ ಸಂಕಷ್ಟ ಸಮಯದಲ್ಲಿ ಫಾತೀಮಾ ಅವರಿಗೆ ಹತ್ತು ಲಕ್ಷ ರೂ.ಗಳ ಚೆಕ್‌ನ್ನು ನೀಡಿ ಆರ್ಥಿಕ ಭದ್ರತೆಯನ್ನು ಒದಗಿಸಿ ಕೊಟ್ಟ ಅಂಚೆ ಇಲಾಖೆಯ ಕಾರ್ಯ ಪ್ರಶಂಸನೀಯವಾಗಿದೆ ಎಂದರು.

ಅಂಚೆ ಇಲಾಖೆಯ ಎಸ್‌ಪಿಎಂ ಕವಿತಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮೆಹಬೂಬ ಮಕಂದಾರ, ವೀರಣ್ಣ ನಿಂಗೋಜಿ, ವೀರೇಶ್ ಜೂಚನಿ, ಶರಣಪ್ಪ ಬನ್ನಿಗೋಳ,ಬಸಪ್ಪ ಹಾಗೂ ತಾಲೂಕಿನ ಹಲವಾರು ಬಿ.ಪಿ.ಎಮ್ ರವರು ಇದ್ದರು. ಸಾಗರ ಹಂಚಿನಾಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಂಚೆ ಪೇದೆ ಶರಣಪ್ಪ ಜವಾರಿ ನಿರೂಪಿಸಿದರು,ಶರಣಪ್ಪ ಮಲ್ಕಸಮುದ್ರ ಸ್ವಾಗತಿಸಿದರು.

ಹಗಲು ಹೊತ್ತಲ್ಲೇ ಉರಿದ ಬೀದಿ ದೀಪಗಳು

ಕುಕನೂರು: ವಿದ್ಯುತ್ ಕೊರತೆಯ ಮಧ್ಯೆಯು ಪಟ್ಟಣದಲ್ಲಿ ಶನಿವಾರ ಹಗಲಲ್ಲಿ ಬೀದಿ ದೀಪ ಉರಿಯುತ್ತಿರುವುದು ಅಚ್ಚರಿಗೆ ಕಾರಣವಾಗಿದೆ.

ಪಟ್ಟಣದಲ್ಲಿ ಆಗಾಗ ಹಗಲು ಬೀದಿ ದೀಪಗಳು ಪ್ರಕಾಶಿಸುತ್ತಿವೆ. ವಿಷಯ ಅಧಿಕಾರಿಗಳ ಗಮನಕ್ಕೆ ಬಂದರೂ ಜಾಣಕುರುಡು ಅನುಸರಿಸುತ್ತಿರುವುದು ನಾಗರಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ಪಟ್ಟಣದಲ್ಲಿ ಈ ಹಿಂದೆ ಹಗಲು ವಿದ್ಯುತ್ ದೀಪ ಉರಿಯುತ್ತಿರುವ ಬಗ್ಗೆ ಪಪಂ ಮುಖ್ಯಾಧಿಕಾರಿಗಳಿಗೆ 17ನೇ ವಾರ್ಡ್‌ನ ನಿವಾಸಿಗಳು ತಿಳಿಸಿದರೂ ಪ್ರಯೋಜನವಾಗಿಲ್ಲ ಎನ್ನುತ್ತಾರೆ. ಕೆಲವು ನಿವೃತ್ತ ಶಿಕ್ಷಕರ ಬಡಾವಣೆ ನಿವಾಸಿಗಳು.

ಪಟ್ಟಣದ 17ನೇ ವಾರ್ಡ್‌ನ ಭೀಮಾಂಭಿಕಾ ದೇವಸ್ಥಾನದ ಸುತ್ತಮುತ್ತ ಇರುವ ಎರಡು ವಿದ್ಯುತ್ ಕಂಬಗಳಿಗೆ ಕಳೆದ ಎರಡ್ಮೂರು ವರ್ಷಗಳಿಂದಾ ಬೀದಿದೀಪಗಳು ಉರಿಯುತ್ತಿವೆ. ಆದರೆ ಪಪಂ ಅಧಿಕಾರಿಗಳು ಮಾತ್ರ ಯಾವುದೇ ಕ್ರಮ ಕೈಗೊಂಡಿಲ್ಲ. ಹಗಲಲ್ಲಿ ಬೀದಿ ದೀಪ ಉರಿಸಿ ವಿದ್ಯುತ್ ಪೋಲು ಮಾಡುತ್ತಿರುವ ಬಗ್ಗೆ ಜೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರೇ ಪಪಂ ಇಲಾಖೆಯವರು ಬೀದಿ ದೀಪಗಳು ಬಂದ್ ಮಾಡಬೇಕು. ಅದು ಅವರ ಕೆಲಸ ಎಂದು ನುಣುಚಿಕೊಳ್ಳುತ್ತಿದ್ದಾರೆ ಎಂದು ನಿವಾಸಿಗಳು ಹೇಳುತ್ತಾರೆ. ಈಗಲಾದರೂ ಬೀದಿದೀಪಗಳನ್ನು ಆರಿಸಲು ಸಂಬಂಧಿತ ಅಧಿಕಾರಿಗಳು ಮುಂದಾಗಬೇಕು ಎಂಬುದು ನಿವಾಸಿಗಳಾದ ಚನ್ನಬಸಪ್ಪ ಹಳ್ಳಿಕೇರಿ, ಎಚ್.ಎಸ್.ಅಂಗಡಿ ವೀರಣ್ಣ ಇತರರು ಒತ್ತಾಯಿಸಿದ್ದಾರೆ. ಪಪಂ ಮುಖ್ಯಧಿಕಾರಿ ನಾಗೇಶ್ 3 ವರ್ಷಗಳಿಂದ ಬೀದಿ ದೀಪ ಉರಿಯುವುದರ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ಇನ್ನೂ ಈ ರೀತಿಯಾಗದಂತೆ ನೋಡಿಕೊಳ್ಳಲಾಗುವುದು ಎಂದು ಹೇಳಿದರು.



26 ಸಂತ್ರಸ್ತರಿಗೆ ಪರಿಹಾರ ಧನ ಮಂಜೂರು: ಡಿಸಿ

ಕಲಬುರಗಿ: ಹಿಟ್ ಆಂಡ್ ರನ್ ಅಪಘಾತದ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 26 ಸಂತ್ರಸ್ಥರಿಗೆ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರ ಅಧ್ಯಕತೆಯಲ್ಲಿ ಪರಿಹಾರ ಅನುಮೋದನೆ ನೀಡಲಾಯಿತು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಂಡಿಸಲಾದ 27 ಪ್ರಕರಣಗಳಲ್ಲಿ 26 ಪ್ರಕರಣಗಳನ್ನು ಜಿಲ್ಲಾಧಿಕಾರಿಗಳು, ಜನರಲ್ ಇನ್ಸೂರೆನ್ಸ್ ಕೌನ್ಸಿಲ್ ಕಮಿಷನರ್ ಹಾಗೂ ಕಲಬುರಗಿ ಪ್ರಾದೇಶಿಕ ಸಾರಿಗೆ ಅಧಿಕಾರಿ ಅವರ ಸಹಮತಿಯೊಂದಿಗೆ ಪರಿಹಾರ ಧನ ಮಂಜೂರಾತಿ ಮಾಡಲು ಅನುಮೋದಿಸಲಾಯಿತು.

General Insurance Council ಕಂಪನಿಯವರ ಇತ್ತೀಚಿನ ಭಾರತದ ಹೆದ್ದಾರಿ ಮತ್ತು ಸಾರಿಗೆ ಮಂತ್ರಾಲಯ ಆದೇಶದಂತೆ ಮೃತಪಟ್ಟವರಿಗೆ ರೂ. 2,00,000/- (ಎರಡು ಲಕ್ಷ) ಮತ್ತು ಗಾಯಗೊಂಡವರಿಗೆ ರೂ. 50,000/- (ರೂಪಾಯಿ ಐವತ್ತು ಸಾವಿರ) ಪರಿಹಾರ ಧನವನ್ನು ನೇರವಾಗಿ ಮೃತ ವಾರಸುದಾರರು ಮತ್ತು ಗಾಯಗೊಂಡವರ ಖಾತೆಗೆ ಪಾವತಿಸಲಾಗುತ್ತದೆ. ಈ ಸಂಬಂಧ ಕೆಲ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗೆ ನೀಡಬೇಕಾಗುತ್ತದೆ. ಇದರ ಉಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಲು ಜಿಲ್ಲಾಧಿಕಾರಿ ಸಭೆಯಲ್ಲಿ ತಿಳಿಸಿದರು.

ಎಸ್ಪಿ ಅಡ್ಡೂರು ಶ್ರೀನಿವಾಸಲು, ಸಹಾಯಕ ಆಯುಕ್ತೆ ಆಲದಕಟ್ಟಿ, ಸೇಡಂ ಸಹಾಯಕ ಆಯುಕ್ತ ಪ್ರಭು ರಡ್ಡಿ, ಉಪಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿ ಆನಂದ ಪಾರ್ಥನಹಳ್ಳಿ, ಸಂಚಾರಿ ಪೊಲೀಸ್ ಇನ್ಸಪೆಕ್ಟರ್ ಶಕೀಲ, ಯುನೈಟೆಡ್ ಇನ್ಸೂರೆನ್ಸ್ ಕಂಪನಿಯ ಅಧಿಕಾರಿ ರಾಜೀವ ರೆಡ್‌ಕ್ರಾಸ್ ಪರವಾಗಿ ರವೀಂದ್ರ ಶಾಬಾದಿ, ಉಪಸ್ಥಿತರಿದ್ದರು.



ಕಿರುಸುದ್ದಿ

ರಾಜ್ಯಮಟ್ಟದ ಭಜನಾ ಸ್ಪರ್ಧೆ: ಪ್ರಥಮ ಸ್ಥಾನ

ಕುರುಗೋಡು: ಹುಬ್ಬಳ್ಳಿಯಲ್ಲಿ ಸದ್ಗುರು ಶ್ರೀಸಿದ್ಧಾರೂಢ ಮಹಾಸ್ವಾಮಿಯವರ 191ನೇ ಜಯಂತ್ಯುತ್ಸ ನಿಮಿತ್ತವಾಗಿ ದಿನಾಂಕ ಮಾ.29ರಿಂದ ಎ.2ರವರೆಗೆ 11ನೇ ವರ್ಷದ 'ರಾಜ್ಯಮಟ್ಟದ ಭಜನಾ ಸ್ಪರ್ಧೆಯಲ್ಲಿ ಶ್ರೀಮಠದ ಕೈಲಾಸ ಮಂಟಪದ ಶ್ರೀಮನ್ನಿ ಜಗುಣ ಶಿವಯೋಗಿ ತತ್ವಪದ ಮತ್ತು ಜನಪದ ಕಲಾ ತಂಡ ಬಳ್ಳಾರಿ ಪ್ರಥಮ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ.

ಈ ವೇಳೆ ಜಿಲ್ಲೆಯ ಕುರುಗೋಡು ತಾಲೂಕಿನ ಯಲ್ಲಾಪುರ ಗ್ರಾಮದ ಗುರುಗಳಾದ ಬಸಪ್ಪ, ಗಾಯಕರಾಗಿ ಬಿ.ಬಾಬು ಸ್ವಾಮಿ ಎಚ್.ಪಶುಪತಿಗೌಡ, ಜಿಲ್ಲೆಯ ಗ್ರಾಮೀಣ ತಂಡದವರಾದ ಗಂಗಾಧರ ಸ್ವಾಮಿ, ಸ್ವಾಮಿ, ಹಾರ್ಮೋನಿಯಮ್ ಸಾಥ್ ಜಿ.ಮಹಾಲಿಂಗಯ್ಯ, ಡಗ್ಗ ವಾದಕ ಎ.ಕೆ.ತಿಪ್ಪೇಸ್ವಾಮಿ, ತಾಳ ಹಿಮ್ಮೇಳಾಗಿ, ವೀರೇಶ, ಪ್ರಕಾಶ್, ಎಂ.ಪಿ.ವಿಜಯಕುಮಾರ್ ಭಜನೆ ಸೇವೆಯಲ್ಲಿ ಭಾಗವಹಿಸಿ ಸಿದ್ಧಾರೂಢಸ್ವಾಮಿಯ ಕೃಪೆಗೆ ಪಾತ್ರರಾಗಿದ್ದಾರೆ.

ಡಾ.ಧರ್ಮನಗೌಡ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ

ವಿಜಯನಗರ: ಹುಬ್ಬಳ್ಳಿಯ ಅಂತಾರಾಷ್ಟ್ರೀಯ ಹಿಂದೂ ಮಹಾಸಭಾದಿಂದ ನೀಡಲಾಗುವ ಡಾ.ಬಿ.ಆರ್.



ಅಂಬೇಡ್ಕರ್ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ(ಪ್ರಭಾರಿ)ಯಾಗಿರುವ ಡಾ.ಎಂ.ಧರ್ಮನಗೌಡ ಭಾಜನರಾಗಿದ್ದಾರೆ. ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು 135ನೇ ಜಯಂತಿ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿದವರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುತ್ತಿದ್ದು, ವೈದ್ಯಕೀಯ ಕ್ಷೇತ್ರದಲ್ಲಿ ಡಾ.ಧರ್ಮನಗೌಡ ಅವರು ಸಲ್ಲಿಸಿದ ಸೇವೆ ಅನುಪಮವಾಗಿದ್ದರಿಂದ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ ಸುದ್ದಿ

ಗುರುರಾಜ ಕುಲಕರ್ಣಿ

ವಿಜಯನಗರ: ಹೊಸಪೇಟೆ ನಗರದ ಪ್ರಸನ್ನ ಯುವಕ ಮಂಡಳಿಯ ಹಿರಿಯ ಸದಸ್ಯ, ವಡಕರಾಯ ಪತಂಜಲಿ ಯೋಗ ಕೇಂದ್ರದ ಹಿರಿಯ ಸಾಧಕ



ಹಾಗೂ ಬ್ರಾಹ್ಮಣ ಸಮಾಜದ ಮುಖಂಡರಾಗಿದ್ದ ಗುರುರಾಜ ಕುಲಕರ್ಣಿ(65) ಶನಿವಾರ ಇಲ್ಲಿ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಪುತ್ರಿ ಇದ್ದಾರೆ. ಇವರು 'ಮಿಕ್ಸಿ ರಿಪೇರಿ ಮಾಮ' ಎಂದೇ ಖ್ಯಾತರಾಗಿದ್ದರು. ಅಂತ್ಯಕ್ರಿಯೆ ಭಾನುವಾರ ಬೆಳಿಗ್ಗೆ 10.30ಕ್ಕೆ ಮುಕ್ತಿಧಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ದೊಡ್ಡಬಸಪ್ಪ ಹೊಸವಕ್ಕಲ

ಕುಷ್ಟಗಿ: ಪಟ್ಟಣದ ನಿವೃತ್ತ ಕೆಇಬಿ ನೌಕರ ದೊಡ್ಡಬಸಪ್ಪ



ಚನ್ನಬಸಪ್ಪ ಹೊಸವಕ್ಕಲ (66) ಅವರು ಹೃದಯಾಘಾತದಿಂದ ಗಂಗಾವತಿಯಲ್ಲಿ ನಿಧನರಾಗಿದ್ದಾರೆ. ಮೃತರು ನಾಗಪ್ಪ ಹಾಗೂ ಫಕೀರಪ್ಪ ಹೊಸವಕ್ಕಲ ಅವರ ಹಿರಿಯ ಸಹೋದರರು. ಇಬ್ಬರು ಪುತ್ರರು ಹಾಗೂ ಒಬ್ಬ ಪುತ್ರಿ ಹಾಗೂ ಅಪಾರ ಬಂಧು ಬಳಗ ಇದ್ದಾರೆ.

ಲಂಬಾಣಿ ಅವಿನಾಶ್

ಹೂವಿನಹಡಗಲಿ: ತಾಲೂಕಿನ ಬಸರಕೋಡು



ತಾಂಡಾದ ಲಂಬಾಣಿ ಅವಿನಾಶ್ (26) ಬಿಎಸ್ಸಿ ಫಾರೆಸ್ಟ್ ಪದವೀಧರ ಅನಾರೋಗ್ಯದಿಂದ ನಿಧನರಾದರು. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಬಸರಕೋಡು ತಾಂಡಾದಲ್ಲಿ ಶನಿವಾರ ನೆರವೇರಿತು.

ಅಂಗಡಿ ಹಂಪಮ್ಮ

ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ



ತಳವಾರ ಪೇಟೆಯ ಅಂಗಡಿ ಹಂಪಮ್ಮ (90) ಶುಕ್ರವಾರ ನಿಧನರಾಗಿದ್ದಾರೆ. ಮೃತರು ಅಂಗನವಾಡಿ ಸಹಾಯಕಿ ಸೇವೆ ಸಲ್ಲಿಸಿದ್ದರು. ಇವರಿಗೆ ಮೂರು ಪುತ್ರಿಯರು ಇದ್ದಾರೆ.



ಕುರುಗೋಡು: ಹುಬ್ಬಳ್ಳಿಯಲ್ಲಿ ಸದ್ಗುರು ಶ್ರೀಸಿದ್ಧಾರೂಢ ಮಹಾಸ್ವಾಮಿಯವರ 191ನೇ ಜಯಂತ್ಯುತ್ಸ ನಿಮಿತ್ತವಾಗಿ ದಿನಾಂಕ ಮಾ.29ರಿಂದ ಎ.2ರವರೆಗೆ 11ನೇ ವರ್ಷದ 'ರಾಜ್ಯಮಟ್ಟದ ಭಜನಾ ಸ್ಪರ್ಧೆಯಲ್ಲಿ ಶ್ರೀಮಠದ ಕೈಲಾಸ ಮಂಟಪದ ಶ್ರೀಮನ್ನಿ ಜಗುಣ ಶಿವಯೋಗಿ ತತ್ವಪದ ಮತ್ತು ಜನಪದ ಕಲಾ ತಂಡ ಬಳ್ಳಾರಿ ಪ್ರಥಮ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ.

ನಿಮ್ಮೊಂದಿಗೆ ನಾವಿದ್ದೇವೆ, ಧೈರ್ಯವಾಗಿರಿ

ಬಳ್ಳಾರಿ: ನಿಮ್ಮೊಂದಿಗೆ ನಾವಿದ್ದೇವೆ (ಬಿಜೆಪಿ) ಅಧಿಕಾರಿಗಳು ಆತ್ಮಸ್ಥೈರ್ಯವನ್ನು ಕಳೆದುಕೊಳ್ಳದೇ ಕರ್ತವ್ಯವನ್ನು ನಿರ್ವಹಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್ ಹೇಳಿದರು.

ನಗರದ ಮಹಾನಗರ ಪಾಲಿಕೆ ಎದುರು, ಪಾಲಿಕೆ ಎಂಜಿನಿಯರ್ ಜಿ.ಎಂ.ವೀರೇಶ್ ಮೇಲೇ ನಡೆದ ಹಲ್ಲೆ ಖಂಡಿಸಿ ಪಾಲಿಕೆಯ ಸಿಬ್ಬಂದಿ, ಅಧಿಕಾರಿಗಳು ಶುಕ್ರವಾರ ಸಂಜೆ ನಡೆಸಿದ ಧರಣಿಯಲ್ಲಿ ಭಾಗವಹಿಸಿ ಮಾತನಾಡಿದರು. ಬಳ್ಳಾರಿಯಲ್ಲಿ ಪದೇ ಪದೆ ಏನಾದರೂ ಒಂದು ಗಲಭೆ ನಡೆಯುತ್ತಿರುವುದು ವಿಷಾದನೀಯ. ಈ ಗಲಭೆಗಳು-ವಿವಾದಗಳಿಂದ ಬಳ್ಳಾರಿ ನಗರಕ್ಕೆ ಕಪ್ಪು ಚುಕ್ಕೆ. ಇನ್ನು ಮುಂದಾದರೂ ಇಂಥಹ ಗಲಭೆ-ವಿವಾದಗಳನ್ನು ಆಡಳಿತ ಪಕ್ಷದ ಜನಪ್ರತಿನಿಧಿಗಳು ತಡೆಗಟ್ಟಬೇಕು ಎಂದರು.ಅಧಿಕಾರಿಗಳು ಮತ್ತು ಕಾರ್ಪೊರೇಟರ್‌ಗಳ ಮಧ್ಯೆ ಏನಾದರೂ ವಿವಾದಗಳಿದ್ದಲ್ಲಿ-ಭಿನ್ನಾಭಿಪ್ರಾಯಗಳಿದ್ದಲ್ಲಿ ಮೇಲಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ವಿವಾದವನ್ನು ಪರಿಹರಿಸಿಕೊಳ್ಳಬೇಕು. ಅಲ್ಲದೇ, ಸರ್ಕಾರಿ ನೌಕರರ ಜೊತೆಯಲ್ಲಿ ಸೌಹಾರ್ದಯುತವಾಗಿ ಇರಬೇಕು. ಸರ್ಕಾರಿ ನೌಕರರ ಜೊತೆಯಲ್ಲಿ ಜನಪ್ರತಿನಿಧಿಗಳ ಸಂಬಂಧಗಳು ಕೆಟ್ಟರೆ ಅಭಿವೃದ್ಧಿ, ಪ್ರಗತಿ ಮತ್ತು ಜನಪರ ಆಡಳಿತ ನೀಡಲು ಸಾಧ್ಯವಿಲ್ಲ, ಪಾಲಿಕೆ ಎಂಜಿನಿಯರ್ ಜಿ.ಎಂ.ವೀರೇಶ್ ಅವರ ಮೇಲೆ ಹಲ್ಲೆ ನಡೆಸಿದ ಪಾಲಿಕೆ ಕಾಂಗ್ರೆಸ್ ಸದಸ್ಯ ವಿ.ಕುಬೇರ ಅವರನ್ನು ಯಾವುದೇ ನೆಪ ಹೇಳದೇ ಕೂಡಲೇ ಪೊಲೀಸರು ಬಂಧಿಸಬೇಕು. ಇಲ್ಲವಾದಲ್ಲಿ ಬಿಜೆಪಿಯು ಹಂತ ಹಂತವಾಗಿ ತೀವ್ರ ಪ್ರತಿಭಟನೆ ನಡೆಸಲಿದೆ. ನಾವು (ಬಿಜೆಪಿ) ಸದಾಕಾಲ ಸರ್ಕಾರಿ ಅಧಿಕಾರಿಗಳು - ಸಿಬ್ಬಂದಿ ಜೊತೆ ಇರುತ್ತೇವೆ, ಇದ್ದೇವೆ ಎಂದು ಭರವಸೆ ನೀಡಿದರು.



ಬಳ್ಳಾರಿ: ಜಿ.ಎಂ.ವೀರೇಶ್ ಮೇಲೇ ನಡೆದ ಹಲ್ಲೆ ಖಂಡಿಸಿ ಪಾಲಿಕೆಯ ಸಿಬ್ಬಂದಿ, ಅಧಿಕಾರಿಗಳು ಶುಕ್ರವಾರ ಸಂಜೆ ನಡೆಸಿದ ಧರಣಿಯಲ್ಲಿ ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್ ಅವರು ಮಾತನಾಡಿದರು. ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಶ್ರೀನಿವಾಸ್ ಮೊತ್ಕರ್, ಸದಸ್ಯರಾದ ಎಂ.ಗೋವಿಂದರಾಜಲೂ, ಇಬ್ರಾಹಿಂ ಬಾಬು, ಸುರೇಖಾ ಮಲ್ಲನಗೌಡ, ಚೇತನ ವೇಮಣ್ಣ ಸೇರಿದಂತೆ ಪಾಲಿಕೆ ಸಿಬ್ಬಂದಿ ಉಪಸ್ಥಿತರಿದ್ದರು.

ತರಬೇತಿ ಕಾರ್ಯಾಗಾರ ಉದ್ಘಾಟನೆ | ಡಿಸಿ ಮನ್ನಿಕೇರಿ ಹೇಳಿಕೆ

ಆತ್ಮರಕ್ಷಣೆ ಎಂಬುದು ಆತ್ಮವಿಶ್ವಾಸದ ಸಂಕೇತ

ವಿಜಯನಗರ: ಮಹಿಳೆ ಅಬಲೆಯಲ್ಲ ಸಬಲೆ. ಆತ್ಮರಕ್ಷಣೆ ಎಂಬುದು ಕೇವಲ ದೈಹಿಕ ಶಕ್ತಿಯ ಪ್ರದರ್ಶನವಲ್ಲ, ಅದು ಆತ್ಮವಿಶ್ವಾಸದ ಸಂಕೇತ. ಪ್ರತಿಯೊಬ್ಬ ಹೆಣ್ಣು ಸಂಕಷ್ಟದ ಸಮಯದಲ್ಲಿ ತನ್ನನ್ನು ತಾನು ರಕ್ಷಿಸಿಕೊಳ್ಳುವ ಕೌಶಲ್ಯ ಹೊಂದಿರಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ತಿಳಿಸಿದರು.

ಹೊಸಪೇಟೆ ನಗರದ ವಿಜಯನಗರ ಕಾಲೇಜಿನಲ್ಲಿ ವಿಜಯನಗರ ಕಾಲೇಜ್, ಮಹಿಳಾ ಸಬಲೀಕರಣ ಕೋಶ ಸಹಯೋಗದಲ್ಲಿ ಶನಿವಾರ ಆಯೋಜಿಸಲಾಗಿದ್ದ ಮಹಿಳೆಯರಿಗೆ ಸ್ವಯಂ ರಕ್ಷಣೆ ಕುರಿತ ಏರ್ಪಡಿಸಲಾಗಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತಸಮಾಜದಲ್ಲಿಮಹಿಳೆಯರುವೈದ್ಯಕೀಯ, ಕಲೆ, ವಾಸ್ತುಶಿಲ್ಪ, ಉದ್ಯಮ, ವಿಜ್ಞಾನ ಮತ್ತು ತಂತ್ರಜ್ಞಾನ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲೂ ತಮ್ಮ ಛಾಪು ಮೂಡಿಸಿದ್ದಾರೆ. ಅದಷ್ಟೇ ಅಲ್ಲದೇ ಬಾಹ್ಯಾಕಾಶ ಸಂಶೋಧನೆಯಂತಹ ಉನ್ನತ ಕ್ಷೇತ್ರಗಳಲ್ಲೂ ಮಹಿಳೆಯರು ಮುನ್ನುಗ್ಗುತ್ತಿರುವುದು ಹೆಮ್ಮೆಯ ಸಂಗತಿ. ಇಷ್ಟೆಲ್ಲಾ ಸಬಲೀಕರಣಗೊಳ್ಳುತ್ತಿದ್ದರು ಇಂದಿಗೂ ಮಹಿಳೆಯರ ಮೇಲಿನ ಶೋಷಣೆ, ದೌರ್ಜನ್ಯ ಪ್ರಕರಣಗಳು ಮಾತ್ರ ಕಡಿಮೆಯಾಗಿಲ್ಲ. ಆದ್ದರಿಂದ ಪ್ರತಿಯೊಬ್ಬ ಮಹಿಳೆಯೂ ದೈಹಿಕವಾಗಿ ಮತ್ತು ಮಾನಸಿಕವಾಗಿ ಸಬಲರಾಗಬೇಕಿದೆ. ಈ ನಿಟ್ಟಿನಲ್ಲಿ ಪೋಷಕರು ಸಹ ಕೇವಲ ಹೆಣ್ಣು ಮಕ್ಕಳಿಗೆ ಸುರಕ್ಷಿತವಾಗಿರು ಎಂದು ಹೇಳುವುದಕ್ಕಿಂತ ಹೆಚ್ಚಾಗಿ, ಗಂಡು ಮಕ್ಕಳಿಗೆ ಹೆಣ್ಣು ಮಕ್ಕಳನ್ನು, ಗುರು ಹಿರಿಯರನ್ನು ಗೌರವಿಸುವ ಉತ್ತಮ ಸಂಸ್ಕಾರ ಕಲಿಸಬೇಕು. ಆಗದಾಗ ಸಮಾಜದಲ್ಲಿ ನಡೆಯುವ ಶೇ.99ರಷ್ಟು ಕೃತ್ಯಗಳನ್ನು ತಡೆಯಬಹುದು.

ಆದರೆ, ಇಂದಿನ ಬದಲಾಗುತ್ತಿರುವ ಸಾಮಾಜಿಕ ಸನ್ನಿವೇಶದಲ್ಲಿ ಮಹಿಳೆಯರ ಸುರಕ್ಷತೆ ಮುಖ್ಯ. ಎಲ್ಲಾ ಸಂದರ್ಭದಲ್ಲೂ ಕೇವಲ ಕಾನೂನು ಮತ್ತು ಪೊಲೀಸ್ ವ್ಯವಸ್ಥೆಯಿಂದ ಮಾತ್ರ ಸುರಕ್ಷತೆ ಸಾಧ್ಯವಿಲ್ಲ. ಮಹಿಳೆಯೂ ಸಮಾಜದಲ್ಲಿ ಉಂಟಾಗುವ ಸಂಕಷ್ಟದ ಸಂದರ್ಭಗಳನ್ನು ಎದುರಿಸಲು ಆತ್ಮರಕ್ಷಣಾ ತಂತ್ರಗಳನ್ನು ಕಲಿಯುವುದು ಅನಿವಾರ್ಯ. ತುರ್ತು ಸಂದರ್ಭದಲ್ಲಿ ಪೊಲೀಸ್ ಸಹಾಯವಾಣಿ ಸಂಖ್ಯೆ 112 ಗೆ ಕರೆ ಮಾಡಬಹುದು ಎಂದರು.



ಮಹಿಳಾ ಸಬಲೀಕರಣ ಎಂದರೆ ಸ್ವೇಚ್ಛಾಚಾರವಲ್ಲ, ಬದಲಿಗೆ ಸರಿ ತಪ್ಪು ವಿಮರ್ಶಿಸಿ, ನಿರ್ಧಾರ ಕೈಗೊಳ್ಳುವುದು ತಮ್ಮ ಜವಾಬ್ದಾರಿ.ಇಂದಿನ ಜಗತ್ತಿನಲ್ಲಿ ಮಾಹಿತಿಯ ಕೊರತೆಯಿಲ್ಲ, ಆದರೆ ಆಕರ್ಷಕವಾಗಿರುವುದಕ್ಕೆ ಮಾರುಹೋಗದೆ ಜೀವನಕ್ಕೆ ಪೂರಕವಾದುದನ್ನ ಆಯ್ದುಕೊಳ್ಳಬೇಕು. ದೈಹಿಕ ದೌರ್ಜನ್ಯದ ವಿರುದ್ಧ ಆತ್ಮರಕ್ಷಣೆ ಕಲಿಯುವುದು ಎಷ್ಟು ಮುಖ್ಯವೋ, ಸಾಮಾಜಿಕ ಮಾಧ್ಯಮಗಳ ಕೆಟ್ಟ ಪ್ರಭಾವದಿಂದ ಉಂಟಾಗುವ ಮಾನಸಿಕ ದೌರ್ಜನ್ಯದಿಂದ ರಕ್ಷಿಸಿಕೊಳ್ಳುವುದು ಅಷ್ಟೇ ಮುಖ್ಯ.

■ **ಎಸ್.ಜಾಹ್ನವಿ, ಎಸ್ಪಿ**

ಮಹಿಳಾ ಸಬಲೀಕರಣ ಕೋಶ ಸಂಯೋಜಕಿ ಡಾ.ಸುಷ್ಮಾ ಹೂಗಾರ ಪ್ರಾಸ್ತಾವಿಕವಾಗಿ ಮಾತನಾಡಿ, ಕಾಲಕ್ಕೆ ತಕ್ಕಂತೆ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ದಾಪುಗಾಲು ಹಾಕುತ್ತಿದ್ದಾರೆ. ಕೇವಲ ಕೆಲವು ಮಹಿಳೆಯರು ಸಾಧನೆ ಮಾಡುವುದು ಸಬಲೀಕರಣದ ಮಾನದಂಡವಲ್ಲ, ಸಾಮಾನ್ಯ ಮಹಿಳೆಯ ಮನೆ, ಮನಸ್ಸು ಮತ್ತು ಜೀವನ ಸಬಲವಾದಾಗ ಮಾತ್ರ ಸಬಲೀಕರಣಕ್ಕೆ ನಿಜವಾದ ಅರ್ಥ ಸಿಗುತ್ತದೆ. ದೇಶದ ಪ್ರಥಮ ಪ್ರಜೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಗಗನಯಾತ್ರಿ ಸುನಿತಾ ವಿಲಿಯಮ್ಸ್ ಅವರಂತಹ ಸಾಧಕಿಯರು ಇಡೀ ದೇಶಕ್ಕೆ ಮಾದರಿಯಾಗಿದ್ದಾರೆ ಎಂದು ಹೇಳಿದರು. ವಿಜಯನಗರಮಹಾವಿದ್ಯಾಲಯ ಆಡಳಿತ ಮಂಡಳಿ ಅಧ್ಯಕ್ಷ ಎನ್. ಮಲ್ಲಿಕಾರ್ಜುನ ಮೆಟ್ರಿ, ಪ್ರಾಂಶುಪಾಲ ಮಹಾಂತೇಶ್ ಎನ್. ಆರಾಧ್ಯಮಠ, ಕಿರ್ಲೋಸ್ಕರ್ ಎವಿ ಕ್ಲಬ್ ನ ಜಂಟಿ ಕಾರ್ಯದರ್ಶಿ ಭಾಗ್ಯ, ನ್ಯಾಯವಾದಿ ಅನಿತಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮಹಿಳೆಯರಿಗೆ ಅಕ್ಕಮಹಾದೇವಿ ಮಾದರಿ

ಕೊಟ್ಟೂರು: ಕನ್ನಡದ ಮೊಟ್ಟಮೊದಲ ಕವಯಿತ್ರಿ ಶರಣೆ ಅಕ್ಕಮಹಾದೇವಿ ಇಂದಿನ ಮಹಿಳೆಯರಿಗೆ ಮಾದರಿಯಾಗಿದ್ದಾರೆ ಎಂದು ನಿವೃತ್ತ ಶಿಕ್ಷಕಿ ವಿ.ಕನ್ನಿಕಾ ಹೇಳಿದರು.

ಕೊಟ್ಟೂರಿನ ಶ್ರೀಗುರು ಕೊಟ್ಟೂರೇಶ್ವರ ಕಲ್ಯಾಣ ಮಂಟಪದಲ್ಲಿ ತಾಲೂಕು ಕದಳಿ ಮಹಿಳಾ ವೇದಿಕೆ ವತಿಯಿಂದ ನಡೆದ 'ಅಕ್ಕಮಹಾದೇವಿ ಜಯಂತಿ' ಕಾರ್ಯಕ್ರಮದಲ್ಲಿ 'ಅಕ್ಕಮಹಾದೇವಿಯ ವಚನಗಳಲ್ಲಿ ಆಧ್ಯಾತ್ಮಿಕತೆ' ಕುರಿತು ಉಪನ್ಯಾಸ ನೀಡಿದರು. ರಾಜಾಶ್ರಯವನ್ನು ತ್ಯಜಿಸಿ, ಮಲ್ಲಿಕಾರ್ಜುನನನ್ನು ಅರಸಿ, ಶ್ರೀಶೈಲದ ಕದಳಿಗೆ ಹೋಗಿ ಸಾಕ್ಷಾತ್ಕಾರ ಪಡೆದ ಅಕ್ಕಮಹಾದೇವಿ ಸ್ತ್ರೀ ಕುಲದ ಮಹಾನ್ ದೇವತೆಯಾಗಿದ್ದಾಳೆ ಎಂದರು.

ಶ್ರೀಶೈಲದ ಚನ್ನಮಲ್ಲಿಕಾರ್ಜುನನೇ ತನ್ನ ಗಂಡ ಎಂದು ಸ್ವೀಕರಿಸಿ ದಿಗಂಬರೆಯಾಗಿ ಸಂಚಾರ ಕೈಗೊಂಡು ದಿಟ್ಟತನವನ್ನು ಪ್ರದರ್ಶಿಸಿದ ವೀರ ಮಹಿಳೆಯಾಗಿದ್ದಾಳೆ. ಅನುಭವ ಮಂಟಪಕ್ಕೆ ಬಂದು ಅಲ್ಲಮಪ್ರಭುವಿನ ಕಠೋರ ಪರೀಕ್ಷೆಗೆ ಒಳಗಾಗಿ ಪರೀಕ್ಷೆಯಲ್ಲಿ ಗೆದ್ದು ಜಗದ ಅಕ್ಕ ಎಂಬ ಕೀರ್ತಿಗೆ ಭಾಜನಳಾಗಿದ್ದಾಳೆ ಎಂದು ತಿಳಿಸಿದರು.

ಕದಳಿ ಮಹಿಳಾ ವೇದಿಕೆ ನಡೆದು ಬಂದ ದಾರಿಯನ್ನು ಪ್ರಾಸ್ತಾವಿಕವಾಗಿ ಕದಳಿ ಮಹಿಳಾ ವೇದಿಕೆ ಕಾರ್ಯದರ್ಶಿ ದೇವರಮನಿ ಮಂಗಳ ತಿಳಿಸಿದರು.

ತಾಲೂಕು ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾದ ಎಂ.ಸುಜಾತಾ ಮಾತನಾಡಿ, ಕದಳಿ ಮಹಿಳಾ ವೇದಿಕೆ, ಶರಣ ಸಾಹಿತ್ಯ ಪರಿಷತ್ತಿನ ಒಂದು ಶಾಖೆಯಾಗಿದ್ದು, ಮಹಿಳೆಯರಲ್ಲಿ ಶರಣ ಸಾಹಿತ್ಯದ ಅರಿವು ಮೂಡಿಸಲು ಸಹಕಾರಿಯಾಗಿದೆ, ಆ ಮೂಲಕ ಶರಣರ ಚಿಂತನೆಗಳನ್ನು ಮನೆ ಮನಗಳಿಗೆ ತಲುಪಿಸಲು ಸಹಕಾರಿಯಾಗಿದೆ ಎಂದರು.

ಖಜಾಂಚಿಗಳಾದ ವಿ ಅನುರಾಧ ರವರಿಂದ ವಚನ ಗಾಯನ ನೆರವೇರಿತು.

ಪಿ.ಎಂ.ಶೈಲಜಾ ನಿರೂಪಿಸಿದರು. ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ದೇವರಮನಿ ಕರಿಯಪ್ಪ, ಕಾರ್ಯದರ್ಶಿಗಳಾದ ಹೊಂಬಾಳೆ ಮಂಜುನಾಥ, ಉಪಾಧ್ಯಕ್ಷರಾದ ಎಸ್.ಎಂ.ನಳಿನ, ಖಜಾಂಚಿಗಳಾದ ಅಂಗಡಿ ಚಂದ್ರಣ್ಣ, ಜ್ಯೋತಿಪ್ರಕಾಶ್ ಮಾತನಾಡಿದರು.

ಸಹ ಕಾರ್ಯದರ್ಶಿ ಜಿ.ಸಿದ್ದಣ್ಣ, ಜಿ.ಮಲ್ಲಿಕಾರ್ಜುನ, ಎಚ್.ಪಂಪಾಪತಿ, ದೇವರಮನಿ ಪಿನಾಕಪಾಣಿ, ದೇವರಮನಿ ಕೊಟ್ರೇಶ, ತುಪ್ಪದ ವೀರಣ್ಣ, ಜಿ ಷಡಕ್ಷರಿಗೌಡ, ಎಚ್.ಲತಾ, ಎಚ್ .ಪೂರ್ಣಿಮಾ, ಬಿ.ಹನುಮಂತಪ್ಪ, ಕೆ.ಶಿವಮೂರ್ತಿ, ಸುವರ್ಣ, ಜಿ.ವೀರಣ್ಣ, ಗಂಡಿ ವಿರೂಪಾಕ್ಷಪ್ಪ ಇತರರಿದ್ದರು.



ಪ್ರಶಸ್ತಿ ಮತ್ತಷ್ಟು ಜವಾಬ್ದಾರಿ ಹೆಚ್ಚಿಸಿದೆ: ತಳಗಡೆ



ಬಳ್ಳಾರಿ: ಕಳೆದ 19 ವರ್ಷಗಳಿಂದ ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ನನ್ನನ್ನು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಗುರುತಿಸಿ, ಪ್ರತಿ ವರ್ಷ ಅನೇಕ ಸಾಧಕರ ಹೆಸರಿನಲ್ಲಿ ಕೊಡಮಾಡುವ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಸಂತಸ ಮೂಡಿಸಿದೆ. ಈ ವರ್ಷದ ಪ್ರಜಾ ಪ್ರಗತಿ ಪ್ರಶಸ್ತಿ ಕ್ಷೇತ್ರದಲ್ಲಿನ ಸೇವೆಯ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ಪ್ರಶಸ್ತಿ ಪುರಸ್ಕೃತ, ಹಿರಿಯ ಮುಖ್ಯ ಉಪ ಸಂಪಾದಕ ರವೀಂದ್ರ ತಳಗಡೆ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರಸಂಘ ಜಿಲ್ಲಾ ಘಟಕದ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಗೌರವ ಸನ್ಮಾನ ಕಾರ್ಯಕ್ರಮದಲ್ಲಿ ಪತ್ರಕರ್ತರಿಂದ ಪ್ರೀತಿಯ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕು ನನ್ನ ಹುಟ್ಟೂರು, ನಾನು ಕರ್ನಾಟಕ ವಿವಿಯಲ್ಲಿ ಅಭ್ಯಾಸಮಾಡಿ. 2007ರಲ್ಲಿ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಉದ್ಯೋಗಕ್ಕೆ ಸೇರಿಕೊಂಡೆ. ಇಲ್ಲಿನ ಸ್ಥಾನಿಕ ಸಂಪಾದಕ ಗಂಗಾಧರ ಬಂಡಿಹಾಳ್ ಹಾಗೂ ಸಿಬ್ಬಂದಿ ಸಹಕಾರದಿಂದ ಶಿಕ್ಷಣ ಕ್ಷೇತ್ರ ಸೇರಿದಂತೆ ಮೊದಲಾದ ವಿಷಯಗಳ ಕುರಿತು 56 ಲೇಖನಗಳನ್ನು ಬರೆದಿರುವೆ. ಮಾಧ್ಯಮದ ಮೂಲಕ ಸಮಾಜಕ್ಕೆ ಇನ್ನೂ ಸಾಕಷ್ಟು ಕೊಡುಗೆಗಳನ್ನೂ ನೀಡಬೇಕು ಎನ್ನುವ ಕನಸು ನನ್ನದು ಎಂದರು.

ವಿಜಯ ಕರ್ನಾಟಕ ಬಳ್ಳಾರಿ ಆವೃತ್ತಿಯ ಸ್ಥಾನಿಕ ಸಂಪಾದಕ ಗಂಗಾಧರ ಬಂಡಿಹಾಳ ಮಾತನಾಡಿ, ಸಾಮಾನ್ಯವಾಗಿ ಇಂತಹ ಪ್ರಶಸ್ತಿಗಳು ಹೆಚ್ಚಿನದಾಗಿ ವರದಿಗಾರರಿಗೆ ದೊರೆಯುತ್ತವೆ. ಆದರೆ, ಕಾನಿಪ ಈಗ ಸಂಪಾದಕೀಯದಲ್ಲಿ ಕಾರ್ಯ ನಿರ್ವಹಿ ಸುತ್ತಿರುವವರನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿ ರುವುದು ಸಂತಸ ಮೂಡಿಸಿದೆ ಎಂದರು.

ಸಂಘದ ಜಿಲ್ಲಾಧ್ಯಕ್ಷ ಎನ್. ವೀರಭದ್ರಗೌಡ ಮಾತನಾಡಿ, ಕಾನಿಪವು ಮಾಧ್ಯಮ ಕ್ಷೇತ್ರದಲ್ಲಿರುವವರಿಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಈ ತಿಂಗಳ 11, 12ರಂದು ಬೀದರ್‌ನಲ್ಲಿ ನಡೆಯುವ ಸಂಘದ ವಾರ್ಷಿಕ ಸಮ್ಮೇಳನದಲ್ಲಿ ಈ ಪ್ರಶಸ್ತಿ ನೀಡಿ ಗೌರವಿಸಲಿದೆಂದರು. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನರಸಿಂಹಮೂರ್ತಿ ಕುಲಕರ್ಣಿ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಎಚ್.ಬಸವರಾಜ್ ಸೇರಿದಂತೆ ವಿವಿಧ ಪತ್ರಕರ್ತರು ಇತರರಿದ್ದರು.

ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಅಮರೇಶ್ ಎಲ್.ಕೆ.ವಂದಿಸಿದರು. ಎಚ್. ಬಸವರಾಜ್ ನಿರೂಪಿಸಿದರು.

ಸಾಮೂಹಿಕ ವಿವಾಹ ಜಾತಿ, ಭೇದ ಕಳೆದು ಹಾಕುತ್ತವೆ: ಶಾಸಕಿ ಲತಾ

ಹೂವಿನಹಡಗಲಿ: ಉಚಿತ ಸಾಮೂಹಿಕ ವಿವಾಹಗಳು ಬಡ ಹಾಗೂ ಮಧ್ಯಮ ವರ್ಗಗಳ ಜನರ ಆರ್ಥಿಕ ಸಂಕಷ್ಟಗಳನ್ನು ನಿವಾರಿಸುತ್ತವೆ. ಜೊತೆಗೆ ಸಾಮೂಹಿಕ ವಿವಾಹಗಳು ಜಾತಿ ಬೇಧಗಳನ್ನು ಕಳೆದು ಸಮಾಜದಲ್ಲಿ ಸಾಮರಸ್ಯ ಮೂಡಿಸುತ್ತವೆ ಎಂದು ಹರಪನಹಳ್ಳಿಯ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು.

ಪಟ್ಟಣದ ರಾಮಸ್ವಾಮಿ ದೇವರ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ನಡೆದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆಧುನಿಕತೆಗೆ ಹೊಂದಿಕೊಳ್ಳುತ್ತಿರುವ ಮನುಷ್ಯ ಸಾಮರಸ್ಯದಿಂದ ಬದುಕುವುದು ಮರೆಯುತ್ತಿದ್ದಾನೆ. ವರದಕ್ಷಿಣೆ ಸಮಾಜದಲ್ಲಿ ವ್ಯಾಪಕವಾಗಿ ಬೇರೂರಿದೆ. ವಿದ್ಯಾವಂತರ ಸಂಖ್ಯೆ ಹೆಚ್ಚಾದ್ದಂತೆ ವರದಕ್ಷಿಣೆಯೂ ಹೆಚ್ಚಾಗುತ್ತಿದೆ. ವರದಕ್ಷಿಣೆ ಕಿರುಕುಳ ಸಹಿಸಲಾರದೆ ಆತ್ಮಹತ್ಯೆ ಮಾಡಿಕೊಳ್ಳುವವರ ಸುದ್ದಿಯನ್ನು ಓದುತ್ತಲೇ ಇರುತ್ತೇವೆ. ಸಾಮೂಹಿಕ ವಿವಾಹಗಳ ನೆಪದಲ್ಲಿ ವರದಕ್ಷಿಣೆ ವ್ಯವಹಾರ ಸಮಾಜದಲ್ಲಿ ಕಡಿಮೆಯಾಗುತ್ತಿದೆ. ಇದು ಉತ್ತಮ ಬೆಳವಣಿಗೆ, ಬಡವರಿಗೆ ಆರ್ಥಿಕ ಹೊರೆ ಕಡಿಮೆಯಾಗಿ ಕುಟುಂಬಗಳು ಸಾಲದ ಸುಳಿಯಿಂದ ತಪ್ಪಿಸಿಕೊಳ್ಳಲು ಸಹಕರಿಯಾಗಿದೆ. ಹೆಣ್ಣು ಮಕ್ಕಳಿಗೆ ಬಾಲ್ಯ ವಿವಾಹ ಮಾಡುವ ಅನೇಕ ಪಾಲಕರು ಬುದ್ಧಿಕಲಿಯಬೇಕಿದೆ. ಹೆಣ್ಣು ಮಗವನ್ನು ಶಾಲೆಗೆ ಕಳುಹಿಸಿ ಅಭ್ಯಾಸ ಮಾಡಲು ಪ್ರೋತ್ಸಹಿಸಿದರೆ ಆ ಹೆಣ್ಣು ಮಗಳು ಉನ್ನತ ಹುದ್ದೆಯನ್ನು ಪಡೆಯುತ್ತಾಳೆ. ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಮಾಜ ಸಹಕರಿಸಬೇಕು ಎಂದರು.



ಶಾಖಾಗವಿಮಠದ ಡಾ.ಹಿರಿಶಾಂತವೀರ ಸ್ವಾಮೀಜಿ ಮಾತನಾಡಿ, ನೂತನ ಜೀವನ ಆರಂಭಿಸುತ್ತಿರುವ ದಂಪತಿಗಳು ಗುರುಹಿರಿಯರನ್ನು ಗೌರವಿಸುವ ಮೂಲಕ ಸಮಾಜದಲ್ಲಿಮಾದರಿ ಜೀವನ ನಡೆಸಬೇಕು ಎಂದರು.

ಏಳು ಜೋಡಿಗಳು ನೂತನ ಜೀವನ ಆರಂಭಿಸಿದವು. ಕೊಂಬಳಿ ಚೌಕಿಮಠದ ಗಾಡಿತಾತ, ಶ್ರೀರಾಮ ದೇವಸ್ಥಾನದ ಧರ್ಮಕರ್ತ ಡಾ.ರಾಕೇಶಯ್ಯ ರಾಮಸ್ವಾಮಿ, ಹಾಲಸ್ವಾಮಿಮಠದ ಹಾಲಸ್ವಾಮೀಜಿ, ಪ್ರಮುಖರಾದ ಕೋಡಿಹಳ್ಳಿ ಮುದುಕಪ್ಪ, ಪುನೀತ್ ದೊಡ್ಮನೆ ಹಾಗೂ ಇತರರಿದ್ದರು.

ಕ್ರೀಡೆ ಮಾನವ ಜೀವನದ ಅವಿಭಾಜ್ಯ ಅಂಗ

ಕುರುಗೋಡು: ಕ್ರೀಡೆ ಇಲ್ಲದ ಜೀವನ ಕೀಟ ತಿಂದ ಹಣ್ಣಿನಂತೆ ಹಾಗಾಗಿ ಪ್ರತಿಯೊಬ್ಬರೂ ಚಿಕ್ಕ ವಯಸ್ಸಿನಿಂದಲೇ ಕ್ರೀಡೆಯಲ್ಲಿ ಪಾಲ್ಗೊಳ್ಳುವುದನ್ನು ರೂಢಿಸಿಕೊಳ್ಳಬೇಕು ಎಂದು ಕುರುಗೋಡು ಠಾಣೆಯ ಪಿಎಸ್ಐ ಸುಪ್ರೀತ್ ವಿರುಪಾಕ್ಷಪ್ಪ ತಿಳಿಸಿದರು.

ಅವರು ತಾಲೂಕಿನ ಸೋಮಸಮುದ್ರ ಗ್ರಾಮದಲ್ಲಿ ಶನಿವಾರ ಸೋಮಸಮುದ್ರ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿ, ಕ್ರೀಡೆ ಮಾನವ ಜೀವನದ ಅವಿಭಾಜ್ಯ ಅಂಗವಾಗಿದ್ದು, ಪ್ರಸ್ತುತ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಗ್ರಾಮೀಣ ಕ್ರೀಡೆಗಳು ಕಣ್ಮರೆಯಾಗುತ್ತಿದ್ದು, ಅವುಗಳ ಉಳಿವಿನಲ್ಲಿ ಯುವಕರೊಂದಿಗೆ ಹಿರಿಯರು ಕೈಜೋಡಿಸಿ ಸಹಕಾರ ನೀಡಬೇಕು ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಗಾದಿಲಿಂಗಪ್ಪ, ಮಾಜಿ ಗ್ರಾಪಂ ಅಧ್ಯಕ್ಷ ಬಿ.ಎನ್.ಚಂದ್ರಶೇಖರ್, ಮಂಜುನಾಥ್, ಮಾಜಿ ಗ್ರಾಪಂ ಸದಸ್ಯರಾದ ಜಡೆಪ್ಪ, ಕಂಪ್ಲಿ ಶಿಕ್ಷಣ ಸುಧಾರಣಾ ಸಮಿತಿಯ ನಿರ್ದೇಶಕ ಎಸ್. ಶ್ರೀನಿವಾಸ್, ಯೂಥ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಪವಾಡಿ, ಚಿದಾನಂದಪ್ಪ, ಡಿಎಸ್‌ಎಸ್ ಮುಖಂಡ ಈಶ್ವರ ಸೇರಿದಂತೆ ಗ್ರಾಮದ ಹಿರಿಯರು, ಯುವಕರು ಕ್ರೀಡಾ ಪ್ರೇಮಿಗಳು ಇತರರಿದ್ದರು.



ಅಭಿವೃದ್ಧಿ ಕಾರ್ಯಗಳಿಗೆ ಸಹಕಾರ ಅಗತ್ಯ: ಶಾಸಕ

ಯಾದಗಿರಿ: ನನ್ನ ಮತಕ್ಷೇತ್ರದ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಆದರೆ, ಹಳ್ಳಿಗಳಲ್ಲಿ ಜನರು ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಮರೆತು ತಮ್ಮ ವಾರ್ಡ್‌ಗಳಲ್ಲಿ ಮಾಡುತ್ತಿರುವ ಕೆಲಸಗಳಿಗೆ ಒಗ್ಗಟ್ಟಿನಿಂದ ಸಹಕಾರ ನೀಡಿ, ಅದರ ಲಾಭ ಪಡೆಯಬೇಕು ಎಂದು ಶಾಸಕ ಚನ್ನಾರಡ್ಡಿ ಪಾಟೀಲ ತುನ್ನೂರ ಕರೆ ನೀಡಿದರು.

ಮತಕ್ಷೇತ್ರದ ಮುಷ್ಟೂರ ಗ್ರಾಮದಲ್ಲಿ ನಿರ್ಮಿತಿ ಕೇಂದ್ರದಿಂದ ನಿರ್ಮಾಣ ಮಾಡಿರುವ 1.20 ಕೋಟಿ ರೂ. ವೆಚ್ಚದ ಸಿಮೆಂಟ್ ರಸ್ತೆಯನ್ನು ಉದ್ಘಾಟಿಸಿಮಾತನಾಡಿ, ರೈತರಿಗೆತಮ್ಮ ಹೊಲ-ಗದ್ದೆಗಳಲ್ಲಿ ಬೆಳೆದ ಫಸಲನ್ನು ತರಲು ತೊಂದರೆಯಾಗುತ್ತಿತ್ತು, ಈ ವಿಷಯ ನನ್ನ ಗಮನಕ್ಕೆ ನೀವೆಲ್ಲರೂ ತಂದ ತಕ್ಷಣವೇ ಸಿಮೆಂಟ್ ರಸ್ತೆ ನಿರ್ಮಾಣ ಮಾಡಲಾಗಿದೆ, ಎಲ್ಲರೂ ಸಹಕಾರದಿಂದ ಅದರ ಲಾಭ ಪಡೆದುಕೊಳ್ಳಿ ಎಂದು ಸಲಹೆ ನೀಡಿದರು.



ನಿಮ್ಮ ಸಮಸ್ಯೆಗಳು ಏನೇ ಇದ್ದರೂ ನೇರವಾಗಿ ಭೇಟಿಯಾಗಿ ಗಮನಕ್ಕೆ ತನ್ನಿ, ಹಂತವಾಗಿ ಪರಿಹಾರಕ್ಕೆ ಕ್ರಮ ಕೈಗೊಳ್ಳುತ್ತೇನೆ. ರಾಜ್ಯದ ಎಲ್ಲ ವರ್ಗದ ಜನರಿಗೆ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಹಲವಾರು ಸೌಲಭ್ಯಗಳನ್ನು ಒದಗಿಸಿದೆ, ಆದರೂ ಅಭಿವೃದ್ಧಿ ಸಹಿಸದ ವಿರೋಧಿಗಳು ಕ್ಷುಲ್ಲಕ ಕಾರಣಗಳಿಗೆ ಟೀಕಿಸುತ್ತಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

ಸರ್ಕಾರದ ವಿವಿಧ ಇಲಾಖೆಗಳ ಯೋಜನೆಯಡಿಯಲ್ಲಿ ಹೆಚ್ಚಿನ ಅನುದಾನ ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಬರುವ ದಿನಗಳಲ್ಲಿ ಗ್ರಾಪಂ, ತಾಪಂ, ಜಿಪಂ ಚುನಾವಣೆಗಳು ಎದುರಾಗಲಿವೆ. ಅಭಿವೃದ್ಧಿಗಾಗಿ ಎಲ್ಲರೂ ಒಗ್ಗಟ್ಟಾಗಿ ಕಾಂಗ್ರೆಸ್ ಪಕ್ಷಕ್ಕೆ ಶಕ್ತಿ ತುಂಬಬೇಕು ಎಂದು ಮನವಿ ಮಾಡಿದರು.

ನಿರ್ಮಿತಿ ಕೇಂದ್ರ ಎಂಜಿನಿಯರ್ ರವಿಕುಮಾರ ಕಂದಕೂರ ಮಾತನಾಡಿ, ಕಾಮಗಾರಿ ವಿವರ ನೀಡಿದರು.

ರೈತರು ಹಲವಾರು ಸಮಸ್ಯೆಗಳನ್ನು ಶಾಸಕರ ಗಮನಕ್ಕೆ ತಂದರು.

ಕೆವೈಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನರಡ್ಡಿ ಮಾಲಿ ಪಾಟೀಲ್ ಕೌಳೂರ, ಮುಖಂಡ ಬಸರಾಜಪ್ಪಗೌಡ ದಳಪತಿ, ಮಲ್ಲಿಕಾರ್ಜುನಗೌಡ ಪಾಟೀಲ, ಶಿವರಾಜಪ್ಪಗೌಡ, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಈಟೆ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಶರಣಪ್ಪಗೌಡ ಕೌಳೂರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನಾನು ಎಂದು ರಾಜಕಾರಣದಲ್ಲಿ ಜಾತಿ ರಾಜಕೀಯ ಮಾಡಿಲ್ಲ, ಪರಿಣಾಮ ಜನರ ಆಶೀರ್ವಾದದಿಂದ ಶಾಸಕನಾಗಿ ಆಯ್ಕೆಯಾಗಿ ನಿಮ್ಮ ಸೇವೆ ಮಾಡುವ ಅವಕಾಶ ಸಿಕ್ಕದೆ. ನಾನು ಕ್ಷೇತ್ರದಲ್ಲಿ ಮೊದಲು ಶಾಂತಿ. ಸಾಮರಸ್ಯ, ಅಭಿವೃದ್ಧಿಗೆ ಆದ್ಯತೆ ನೀಡುತ್ತಿದ್ದೇನೆ.

■ **ಚನಾರಡ್ಡಿ ಪಾಟೀಲ, ಶಾಸಕ**

ಕಾಂಗ್ರೆಸ್‌ನವರ ದೌರ್ಜನ್ಯ ಮತ್ತೊಮ್ಮೆ ಸಾಬೀತು: ಸೋಮಶೇಖರ್

ಬಳ್ಳಾರಿ: ಮಹಾನಗರ ಪಾಲಿಕೆ ಎಂಜಿನಿಯರ್ ವಿ.ವೀರೇಶ್ ಅತ್ಯಂತ ಸರಳ ಸಜ್ಜನ ವ್ಯಕ್ತಿ, ಅಧಿಕಾರಿ, ಅಂತವರ ಮೇಲೆ ಪಾಲಿಕೆ ಕಾಂಗ್ರೆಸ್ ನ ಸದಸ್ಯ ಕುಬೇರ ಎನ್ನುವವರು ಮಾರಣಾಂತಿಕ ಹಲ್ಲೆ ನಡೆಸಿರುವುದು ಅತ್ಯಂತ ಖಂಡನೀಯ. ಕಳೆದ ಜ.1ರಂದು ಬಳ್ಳಾರಿಯಲ್ಲಿ ನಡೆದ ಕಾಂಗ್ರೆಸ್‌ನವರ ಗೂಂಡಾಗಿರಿ ಈಗ ಮತ್ತೊಮ್ಮೆ ಸಾಬೀತಾಗಿದೆ ಎಂದು ಕೆಎಂಎಫ್ ಮಾಜಿ ಅಧ್ಯಕ್ಷ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಅವರು ಕೈನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

ನಗರದ ಮಹಾನಗರ ಪಾಲಿಕೆ ಕಚೇರಿ ಎದುರು, ಪಾಲಿಕೆ ಎಂಜಿನಿಯರ್ ವಿ.ವೀರೇಶ್ ಅವರ ಮೇಲೆ ಹಲ್ಲೆ ನಡೆಸಿದ ಪಾಲಿಕೆ ಕಾಂಗ್ರೆಸ್ ಸದಸ್ಯ ಕುಬೇರ ಅವರನ್ನು ಕೂಡಲೇ ಬಂಧಿಸಿ, ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿ ಪಾಲಿಕೆ ಅಧಿಕಾರಿಗಳು, ಸಿಬ್ಬಂದಿ ನಡೆಸುತ್ತಿರುವ ಧರಣಿಯಲ್ಲಿ ಶನಿವಾರ ಭಾಗವಹಿಸಿ ಮಾತನಾಡಿದರು.



ಸಣ್ಣ ವಿಚಾರಕ್ಕೆ ಸಂಬಂಧಿಸಿ ಪಾಲಿಕೆ ಕಾಂಗ್ರೆಸ್ ಸದಸ್ಯ ಕುಬೇರ ಅವರು ಇಂಜಿನಿಯರ್ ವೀರೇಶ್ ಅವರ ಮೇಲೆ ಹಲ್ಲೆ ಮಾಡುವ ಅಗತ್ಯವಿರಲಿಲ್ಲ, ಏಕಾಏಕಿ ಮುಖಕ್ಕೆ, ಎದೆಗೆ ಹಲ್ಲೆ ನಡೆಸುವ ಮೂಲಕ ದರ್ಪ ಮೆರೆದಿರುವುದು ಸರಿಯಲ್ಲ, ಇದು ಮಾನವೀಯತೆ ಲಕ್ಷಣವಲ್ಲ, ಅಧಿಕಾರಿಗಳು, ಸಿಬ್ಬಂದಿಗಳು ನಮ್ಮ ಕೆಲಸಗಳನ್ನು ಮಾಡದಿದ್ದರೆ, ಮೇಲಧಿಕಾರಿಗಳಿಗೆ ದೂರು ನೀಡಬಹುದು, ಅದನ್ನು ಬಿಟ್ಟು ಏಕಾಏಕಿ ಹಲ್ಲೆ ಮಾಡಿರುವುದು ಕಾಂಗ್ರೆಸ್ ಗೂಂಡಾ ಸಂಸ್ಕೃತಿ ಎಂಬುದು ಸಾಬೀತುಪಡಿಸಿದ್ದಾರೆ. ನಾನು ಸುಮಾರು ವರ್ಷಗಳಿಂದ ರಾಜಕಾರಣದಲ್ಲಿರುವೆ, ರೌಡಿಸಂ ಮಾಡುವುದು ಸರಿಯಲ್ಲ, ನಮಗೆ ಒಳ್ಳೆಯ ಹೆಸರು ಬರಬೇಕಾದರೆ ಅಧಿಕಾರಿಗಳ ಪಾತ್ರವೂ ಮುಖ್ಯವಾಗಿರಲಿದೆ. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡರೆ ಎಲ್ಲ ಅಭಿವೃದ್ಧಿ ಕೆಲಸಗಳನ್ನು ಮಾಡಬಹುದು. ಈ ಘಟನೆಯಿಂದ ಪಾಲಿಕೆ ಅಧಿಕಾರಿಗಳು, ಸಿಬ್ಬಂದಿಗಳು ಭಯಭೀತರಾಗಿದ್ದಾರೆ. ಅವರ ಕುಟುಂಬವು ಆತಂಕಕ್ಕೆ ಒಳಗಾಗಿದೆ. ಕೂಡಲೇ ಹಲ್ಲೆ ನಡೆಸಿದ ಪಾಲಿಕೆ ಕಾಂಗ್ರೆಸ್ ಸದಸ್ಯ ಕುಬೇರ ಅವರನ್ನು ಬಂಧಿಸಿ, ಕಠಿಣ ಶಿಕ್ಷೆಗೆ ಒಳಪಡಿಸಬೇಕು. ನಿರ್ಲಕ್ಷ್ಯ ವಹಿಸಿದರೆ ಪ್ರತಿಭಟನೆಯ ಸ್ವರೂಪ ಬದಲಾಗಲಿದೆ ಎಂದು ಎಚ್ಚರಿಸಿದರು. ಪಾಲಿಕೆ ಅಧಿಕಾರಿಗಳು ರಜೆ ದಿನಗಳಲ್ಲೂ ಕೆಲಸ ಮಾಡ್ತಾರೆ, ಅಂತವರ ಮೇಲೆ ಹಲ್ಲೆ ನಡೆಸಿದರೆ ಯಾರು ಒಪ್ಪೋಲ್ಲ, ಕುಬೇರ ಅವರನ್ನು ಬಂಧಿಸುವವರೆಗೂ ನಾವು ಅಧಿಕಾರಿಗಳು, ಸಿಬ್ಬಂದಿಯೊಂದಿಗೆ ಹೋರಾಟದಲ್ಲಿ ಭಾಗವಹಿಸುತ್ತೇವೆ ಎಂದು ಎಚ್ಚರಿಸಿದರು.

ಬಿಜೆಪಿ ನಗರ ಅಧ್ಯಕ್ಷ ಜಿ.ವೆಂಕಟರಮಣ, ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಶ್ರೀನಿವಾಸ್ ಮೊತ್ಕರ್, ಸದಸ್ಯರಾದ ಸುರೇಖಾ ಮಲ್ಲನಗೌಡ, ಚೇತನಾ ವೇಮಣ್ಣ, ಎಂ.ಗೋವಿಂದರಾಜುಲೂ, ಕೆ.ಹನುಮಂತಪ್ಪ, ಹನುಮಂತ ಗುಡಿ ಗಂಟೆ, ಸದಸ್ಯ ಕೆ.ಅಶೋಕ ಕುಮಾರ್ ಸೇರಿದಂತೆ ಸಿದ್ದೇಶ ಉಳುರ, ಕೃಷ್ಣ, ಪಾಲಿಕೆ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.